ಶುಕ್ರವಾರ, ಸೆಪ್ಟೆಂಬರ್ 13, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಯಾರಿ...

ಚೆನ್ನೈನಲ್ಲಿ ಗುರುವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕಥಕ್ಕಳಿ ಕಲಾವಿದರೊಬ್ಬರು ನೃತ್ಯಕ್ಕೆ ಅಂತಿಮ ತಯಾರಿ ನಡೆಸಿದರು



ಯೆಚೂರಿಗೆ ಅಂತಿಮ 'ಲಾಲ್ ಸಲಾಂ'

ಸೀತಾರಾಮ್ ಯೆಚೂರಿ ನಡೆದು ಬಂದ ಹಾದಿ...

1952ರ ಆಗಸ್ಟ್ 12	ಮದ್ರಾಸ್‌ (ಈಗಿನ ಚೆನ್ನೈ) ತೆಲುಗು ಕುಟುಂಬದಲ್ಲಿ ಜನನ. ನಂತರ ಹೈದರಾಬಾದ್‌ನಲ್ಲಿ ವಿದ್ಯಾಭ್ಯಾಸ
1969	ಆಂಧ್ರಪ್ರದೇಶದಲ್ಲಿ ತೆಲಂಗಾಣ ಹೋರಾಟ ಆರಂಭವಾದ ಬಳಿಕ ಉನ್ನತ ವಿದ್ಯಾಭ್ಯಾಸಕ್ಕಾಗಿ ದೆಹಲಿಗೆ
1970	ಸಿಬಿಎಸ್‌ಇ 10ನೇ ತರಗತಿಯಲ್ಲಿ ಮೊದಲ ರ‍್ಯಾಂಕ್‌ನ ಸಾಧನೆ
1974	ಜೆಎನ್‌ಯುನಲ್ಲಿ ಶಿಕ್ಷಣ ಪಡೆಯುತ್ತಿದ್ದಾಗ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾಕ್ಕೆ (ಎಸ್‌ಎಫ್‌ಐ) ಸೇರ್ಪಡೆ
1975	ಸಿಪಿಎಂ ಸದಸ್ಯರಾಗಿ ಪಕ್ಷ ರಾಜಕಾರಣಕ್ಕೆ ಪ್ರವೇಶ
1978	ಎಸ್‌ಎಫ್‌ಐನ ಅಖಿಲ ಭಾರತ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆ, ನಂತರ ಅಧ್ಯಕ್ಷರಾಗಿ ನೇಮಕ
1984	ಸಿಪಿಎಂ ಕೇಂದ್ರ ಸಮಿತಿಯ ಸದಸ್ಯರಾಗಿ ನೇಮಕ
1992	ಸಿಪಿಎಂ ಪಾಲಿಟ್‌ಬ್ಯೂರೊ ಸದಸ್ಯರಾಗಿ ಆಯ್ಕೆ
2005	ಪಶ್ಚಿಮ ಬಂಗಾಳದಿಂದ ರಾಜ್ಯಸಭಾ ಸದಸ್ಯರಾಗಿ ಆಯ್ಕೆ
2015 ಏ.19	ಸಿಪಿಎಂನ ಐದನೇ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ
2011	ಎರಡನೇ ಅವಧಿಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆ
2017	ರಾಜ್ಯಸಭಾ ಸದಸ್ಯತ್ವದ ಅವಧಿ ಕೊನೆ
2021	ಕೋವಿಡ್‌ನಿಂದಾಗಿ 35 ವರ್ಷದ ಮಗನ ಸಾವು
2023	ವಿರೋಧ ಪಕ್ಷಗಳ 'ಇಂಡಿಯಾ' ಒಕ್ಕೂಟದ ರಚನೆಯಲ್ಲಿ ಮಹತ್ವದ ಪಾತ್ರ
2024 ಆ.19	ಉಸಿರಾಟದ ಸಮಸ್ಯೆ, ನ್ಯುಮೋನಿಯಾ ಕಾರಣಕ್ಕೆ ದೆಹಲಿಯ ಏಮ್ಸ್‌ಗೆ ದಾಖಲು
2024 ಸೆ.12	ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರು. 50 ವರ್ಷ ರಾಜಕೀಯ ಜೀವನಕ್ಕೆ ತೆರೆ


ಇಂದಿರಾ ಗಾಂಧಿ ಎದುರೇ ಅವರ ವಿರುದ್ಧದ ದೋಷಾರೋಪ ಪಟ್ಟಿ ಓದಿದ್ದ ಯುವಕ ಯೆಚೂರಿ


ಎಡಪಂಥೀಯ ನಾಯಕರಾದ ಹರಕಿಶನ್ ಸಿಂಗ್ ಸುರ್ಜಿತ್ ಮತ್ತು ಜ್ಯೋತಿ ಬಸು ಅವರೊಂದಿಗೆ ಯೆಚೂರಿ


ನವದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯೊಂದರಲ್ಲಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರೊಂದಿಗೆ

• ಶೆಮಿನ್ ಜಾಯ್

ನವದೆಹಲಿ: ದೇಶದ ಮುಂಚೂಣಿ ಕಮ್ಯುನಿಸ್ಟ್ ನಾಯಕ ಸೀತಾರಾಮ್ ಯೆಚೂರಿ ಅವರಿಗೆ ಜೀವನವು ಅಂತಿಮ 'ಲಾಲ್ ಸಲಾಂ' ಹೇಳುವ ಹೊತ್ತಿಗೆ, ಅವರು ದೇಶದ ದುಡಿಯುವ ವರ್ಗಕ್ಕಾಗಿ ಹಾಗೂ ಧರ್ಮನಿರಪೇಕ್ಷ ಭಾರತಕ್ಕಾಗಿ ಐದು ದಶಕಗಳ ತಮ್ಮ ಬದುಕನ್ನು ಸವೆಸಿ ಆಗಿತ್ತು.

ಯುವಕರಿಗೆ ಹಾಗೂ ಹಳಬರಿಗೆ ಅವರು 'ಸೀತಾರಾಮ್' ಆಗಿದ್ದರು. ಭಿನ್ನ ಹಿನ್ನೆಲೆಯ ಸ್ನೇಹಿತರ ಪಾಲಿಗೆ ಅವರು 'ಸೀತಾ' ಆಗಿದ್ದರು. ಫ್ಯಾಸಿಸ್ಟ್ ವಿರೋಧಿ ಸಂಸದೀಯ ಪಟು ಹಾಗೂ ಮೈತ್ರಿಕೂಟಗಳನ್ನು ಕಟ್ಟುವ ವ್ಯಕ್ತಿ ಎಂಬ ಹೆಗ್ಗಳಿಕೆಯನ್ನು ಪಡೆಯುವ ಮೊದಲು ಅವರು ಹಲವು ಪಾತ್ರಗಳನ್ನು ನಿಭಾಯಿಸಿದರು. ದೇಶದ ಎರಡು ಸರ್ಕಾರಗಳ ನಡೆ-ನುಡಿಗಳನ್ನು ತೀರ್ಮಾನಿಸಿದ 'ಸಾಮಾನ್ಯ ಕನಿಷ್ಠ ಕಾರ್ಯಸೂಚಿ'ಯನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದರು.

1984ರಲ್ಲಿ, 32ನೇ ವಯಸ್ಸಿನಲ್ಲಿ ತಮ್ಮನ್ನು ಸಿಪಿಎಂ ಪಕ್ಷದ ಕೇಂದ್ರ ಸಮಿತಿಗೆ ವಿಶೇಷ ಆಹ್ವಾನಿತರನ್ನಾಗಿ ಆಯ್ಕೆ ಮಾಡಿದಾಗ, 'ದೊಡ್ಡ ಜವಾಬ್ದಾರಿಯನ್ನು ಹೊರುವಷ್ಟು ನಾನು ಪ್ರಬುದ್ಧನೇ' ಎಂಬ ಅನುಮಾನ ಯೆಚೂರಿ ಅವರನ್ನು ಕಾಡಿತ್ತು. ಆದರೆ ಆಗ ಪಕ್ಷದ ಪ್ರಧಾನ ಕಾರ್ಯದರ್ಶಿ ಆಗಿದ್ದ ಇ.ಎಂ.ಎಸ್. ನಂಬೂದರಿಪಾಡ್ ಅವರಿಗೆ, ಸಿಬಿಎಸ್‌ಇ ಪರೀಕ್ಷೆಗಳಲ್ಲಿ ಮೊದಲ ರ‍್ಯಾಂಕ್ ಗಿಟ್ಟಿಸಿದ್ದ ಆಂಧ್ರ ಪ್ರದೇಶದ ಕಾಕಿನಾಡ ಮೂಲದ ಯೆಚೂರಿ ವಿಚಾರವಾಗಿ ಯಾವ ಅನುಮಾನವೂ ಇರಲಿಲ್ಲ.

ವಿಶೇಷ ಆಹ್ವಾನಿತರಾಗಿ ಆಯ್ಕೆಯಾಗಿ ಎಂಟು ವರ್ಷಗಳ ನಂತರದಲ್ಲಿ ಪಕ್ಷದ ಪಾಲಿಟ್ ಬ್ಯೂರೊದ ಅತ್ಯಂತ ಕಿರಿಯ ಸದಸ್ಯರಾದರು. ದೇಶದ ನೀತಿ ನಿರೂಪಣೆಯ ವಿಚಾರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು.

1969ರ ತೆಲಂಗಾಣ ಹೋರಾಟವು ಯೆಚೂರಿ ಅವರನ್ನು ದೆಹಲಿಗೆ ವಾಸಕ್ಕಾಗಿ ಬರುವಂತೆ ಮಾಡಿತು. ಅದರ ಆಗ ರಾಜಕೀಯ ದಲ್ಲಿಯೂ ಸಕ್ರಿಯರಾಗಿದ್ದ ಅವರು, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಭೂಗತರಾಗಬೇಕಾಯಿತು. ಇದರ ಪರಿಣಾಮವಾಗಿ ಪಿಎಚ್.ಡಿ ಅಧ್ಯಯನವನ್ನು ಮಧ್ಯದಲ್ಲಿಯೇ ಕೈಬಿಡಬೇಕಾಯಿತು. ನಂತರದಲ್ಲಿ ಯೆಚೂರಿ ಅವರ ಬಂಧನ ಕೂಡ ಆಯಿತು. 1978ರಲ್ಲಿ ಯೆಚೂರಿ ನೇತೃತ್ವದಲ್ಲಿ ಪ್ರತಿಭಟನೆ ನಡೆದ ನಂತರದಲ್ಲಿ ಇಂದಿರಾ ಗಾಂಧಿ ಅವರು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕುಲಾಧಿಪತಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ಯುವಕ ಯೆಚೂರಿ ಅವರು ಇಂದಿರಾ ವಿರುದ್ಧದ ದೋಷಾರೋಪ ಪಟ್ಟಿಯನ್ನು ಅವರ ಎದುರೇ ಓದಿ ಹೇಳಿದ ಚಿತ್ರವು ಆ ದಿನಗಳ ನೆನಪಾಗಿ ಇಂದಿಗೂ ಉಳಿದಿದೆ.

ಯೆಚೂರಿ ಅವರದ್ದು ಐವತ್ತು ವರ್ಷಗಳ ರಾಜಕೀಯ ಜೀವನ. ಅದು ಶುರುವಾಗಿದ್ದು 1974ರಲ್ಲಿ ಜೆಎನ್‌ಯುನಲ್ಲಿ ಅರ್ಥಶಾಸ್ತ್ರದಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿದ್ದಾಗ ಎಸ್‌ಎಫ್‌ಐ ಸಂಘಟನೆಯನ್ನು ಸೇರುವ ಮೂಲಕ. ಯೆಚೂರಿ ಅವರು ಜೆಎನ್‌ಯುನಲ್ಲಿ ಮೂರು ಬಾರಿ ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರಾಗಿದ್ದರು. ಮಾರ್ಕ್ಸ್‌ವಾದ–ಲೆನಿನ್‌ವಾದದಲ್ಲಿ ಅವರು ಹೊಂದಿದ್ದ ಬದ್ಧತೆ ಅವರ ರಾಜಕೀಯ ಜೀವನ ದುದ್ದಕ್ಕೂ ಅಚಲವಾಗಿತ್ತು. ಇಂದಿರಾ ಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿಯನ್ನು ರಾಜಕೀಯ ಜೀವನದ ಆರಂಭದಲ್ಲಿ ವಿರೋಧಿಸಿದ ಯೆಚೂರಿ, ಈಗ ಬಲಪಂಥೀಯ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ನಡೆಸುತ್ತಲೇ ತಮ್ಮ ಜೀವನ ಮುಗಿಸಿದ್ದಾರೆ.

ಕೆಲವು ಕಾಮ್ರೇಡ್‌ಗಳು ನಗುವುದಕ್ಕೂ ಕಷ್ಟಪಟ್ಟರೆ, ಯೆಚೂರಿ ಅವರು ಯಾವಾಗಲೂ ಹಸನ್ಮುಖಿಯಾಗಿ ಇರುತ್ತಿದ್ದರು. ಅಲ್ಲದೆ, ಕೆಲವೊಮ್ಮೆ ನಿಶ್ಚಿತವಾದ ಅಭಿಪ್ರಾಯಕ್ಕೆ ಅಂಟಿ-ಕೊಳ್ಳುತ್ತಿರಲಿಲ್ಲ. ಇದನ್ನು, ಬಂಡವಾಳಶಾಹಿ ವರ್ಗದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಸ್ವಭಾವ ಎಂದು ಕೆಲವರು ತಪ್ಪಾಗಿ ಅರ್ಥೈಸಿ ಕೊಂಡಿದ್ದಿದೆ. ಕೆಲವರು ಯೆಚೂರಿ ಅವರನ್ನು ಅವಕಾಶವಾದಿ ಎಂದು ಕರೆದರು. ಇನ್ನು ಕೆಲವರು ಅವರು ವ್ಯಾವಹಾರಿಕ ದೃಷ್ಟಿಕೋನದವರು ಎಂದು ನಕಾರಾತ್ಮಕ ಧಾಟಿಯಲ್ಲಿ ಚಿತ್ರಿಸಿದರು. ಹೀಗಿದ್ದರೂ, ತಮ್ಮ ಸಿದ್ಧಾಂತ ಮಾರ್ಕ್ಸ್‌ವಾದವೇ ವಿನಾ 'ಅವಕಾಶವಾದ' ಅಥವಾ 'ವ್ಯಾವಹಾರಿಕ ವಾದ' ಅಲ್ಲ ಎಂದು ಯೆಚೂರಿ ನಂಬಿದ್ದರು.

ಯೆಚೂರಿ ಅವರು 2000ನೇ ಇಸವಿಯ ನಂತರದಲ್ಲಿ ನೇಪಾಳದ ಮಾವೋವಾದಿ ನಾಯಕರನ್ನು ರಾಜಕೀಯ ಮುಖ್ಯವಾಹಿನಿಗೆ ಕರೆತರುವಲ್ಲಿ ವಹಿಸಿದ ಪಾತ್ರವನ್ನು ಮರೆಯದೆ ಇದ್ದಿದ್ದರೆ, ಭಾರತದ ಪರಿಸ್ಥಿತಿಯನ್ನು ಅವರು ವಿಶ್ಲೇಷಿಸುತ್ತಿದ್ದ ಬಗೆಯಲ್ಲಿ ತಪ್ಪುಹುಡುಕುವ ಕೆಲಸವನ್ನು ಯೆಚೂರಿ ಅವರ ವಿರೋಧಿಗಳು ಮಾಡುತ್ತಿರಲಿಲ್ಲ. ನೇಪಾಳದ ಮಾವೋವಾದಿ ನಾಯಕರನ್ನು ಮುಖ್ಯವಾಹಿನಿಗೆ ಕರೆತಂದ ಪರಿಣಾಮವಾಗಿ ಆ ದೇಶವು ಧರ್ಮನಿರಪೇಕ್ಷ ರಾಷ್ಟ್ರವಾಗಿ ಪರಿವರ್ತನೆ ಕಂಡಿತು.

ಭಾರತದ ಪರಿಸ್ಥಿತಿಯು ಸರ್ವಾಧಿಕಾರದ್ದು, ಇಲ್ಲಿನ ಹೋರಾಟದಲ್ಲಿ ಕಾಂಗ್ರೆಸ್ಸನ್ನು ಹೊರಗಿರಿಸಬೇಕು ಎಂದು ಪ್ರಕಾಶ್ ಕಾರಟ್ ಮತ್ತು ಅವರ ಬೆಂಬಲಿಗರು ಭಾವಿಸಿದ್ದರು. ಆದರೆ ಯೆಚೂರಿ ಅವರು, ಮೋದಿ ನೇತೃತ್ವದ ಆಡಳಿತವು 'ಫ್ಯಾಸಿಸ್ಟ್' ಪ್ರವೃತ್ತಿಯನ್ನು ತೋರಿಸುತ್ತಿದೆ, ಅದನ್ನು ಸೋಲಿಸಲು ಧರ್ಮನಿರಪೇಕ್ಷ ಹಾಗೂ ಪ್ರಜಾತಂತ್ರವಾದಿ ಶಕ್ತಿಗಳೆಲ್ಲ ಒಂದಾಗಬೇಕು ಎಂದು ಪ್ರತಿಪಾದಿಸುತ್ತಿದ್ದರು.

ಪಕ್ಷದ ಕೇಂದ್ರ ನಾಯಕರಲ್ಲಿ ಹೆಚ್ಚಿನವರಿಗೆ ಯೆಚೂರಿ ಅವರ ಆಲೋಚನಾಕ್ರಮದಲ್ಲಿ ಸತ್ಯ ಕಾಣಲಿಲ್ಲ. ಯೆಚೂರಿ ಅವರು ತಮ್ಮ ವಾದವನ್ನು ಪಕ್ಷದ ಸಮಾವೇಶದಲ್ಲಿ ಮಂಡಿಸಿದರು. ಅಲ್ಲಿ ತಳಮಟ್ಟದಿಂದ ಬಂದಿದ್ದ ಪ್ರತಿನಿಧಿಗಳು ಅವರಿಗೆ ಜೊತೆಯಾಗಿ ನಿಂತರು. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸಿನ ಜೊತೆ ಹೊಂದಾಣಿಕೆಯನ್ನು ಅವರು ಸಾಧ್ಯವಾಗಿಸಿದರು. ಆದರೆ ಅದರಲ್ಲಿ ಯಶಸ್ಸು ಸಿಗಲಿಲ್ಲ.

ಪ್ರತಿನಿಧಿಗಳ ಒತ್ತಡದ ಪರಿಣಾಮವಾಗಿ ಯೆಚೂರಿ ಅವರು 2015ರಲ್ಲಿ, 2018ರಲ್ಲಿ ಹಾಗೂ 2022ರಲ್ಲಿ ಸಿಪಿಎಂ ಪ್ರಧಾನ ಕಾರ್ಯದರ್ಶಿ ಯಾದರು. ಅವರ ಬೆಂಬಲದೊಂದಿಗೆ ಅವರು, ಬಿಜೆಪಿಯನ್ನು ಸೋಲಿಸಲು ಪಕ್ಷವು ಕಾಂಗ್ರೆಸ್ ಸೇರಿದಂತೆ ಇತರ ಧರ್ಮನಿರಪೇಕ್ಷ ಪಕ್ಷಗಳ ಜೊತೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ಮಾಡಿದರು.

ಯೆಚೂರಿ ಅವರ ಎತ್ತರದ ವ್ಯಕ್ತಿತ್ವದ ಕಾರಣದಿಂದಾಗಿ ಭಾರತದ ಎಡಪಕ್ಷಗಳು, ದೇಶದ ಧರ್ಮನಿರಪೇಕ್ಷ ರಾಜಕಾರಣವನ್ನು ರೂಪಿಸುವಲ್ಲಿ ತಮ್ಮ ಧ್ವನಿ ಉಳಿಸಿಕೊಳ್ಳುವುದು ಸಾಧ್ಯವಾಯಿತು. ಪಕ್ಷಕ್ಕೆ ಹೊಸ ಜೀವ ಕೊಡುವುದಕ್ಕೆ ಯೆಚೂರಿ ಅವರಿಗೆ ಸಾಧ್ಯವಾಗಲಿಲ್ಲ. ಆರ್‌ಎಸ್‌ಎಸ್–ಬಿಜೆಪಿ ವಿರುದ್ಧದ ಹೋರಾಟಕ್ಕೆ ಜೊತೆಗಾರರನ್ನು ಅರಸುತ್ತಿದ್ದಾಗ, ದೇಶದಲ್ಲಿ ಹೆಚ್ಚುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ವಿಚಾರವಾಗಿ ಯುವಕರಲ್ಲಿ, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳು ಹಾಗೂ ದಲಿತರಲ್ಲಿ, ಅಸಮಾಧಾನ ಇರುವುದು ಯೆಚೂರಿ ಅವರಿಗೆ ಕಂಡಿತು. ದಲಿತರು ಹಾಗೂ ಕಮ್ಯುನಿಸ್ಟರನ್ನು ಒಗ್ಗೂಡಿಸಲು ಅವರು 'ನೀಲ್ ಸಲಾಂ, ಲಾಲ್ ಸಲಾಂ' ಘೋಷವಾಕ್ಯದ ಪರ ನಿಂತರು. ಮೋದಿ ನೇತೃತ್ವದ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು, 'ಅವಾರ್ಡ್ ವಾಪ್ಸಿ' ಅಭಿಯಾನಕ್ಕೆ ಬುದ್ಧಿಜೀವಿಗಳು ಒಗ್ಗೂಡುವುದಕ್ಕೆ ಭೂಮಿಕೆ ಸಿದ್ಧಪಡಿಸಿದವರಲ್ಲಿ ಇವರೂ ಒಬ್ಬರು.

2019ರ ಲೋಕಸಭಾ ಚುನಾವಣೆಯ ಹೊತ್ತಿನಲ್ಲಿ ವಿರೋಧ ಪಕ್ಷದ ಮೈತ್ರಿಕೂಟವನ್ನು ಕಟ್ಟಲು ಯತ್ನಿಸಿದರು. ಅದರಲ್ಲಿ ಒಂದುಮಟ್ಟಿಗೆ ಯಶಸ್ಸು ಕಂಡರು. ಯೆಚೂರಿ ಅವರು ಬಿಜೆಪಿಗೆ ರಾಜ್ಯಸಭೆಯಲ್ಲಿ ನೆಮ್ಮದಿಯಿಂದ ಉಸಿರಾಡಲು ಒಮ್ಮೆಯೂ ಅವಕಾಶ ಕೊಟ್ಟಿರಲಿಲ್ಲ! ತಮ್ಮದೇ ಪಕ್ಷದ ನಾಯಕರು ಸರ್ಕಾರದ ವಿಚಾರವಾಗಿ ಮೃದುವಾಗಿದ್ದಂತೆ ಕಂಡಾಗಲೂ, ಎಡಪಕ್ಷಗಳ ಜೊತೆಗೆ ಇತರ ವಿರೋಧ ಪಕ್ಷಗಳ ಸಂಸದರು ಯೆಚೂರಿ ಬೆನ್ನಿಗೆ ನಿಲ್ಲುತ್ತಿದ್ದರು.

2014ರ ಲೋಕಸಭಾ ಚುನಾವಣೆಯ ನಂತರ, 'ಸಂವಿಧಾನ ಅಪಾಯದಲ್ಲಿದೆ' ಎಂಬ ಅಭಿಯಾನವನ್ನು ಶುರುಮಾಡಿದ್ದು ಯೆಚೂರಿ. ಈ ಮಾತಿನಲ್ಲಿ ಸತ್ಯವಿದೆ ಎಂದು ಮತದಾರರು ಹತ್ತು ವರ್ಷಗಳ ನಂತರ ಗುರುತಿಸಿದರು. ಅವರ ಪಕ್ಷಕ್ಕೆ ಇದರಿಂದ ಹೆಚ್ಚು ಲಾಭವಾಗಲಿಲ್ಲ; ಆದರೆ ಬಿಜೆಪಿಯೇತರ ಪಕ್ಷಗಳಿಗೆ ಇದರಿಂದ ಪ್ರಯೋಜನವಾಯಿತು.



ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಗಾಂಧೀಜಿ ಕುರಿತು ಬರೆದ ಪುಸ್ತಕವೊಂದರ ಬಿಡುಗಡೆ ಕಾರ್ಯಕ್ರಮದಲ್ಲಿ ಚಿಂತಕ ಡಾ.ಜಿ. ರಾಮಕೃಷ್ಣ ಮತ್ತು ವಿಮರ್ಶಕ ರಹಮತ್ ತರೀಕೆರೆ ಅವರೊಂದಿಗೆ ಸೀತಾರಾಮ್ ಯೆಚೂರಿ ಪಾಲ್ಗೊಂಡಿದ್ದರು

ಯೆಚೂರಿ ಅವರು ರಾಜಕೀಯದ ಎಲ್ಲ ವಲಯಗಳನ್ನೂ ಸಂಪರ್ಕಿಸುವ ಸಾಮರ್ಥ್ಯ ಹೊಂದಿದ್ದರು
ನರೇಂದ್ರ ಮೋದಿ, ಪ್ರಧಾನಿ

ಭಾರತವನ್ನು ಯೆಚೂರಿ ಬಹಳ ಆಳವಾಗಿ ಅರ್ಥ ಮಾಡಿಕೊಂಡಿದ್ದರು
ರಾಹುಲ್ ಗಾಂಧಿ
ಲೋಕಸಭೆ ವಿರೋಧ ಪಕ್ಷದ ನಾಯಕ

ಮಾರ್ಕ್ಸ್‌ವಾದಿ ಗಾರುಡಿಗ

• ಡಾ.ಪ್ರಕಾಶ್ ಕೆ.

ಸೀತಾರಾಮ್ ಯೆಚೂರಿ ಅವರು ಹಲವು ರೀತಿಯಲ್ಲಿ ಬಣ್ಣಿಸಬಹುದಾದ ಬಹುಮುಖಿ ವ್ಯಕ್ತಿತ್ವದ ಮೇಧಾವಿ. ಭಾರತದ ಕಮ್ಯುನಿಸ್ಟ್ ರಾಜಕಾರಣದ ಮುಂಚೂಣಿ ನಾಯಕ. ಅವರು ಪ್ರಖರ ವಾಗ್ಮಿ, ಮಾರ್ಕ್ಸ್‌ವಾದಿ ಚಿಂತಕ, ಬರಹಗಾರ, ಸ್ನೇಹಮಯಿ ಎಲ್ಲವೂ ಆಗಿದ್ದರು. ಎಲ್ಲ ಪಕ್ಷಗಳ ನಾಯಕರೂ ಪ್ರೀತಿಸುತ್ತಿದ್ದ ಸರಳ ವ್ಯಕ್ತಿತ್ವ ಅವರದಾಗಿತ್ತು. ಅತ್ಯಂತ ಶ್ರೀಮಂತ ಮತ್ತು ಪ್ರಬಲವರ್ಗದ ಕುಟುಂಬದಲ್ಲಿ ಹುಟ್ಟಿದ್ದರೂ, ಬಡತನ-ಶ್ರೀಮಂತ, ಪ್ರಬಲ-ದುರ್ಬಲ ವರ್ಗ ಎಂಬ ಅಸಮಾನತೆ ಹೋಗಲಾಡಿಸಲು ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದರು. ಆದರ್ಶ ರೀತಿಯಲ್ಲಿ ಬದುಕಿದ ಅವರು, ದೇಹವನ್ನು ಆಸ್ಪತ್ರೆಗೆ ದಾನ ಮಾಡುವ ಮೂಲಕ ಬದುಕು ಮುಗಿದ ನಂತರವೂ ಆದರ್ಶ ಮೆರೆದಿದ್ದಾರೆ.

ಸೋವಿಯತ್ ಒಕ್ಕೂಟ ವಿಘಟನೆಯಾಗಿ ಜಾಗತಿಕ ಮಟ್ಟದಲ್ಲಿ ಕಮ್ಯುನಿಸ್ಟ್ ಚಳವಳಿಗೆ ಹಿನ್ನಡೆಯಾದ ಸಂದರ್ಭದಲ್ಲಿ, ಭಾರತದಲ್ಲಿ ಆ ಹಿನ್ನಡೆಯನ್ನು ದೃಢವಾಗಿ ಎದುರಿಸುವ ಸೈದ್ಧಾಂತಿಕ ಸ್ಪಷ್ಟತೆಯನ್ನು ರೂಪಿಸುವಲ್ಲಿ ಯೆಚೂರಿಯವರ ಕೊಡುಗೆ ಅಪಾರವಾದುದು. ಭಾರತದಲ್ಲಿ ಕಮ್ಯುನಿಸ್ಟ್ ಚಳವಳಿಯ ಏರಿಳಿತಗಳ ನಡುವೆ ಸಿಪಿಎಂ ನಾವೆಯನ್ನು ಮುನ್ನಡೆಸುವಲ್ಲಿ ಯೆಚೂರಿಯವರು ತೋರಿದ ಮುತ್ಸದ್ದಿತನವನ್ನು ಮರೆಯಲು ಸಾಧ್ಯವೇ ಇಲ್ಲ.

ಸೀತಾರಾಮ್ ಯೆಚೂರಿ ಅವರು ಕರ್ನಾಟಕದೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ನಾನು ಎಸ್‌ಎಫ್‌ಐ ರಾಜ್ಯದ ಮುಖಂಡನಾಗಿದ್ದಾಗ 1992ರಲ್ಲಿ ಬೆಂಗಳೂರಿನ ಪುರಭವನದಲ್ಲಿ ನಡೆದ ಶೈಕ್ಷಣಿಕ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದ್ದರು. ನಂತರ ರಾಜ್ಯದಲ್ಲಿ ವಿದ್ಯಾರ್ಥಿ ಸಮ್ಮೇಳನಗಳು ಯಾವುದೇ ನಡೆದರೂ ಸೀತಾರಾಮ್ ಕಾಯಂ ಭಾಷಣಗಾರರಾಗಿರಬೇಕೆಂಬ ಪರಿಸ್ಥಿತಿ ಇತ್ತು.

ರಾಜಕೀಯ ವಲಯದಲ್ಲಿ ಯೆಚೂರಿ ಜನಾನುರಾಗಿದ್ದರು. ಎಲ್ಲ ಪಕ್ಷಗಳ ಮುಖಂಡರೂ ಅವರನ್ನು ಪ್ರೀತಿಸುತ್ತಿದ್ದರು. ಇತ್ತೀಚೆಗೆ ಎರಡು ಬಾರಿ ಅವರು ಬೆಂಗಳೂರಿಗೆ ಭೇಟಿ ನೀಡಿದ್ದರು. ಒಂದು ಬಾರಿ 'ಇಂಡಿಯಾ' ಕೂಟದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದರು. ಮತ್ತೊಂದು ಬಾರಿ ರಾಮಕೃಷ್ಣ ಹೆಗಡೆ ಅವರ ಜನ್ಮದಿನದ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ್ದರು. ಕಾಂಗ್ರೆಸ್ ಮುಖಂಡ ಶ್ರೀಕಂಠಯ್ಯನವರ ವಿಶೇಷ ಮುತುವರ್ಜಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆ ಮಾತುಕತೆ ನಡೆದ ಸಂದರ್ಭದಲ್ಲಿ ನಾನೂ ಜೊತೆಯಲ್ಲಿದ್ದೆ. ರಾಜಕೀಯ ಮತ್ತು ಸೈದ್ಧಾಂತಿಕ ಕಣ್ಣೋಟಗಳನ್ನು ಹೊಂದಲು ಎಲ್ಲಾ ಪಕ್ಷಗಳ ನಾಯಕರೂ ಅವರನ್ನು ಭೇಟಿಯಾಗುತ್ತಿದ್ದರು.

ಕಾಮ್ರೇಡ್ ಯೆಚೂರಿ ಅವರ ನಿರ್ಗಮನವು ರಾಷ್ಟ್ರ ರಾಜಕಾರಣದ ಸಂಕಷ್ಟದ ಸಮಯದಲ್ಲಿನ ನಿರ್ವಾತದ ಸಂಕೇತವೂ ಆಗಿದೆ. ಈ ಸಮಯದಲ್ಲಿ ಅವರು ಬಿಟ್ಟು ಹೋಗಿರುವ ಆದರ್ಶಗಳು, ಆಶಯಗಳನ್ನು ಮುಂದುವರಿಸುವ ಬಹುದೊಡ್ಡ ಜವಾಬ್ದಾರಿ ನಮ್ಮ ಮುಂದಿದೆ.


ಲೇಖಕ: ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ

ಸಿಜೆಐ ಮನೆಗೆ ಮೋದಿ ಭೇಟಿ ಬಗ್ಗೆ ಪರ–ವಿರೋಧ ಚರ್ಚೆ • ಬಿಜೆಪಿ ಸಮರ್ಥನೆ

ಪ್ರಧಾನಿ ಆಸಕ್ತಿ ತೋರಬಾರದಿತ್ತು: ಸಿಬಲ್

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಅವರು ಅತ್ಯಂತ ಪ್ರಾಮಾಣಿಕ ವ್ಯಕ್ತಿಯಾಗಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರನ್ನು ತಮ್ಮ ಮನೆಗೆ ಆಹ್ವಾನಿಸಿದ್ದು ದುರದೃಷ್ಟಕರ. ಅದನ್ನು ತಪ್ಪಿಸಬಹುದಿತ್ತು' ಎಂದು ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದ್ದಾರೆ.


ಕಪಿಲ್ ಸಿಬಲ್

ಸಿಜೆಐ ಮನೆಯಲ್ಲಿ ನಡೆದ ಗಣಪತಿ ಪೂಜೆಯಲ್ಲಿ ಮೋದಿ ಅವರು ಪಾಲ್ಗೊಂಡಿದ್ದಕ್ಕೆ ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ (ಎಸ್‌ಸಿಬಿಎ) ಅಧ್ಯಕ್ಷರೂ ಆಗಿರುವ ಸಿಬಲ್ ಪ್ರತಿಕ್ರಿಯಿಸಿ, 'ಅಂತಹ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ಅವರು ಆಸಕ್ತಿ ತೋರಿಸಬಾರದಿತ್ತು' ಎಂದಿದ್ದಾರೆ.

'ಡಿ.ವೈ ಚಂದ್ರಚೂಡ್ ಅವರು ಪ್ರಾಮಾಣಿಕ ವ್ಯಕ್ತಿ ಎಂಬುದನ್ನು ನಾನು ಯಾವುದೇ ಹಿಂಜರಿಕೆಯಿಲ್ಲದೆ ಹೇಳಬಲ್ಲೆ. ಆದರೆ, ಅವರ ನಿವಾಸದಲ್ಲಿ ನಡೆದ ಪೂಜೆಯಲ್ಲಿ ಪ್ರಧಾನಿ ಪಾಲ್ಗೊಂಡ ವಿಡಿಯೊ ನೋಡಿದಾಗ ಅಚ್ಚರಿ ಉಂಟಾಯಿತು. ಸಾರ್ವಜನಿಕ ಸೇವೆಯಲ್ಲಿರುವವರು, ವಿಶೇಷವಾಗಿ ಉನ್ನತ ಹುದ್ದೆಯಲ್ಲಿರುವವರು ಖಾಸಗಿ ಕಾರ್ಯಕ್ರಮವನ್ನು ಪ್ರಚಾರ ಮಾಡಬಾರದು. ಈ ಕಾರ್ಯಕ್ರಮದ ಫೋಟೊ, ವಿಡಿಯೊ ಎಲ್ಲೆಡೆ ಹರಿದಾಡಲಿದೆ ಎಂಬುದು ಸಿಜೆಐಗೆ ತಿಳಿದಿರಲಿಕ್ಕಿಲ್ಲ ಎಂಬ ಬಗ್ಗೆ ನನಗೆ ಖಾತ್ರಿ ಇದೆ' ಎಂದು ಹೇಳಿದ್ದಾರೆ.

'ವಿಚಾರಣೆಯಿಂದ ಹಿಂದೆ ಸರಿಯಲಿ'

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆಯ ಶಾಸಕರ ಅನರ್ಹತೆಗೆ ಸಂಬಂಧಿಸಿದ ಪ್ರಕರಣದ ಅರ್ಜಿಗಳ ವಿಚಾರಣೆಯಿಂದ ಸಿಜೆಐ ಡಿ.ವೈ ಚಂದ್ರಚೂಡ್ ಹಿಂದೆ ಸರಿಯಬೇಕು ಎಂದು ಶಿವಸೇನಾ (ಯುಬಿಟಿ) ಮುಖಂಡ ಸಂಜಯ್ ರಾವುತ್ ಒತ್ತಾಯಿಸಿದ್ದಾರೆ.


ಸಂಜಯ್ ರಾವುತ್

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಂವಿಧಾನದ ರಕ್ಷಕರು ರಾಜಕಾರಣಿಗಳನ್ನು ಭೇಟಿಯಾದಾಗ ಜನರ ಮನಸ್ಸಿನಲ್ಲಿ ಅನುಮಾನಗಳು ಮೂಡುತ್ತವೆ' ಎಂದಿದ್ದಾರೆ.

'ಶಾಸಕರ ಅನರ್ಹತೆ ಪ್ರಕರಣಗಳ ವಿಚಾರಣೆಯಿಂದ ಸಿಜೆಐ ಹಿಂದೆ ಸರಿಯಬೇಕು. ಏಕೆಂದರೆ ಪ್ರಧಾನ ಮಂತ್ರಿಯೊಂದಿಗಿನ ಅವರ ಸಂಬಂಧ ಏನು ಎಂಬುದು ಜಗಜ್ಜಾಹೀರುಗೊಂಡಿದೆ. ಅವರು ನಮಗೆ ನ್ಯಾಯ ಒದಗಿಸಬಲ್ಲರೇ' ಎಂದು ಪ್ರಶ್ನಿಸಿದ್ದಾರೆ.

'ನಮ್ಮ ಪ್ರಕರಣವು ಸಿಜೆಐ ಮುಂದಿದೆ. ಶಾಸಕರ ಅನರ್ಹತೆ ಪ್ರಕರಣದಲ್ಲಿ ಕೇಂದ್ರ ಸರ್ಕಾರವು ಕಕ್ಷಿದಾರ ಆಗಿರುವುದರಿಂದ ಮತ್ತು ಕೇಂದ್ರ ಸರ್ಕಾರವು ಮೋದಿ ಅವರ ನೇತೃತ್ವದಲ್ಲಿರುವುದರಿಂದ ನಮಗೆ ನ್ಯಾಯ ಸಿಗುವ ಬಗ್ಗೆ ಅನುಮಾನವಿದೆ' ಎಂದಿದ್ದಾರೆ.

ಹಿಂದೂಗಳ ಭಾವನೆ ಮತ್ತು ನಮ್ಮ ಹಬ್ಬಗಳ ಬಗ್ಗೆ ಟೀಕೆ ಮಾಡುತ್ತಿರುವ ವಿರೋಧ ಪಕ್ಷದ ನಾಯಕರ ನಿಲುವನ್ನು ಖಂಡಿಸುತ್ತೇನೆ
ಪೀಯೂಷ್ ಗೋಯಲ್, ಕೇಂದ್ರ ಸಚಿವ

'ಅಹಿತಕರ ಸಂದೇಶ': ಸಿಜೆಐ ಮನೆಗೆ ಪ್ರಧಾನಿ ಅವರ ಭೇಟಿ 'ಅಹಿತಕರ' ಸಂದೇಶವನ್ನು ರವಾನಿಸುತ್ತದೆ ಎಂದು ಆರ್‌ಜೆಡಿ ಸಂಸದ ಮನೋಜ್ ಝಾ ಹೇಳಿದ್ದಾರೆ.

'ಸ್ವಾತಂತ್ರ್ಯವು ಕೇವಲ ಸೈದ್ಧಾಂತಿಕವಾಗಿರಬಾರದು, ಅದು ಗೋಚರಿಸುವಂತಿರಬೇಕು. ಗಣಪತಿ ಪೂಜೆ ತುಂಬಾ ವೈಯಕ್ತಿಕ ವಿಷಯ. ನೀವು ಕ್ಯಾಮೆರಾದೊಂದಿಗೆ ಅಲ್ಲಿಗೆ ಹೋಗುತ್ತೀರಿ ಎಂದಾದರೆ ಅದು ರವಾನಿಸುವ ಸಂದೇಶವು ಇನ್ನೊಬ್ಬರಿಗೆ ಅಹಿತಕರವಾಗಿರುತ್ತದೆ' ಎಂದಿದ್ದಾರೆ.

'ಇಫ್ತಾರ್ ಕೂಟಗಳಲ್ಲಿ ಪ್ರಧಾನಿ ಅವರ ಉಪಸ್ಥಿತಿಯನ್ನು ಶ್ಲಾಘಿಸುವ ಮತ್ತು ಪ್ರೋತ್ಸಾಹಿಸುವ ಅದೇ ಮಂದಿ, ಮೋದಿ ಅವರು ಸಿಜೆಐ ಮನೆಯಲ್ಲಿ ನಡೆದ ಗಣಪತಿ ಪೂಜೆಯಲ್ಲಿ ಪಾಲ್ಗೊಂಡಿದ್ದನ್ನು ಟೀಕಿಸುತ್ತಾರೆ. ಭಾರತದಾದ್ಯಂತ ಕೋಟ್ಯಂತರ ಭಕ್ತರಿಂದ ಪೂಜಿಸಲ್ಪಡುವ ದೇವರ ಮುಂದೆ ಕಾರ್ಯಾಂಗ ಮತ್ತು ನ್ಯಾಯಾಂಗವು ಪ್ರಾರ್ಥನೆ ಮಾಡುವ ದೃಶ್ಯವು ಜಾತ್ಯತೀತತೆಯ ನಿಜವಾದ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ' ಎಂದು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಹೇಳಿದ್ದಾರೆ.

'ಪ್ರಜಾಪ್ರಭುತ್ವದ ವಿವಿಧ ಸ್ತಂಭಗಳು ಪರಸ್ಪರ ಭೇಟಿಯಾಗಬಾರದೇ, ಅವರು ಶತ್ರುಗಳಾಗಿರಬೇಕೇ, ಪರಸ್ಪರ ಮಾತನಾಡಬಾರದೇ, ಅವರು ಹಸ್ತಲಾಘವ ಮಾಡಬಾರದೇ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ ಪ್ರಶ್ನಿಸಿದ್ದಾರೆ.

'ಪ್ರಧಾನಿ ಅವರು ಸಿಜೆಐ ಭೇಟಿ ಮಾಡಿದ್ದಕ್ಕೆ ವಿಪಕ್ಷಗಳು ಆಕ್ಷೇಪ ಎತ್ತಿರುವುದು ನನಗೆ ಆಶ್ಚರ್ಯ ಉಂಟುಮಾಡಿದೆ. ಆದರೆ ರಾಹುಲ್ ಗಾಂಧಿ ಅವರು ಅಮೆರಿಕ ಭೇಟಿಯಲ್ಲಿ ಇಲ್ಹಾನ್ ಒಮರ್ (ಭಾರತ ವಿರೋಧಿ ಧೋರಣೆ ಹೊಂದಿರುವ ಅಮೆರಿಕದ ಸಂಸದೆ) ಅವರನ್ನು ಭೇಟಿಯಾಗುವುದಕ್ಕೆ ನಿಮ್ಮ ಯಾವುದೇ ಅಭ್ಯಂತರವಿಲ್ಲ' ಎಂದು ತಿರುಗೇಟು ನೀಡಿದ್ದಾರೆ.

'ನ್ಯಾಯಾಂಗದ ಮೇಲೆ ನಂಬಿಕೆ ಇದೆ'

'ಇಂತಹ ಘಟನೆಯನ್ನು (ಪ್ರಧಾನಿ ಸಿಜೆಐ ಮನೆಗೆ ಭೇಟಿ ನೀಡುವುದು) ಕೇಳಿರಲಿಲ್ಲ. ಆದ್ದರಿಂದ ಅಚ್ಚರಿ ಉಂಟಾಯಿತು. ಆದರೆ, ನನಗೆ ನ್ಯಾಯಾಂಗದ ಮೇಲೆ ಸಂಪೂರ್ಣ ನಂಬಿಕೆ ಇದೆ. ಸಿಜೆಐ ಅವರು ಪ್ರಧಾನಿ ಅವರನ್ನು ಆಹ್ವಾನಿ-ಸುವುದಕ್ಕೂ ಮುನ್ನ ಸಾಕಷ್ಟು ಯೋಚಿಸಿರಬಹುದು.
ಸುಪ್ರಿಯಾ ಸುಳೆ, ಎನ್‌ಸಿಪಿ (ಶರದ್ ಪವಾರ್ ಬಣ) ಸಂಸದೆ

'ಸಿಜೆಐ ಮನೆಯಲ್ಲಿ ನಡೆದ ಗಣಪತಿ ಪೂಜೆ ಮತ್ತು ಆರತಿ ದೇಶದಾದ್ಯಂತ ಅನೇಕರ ನಿದ್ದೆಗೆಡಿಸಿದೆ. ಪ್ರಧಾನಿ ಅವರು ಅಲ್ಲಿ ಸ್ನೇಹಕೂಟಕ್ಕೆ ತೆರಳಿದ್ದಲ್ಲ. ಶ್ರದ್ಧೆಯಿಂದ ನಡೆದ ಗಣಪತಿ ಪೂಜೆಯನ್ನೂ ಕೆಲವರಿಗೆ ಜೀರ್ಣಿಸಿಕೊಳ್ಳಲು ಕಷ್ಟವಾಗುತ್ತಿದೆ.
ಬಿ.ಎಲ್.ಸಂತೋಷ್, ಬಿಜೆಪಿ ಪ್ರಧಾನ ಕಾರ್ಯದರ್ಶಿ (ಸಂಘಟನೆ)

ಸಿಜೆಐ ಅವರ ವಿಶ್ವಾಸಾರ್ಹತೆಯನ್ನು ಹಾಳುಮಾಡುವ ವಿಪಕ್ಷಗಳ 'ನಿರ್ಲಕ್ಷ್ಯದ ಹೇಳಿಕೆ' ಬೇಜವಾಬ್ದಾರಿಯಿಂದ ಕೂಡಿದ್ದಾಗಿದೆ. ತೀರ್ಪುಗಳು ತಮ್ಮ ಪರವಾಗಿ ಬಂದಾಗ, ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್‌ನ ವಿಶ್ವಾಸಾರ್ಹತೆಯನ್ನು ಹೊಗಳುತ್ತವೆ. ಆದರೆ ತಮಗೆ ವಿರುದ್ಧವಾದ ಬೆಳವಣಿಗೆ ನಡೆದಾಗ ನ್ಯಾಯಾಂಗವು ರಾಜಿಯಾಗಿದೆ ಎಂದು ಆರೋಪಿಸುತ್ತವೆ.
ಮಿಲಿಂದ್ ದೇವ್ರಾ, ಶಿವಸೇನಾ (ಶಿಂದೆ ಬಣ) ರಾಜ್ಯಸಭಾ ಸದಸ್ಯ

ಗಣಪತಿ ಪೂಜೆಯಲ್ಲಿ ಪಾಲ್ಗೊಳ್ಳುವುದು ಅಪರಾಧವಲ್ಲ. ಮದುವೆ ಮತ್ತು ಇತರ ಶುಭ ಸಮಾರಂಭಗಳಲ್ಲಿ ನ್ಯಾಯಾಂಗದವರು ಮತ್ತು ರಾಜಕಾರಣಿಗಳು ಹಲವು ಸಲ ಜತೆಯಾಗಿ ಕಾಣಿಸಿಕೊಂಡಿದ್ದಾರೆ. ನ್ಯಾಯಾಂಗ ವ್ಯವಸ್ಥೆಯನ್ನು ದೂಷಿಸುವುದು ನಾಚಿಕೆಗೇಡಿನ ಸಂಗತಿ.
ಶೆಹಜಾದ್ ಪೂನಾವಾಲಾ, ಬಿಜೆಪಿ ವಕ್ತಾರ

ಯುವ ಸೇನಾಧಿಕಾರಿಗಳ ಮೇಲೆ ಹಲ್ಲೆ
ಸ್ನೇಹಿತೆ ಮೇಲೆ ಸಾಮೂಹಿಕ ಅತ್ಯಾಚಾರ

ಪಿಕ್‌ನಿಕ್‌ಗೆ ತೆರಳಿದ್ದ ಅಧಿಕಾರಿಗಳು, ಅವರ ಸ್ನೇಹಿತೆಯರು

ಇಂದೋರ್ (ಪಿಟಿಐ): ಪಿಕ್‌ನಿಕ್‌ಗೆ ತೆರಳಿದ್ದ ಸೇನಾ 'ಯುವ ಅಧಿಕಾರಿ ತರಬೇತಿ'ಯಲ್ಲಿದ್ದ ಇಬ್ಬರು ಅಧಿಕಾರಿಗಳನ್ನು ಥಳಿಸಿ, ಅವರ ಇಬ್ಬರು ಸ್ನೇಹಿತೆಯರ ಪೈಕಿ ಒಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ ಎಂದು ಆರೋಪಿಸಲಾಗಿದೆ. ಡಕಾಯತಿಗಾಗಿ ಬಂದಿದ್ದ ಆರು ಮಂದಿ ಈ ಕೃತ್ಯ ಎಸಗಿದ್ದು, ಇಬ್ಬರನ್ನು ಬಂಧಿಸಲಾಗಿದೆ.

'25 ವರ್ಷದ ಯುವ ಅಧಿಕಾರಿಗಳು ಮಹು ಕಂಟೋನ್‌ಮೆಂಟ್‌ನಲ್ಲಿರುವ ಇನ್‌ಫೆಂಟ್ರ ಶಾಲೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಶಾಲೆಯಿಂದ 30 ಕಿ.ಮೀ ದೂರದಲ್ಲಿರುವ ಪ್ರವಾಸಿತಾಣವಾದ ಜಾಮ್ ಗೇಟ್ ಬಳಿ ಅವರ ಸ್ನೇಹಿತೆಯರೊಂದಿಗೆ ಮಂಗಳವಾರ ಪಿಕ್‌ನಿಕ್‌ಗೆ ತೆರಳಿದ್ದಾರೆ. ಈ ಪ್ರದೇಶವು ರಾತ್ರಿ ವೇಳೆಯಲ್ಲಿ ನಿರ್ಜನವಾಗಿರುತ್ತದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಹಿತಿಕಾ ವಸಾಲ್ ಗುರುವಾರ ಹೇಳಿದರು.

'ಬುಧವಾರ ನಸುಕಿನ 2 ಗಂಟೆಗೆ ಘಟನೆ ನಡೆದಿದ್ದು, ಈ ಸಂಬಂಧ ಇಬ್ಬರನ್ನು ಬಂಧಿಸಿದ್ದು ಉಳಿದ ನಾಲ್ಕು ಮಂದಿಗಾಗಿ ಹುಡುಕಾಟ ನಡೆದಿದೆ. ಆರೋಪಿಗಳು ಅಲ್ಲೇ ಹತ್ತಿರದ ಗ್ರಾಮದವರು. ಇವರಲ್ಲಿ ಕೆಲವರಿಗೆ ಅಪರಾಧದ ಹಿನ್ನೆಲೆ ಇದ್ದು, ಒಬ್ಬ ಆರೋಪಿಯ ಮೇಲೆ 2016ರಲ್ಲಿ ಕಳ್ಳತನದ ಪ್ರಕರಣ ದಾಖಲಾಗಿತ್ತು' ಎಂದರು. 'ಆರೋಪಿಗಳ ಮೇಲೆ ಭಾರತೀಯ ನ್ಯಾಯ ಸಂಹಿತೆ ಹಾಗೂ ಶಸ್ತ್ರಾಸ್ತ್ರ ಕಾಯ್ದೆ ಅಡಿಯಲ್ಲಿ ದೌರ್ಜನ್ಯ, ಡಕಾಯಿತಿ ಹಾಗೂ ಅತ್ಯಾಚಾರ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

ಮಹಿಳೆಯು ಆಘಾತಕ್ಕೊಳಗಾಗಿದ್ದಾರೆ. ತಕ್ಷಣವೇ ಹೇಳಿಕೆ ನೀಡಲು ಅವರು ನಿರಾಕರಿಸಿದ್ದಾರೆ. ಅವರ ಹೇಳಿಕೆ ನೀಡಿದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಿದ್ದೇವೆ
ರೂಪೇಶ್ ಕುಮಾರ್ ದ್ವಿವೇದಿ
ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ


ಘಟನೆ ಹೇಗಾಯಿತು?

ವಿಂಧ್ಯ ಪರ್ವತ ಶ್ರೇಣಿಯಲ್ಲಿ ಬರುವ ಜಾಮ್ ಗೇಟ್ ಬಳಿಯ ಅರಣ್ಯ ಪ್ರದೇಶದಲ್ಲಿ ಕಾರಿನಲ್ಲಿದ್ದ ಒಬ್ಬ ಯುವ ಅಧಿಕಾರಿ ಹಾಗೂ ಸ್ನೇಹಿತೆಗೆ ಆರೋಪಿಗಳು ಥಳಿಸಿದ್ದಾರೆ. ಚೀರಾಟ ಕೇಳಿದ ಬಳಿಕ, ಬೆಟ್ಟದ ತುದಿಯಲ್ಲಿದ್ದ ಉಳಿದ ಇಬ್ಬರು ಘಟನಾ ಸ್ಥಳಕ್ಕೆ ಬಂದಿದ್ದಾರೆ. ಆ ವೇಳೆ, ಕಾರಿನಲ್ಲಿದ್ದವರನ್ನು ಒತ್ತೆಯಾಳುಗಳನ್ನಾಗಿ ಮಾಡಿಕೊಂಡ ಆರೋಪಿಗಳು, '₹10 ಲಕ್ಷ ತಂದರೆ ಮಾತ್ರವೇ ಇವರನ್ನು ಬಿಡುತ್ತೇವೆ' ಎಂದಿದ್ದಾರೆ' ಎಂದು ಪೊಲೀಸ್ ವರಿಷ್ಠಾಧಿಕಾರಿ (ಗ್ರಾಮಾಂತರ) ಹಿತಿಕಾ ವಸಾಲ್ ವಿವರಿಸಿದರು.


'ಹಣ ತರಲು ಹೊರಟ ಅಧಿಕಾರಿಯು ತನ್ನ ಹಿರಿಯ ಅಧಿಕಾರಿಗೆ ಘಟನೆಯ ಕುರಿತು ಮಾಹಿತಿ ನೀಡಿದ್ದಾರೆ. ಅವರು ನಮಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ನಾವು ಘಟನಾ ಸ್ಥಳಕ್ಕೆ ಧಾವಿಸಿದೆವು. ಕಾರು ಬರುತ್ತಿದ್ದಂತೆಯೇ ಆರೋಪಿಗಳು ಅರಣ್ಯ ಪ್ರದೇಶದ ಒಳಗೆ ಓಡಿದರು' ಎಂದರು.

'ಈ ಬಗ್ಗೆ ಬಂಧನದಲ್ಲಿದ್ದ ಅಧಿಕಾರಿಯು ದೂರು ನೀಡಿದ್ದಾರೆ. ತನ್ನ ಜೊತೆಯಿದ್ದ ನನ್ನ ಸ್ನೇಹಿತೆಯನ್ನು ಆರೋಪಿಗಳು ದೂರ ಎಳೆದುಕೊಂಡು ಹೋದರು. ಈ ವೇಳೆ ಆಕೆಯ ಮೇಲೆ ಅತ್ಯಾಚಾರ ನಡೆದಿರಬಹುದು ಎಂದು ಅವರು ದೂರಿನಲ್ಲಿ ಹೇಳಿದ್ದಾರೆ. ಮಹಿಳೆಯ ಹೇಳಿಕೆಯನ್ನು ಇನ್ನಷ್ಟೇ ಪಡೆದುಕೊಳ್ಳಬೇಕಿದೆ' ಎಂದರು.

'ನಾಲ್ವರನ್ನು ಬೆಳಿಗ್ಗೆ 6.30ರ ಸುಮಾರಿಗೆ ವೈದ್ಯಕೀಯ ಪರೀಕ್ಷೆಗಾಗಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಯಿತು. ಸೇನಾಧಿಕಾರಿಗಳ ದೇಹದ ಮೇಲೆ ಗಾಯಗಳಾಗಿವೆ ಹಾಗೂ ಒಬ್ಬ ಮಹಿಳೆ ಮೇಲೆ ಅತ್ಯಾಚಾರ ನಡೆದಿದೆ ಎಂದು ವೈದ್ಯರು ಮಾಹಿತಿ ನೀಡಿದರು' ಎಂದು ಬಡಗೊಂದಾ ಠಾಣೆಯ ಲೋಕೇಂದ್ರ ಹಿರೋರೆ ಮಾಹಿತಿ ನೀಡಿದರು.



ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದರ ಕುರಿತು ಬಿಜೆಪಿ ಸರ್ಕಾರವು ತಾಳಿರುವ ನಿರ್ಲಕ್ಷ್ಯ ಧೋರಣೆಯು ಚಿಂತೆಗೀಡು ಮಾಡುವಂತಿದೆ. ಭಾರತದ ಮಗಳ ಆಶೋತ್ತರಗಳಿಗೆ, ಅವಳ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರವೃತ್ತಿಯನ್ನು ಪೋಷಿಸುತ್ತಿರುವ ಘಟನೆಗಳು ನಡೆಯುತ್ತಿದೆ. ಜೊತೆಗೆ ಆಡಳಿತ ಸಂಪೂರ್ಣ ವಿಫಲಗೊಂಡಿರುವುದಕ್ಕೆ ಅಪರಾಧಿಗಳಲ್ಲಿ ಧಾರ್ಷ್ಟ್ಯ ಮೂಡಿದೆ
ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ



ಮಹಿಳೆಯರ ಸುರಕ್ಷತೆಯ ಕುರಿತು ಪ್ರಧಾನಿ ದೊಡ್ಡ ದೊಡ್ಡ ಭಾಷಣ ಮಾಡುತ್ತಾರಷ್ಟೆ. ಈ ದೇಶದಲ್ಲಿ ಪ್ರತಿನಿತ್ಯವೂ 86 ಮಹಿಳೆಯರು ಅತ್ಯಾಚಾರ ಅಥವಾ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಈ ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಮನೋಬಲವು ಪ್ರತಿದಿನವೂ ಕುಂದುತ್ತಲೇ ಇದೆ
ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಬುಲ್ಡೋಜರ್‌ನಿಂದ ಮನೆಗಳ ಧ್ವಂಸ ಕಾನೂನುಗಳನ್ನೇ ನಾಶ ಮಾಡಿದಂತೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಒಬ್ಬ ವ್ಯಕ್ತಿ ಕಾನೂನು ಉಲ್ಲಂಘಿಸಿದ ಮಾತ್ರಕ್ಕೆ ಕಾನೂನುಬದ್ಧವಾಗಿ ನಿರ್ಮಿಸಿದ ಆತನ ಕುಟುಂಬದ ಮನೆ ಅಥವಾ ಸ್ವತ್ತನ್ನು ಬುಲ್ಡೋಜರ್ ಬಳಸಿ ಧ್ವಂಸ ಮಾಡುವುದು ಸರಿಯಲ್ಲ. ಅಂಥ ಕ್ರಮ ಕಾನೂನುಗಳನ್ನೇ ಧ್ವಂಸ ಮಾಡುವುದಕ್ಕೆ ಸಮ' ಎಂದು ಸುಪ್ರೀಂ ಕೋರ್ಟ್ ಗುರುವಾರ ಕಠಿಣವಾಗಿ ಹೇಳಿದೆ.



'ಸರ್ಕಾರ ಕೈಗೊಳ್ಳುವ ಕ್ರಮಗಳು ಕಾನೂನು ಪ್ರಕಾರವೇ ಇರಬೇಕು. ಆರೋಪಿಯೊಬ್ಬನ ಮನೆಯನ್ನು ಬುಲ್ಡೋಜರ್ ಬಳಸಿ ಧ್ವಂಸ ಮಾಡಲಾಗುತ್ತದೆ ಎಂಬ ಬೆದರಿಕೆಗಳು ಇರುವುದು ಊಹಿಸಲು ಸಾಧ್ಯವಿಲ್ಲ' ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಜಾವೇದಲಿ ಮಹೆಬೂಬ್‌ಮಿಯಾ ಸೈಯದ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್, ಸುಧಾಂಶು ಧುಲಿಯಾ ಹಾಗೂ ಎಸ್‌.ವಿ.ಎನ್.ಭಟ್ಟಿ ಅವರಿದ್ದ ನ್ಯಾಯಪೀಠ ನಡೆಸಿತು.

'ಆರೋಪಿತನ ವಿರುದ್ಧ ಕೇಳಿ ಬಂದಿರುವ ಅಪರಾಧ ಕೃತ್ಯವು ಕಾನೂನು ಪ್ರಕ್ರಿಯೆ ಮೂಲಕ ಸಾಬೀತಾಗಬೇಕು' ಎಂದ ನ್ಯಾಯಪೀಠ, ಅರ್ಜಿದಾರನ ಆಸ್ತಿಗೆ ಸಂಬಂಧಿಸಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನಿರ್ದೇಶನ ನೀಡಿ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿತು.

ಪೊಲೀಸರ ಗುಂಡಿಗೆ ಇಬ್ಬರು ಬಲಿ

ಗುವಾಹಟಿ: ಒತ್ತುವರಿ ತೆರವು ಕಾರ್ಯಾಚರಣೆಗೆ ತೆರಳಿದ ಅಧಿಕಾರಿಗಳ ಮೇಲೆ ದಾಳಿಗೆ ಮುಂದಾದ ಗುಂಪಿನ ಮೇಲೆ ಪೊಲೀಸರು ನಡೆಸಿದ ಗುಂಡೇಟಿನಲ್ಲಿ ಬಂಗಾಳಿ ಮುಸ್ಲಿಂ ಸಮುದಾಯದ ಇಬ್ಬರು ಬಲಿಯಾಗಿದ್ದಾರೆ.

ಮೃತರನ್ನು ಜೊವಾಹಿದ್ ಅಲಿ (19) ಮತ್ತು ಹೈದರ್ ಅಲಿ (21) ಎಂದು ಗುರುತಿಸಲಾಗಿದೆ. ಇತರ 11 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮವಾಗಿ ನೆಲೆಸಿದ ಆರೋಪ ಎದುರಿಸುತ್ತಿರುವವರನ್ನು ಸ್ಥಳಾಂತರ ಮಾಡಲು ಸೋನಾಪುರ ರೆವೆನ್ಯೂ ವಿಭಾಗದ ಅಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿಯ ತಂಡ ಕೊಚುತೋಳಿ ಗ್ರಾಮಕ್ಕೆ ಗುರುವಾರ ತೆರಳಿದಾಗ ಈ ಘಟನೆ ನಡೆದಿದೆ. ಉದ್ರಿಕ್ತರ ಗುಂಪು ನಡೆಸಿದ ದಾಳಿಗೆ ಮಹಿಳಾ ಸಿಬ್ಬಂದಿ ಸೇರಿ 22 ಪೊಲೀಸರು ಗಾಯಗೊಂಡಿದ್ದಾರೆ ಎಂದು ಡಿಜಿಪಿ ಜಿ.ಪಿ ಸಿಂಗ್ ಹೇಳಿದ್ದಾರೆ.

'ಬುಡಕಟ್ಟು ಜನರಿಗೆ ಸೇರಿದ ಜಾಗದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಂಡು ಅಕ್ರಮವಾಗಿ ನಿರ್ಮಿಸಿದ್ದ 237 ಮನೆಗಳನ್ನು ಕೆಡವಲಾಗಿದೆ. ಆದರೆ ಕೆಲವು ನಿವಾಸಿಗಳು ಮತ್ತೆ ಅಲ್ಲಿ ತಾತ್ಕಾಲಿಕ ಟೆಂಟ್ ಹಾಕಿ ವಾಸ ಆರಂಭಿಸಿದ್ದರು. ಸ್ಥಳ ಖಾಲಿ ಮಾಡುವಂತೆ ಸೂಚಿಸಿದ ಪೊಲೀಸ್ ಸಿಬ್ಬಂದಿ ಮೇಲೆ ಗುಂಪೊಂದು ದಾಳಿ ನಡೆಸಿದೆ' ಎಂದು ತಿಳಿಸಿದ್ದಾರೆ.

ಮಣಿಪುರ: 40 ಪ್ರತಿಭಟನಕಾರರ ಬಂಧನ

ಪ್ರಜಾವಾಣಿ ವಾರ್ತೆ

ಗುವಾಹಟಿ: ಸಂಘರ್ಷ ಪೀಡಿತ ಮಣಿಪುರದಲ್ಲಿ ಪದೇ ಪದೇ ನೀಡುತ್ತಿರುವ ಎಚ್ಚರಿಕೆಗಳನ್ನು ಲೆಕ್ಕಿಸದೇ ಕಳೆದ ಮೂರು ದಿನಗಳಲ್ಲಿ ಹಿಂಸಾತ್ಮಕ ಪ್ರತಿಭಟನೆಗಳಲ್ಲಿ ತೊಡಗಿದ್ದ ಏಳು ಬಾಲಕರು ಸೇರಿದಂತೆ 40 ಮಂದಿ ಪ್ರತಿಭಟನಕಾರರನ್ನು ಬುಧವಾರ ರಾತ್ರಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಲ್ಲಿ ಹೆಚ್ಚಿನವರು, ಸೋಮವಾರ ಮತ್ತು ಮಂಗಳವಾರ ರಾಜಭವನದತ್ತ ಕಲ್ಲು ತೂರಾಟ ನಡೆಸಿದ ವಿದ್ಯಾರ್ಥಿಗಳು ಎಂದು ಮೂಲಗಳು ತಿಳಿಸಿವೆ.

'ಸಾರ್ವಜನಿಕರು ಕಾನೂನು ಬಾಹಿರ ಕೃತ್ಯಗಳಲ್ಲಿ ತೊಡಗಬಾರದು. ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಕಾನೂನು ಜಾರಿ ಸಂಸ್ಥೆಗಳೊಂದಿಗೆ ಸಹಕರಿಸುವಂತೆ ಮಣಿಪುರ ಜನತೆಯಲ್ಲಿ ಮನವಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಡಿಜಿಪಿ ಮತ್ತು ಕೇಂದ್ರದ ಭದ್ರತಾ ಸಲಹೆಗಾರರನ್ನು ವಜಾಗೊಳಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ನಿಯೋಗವನ್ನು ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಮಂಗಳವಾರ ಭೇಟಿ ಮಾಡಿದ್ದರು.

ಶುಕ್ರವಾರ, ಸೆಪ್ಟೆಂಬರ್ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 255 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

'ಫಲಿತಾಂಶಕ್ಕಾಗಿ ಕಾಯುತ್ತಿರುವೆ' ಕಾಲಾಪತ್ಥರ್ ಚಿತ್ರದ ನಾಯಕ, ನಿರ್ದೇಶಕ ವಿಕ್ಕಿ ವರುಣ್ ಸಂದರ್ಶನ



ಆಳ-ಅಗಲ
ಕಾಣಲಾಗದವರಿಗೂ, ಕೇಳಲಾಗದವರಿಗೂ ಸಿನಿಮಾ ದಕ್ಕಿಸಿ ಕೊಡುವ ಈ ಬಗೆ...

ಸೌಹಾರ್ದಕ್ಕೆ ಸಾಕ್ಷಿಯಾದ ಗಣೇಶೋತ್ಸವ 6

ರಾಜೀನಾಮೆಗೆ ಸಿದ್ಧ: ಮಮತಾ ಬ್ಯಾನರ್ಜಿ 5B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,962	24,918	₹74,100 (ಬೆಂಗಳೂರು)	₹85,500 (ಬೆಂಗಳೂರು)	83.96

ಪ್ರಧಾನಿಯಿಂದ ಕೆಟ್ಟ ಸಂದೇಶ – ಪ್ರತಿಪಕ್ಷ • ಪೂಜೆಯಲ್ಲಿ ಪಾಲ್ಗೊಂಡಿದ್ದು ಅಪರಾಧವಲ್ಲ – ಬಿಜೆಪಿ

ಸಿಜೆಐ ಮನೆಗೆ ಮೋದಿ: ವಿವಾದ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ಮನೆಯಲ್ಲಿ ನಡೆದ ಗಣಪತಿ ಹಬ್ಬದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದು ರಾಜಕೀಯ ವಲಯದಲ್ಲಿ ವಿವಾದ ಭುಗಿಲೇಳುವಂತೆ ಮಾಡಿದೆ.

ಪ್ರಧಾನಿ ನಡೆಯನ್ನು ಟೀಕಿಸಿರುವ ಪ್ರತಿಪಕ್ಷಗಳು, ಇದು 'ಕೆಟ್ಟ ಸಂದೇಶ' ರವಾನಿಸುತ್ತದೆ ಎಂದು ದೂರಿವೆ. 'ಗಣೇಶ ಹಬ್ಬದಲ್ಲಿ ಪಾಲ್ಗೊಳ್ಳುವುದು ಅಪರಾಧವಲ್ಲ' ಎನ್ನುವ ಮೂಲಕ ಬಿಜೆಪಿ ಮತ್ತು ಮಿತ್ರಪಕ್ಷಗಳು, ವಿರೋಧಿಗಳ ಟೀಕೆಗೆ ಪ್ರತಿಕ್ರಿಯೆ ಕೊಟ್ಟಿವೆ.

ಸಿಜೆಐ ಮನೆಯಲ್ಲಿ ಬುಧವಾರ ನಡೆದ ಪೂಜೆಯಲ್ಲಿ ಪ್ರಧಾನಿ ಭಾಗವಹಿಸಿದ ಫೋಟೊ ಮತ್ತು ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ. ಚಂದ್ರಚೂಡ್ ಮತ್ತು ಅವರ ಪತ್ನಿ ಕಲ್ಪನಾ ದಾಸ್, ಪ್ರಧಾನಿ ಅವರನ್ನು ಮನೆಗೆ ಬರಮಾಡಿಕೊಂಡ ದೃಶ್ಯವೂ ವಿಡಿಯೊದಲ್ಲಿದೆ.

'ಸಿಜೆಐ ನಿವಾಸದಲ್ಲಿ ನಡೆದ ಗಣೇಶ ಪೂಜೆಯಲ್ಲಿ ಪಾಲ್ಗೊಂಡೆ. ಭಗವಾನ್ ಗಣೇಶ ನಮ್ಮೆಲ್ಲರಿಗೂ ಸಂತೋಷ, ಸಮೃದ್ಧಿ ಮತ್ತು ಆರೋಗ್ಯವನ್ನು ನೀಡಲಿ' ಎಂಬ ಸಂದೇಶ ಹಾಗೂ ಪೂಜೆಯ ಫೋಟೊವನ್ನು ಪ್ರಧಾನಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ವಿರೋಧ ಪಕ್ಷಗಳ ಹಲವು ನಾಯಕರು ಹಾಗೂ ಪ್ರಶಾಂತ್ ಭೂಷಣ್ ಮತ್ತು ಇಂದಿರಾ ಜೈಸಿಂಗ್ ಸೇರಿದಂತೆ ಸುಪ್ರೀಂ ಕೋರ್ಟ್‌ನ ಕೆಲವು ವಕೀಲರು ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ಕಾರ್ಯಾಂಗ ಮತ್ತು ನ್ಯಾಯಾಂಗದ ಅಧಿಕಾರದ ನಡುವಿನ ಗೆರೆಯನ್ನು ಸಿಜೆಐ ಅವರು ಅಳಿಸಿ ಹಾಕಿದ್ದಾರೆ' ಎಂದು ಇಂದಿರಾ ಜೈಸಿಂಗ್ ದೂರಿದ್ದಾರೆ. 'ಮುಖ್ಯ ನ್ಯಾಯಮೂರ್ತಿಯವರ ಸ್ವಾತಂತ್ರ್ಯದ ಬಗ್ಗೆ ಇದ್ದ ಎಲ್ಲ ವಿಶ್ವಾಸವನ್ನೂ ಕಳೆದು ಕೊಂಡೆ. ಇದನ್ನು ಸುಪ್ರೀಂ ಕೋರ್ಟ್ ವಕೀಲರ ಸಂಘ ಖಂಡಿಸಬೇಕು' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ ಸಂಸದ ಸಂಬಿತ್ ಪಾತ್ರ, 'ತಮ್ಮನ್ನು ತಾವು ಜಾತ್ಯತೀತವಾದಿಗಳು ಎಂದು ಕರೆಯಿಸಿಕೊಳ್ಳುವ ಕೆಲವು ಮೂರ್ಖರು ಈ ಸೌಜನ್ಯದ ಭೇಟಿಯನ್ನು ವಿರೋಧಿಸುತ್ತಿದ್ದಾರೆ. ಆದರೆ ಇಂಥ ಅಪಕ್ವ ಟೀಕೆಗಳನ್ನು ಕಡೆಗಣಿಸುವ ಶಕ್ತಿ ನಮ್ಮ ಮಹಾನ್ ಪ್ರಜಾಪ್ರಭುತ್ವಕ್ಕೆ ಇದೆ' ಎಂದಿದ್ದಾರೆ.



ಸಿಜೆಐ ಡಿ.ವೈ.ಚಂದ್ರಚೂಡ್ ಅವರ ನವದೆಹಲಿಯ ನಿವಾಸದಲ್ಲಿ ಬುಧವಾರ ನಡೆದ ಗಣಪತಿ ಪೂಜೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

> **ಸಿಜೆಐ ತಮ್ಮ ನಿವಾಸಕ್ಕೆ ಪ್ರಧಾನಿ ಅವರ ಖಾಸಗಿ ಭೇಟಿಗೆ ಅವಕಾಶ ನೀಡಿದ್ದು ನಿಜಕ್ಕೂ ಆಘಾತಕಾರಿ. ಇದು ನ್ಯಾಯಾಂಗದ ಬಗ್ಗೆ ಕೆಟ್ಟ ಸಂದೇಶ ರವಾನಿಸುತ್ತದೆ**
> **ಪ್ರಶಾಂತ್ ಭೂಷಣ್,** ಹಿರಿಯ ವಕೀಲ

> **ವಿಪಕ್ಷಗಳ ಆಕ್ಷೇಪ ಅಚ್ಚರಿ ಉಂಟುಮಾಡಿದೆ. ಮನಮೋಹನ್ ಸಿಂಗ್ ಅವರು ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಅಂದಿನ ಸಿಜೆಐ ಭಾಗವಹಿಸಿರಲಿಲ್ಲವೇ?**
> **ಸಂಬಿತ್ ಪಾತ್ರ,** ಬಿಜೆಪಿ ರಾಷ್ಟ್ರೀಯ ವಕ್ತಾರ



ನಾಗಮಂಗಲದಲ್ಲಿ ನಡೆದ ಗಲಭೆಯಲ್ಲಿ ಭಸ್ಮವಾಗಿರುವ ಅಂಗಡಿ, ಮಳಿಗೆಗಳ ಮುಂದೆ ಗುರುವಾರ ಜನ ಸೇರಿದ್ದರು

ಗಣೇಶನ ಮೆರವಣಿಗೆ ಕಾಲಕ್ಕೆ ಗಲಭೆ: ನಾಳೆವರೆಗೆ ನಿಷೇಧಾಜ್ಞೆ

ನಾಗಮಂಗಲ: 54 ಬಂಧನ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಪಟ್ಟಣದಲ್ಲಿ ಬುಧವಾರ ರಾತ್ರಿ ಗಣಪತಿ ಮೂರ್ತಿಯ ಮೆರವಣಿಗೆ ವೇಳೆ ನಡೆದಿದ್ದ ಕಲ್ಲುತೂರಾಟ, ಅಂಗಡಿ, ವಾಹನಗಳಿಗೆ ಬೆಂಕಿ ಹಚ್ಚಿದ ಕೃತ್ಯಗಳಿಗೆ ಸಂಬಂಧಿಸಿದಂತೆ ಹಿಂದೂ– ಮುಸ್ಲಿಂ ಸಮುದಾಯದ ಒಟ್ಟು 54 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಶನಿವಾರ (ಸೆ.14) ಮಧ್ಯರಾತ್ರಿವರೆಗೆ ಪಟ್ಟಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. 'ಬಿಗಿ ಭದ್ರತೆ ಏರ್ಪಡಿಸಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿದೆ' ಎಂದು ಎಸ್‌ಪಿ ತಿಳಿಸಿದ್ದಾರೆ.

ಗಲಭೆ ಕೃತ್ಯದ ಹಿನ್ನೆಲೆಯಲ್ಲಿ ಗುರುವಾರ ಶಾಲೆ–ಕಾಲೇಜುಗಳಿಗೆ ರಜೆ ನೀಡಲಾಗಿತ್ತು. 'ಪಟ್ಟಣದಲ್ಲಿ ಸದ್ಯದ ವಾತಾವರಣ ಬೂದಿ ಮುಚ್ಚಿದ ಕೆಂಡದಂತಿದೆ' ಎಂದು ಸ್ಥಳೀಯರು ಪ್ರತಿಕ್ರಿಯಿಸಿದ್ದಾರೆ.

ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳ ಸಂಘಟನೆಗಳು ಗಲಭೆಯನ್ನು ಖಂಡಿಸಿ ಗುರುವಾರ ಪಟ್ಟಣ ಬಂದ್‌ಗೆ ಕರೆ ನೀಡಿದ್ದವು. ವ್ಯಾಪಾರಿಗಳು ವಹಿವಾಟು ಸ್ಥಗಿತಗೊಳಿಸಿ ಬೆಂಬಲ ನೀಡಿದರು.

ಗಲಭೆ ವೇಳೆ ಉದ್ರಿಕ್ತ ಯುವಕರ ಗುಂಪು ಹಚ್ಚಿದ ಬೆಂಕಿಯಿಂದ 20 ಅಂಗಡಿಗಳಿಗೆ ಹಾನಿಯಾಗಿದೆ. ಗ್ಯಾರೇಜ್‌ನಲ್ಲಿದ್ದ ದ್ವಿಚಕ್ರ ವಾಹನಗಳು ಮತ್ತು ರಸ್ತೆಬದಿ ನಿಲ್ಲಿಸಿದ್ದ ಕಾರು, ಬೈಕ್‌ಗಳು ಜಖಂಗೊಂಡಿವೆ. ಭೀಮ್ ರಾಜ್ ಎಂಬುವವರ ಸಾಧನ ಟೆಕ್ಸ್‌ಟೈಲ್ಸ್ ಮಳಿಗೆ ಸಂಪೂರ್ಣ ಭಸ್ಮವಾಗಿದೆ. ಮಾಜಿ ಶಾಸಕ ಸುರೇಶಗೌಡ ನಿವಾಸ ಸೇರಿ ಹಲವರ ಮನೆ ಮೇಲೆ ಕಲ್ಲುತೂರಲಾಗಿದೆ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

'ಪೊಲೀಸರ ಲೋಪಗಳು ಇವೆ'

'ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಇಲಾಖೆ ಲೋಪಗಳು ಕಂಡುಬಂದಿವೆ. ತನಿಖೆ ನಡೆಸಿ ಕ್ರಮ ಜರುಗಿಸುತ್ತೇವೆ' ಎಂದು ರಾಜ್ಯ ಕಾನೂನು, ಸುವ್ಯವಸ್ಥೆ ಎಡಿಜಿಪಿ ಆರ್.ಹಿತೇಂದ್ರ ಇಲ್ಲಿ ಪ್ರತಿಕ್ರಿಯಿಸಿದರು.


'ಗಲಭೆ ಕೃತ್ಯವು ಪೂರ್ವನಿಯೋಜಿತವೋ, ಆಕಸ್ಮಿಕವೋ ಎಂಬುದು ತನಿಖೆಯಿಂದ ತಿಳಿಯಲಿದೆ. ತಪ್ಪಿತಸ್ಥರ ವಿರುದ್ಧ ಕಠಿಣಕ್ರಮಕ್ಕೆ ಸೂಚಿಸಿದ್ದೇನೆ' ಎಂದು ಹೇಳಿದರು.

> **ಕಾಂಗ್ರೆಸ್ ತನ್ನ ರಾಜಕೀಯ ಸ್ವಾರ್ಥಕ್ಕಾಗಿ ನಿರ್ದಿಷ್ಟ ಸಮುದಾಯವನ್ನು ತುಷ್ಟೀಕರಣ ಮಾಡಿದ್ದಕ್ಕಾಗಿ ಈ ಹೇಯ ಘಟನೆ ನಡೆದಿದೆ**
> **ಎಚ್.ಡಿ.ಕುಮಾರಸ್ವಾಮಿ**
> ಕೇಂದ್ರ ಭಾರಿ ಕೈಗಾರಿಕೆ ಸಚಿವ

> **ಗಣೇಶ ವಿಸರ್ಜನೆಯ ವೇಳೆ ನಡೆದಿರುವ ಕಲ್ಲು ತೂರಾಟ ಕಿಡಿಗೇಡಿಗಳ ದುಷ್ಕೃತ್ಯ. ದುರುಳರು ಯಾವುದೇ ಧರ್ಮದವರಾಗಿರಲಿ ಕ್ರಮ ಕೈಗೊಳ್ಳಲಾಗುವುದು**
> **ಸಿದ್ದರಾಮಯ್ಯ**
> ಮುಖ್ಯಮಂತ್ರಿ

ಸೀತಾರಾಮ್ ಯೆಚೂರಿ ಇನ್ನಿಲ್ಲ

ಪ್ರಜಾವಾಣಿ ವಾರ್ತೆ/ಪಿಟಿಐ



12.08.1952 - 12.09.2024

ನವದೆಹಲಿ: ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ (72) ಅವರು ದೀರ್ಘಕಾಲದ ಅನಾರೋಗ್ಯದ ಕಾರಣದಿಂದಾಗಿ ಇಲ್ಲಿನ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಏಮ್ಸ್) ಗುರುವಾರ ನಿಧನರಾದರು.

ನ್ಯುಮೋನಿಯಾ ಮಾದರಿಯ ಸೋಂಕಿನ ಕಾರಣಕ್ಕೆ ಅವರನ್ನು ಆಗಸ್ಟ್ 19ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಗುರುವಾರ ಮಧ್ಯಾಹ್ನ 3ರ ಸುಮಾರಿಗೆ ಕೊನೆಯುಸಿರೆಳೆದರು ಎಂದು ಮೂಲಗಳು ಹೇಳಿವೆ. ಯೆಚೂರಿ ಅವರ ಇಚ್ಛೆಗೆ ಅನುಗುಣವಾಗಿ, ಅವರ ಮೃತದೇಹವನ್ನು ಏಮ್ಸ್‌ಗೆ ದಾನವಾಗಿ ನೀಡಲಾಗುತ್ತಿದೆ. ಅದನ್ನು ಅಲ್ಲಿ ಬೋಧನೆ ಹಾಗೂ ಸಂಶೋಧನಾ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತದೆ.


ಮೃತದೇಹವನ್ನು ಶುಕ್ರವಾರ ಸಂಜೆ ಅವರ ನಿವಾಸಕ್ಕೆ ಒಯ್ಯಲಾಗುತ್ತದೆ. ಶನಿವಾರ ಬೆಳಿಗ್ಗೆ 11ರ ಸುಮಾರಿಗೆ ಪಕ್ಷದ ಪ್ರಧಾನ ಕಚೇರಿಗೆ ತರಲಾಗುತ್ತದೆ. ಅಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಶನಿವಾರ ಮಧ್ಯಾಹ್ನ 3 ಗಂಟೆಯ ನಂತರ ಮೃತದೇಹವನ್ನು ಏಮ್ಸ್‌ಗೆ ಹಸ್ತಾಂತರಿಸಲಾಗುತ್ತದೆ.

ಯೆಚೂರಿ ಅವರಿಗೆ ಪತ್ನಿ, ಮಗಳು ಹಾಗೂ ಮಗ ಇದ್ದಾರೆ.

ದ್ವಿತೀಯ ಪಿಯು ಪರೀಕ್ಷಾ ಅವಧಿ 15 ನಿಮಿಷ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷಾ ಅವಧಿಯನ್ನು 15 ನಿಮಿಷ ಕಡಿತಗೊಳಿಸಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸುತ್ತೋಲೆ ಹೊರಡಿಸಿದೆ.



ಹೊಸ ನಿಯಮದಂತೆ ಪರೀಕ್ಷಾ ಅವಧಿ 2 ಗಂಟೆ 45 ನಿಮಿಷ ಇರಲಿದೆ. ಇದುವರೆಗಿನ ಪರೀಕ್ಷೆಗಳಲ್ಲಿ 3 ಗಂಟೆ ಅವಧಿ ಇರುತ್ತಿತ್ತು. ಪರೀಕ್ಷೆಗೆ ಉತ್ತರ ಬರೆಯುವ ಅವಧಿಯನ್ನು 2 ಗಂಟೆ 45 ನಿಮಿಷ ನಿಗದಿ ಮಾಡಿದ್ದರೂ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಓದಿಕೊಳ್ಳಲು ಹೆಚ್ಚುವರಿಯಾಗಿ 15 ನಿಮಿಷ ನೀಡಲಾಗುತ್ತದೆ. ಈ ಹಿಂದೆ 3 ಗಂಟೆ ಇದ್ದಾಗಲೂ ಪ್ರಶ್ನೆಗಳ ಓದಿಗೆ ಹೆಚ್ಚುವರಿಯಾಗಿ 15 ನಿಮಿಷ ನೀಡಲಾಗುತ್ತಿತ್ತು.

ಹಿಂದಿನ ಪರೀಕ್ಷೆಗಳಲ್ಲಿ ಪ್ರತಿ ವಿಷಯದ ಲಿಖಿತ ಪರೀಕ್ಷೆಯನ್ನು 100 ಅಂಕಗಳಿಗೆ ನಡೆಸಲಾಗುತ್ತಿತ್ತು. 2023-24ನೇ ಸಾಲಿನಿಂದ ಪ್ರಾಯೋಗಿಕ ಪರೀಕ್ಷೆ ಹಾಗೂ ಆಂತರಿಕ ಮೌಲ್ಯಮಾಪನಕ್ಕೆ ಪ್ರತ್ಯೇಕ ಅಂಕಗಳನ್ನು ನಿಗದಿ ಮಾಡಿದ್ದ ಕಾರಣ ಲಿಖಿತ ಪರೀಕ್ಷೆಯ ಅಂಕಗಳನ್ನು ಕಡಿತ ಮಾಡಲಾಗಿತ್ತು. ಆದರೆ, ಪರೀಕ್ಷಾ ಅವಧಿಯನ್ನು ಕಡಿತ ಮಾಡಿರಲಿಲ್ಲ.

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸಿ.ಎಂ ಅರ್ಜಿ: ತೀರ್ಪು ಕಾಯ್ದಿರಿಸಿದ ನ್ಯಾಯಪೀಠ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮುಡಾ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಕ್ರಿಮಿನಲ್ ಪ್ರಕರಣದ ತನಿಖೆಗೆ ರಾಜ್ಯಪಾಲರು ನೀಡಿರುವ ಆದೇಶವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯನ್ನು ಗುರುವಾರ ಪೂರ್ಣಗೊಳಿಸಿರುವ ಹೈಕೋರ್ಟ್, ತೀರ್ಪು ಕಾಯ್ದಿರಿಸಿದೆ.

'ವಿಶೇಷ ನ್ಯಾಯಾಲಯದಲ್ಲಿರುವ ಖಾಸಗಿ ದೂರಿಗೆ ಸಂಬಂಧಿಸಿದ ವಿಚಾರಣೆ ಮುಂದೂಡಬೇಕು ಹಾಗೂ ಯಾವುದೇ ಕ್ರಮ ಕೈಗೊಳ್ಳಬಾರದು ಎಂಬ ಆದೇಶವು ತೀರ್ಪು ಪ್ರಕಟವಾಗುವತನಕ ಜಾರಿಯಲ್ಲಿರುತ್ತದೆ' ಎಂದು 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಪ್ರಕಟಿಸಿದರು.

'ಪಿಎಸ್‌ಐ 402 ಹುದ್ದೆ ಪರೀಕ್ಷೆ ದಿನ ಶೀಘ್ರ ನಿಗದಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 402 ಹುದ್ದೆಗಳಿಗೆ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದೇ 22ರಂದು ನಿಗದಿಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯನ್ನು 28ರಂದು ನಡೆಸಲು ತೀರ್ಮಾನಿಸಲಾಗಿತ್ತು. ಆದರೆ, ಆ ದಿನ ಕೂಡಾ ಯುಪಿಎಸ್‌ಸಿ ಪರೀಕ್ಷೆ ಇರುವ ಕಾರಣ ಮತ್ತೊಂದು ದಿನ ಪರೀಕ್ಷೆ ನಡೆಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ.

6ನೇ ಪುಟ ನೋಡಿ

ಬಿಎಂಟಿಸಿಗೆ 100 ನೂತನ ಬಿಎಸ್–6 ಬಸ್‌ಗಳ ಸೇರ್ಪಡೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ

'ಅಪಪ್ರಚಾರದಿಂದ ಗ್ಯಾರಂಟಿ ಮತ್ತಷ್ಟು ಗಟ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡವರು ಮತ್ತು ಮಧ್ಯಮ ವರ್ಗದ ವಿರೋಧಿ ಬಿಜೆಪಿಯು ಗ್ಯಾರಂಟಿ ಯೋಜನೆಗಳ ವಿರುದ್ಧ ಅಪಪ್ರಚಾರ ಮಾಡುತ್ತಿದೆ. ಜನರು ಇಂತಹ ಅಪಪ್ರಚಾರಕ್ಕೆ ಕಿವಿಗೊಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಿಎಂಟಿಸಿಗೆ 100 ನೂತನ ಬಿಎಸ್–6 ಬಸ್‌ಗಳನ್ನು ಗುರುವಾರ ನೀಡಿದ ನಂತರ ಅವರು ಮಾತನಾಡಿದರು.

ಬಿಜೆಪಿ ವಿರೋಧಿಸಿದಷ್ಟೂ ಗ್ಯಾರಂಟಿ ಯೋಜನೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು. ಎಂತಹ ಸ್ಥಿತಿ ಎದುರಾದರೂ ಹಿಂದೆ ಸರಿಯುವುದಿಲ್ಲ. ಸರ್ಕಾರದ ಮೇಲೆ ಜನರು ಭರವಸೆ ಇಡಬೇಕು ಎಂದರು.

'ಶಕ್ತಿ ಯೋಜನೆಯಿಂದ ಕೋಟ್ಯಂತರ ಮಹಿಳೆಯರಿಗೆ ಅನುಕೂಲವಾಗಿದೆ. ಬೆಂಗಳೂರು ನಗರದ ಜನರು, ಶ್ರಮಿಕ ವರ್ಗದ ಅನುಕೂಲಕ್ಕೆ ತಕ್ಕಂತೆ ಮೊದಲ ಹಂತದಲ್ಲಿ 100 ನೂತನ ಬಸ್‌ಗಳನ್ನು ಬಿಎಂಟಿಸಿಗೆ ನೀಡುತ್ತಿದ್ದೇವೆ. ಹಂತ ಹಂತವಾಗಿ 840 ಬಸ್‌ಗಳು ಸೇರ್ಪಡೆಯಾಗಲಿವೆ. ನಮ್ಮ ಸರ್ಕಾರ ಬಂದ ಮೇಲೆ ಬಹಳ ಹೊಸ ಬಸ್‌ಗಳನ್ನು ಖರೀದಿಸಿದ್ದೇವೆ' ಎಂದು ಮಾಹಿತಿ ನೀಡಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ವಸತಿ ಸಚಿವ ಜಮೀರ್ ಅಹಮದ್ ಖಾನ್, ಇಂಧನ ಸಚಿವ ಕೆ.ಜೆ. ಜಾರ್ಜ್, ಶಾಸಕ ರಿಜ್ವಾನ್ ಅರ್ಷದ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ. ಹ್ಯಾರಿಸ್ ಮತ್ತಿತರರು ಉಪಸ್ಥಿತರಿದ್ದರು.



ವಿಧಾನಸೌಧದ ಮುಂಭಾಗ ಗುರುವಾರ ಸಾರಿಗೆ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 100 ನೂತನ ಬಸ್‌ಗಳನ್ನು ಬಿಎಂಟಿಸಿಗೆ ನೀಡಲಾಯಿತು ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಮೆಟ್ರೊ ಇಟಿಎಸ್ ಬಟನ್ ಒತ್ತಿದ ಯುವಕನಿಗೆ ₹5000 ದಂಡ

ಪ್ರಜಾವಾಣಿ ವಾರ್ತೆ



ಬೆಂಗಳೂರು: ತಮಾಷೆಗಾಗಿ ನಮ್ಮ ಮೆಟ್ರೊ ತುರ್ತು ಟ್ರಿಪ್ ಸಿಸ್ಟಂ (ಇಟಿಎಸ್) ಬಟನ್ ಒತ್ತುವ ಮೂಲಕ ಮೆಟ್ರೊ ಸಂಚಾರಕ್ಕೆ ತೊಡಕುಂಟು ಮಾಡಿದ್ದ ಯುವಕನಿಗೆ ಬಿಎಂಆರ್‌ಸಿಎಲ್ ₹5000 ದಂಡ ವಿಧಿಸಿದೆ.

ನೇರಳೆ ಮಾರ್ಗದಲ್ಲಿ ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಪ್ರಯಾಣಿಕನೊಬ್ಬ ಮಂಗಳವಾರ 'ಇಟಿಎಸ್' ಬಟನ್ ಒತ್ತಿದ್ದರು. ಇದರಿಂದ ಟ್ರಿನಿಟಿ ನಿಲ್ದಾಣ ಕಡೆಯಿಂದ ಬರುತ್ತಿದ್ದ ರೈಲು ಎಂ.ಜಿ. ರೋಡ್ ನಿಲ್ದಾಣದಲ್ಲಿ ಸುಮಾರು 10 ನಿಮಿಷ ನಿಲ್ಲಬೇಕಾಯಿತು. ಆದರೆ, ಯಾರಿಗೆ ಏನು ತೊಂದರೆಯಾಗಿದೆ ಎಂದು ಗೊತ್ತಾಗಲಿಲ್ಲ. ಮೆಟ್ರೊ ರೈಲು ಸಂಚಾರ ಮಾತ್ರ ಅಸ್ತವ್ಯಸ್ತಗೊಂಡಿತ್ತು.

ಸಿಸಿಟಿವಿ ಕ್ಯಾಮೆರಾ ಮೂಲಕ 'ಇಟಿಎಸ್' ಒತ್ತಿದವರನ್ನು ಗುರುತಿಸಲಾಯಿತು. ಮೆಟ್ರೊ ರೈಲು ಪುನರಾರಂಭಗೊಂಡಾಗ 'ಇಟಿಎಸ್' ಒತ್ತಿದ್ದ ವ್ಯಕ್ತಿ ರೈಲು ಹತ್ತಿದ್ದು, ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿ ಇಳಿದರು. ಅವರನ್ನು ಮೆಟ್ರೊ ಸಿಬ್ಬಂದಿ ಹಿಂಬಾಲಿಸಿ ಹೋಗಿ ವಶಕ್ಕೆ ಪಡೆದು ವಿಚಾರಿಸಿದಾಗ 21 ವರ್ಷದ ಹೇಮಂತ್ ಎಂಬ ಆ ಯುವಕ ಮೋಜಿಗಾಗಿ ಬಟನ್ ಒತ್ತಿರುವುದಾಗಿ ತಿಳಿಸಿದ್ದ. ಯುವಕನು ತಪ್ಪೊಪ್ಪಿಕೊಂಡಿದ್ದು, ₹5000 ದಂಡ ಕಟ್ಟಲು ತಿಳಿಸಿದ್ದರು. ತನ್ನಲ್ಲಿ ಹಣ ಇಲ್ಲ ಎಂದು ಯುವಕ ಹೇಳಿದ್ದರಿಂದ ಆತನ ಪೋಷಕರಿಗೆ ಮಾಹಿತಿ ನೀಡಲಾಯಿತು. ಅವರು ಬಂದು ದಂಡ ಪಾವತಿಸಿ ಯುವಕನನ್ನು ಕರೆದುಕೊಂಡು ಹೋಗಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ಹಳಿಯಲ್ಲಿ ಯಾರಾದರೂ ಆಕಸ್ಮಿಕವಾಗಿ ಜಾರಿ ಬಿದ್ದಾಗ ಅಥವಾ ಜೀವದಾನ ನಿಲ್ದಾಣದಲ್ಲಿರುವ 'ಇಟಿಎಸ್' ಬಟನ್ ಅನ್ನು ಬಳಸಲಾಗುತ್ತದೆ. ಬಟನ್ ಒತ್ತಿದ ಕೂಡಲೇ ವಿದ್ಯುತ್ ಪೂರೈಕೆಯನ್ನು ನಿಲ್ಲಿಸಿ ಮೆಟ್ರೊ ಸಂಚಾರವನ್ನು ಸ್ಥಗಿತಗೊಳಿಸುವ ವ್ಯವಸ್ಥೆ ಇದಾಗಿದೆ.

ಒಕ್ಕೂಟ ವ್ಯವಸ್ಥೆ ರಕ್ಷಣೆಗೆ ಆಗ್ರಹಿಸಿ ನಾಳೆ ಪ್ರತಿಭಟನಾ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಗಳ ಅಸ್ಮಿತೆ ಮತ್ತು ಹಕ್ಕುಗಳ ರಕ್ಷಣೆಗಾಗಿ ಕೆ.ಆರ್. ವೃತ್ತದಲ್ಲಿರುವ ಯುವಿಸಿಇ ಅಲುಮ್ನಿ ಅಸೋಸಿಯೇಷನ್‌ನಲ್ಲಿ ಇದೇ ಶನಿವಾರ ಪ್ರತಿಭಟನಾ ಸಭೆ ಆಯೋಜಿಸಲಾಗಿದೆ ಎಂದು ಒಕ್ಕೂಟ ಉಳಿಸಿ ಆಂದೋಲನ ಸಮಿತಿ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, 'ರಾಜ್ಯಪಾಲರ ಕಚೇರಿ ದುರ್ಬಳಕೆ ಮಾಡಿಕೊಂಡು ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ. ರಾಜ್ಯಗಳ ಸಾಂವಿಧಾನಿಕ, ಶಾಸನಾತ್ಮಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ವಾಯತ್ತತೆ ರಕ್ಷಿಸಲು ಈ ಸಭೆ ಆಯೋಜಿಸಲಾಗಿದೆ' ಎಂದು ದೂರಿದರು.

'ಭಾರತದಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದಾಗಿನಿಂದ ರಾಜ್ಯಗಳು ಮತ್ತು ಕೇಂದ್ರ ಸರ್ಕಾರದ ಮಧ್ಯೆ ತಿಕ್ಕಾಟಗಳು ಸಾಮಾನ್ಯವಾಗಿದ್ದವು. ಆದರೆ, ಕಳೆದ ಹತ್ತು ವರ್ಷಗಳಲ್ಲಿ ರಾಜ್ಯಗಳ ಮೇಲೆ ನಡೆಯುತ್ತಿರುವ ದಾಳಿ ಅತ್ಯಂತ ಅಪಾಯಕಾರಿ ಸ್ವರೂಪ ಪಡೆದಿದೆ. ಸ್ವತಂತ್ರ ತನಿಖಾ ಸಂಸ್ಥೆಗಳು ಇಂದು ವಿರೋಧಿಗಳ ಮೇಲೆ ಹೂಡಲಾದ ಬಾಣಗಳಂತೆ ಕೆಲಸ ಮಾಡುತ್ತಿವೆ' ಎಂದು ಹೇಳಿದರು.

ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಜಿ.ಎಂ. ವೀರಸಂಗಯ್ಯ ಮಾತನಾಡಿ, '2014ರಿಂದ ಈಚೆಗೆ ಕೇಂದ್ರ ಸರ್ಕಾರವು ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆ ತರುವ ಕೆಲಸ ಮಾಡುತ್ತಿದೆ. ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸುತ್ತಿದೆ. ಆದ್ದರಿಂದ ಒಕ್ಕೂಟ ವ್ಯವಸ್ಥೆ ಉಳಿಸಲು ಈ ಸಭೆ ಆಯೋಜಿಸಲಾಗುತ್ತಿದ್ದು, ಇದರ ಅಧ್ಯಕ್ಷತೆಯನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ವಹಿಸಲಿದ್ದಾರೆ' ಎಂದರು.

ಲೇಖಕಿ ಕೆ. ಷರೀಫಾ ಸುದ್ದಿಗೋಷ್ಠಿಯಲ್ಲಿದ್ದರು.

ಗಾಯನ ಸಮಾಜದ 54ನೇ ಸಂಗೀತ ಸಮ್ಮೇಳನಾಧ್ಯಕ್ಷರಾಗಿ ಎಸ್.ಸಿ.ಶರ್ಮ ಆಯ್ಕೆ



ಬೆಂಗಳೂರು: ಬೆಂಗಳೂರು ಗಾಯನ ಸಮಾಜದ 54ನೇ ಸಂಗೀತ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ ಗಾಯಕ ಹಾಗೂ ಸಂಗೀತ ತಜ್ಞ ಎಸ್.ಸಿ.ಶರ್ಮ ಅವರು ಆಯ್ಕೆಯಾಗಿದ್ದಾರೆ.

ಕೆ.ಆರ್. ರಸ್ತೆಯಲ್ಲಿರುವ ಗಾಯನ ಸಮಾಜದಲ್ಲಿ ನವೆಂಬರ್ 3ರಿಂದ 10ರವರೆಗೆ ಈ ಸಮ್ಮೇಳನ ನಡೆಯಲಿದೆ. ಸಂಗೀತ ವಿದ್ವಾಂಸರಿಂದ ಭಾಷಣ, ಸಂಗೀತ ಪ್ರಾತ್ಯಕ್ಷಿಕೆ, ಚರ್ಚಾ ಗೋಷ್ಠಿಗಳು ನಡೆಯಲಿವೆ. ಪ್ರಸಿದ್ಧ ಕಲಾವಿದರು ಹಾಗೂ ಉದಯೋನ್ಮುಖ ಕಲಾವಿದರಿಂದ ಸಂಗೀತ ಕಛೇರಿ ಏರ್ಪಡಿಸಲಾಗಿದೆ. ಎಸ್.ಸಿ.ಶರ್ಮ ಅವರಿಗೆ ಸಮ್ಮೇಳನದಲ್ಲಿ 'ಸಂಗೀತ ಕಲಾರತ್ನ' ಬಿರುದು, ಉಡುಪಿಯ ವಿದ್ವಾನ್ ಮಧೂರು ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ 'ಕರ್ನಾಟಕ ಕಲಾಚಾರ್ಯ' ಬಿರುದು ನೀಡಿ ಗೌರವಿಸಲಾಗುವುದು ಎಂದು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ.ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಂಚ: ತಹಶೀಲ್ದಾರ್‌ಗೆ 3 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನು ವ್ಯಾಜ್ಯ ಬಗೆಹರಿಸಿಕೊಡಲು ₹5 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಸಿಕ್ಕಿಬಿದ್ದಿದ್ದ ಪ್ರಕರಣದಲ್ಲಿ ಮುಳಬಾಗಿಲಿನ ಈಗಿನ ತಹಶೀಲ್ದಾರ್ ಬಿ.ಎಸ್.ವೆಂಕಟಾಚಲಪತಿಗೆ ನಗರದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯವು ಮೂರು ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ₹7 ಲಕ್ಷ ದಂಡ ವಿಧಿಸಿದೆ.

ಹುಳಿಮಾವು ನಿವಾಸಿ ಎಚ್.ಪಿ.ಮಂಜುನಾಥ್ ಎಂಬುವವರ ಜಮೀನಿಗೆ ಸಂಬಂಧಿಸಿದ ವ್ಯಾಜ್ಯ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಕಚೇರಿಯಲ್ಲಿತ್ತು. ವ್ಯಾಜ್ಯವನ್ನು ಶೀಘ್ರ ಮುಗಿಸಿಕೊಡಿ ಎಂದು ಅವರು 2016ರ ಆಗಸ್ಟ್‌ನಲ್ಲಿ ಅಂದಿನ ತಹಶೀಲ್ದಾರ್ ವೆಂಕಟಾಚಲಪತಿ ಅವರಿಗೆ ಮನವಿ ಸಲ್ಲಿಸಿದ್ದರು.

ಈ ಸಂಬಂಧ ತಮ್ಮ ಆಪ್ತ ಸಹಾಯಕ ಮಧು ಎಂಬುವವರನ್ನು ಭೇಟಿ ಮಾಡುವಂತೆ ವೆಂಕಟಾಚಲಪತಿ ಸೂಚಿಸಿದ್ದರು. ಜತೆಗೆ ವ್ಯಾಜ್ಯ ಬಗೆಹರಿಸಿಕೊಡಲು ₹20 ಲಕ್ಷ ಬೇಡಿಕೆ ಇಟ್ಟಿದ್ದು, ₹15 ಲಕ್ಷಕ್ಕೆ ಒಪ್ಪಿಕೊಂಡಿದ್ದರು. ಮುಂಗಡವಾಗಿ ₹5 ಲಕ್ಷ ನೀಡಲು ಸೂಚಿಸಿದ್ದರು. ಮಂಜುನಾಥ್ ಅವರು ನೀಡಿದ ದೂರಿನನ್ವಯ ಭ್ರಷ್ಟಾಚಾರ ನಿಗ್ರಹ ದಳ ಪ್ರಕರಣ ದಾಖಲಿಸಿಕೊಂಡಿತ್ತು ಎಂದು ಲೋಕಾಯುಕ್ತವು ಮಾಹಿತಿ ನೀಡಿದೆ. ಎಸಿಬಿ ಪೊಲೀಸರ ಸೂಚನೆಯಂತೆ 2017ರ ಡಿಸೆಂಬರ್ 18ರಂದು ಮಂಜುನಾಥ್ ಅವರು ತಹಶೀಲ್ದಾರ್ ಕಚೇರಿಗೆ ಹೋಗಿ, ಲಂಚದ ಹಣ ನೀಡಿದ್ದರು. ವೆಂಕಟಾಚಲಪತಿ ಪರವಾಗಿ ಮಧು ಲಂಚ ಸ್ವೀಕರಿಸುವಾಗ ಎಸಿಬಿ ಪೊಲೀಸರು ದಾಳಿ ನಡೆಸಿ ಬಂಧಿಸಿದ್ದರು. ಪ್ರಕರಣದ ವಿಚಾರಣೆ ಮುಗಿಸಿದ್ದ ಸಿಟಿ ಸಿವಿಲ್ ಮತ್ತು ವಿಶೇಷ ನ್ಯಾಯಾಲಯವು, ಬುಧವಾರ ತೀರ್ಪು ನೀಡಿದೆ. ಲೋಕಾಯುಕ್ತ ನ್ಯಾಯಾಲಯವು ವೆಂಕಟಾಚಲಪತಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಿದ್ದು, ದಂಡ ಪಾವತಿಸಲು ವಿಫಲವಾದರೆ ಆರು ತಿಂಗಳು ಹೆಚ್ಚುವರಿ ಸೆರೆವಾಸ ಅನುಭವಿಸಬೇಕು. ವೆಂಕಟಾಚಲಪತಿ ಖಾಸಗಿ ಆಪ್ತ ಸಹಾಯಕ ಮಧುಗೆ ಮೂರು ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ₹40,000 ದಂಡ, ದಂಡ ಪಾವತಿಸಲು ವಿಫಲನಾದರೆ ಮೂರು ತಿಂಗಳ ಹೆಚ್ಚುವರಿ ಶಿಕ್ಷೆ ಅನುಭವಿಸಬೇಕು ಎಂದು ಹೇಳಿದೆ.

ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ

‘ಡೀಸೆಲ್ ದರ ಹೆಚ್ಚುತ್ತಿದೆ ಟಿಕೆಟ್ ದರ ಏರಿಸುತ್ತಿಲ್ಲ’

ಪ್ರಜಾವಾಣಿ ವಾರ್ತೆ



ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಗುರುವಾರ ಧರಣಿ ಸತ್ಯಾಗ್ರಹ ನಡೆಸಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ಡೀಸೆಲ್ ದರ, ಬಿಡಿ ಭಾಗಗಳ ದರ, ಸಿಬ್ಬಂದಿ ವೆಚ್ಚ ನಿರಂತರವಾಗಿ ಹೆಚ್ಚುತ್ತಿದ್ದರೂ ಅದಕ್ಕೆ ಅನುಗುಣವಾಗಿ ಬಸ್‌ಗಳ ಟಿಕೆಟ್ ದರ ಹೆಚ್ಚಿಸದೇ ಇರುವುದರಿಂದ ಸಾರಿಗೆ ನಿಗಮಗಳು ಸಂಕಷ್ಟಕ್ಕೆ ಸಿಲುಕಿವೆ ಎಂದು ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆರೋಪಿಸಿದೆ.

ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿಗಮಗಳಲ್ಲಿ ನಡೆಯುತ್ತಿರುವ ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ ಜಂಟಿ ಕ್ರಿಯಾ ಸಮಿತಿ ಗುರುವಾರ ಧರಣಿ ಸತ್ಯಾಗ್ರಹ ನಡೆಸಿತು.

ಟಿಕೆಟ್ ದರ ಏರಿಕೆಯು ಸರ್ಕಾರದ ರಾಜಕೀಯ ನಿರ್ಧಾರ ಆಗಿರುವುದರಿಂದ ಈ ಬಗ್ಗೆ ನಿಷ್ಕರ್ಷೆ ನಡೆಯುತ್ತಿಲ್ಲ. ಬಿಎಂಟಿಸಿ ಬಸ್‌ಗಳ ಟಿಕೆಟ್ ದರವನ್ನು 2012ರಲ್ಲಿ ಏರಿಸಿದ್ದು, ಅನಂತರ ಪರಿಷ್ಕರಿಸಿಲ್ಲ. ಕೆಎಸ್‌ಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿ, ಕೆಕೆಆರ್‌ಟಿಸಿ ಬಸ್‌ಗಳ ದರ 2020ರ ನಂತರ ಏರಿಕೆಯಾಗಿಲ್ಲ ಎಂದು ಸಮಿತಿ ಮುಖಂಡರು ತಿಳಿಸಿದರು.

1993ರಲ್ಲಿ ಪಿ.ಜಿ.ಆರ್. ಸಿಂಧ್ಯಾ ಅಧ್ಯಕ್ಷತೆಯ ಸದನ ಸಮಿತಿ ನೀಡಿದ್ದ ವರದಿ ಮತ್ತು 2021ರಲ್ಲಿ ಎಂ.ಆರ್. ಶ್ರೀನಿವಾಸಮೂರ್ತಿ ನೇತೃತ್ವದ ಏಕಸದಸ್ಯ ಸಮಿತಿ ನೀಡಿದ್ದ ವರದಿಯ ಶಿಫಾರಸುಗಳನ್ನು ಜಾರಿ ಮಾಡಿದ್ದರೆ ನಿಗಮಗಳ ಆರ್ಥಿಕ ಪರಿಸ್ಥಿತಿ ಇಷ್ಟು ಹದಗೆಡುತ್ತಿರಲಿಲ್ಲ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಮತ್ತು ಇತರ ಪ್ರಯಾಣಿಕರಿಗೆ ವಿಸ್ತರಿಸಲಾದ ರಿಯಾಯಿತಿ ಪ್ರಯಾಣದ ಸೌಲಭ್ಯಗಳ ಮೊತ್ತವನ್ನು ಸರ್ಕಾರವು ನಿಗಮಗಳಿಗೆ ನೀಡಬೇಕು. ₹4,562 ಕೋಟಿ ವಿವಿಧ ಬಾಕಿ ಹಾಗೂ ಶಕ್ತಿ ಯೋಜನೆಯ ₹1,346 ಕೋಟಿ ಬಾಕಿಯನ್ನು ಸರ್ಕಾರ ಪಾವತಿ ಮಾಡಬೇಕು. ಇಂಧನ ಬಾಕಿಯ ₹998 ಕೋಟಿ ನೀಡಬೇಕು ಎಂದು ಪ್ರತಿಭಟನ ಕಾರರು ಆಗ್ರಹಿಸಿದರು.

ನಿಗಮವು ಸಿಬ್ಬಂದಿಗೆ ತುಟ್ಟಿಭತ್ಯೆ, ರಜೆ ನಗದೀಕರಣ, ನಿವೃತ್ತ ನೌಕರರ ಉಪಧನ ಮತ್ತು ರಜೆ ನಗದೀಕರಣ ಮೊತ್ತ, ಭವಿಷ್ಯನಿಧಿ ಬಾಕಿ ಹಣ, ವೇತನ ಹೆಚ್ಚಳದ ಹಿಂಬಾಕಿ ನೀಡಬೇಕು ಎಂದು ಒತ್ತಾಯಿಸಿದರು.

ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್‌ನ ಎಚ್‌.ವಿ. ಅನಂತಸುಬ್ಬರಾವ್, ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳದ ಬಿ. ಜಯದೇವರಾಜೇ ಅರಸು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್‌ನ (ಸಿಐಟಿಯು) ಎಚ್‌.ಡಿ. ರೇವಪ್ಪ, ಕೆಎಸ್‌ಆರ್‌ಟಿಸಿ ಎಸ್‌.ಸಿ ಮತ್ತು ಎಸ್‌.ಟಿ ಎಂಪ್ಲಾಯೀಸ್ ಯೂನಿಯನ್‌ನ ವೆಂಕಟರಮಣಪ್ಪ, ಕೆಎಸ್‌ಆರ್‌ಟಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಮೋಹನರಾಜ್, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಜಗದೀಶ್ ಭಾಗವಹಿಸಿದ್ದರು.

ದರ್ಶನ್ ನ್ಯಾಯಾಂಗ ಬಂಧನ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಸೇರಿ 17 ಮಂದಿಯ ನ್ಯಾಯಾಂಗ ಬಂಧನದ ಅವಧಿಯನ್ನು ಒಂದು ದಿನದ ಮಟ್ಟಿಗೆ (ಸೆಪ್ಟೆಂಬರ್ 13) ವಿಸ್ತರಿಸಿದ 24ನೇ ಎಸಿಎಂಎಂ ನ್ಯಾಯಾಲಯವು, ಪ್ರಕರಣದ ವಿಚಾರಣೆಯನ್ನು ಮುಂದೂಡಿತು.

ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ಗುರುವಾರಕ್ಕೆ ಮುಕ್ತಾಯವಾಗಿತ್ತು. ಈ ಪ್ರಕರಣದಲ್ಲಿ ಬಂಧಿತರಾಗಿ ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ ಎಲ್ಲ ಆರೋಪಿಗಳನ್ನೂ ವಿಡಿಯೊ ಕಾನ್ಫರೆನ್ಸ್ ಮೂಲಕ ಗುರುವಾರ ಮಧ್ಯಾಹ್ನ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು.

ಇದೇ ವೇಳೆ ಕೊಲೆ ಪ್ರಕರಣದ ವಿಚಾರಣೆಯನ್ನು ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾವಣೆ ಮಾಡುವುದಾಗಿ ನ್ಯಾಯಾಧೀಶರು ಹೇಳಿದರು. ತನಿಖಾಧಿಕಾರಿಗಳು ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಸಲ್ಲಿಸಿದ ಬಳಿಕ ಸೆಷನ್ಸ್ ಕೋರ್ಟ್‌ಗೆ ಪ್ರಕರಣ ವರ್ಗಾವಣೆ ಮಾಡುವಂತೆ ಆರೋಪಿಗಳ ಪರ ವಕೀಲರು ಮನವಿ ಮಾಡಿದರು. ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಸಲ್ಲಿಸಲು ಒಂದು ವಾರ ಕಾಲಾವಕಾಶ ನೀಡುವಂತೆ ಪ್ರಕರಣದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಅವರು ಮನವಿ ಮಾಡಿದರು.







ಲಿಡ್ಕರ್ ನಂಬಿಕೆ. ನಿರಂತರ.

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ

ಪ್ರಜಾಪ್ರಭುತ್ವ ದಿನ 15.09.2024

1				2		■	3	
	■	■	■		■	■		■
4		5	■		■	6		7
	■		■	8			■	
	■	9	10	■	■	11		
■	12	■		■	■		■	■
■	13			14			■	15
■		■	■		■	16		
17					■		■	

ಪ್ರಜಾಪ್ರಭುತ್ವ: ವಿಶೇಷ ಪದಬಂಧ – 4

ಪ್ರಜಾಪ್ರಭುತ್ವ ದಿನ ರಾಜ್ಯದ ಎಲ್ಲ ಜಿಲ್ಲೆಗಳನ್ನು ಸಂಪರ್ಕಿಸುವ **ಮಾನವ ಸರಪಳಿ** ಪ್ರಜಾಪ್ರಭುತ್ವ ಮೌಲ್ಯಗಳನ್ನು ಬಿತ್ತುವ ಸಂಭ್ರಮದಲ್ಲಿ ಪಾಲ್ಗೊಳ್ಳಿ ಪ್ರಜಾಪ್ರಭುತ್ವ ವಿಶೇಷ ಪದಬಂಧ ತುಂಬಿಸಿ ಕಳುಹಿಸಿ ಸರಿಯುತ್ತರ ಬರೆದವರಿಗೆ ಬಹುಮಾನ, ಮೆಚ್ಚುಗೆ ಪತ್ರದ ಕೊಡುಗೆ!

ಎಡದಿಂದ ಬಲಕ್ಕೆ

1 ಪ್ರಜಾಪ್ರಭುತ್ವವನ್ನು ಪ್ರಜೆಗಳಿಂದ ಪ್ರಜೆಗಳಿಗಾಗಿ ನಡೆಯುವ ಪ್ರಜಾ ಸರ್ಕಾರ ಎಂದು ಬಣ್ಣಿಸಿದವರು – 6
3 ಸಂಗಡಿಗನೊಂದಿಗೆ ಸ್ನೇಹ – 2
4 ಪ್ರಜಾಪ್ರಭುತ್ವ ಸರ್ಕಾರವೇ ಒಂದು ಅಂದ – 3
6 ಭಾರತದ ಸಂವಿಧಾನ ವಿಶ್ವದ ಬೇರೆ ದೇಶಗಳಿಗೆ ಮೇಲ್ಪಂಕ್ತಿ – 3
8 ದೇಶದ ಸಂವಿಧಾನ ನೀಡಿದ ಅವಕಾಶದಂತೆ ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಮೇಲು ಕೆಳಗಿಲ್ಲ – 3
9 ಸಂವಿಧಾನ ಬಿಟ್ಟು ನಡೆಯುವುದು ವ್ಯಕ್ತಿತ್ವಕ್ಕಿರಿಸಿದ ಕಪ್ಪುಚುಕ್ಕೆ – 3
11 ಪುರುಷರಷ್ಟೇ ಸಮವಾಗಿ ವಾದ ಮಂಡಿಸುವ ನ್ಯಾಯವಾದಿನಿ – 3
13 ಪ್ರಜೆಗಳಿಂದ ಆಯ್ಕೆಗೊಂಡು ಅಧಿಕಾರಕ್ಕೆ ಬರುವ ಪ್ರಭುತ್ವ – 6
16 ಸದನದಲ್ಲಿ ಬಹುಮತವಿಲ್ಲದಿದ್ದಲ್ಲಿ ಸರ್ಕಾರ ಬೀಳುವುದು – 3
17 ಜನಗಳಿಂದ ಆಯ್ಕೆಗೊಂಡ ಪ್ರಜಾಪ್ರಭುತ್ವ ಸರ್ಕಾರ ಸತ್ಯದ ತೀರ್ಪು ನೀಡುವ ದೇವಾಲಯದಂತೆ ಕಾಣುವುದು – 5

ಮೇಲಿನಿಂದ ಕೆಳಕ್ಕೆ

1 ರಾಜ್ಯ, ಸಂಸ್ಥಾನಗಳನ್ನು ತಮ್ಮ ಸ್ವಂತ ಗುತ್ತಿಗೆ ಎಂಬಂತೆ ಅನುಭವಿಸುತ್ತಿದ್ದ ಅರಸರ ಆಡಳಿತ – 5
2 ದುಡಿಯುವ ಕಾರ್ಮಿಕನಿಗೆ ಅತಿಶಯವಾದ ಬಳಲಿಕೆ – 4
3 ಪ್ರಜಾಹಿತ ಸರ್ಕಾರದಲ್ಲಿ ಚರ್ಚೆಯ ಸಮಯದಲ್ಲಿ ಹೂಡಬಹುದಾದ ತರ್ಕ – 3
5 ಕೃಷ್ಣನ ಬಡ ಸ್ನೇಹಿತ – 3
6 ಪ್ರಜಾಪ್ರಭುತ್ವದಿನದಂದು ಇಡೀ ರಾಜ್ಯದ ನಾಗರಿಕರನ್ನು ಪರಸ್ಪರ ಬೆಸೆಯಲಿರುವ ಪ್ರಜಾಬಂಧ – 7
7 ರಕ್ಷಣೆಗಾಗಿ ಇರಿಸಿಕೊಂಡ ನೂರು ಕುದುರೆಗಳ ಪಡೆ – 3
10 ಶಿಕ್ಷೆ ಪಡೆದು ರೂಪುಗೊಂಡ ಓದಿ ಅರಿತವನು – 3
12 ಪ್ರಜೆಗಳ ಒಳಿತು ಬಯಸಿ ಸರ್ಕಾರದಲ್ಲಿ ಭಾಗವಹಿಸುವವರ ವೃತ್ತಿ – 4
14 ಸರ್ಕಾರ ಶಕ್ತಿಯುತವಾಗಿದೆ – 3
15 ಮಂಗನಿಂದ ವಿಕಸನಗೊಂಡು ರೂಪುಗೊಂಡವನು – 3

ಉತ್ತರ: ಪ್ರಜಾಪ್ರಭುತ್ವ ವಿಶೇಷ ಪದಬಂಧ–3

ಎಡದಿಂದ ಬಲಕ್ಕೆ: 1. ಮತದಾನ 3. ಹಕ್ಕುಚ್ಯುತಿ 5. ದಸರ 6. ರವ 8. ಮರ 9. ರಕ್ತ 10. ವತ್ಸ 11. ಪಸೆ 14. ರಹ 16. ಚಾಣಾಕ್ಷ 17. ತಪಾಸಣೆ 18. ತಿರುಗೇಟು.

ಮೇಲಿನಿಂದ ಕೆಳಕ್ಕೆ: 1. ಮತದಾರ 2. ನವೋದಯ 3. ಹಗರಣ 4. ತಿರಸ್ಕಾರ 7. ವರಸೆ 8. ಮತ್ಸರ 11. ಪಕ್ಷಪಾತ 12. ವಿಚಾರಣೆ 13. ಪಕ್ಷಪಾತಿ 15. ಹದಿನೆಂಟು.



ಪದಬಂಧ ತುಂಬಿಸಿ ಫೋಟೊ ತೆಗೆದು ವಾಟ್ಸಪ್ ಮಾಡಿ. ಸಂಖ್ಯೆ: **9482300400**. ಪ್ರತಿದಿನ 5 ವಿಜೇತರನ್ನು ಲಾಟರಿ ಮೂಲಕ ಆಯ್ಕೆ ಮಾಡಿ, ಲಿಡ್‌ಕರ್ ವತಿಯಿಂದ ₹1000/– ಮೌಲ್ಯದ ವೌಚರನ್ನು ಬಹುಮಾನವಾಗಿ ನೀಡಲಾಗುವುದು.

ಹೆಸರು: ಮೊಬೈಲ್ ಸಂಖ್ಯೆ:

‘ಪ್ರತ್ಯೇಕ ಬಸ್ ಪಥ ನಿರ್ಮಿಸಿ’

ಬೆಂಗಳೂರು: ಪ್ರತ್ಯೇಕ ಬಸ್ ಪಥ ನಿರ್ಮಿಸಬೇಕು. ಸಾರ್ವಜನಿಕ ಸಾರಿಗೆಯಲ್ಲಿ ಮೂಲಸೌಕರ್ಯ ಸುಧಾರಣೆ ಮಾಡಬೇಕು ಎಂದು ಆಗ್ರಹಿಸಿ ನಗರದ ಮಹಿಳಾ ಗಾರ್ಮೆಂಟ್ ನೌಕರರ ಸಮುದಾಯ ಮತ್ತು ಗ್ರೀನ್‌ಪೀಸ್ ಇಂಡಿಯಾ ಪದಾಧಿಕಾರಿಗಳು ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಮನವಿ ಸಲ್ಲಿಸಿದೆ.

ನಗರದಲ್ಲಿ 11 ಬಸ್ ಆದ್ಯತಾ ಪಥಗಳನ್ನು ನಿರ್ಮಿಸಬೇಕು. ಹೊರ ವರ್ತುಲ ರಸ್ತೆಯಲ್ಲಿದ್ದ ಬಸ್ ಆದ್ಯತಾ ಪಥವನ್ನು ಮತ್ತೆ ಆರಂಭಿಸಬೇಕು ಎಂಬ ಬೇಡಿಕೆಗಳೊಂದಿಗೆ 28,995 ಸಾರ್ವಜನಿಕರ ಸಹಿಯುಳ್ಳ ಅಹವಾಲು ಸಲ್ಲಿಸಲಾಗಿದೆ. ‘ನಾಗಸಂದ್ರದಿಂದ ಕೆ.ಆರ್.ಮಾರುಕಟ್ಟೆಯಂತಹ ಸ್ಥಳಗಳಿಗೆ ತಲುಪಲು ಬಸ್ಸಿನಲ್ಲಿ ಎರಡು ಗಂಟೆ ಬೇಕಾಗಿದೆ. ಅದೇ ಪ್ರತ್ಯೇಕ ಬಸ್ ಮಾರ್ಗ ಮೀಸಲಿಟ್ಟರೆ ಕಡಿಮೆ ಸಮಯದಲ್ಲಿ ಈ ಸ್ಥಳಗಳನ್ನು ತಲುಪಬಹುದು. ಆಗ ನಾವು ಮೆಟ್ರೊ ಬದಲು, ಬಸ್ಸನ್ನೇ ಬಳಸಬಹುದು’ ಎಂದು ತುಮಕೂರು ರಸ್ತೆಯ ಗಾರ್ಮೆಂಟ್ಸ್ ಕಾರ್ಖಾನೆಯ ಜಯಮಾಲಾ ಅವರು ತಿಳಿಸಿದರು.

ಒಂದೇ ಬೈಕ್‌ನಲ್ಲಿ ತೆರಳುತ್ತಿದ್ದ ಮೂವರು ಸ್ನೇಹಿತರು: ಲಾರಿ ಚಕ್ರ ಹರಿದು ದೇಹಗಳು ಛಿದ್ರ

ಅಪಘಾತ: ಮೂವರು ವಿದ್ಯಾರ್ಥಿಗಳ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಮೇಲ್ಸೇತುವೆ ಬಳಿ ಬುಧವಾರ ತಡರಾತ್ರಿ ಲಾರಿ ಹಾಗೂ ಬೈಕ್ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಒಂದೇ ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದ ಮೂವರು ವಿದ್ಯಾರ್ಥಿಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹೆಬ್ಬಾಳದ ಕೆಂಪಾಪುರದ ನಿವಾಸಿ ಸುಚಿತ್(22), ಕೋಲಾರ ಜಿಲ್ಲೆಯ ಕೆಜಿಎಫ್‌ನ ಹರ್ಷವರ್ಧನ್(21) ಹಾಗೂ ಚಿಕ್ಕಬಳ್ಳಾಪುರದ ರೋಹಿತ್(21) ಮೃತಪಟ್ಟ ವಿದ್ಯಾರ್ಥಿಗಳು.

ಬಾಗಲಕೋಟೆ ಕೃಷಿ ವಿಶ್ವವಿದ್ಯಾಲಯವು ನಗರದ ಹೆಬ್ಬಾಳದ ಜಿ.ಕೆ.ವಿ.ಕೆ ಆವರಣದಲ್ಲಿ ತೆರೆದಿರುವ ಅಧ್ಯಯನ ಕೇಂದ್ರದಲ್ಲಿ ಬಿಎಸ್ಸಿ(ತೋಟಗಾರಿಕೆ)ಯ ಪದವಿಯ ಅಂತಿಮ ವರ್ಷದಲ್ಲಿ ಮೂವರೂ ವ್ಯಾಸಂಗ ಮಾಡುತ್ತಿದ್ದರು. ಎಲ್ಲರೂ ಸ್ನೇಹಿತರಾಗಿದ್ದರು. ರಾತ್ರಿ 1.30ರ ಸುಮಾರಿಗೆ ವಿಮಾನ ನಿಲ್ದಾಣ ರಸ್ತೆಯ ಕೋಟೆ ಕ್ರಾಸ್ ಬಳಿ ಅಪಘಾತವಾಗಿದೆ.

‘ಮೂವರೂ ಹೆಲ್ಮೆಟ್ ಧರಿಸಿದ್ದರು. ಲಾರಿ ಡಿಕ್ಕಿ ಹೊಡೆದ ರಭಸಕ್ಕೆ ಕೆಳಕ್ಕೆ ಬಿದ್ದ ಮೂವರ ಮೇಲೂ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

‘ಬುಧವಾರ ತರಗತಿ ಮುಗಿಸಿಕೊಂಡು ಐವರು ಗೆಳೆಯರು ಎರಡು ಬೈಕ್‌ನಲ್ಲಿ ಸ್ನೇಹಿತರೊಬ್ಬರ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಪಾರ್ಟಿಗೆ ಹೋಗಿದ್ದರು. ತಡರಾತ್ರಿವರೆಗೂ ನಡೆದ ಪಾರ್ಟಿ ಮುಗಿಸಿಕೊಂಡು ಬೈಕ್‌ನಲ್ಲಿ ‘ಜಾಲಿ ರೈಡ್’ ಹೊರಟಿದ್ದರು ಎನ್ನಲಾಗಿದೆ. ಇಬ್ಬರು ಒಂದು ಬೈಕ್‌ನಲ್ಲಿ, ಮತ್ತೊಂದು ಬೈಕ್‌ನಲ್ಲಿ ಮೂವರು ತೆರಳುತ್ತಿದ್ದರು. ಕೋಟೆ ಕ್ರಾಸ್ ಬಳಿ ಅತಿವೇಗವಾಗಿ ಬಂದ ಲಾರಿ, ಮೂವರಿದ್ದ ಬೈಕ್‌ಗೆ ಡಿಕ್ಕಿಯಾಗಿದೆ. ಲಾರಿಯ ಹಿಂದಿನ ಚಕ್ರ ಮೂವರ ಮೇಲೆ ಹರಿದ ಪರಿಣಾಮ ವಿದ್ಯಾರ್ಥಿಗಳ ದೇಹಗಳು ಛಿದ್ರಗೊಂಡಿದ್ದವು’ ಎಂದು ಪೊಲೀಸರು ತಿಳಿಸಿದರು.


ಅಪಘಾತ ನಡೆದಿದ್ದನ್ನು ಗಮನಿಸಿದ ಚಹಾ ಅಂಗಡಿಯವರು ಹಾಗೂ ಆಟೊ ಚಾಲಕರು ಸಂಚಾರ ವಿಭಾಗದ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲನೆ ನಡೆಸಿದರು.

ಚಾಲಕ ವಶಕ್ಕೆ: ‘ಅಪಘಾತವಾದ ಬಳಿಕ ಚಾಲಕ ಲಾರಿಯನ್ನು ನಿಲ್ಲಿಸದೇ ಪರಾರಿಯಾಗಿದ್ದ. ಟೋಲ್ ಸೇರಿದಂತೆ ವಿವಿಧೆಡೆಯ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿ ಆಧರಿಸಿ ವಾಹನದ ನೋಂದಣಿ ಸಂಖ್ಯೆ ಪತ್ತೆ ಹಚ್ಚಲಾಗಿದೆ. ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಪೋಷಕರ ಆಕ್ರಂದನ: ವಿದ್ಯಾರ್ಥಿಗಳ ಪರ್ಸ್‌ನಲ್ಲಿದ್ದ ಗುರುತಿನ ಚೀಟಿ ಆಧರಿಸಿ, ವಿದ್ಯಾರ್ಥಿಗಳ ವಿಳಾಸ ಪತ್ತೆ ಮಾಡಲಾಯಿತು. ಬಳಿಕ, ಅವರ ಪೋಷಕರಿಗೆ ಮಾಹಿತಿ ನೀಡಲಾಯಿತು.

ಮಕ್ಕಳ ಮೃತದೇಹ ಕಂಡು ಪೋಷಕರು ಹಾಗೂ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು. ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಯಿತು.

ಬಿಎಂಟಿಸಿ ಬಸ್ ಡಿಕ್ಕಿ: ಬಾರ್ ಪರಿಚಾರಕ ಸಾವು



ಬೆಂಗಳೂರು: ಉಪ್ಪಾರಪೇಟೆಯಲ್ಲಿ ರಸ್ತೆ ದಾಟುತ್ತಿದ್ದ ಬಿಎಂಟಿಸಿ ಬಸ್ ಡಿಕ್ಕಿಯಾಗಿ ಬಾರ್‌ನಲ್ಲಿ ಪರಿಚಾರಕನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಶಿವಮೊಗ್ಗ ಜಿಲ್ಲೆ ಸೊರಬದ ರವಿಕುಮಾರ್(38) ಮೃತಪಟ್ಟ ಪಾದಚಾರಿ.

ವೈಟ್‌ಫೀಲ್ಡ್‌ನ ಬಾರ್‌ವೊಂದರಲ್ಲಿ ಅವರು ಕೆಲಸ ಮಾಡುತ್ತಿದ್ದರು. ಕೆಲಸದ ನಿಮಿತ್ತ ನೆಲಮಂಗಲಕ್ಕೆ ಹೋಗಿದ್ದ ಅವರು ಗುರುವಾರ ಮುಂಜಾನೆ ಮೆಜೆಸ್ಟಿಕ್‌ಗೆ ಬಂದಿದ್ದರು. ಅಲ್ಲಿಂದ ವೈಟ್‌ಫೀಲ್ಡ್‌ನಲ್ಲಿರುವ ಮನೆಗೆ ತೆರಳಲು ಹೊರಟಿದ್ದರು. ಆಗ ರಸ್ತೆ ದಾಟಲು ಮುಂದಾದ ಅವರಿಗೆ ಬಿಎಂಟಿಸಿ ಏಳನೇ ಘಟಕಕ್ಕೆ ಸೇರಿದ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

ಪ್ರಜ್ವಲ್ ಪ್ರಕರಣ: ಇನ್ ಕ್ಯಾಮರಾ ವಿಚಾರಣೆ ಇಲ್ಲ–ಹೈಕೋರ್ಟ್

ಬೆಂಗಳೂರು: ‘ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಜಾಮೀನು ಅರ್ಜಿಗಳನ್ನು ಸಂತ್ರಸ್ತೆಯರ ಖಾಸಗಿತನ ರಕ್ಷಿಸುವ ಉದ್ದೇಶದಿಂದ ಗೋಪ್ಯವಾಗಿ ವಿಚಾರಣೆ ನಡೆಸಬೇಕು’ ಎಂಬ ರಾಜ್ಯ ಪ್ರಾಸಿಕ್ಯೂಷನ್ ಮನವಿಯನ್ನು ಹೈಕೋರ್ಟ್ ತಳ್ಳಿಹಾಕಿದೆ.

ಹಾಸನ ಜಿಲ್ಲೆ ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಅತ್ಯಾಚಾರ ಮತ್ತು ನಗರದ ಸೈಬರ್ ಠಾಣೆಯಲ್ಲಿ ದಾಖಲಾಗಿರುವ ಪ್ರತ್ಯೇಕ ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಜ್ವಲ್ ಪರ ಹಾಜರಾಗಿದ್ದ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಅವರು, ‘ಈ ಹಿಂದಿನ ವಿಚಾರಣೆ ವೇಳೆಯಲ್ಲಿ ಪ್ರಕರಣದ ಗೋಪ್ಯ ವಿಚಾರಣೆಗೆ ಮನವಿ ಮಾಡಲಾಗಿತ್ತು’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, ‘ಪ್ರತಿದಿನವೂ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ ಅಡಿಯಲ್ಲಿನ ಪ್ರಕರಣಗಳ ವಿಚಾರಣೆ ನಡೆಸಲಾಗುತ್ತಿದೆ. ಹೀಗಿರುವಾಗ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಹೊಸದೇನಿದೆ’ ಎಂದು ಪ್ರಶ್ನಿಸಿತಲ್ಲದೆ, ‘ಗೋಪ್ಯ ವಿಚಾರಣೆ ಏನಿಲ್ಲ. ಆದರೆ, ವಿಚಾರಣೆ ವೇಳೆ ಸಂತ್ರಸ್ತೆಯರ ಹೆಸರು ಮತ್ತು ಅಶ್ಲೀಲತೆ ಒಳಗೊಂಡ ಅಂಶಗಳನ್ನು ವಕೀಲರು ಓದಬಾರದು. ಅದನ್ನು ನನಗೆ ತಿಳಿಸಿದರೆ ನಾನೇ ಓದಿಕೊಳ್ಳುತ್ತೇನೆ’ ಎಂದರು.

ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಹಿರಿಯ ವಕೀಲ ರವಿವರ್ಮ ಕುಮಾರ್, ‘ಗೋಪ್ಯ ವಿಚಾರಣೆಯ ಕುರಿತಾದ ಮನವಿಯನ್ನು ನ್ಯಾಯಪೀಠದ ವಿವೇಚನೆಗೇ ಬಿಡಲಾಗುವುದು’ ಎಂದರು. ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಲಾಗಿದೆ.



ಹಣ ದುರ್ಬಳಕೆ ಆರೋಪ: ಬಂಧನ

ಬೆಂಗಳೂರು: ರಿಯಲ್ ಎಸ್ಟೇಟ್ ಕಂಪನಿಗೆ ಸೇರಿದ್ದ ₹17 ಕೋಟಿ ದುರ್ಬಳಕೆ ಮಾಡಿಕೊಂಡ ಆರೋಪದಡಿ ಅದೇ ಕಂಪನಿಯ ಅಧೀಕ್ಷಕ ಸೇರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಹರಿಕೃಷ್ಣ ರೆಡ್ಡಿ, ಕರುಣಾನಿಧಿ ಸೇರಿ ನಾಲ್ವರನ್ನು ಬಂಧಿಸಲಾಗಿದೆ. ಹರಿಕೃಷ್ಣ ರೆಡ್ಡಿ ಅವರಿಂದ ಚಿನ್ನಾಭರಣ ಹಾಗೂ ಮನೆಯ ದಾಖಲೆ ಪತ್ರ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ಮೆ/ಎಸ್ ಪ್ರಾಪ್ಕೇರ್ ರಿಯಲ್ ಎಸ್ಟೇಟ್ ಕಂಪನಿಯಲ್ಲಿ ಹರಿಕೃಷ್ಣ ರೆಡ್ಡಿ ಅವರು 2018ರಿಂದ ಅಧೀಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಕಂಪನಿಯು ಪಂಜಾಬ್ ನ್ಯಾಷನಲ್ ಬ್ಯಾಂಕ್ ಖಾತೆಯಲ್ಲಿ ಇ-ಬ್ಯಾಂಕಿಂಗ್ ಸೌಲಭ್ಯ ಪಡೆದುಕೊಂಡಿತ್ತು. ಕಂಪನಿಯ ಖಾತೆ ನಿರ್ವಹಣೆ ಜವಾಬ್ದಾರಿಯನ್ನು ಹರಿಕೃಷ್ಣ ರೆಡ್ಡಿ ಅವರಿಗೆ ವಹಿಸಲಾಗಿತ್ತು. ಹರಿಕೃಷ್ಣ ರೆಡ್ಡಿ ಮತ್ತು ಇತರರು ಸೇರಿಕೊಂಡು ಕಂಪನಿಯ ಬ್ಯಾಂಕಿಂಗ್ ಐ.ಡಿ ಹಾಗೂ ಪಾಸ್‌ವರ್ಡ್ ಬಳಸಿಕೊಂಡು 2020ರಿಂದ 2023ರವರೆಗೆ ಬೇರೆ ಬೇರೆ ಕಂಪನಿಗಳಿಗೆ ನೀಡಬೇಕಾದ ಸುಮಾರು ₹17 ಕೋಟಿಯನ್ನು ಅನ್ಯ ವ್ಯಕ್ತಿಗಳಿಗೆ ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿದ್ದರು. ಆ ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿ ಕಂಪನಿ ನಿರ್ದೇಶಕ ಮಧುಕು ಶ್ರೀನಿವಾಸ್ ಅವರು ಸಿಸಿಬಿಗೆ ದೂರು ನೀಡಿದ್ದರು. ದೂರು ಆಧರಿಸಿ ನಾಲ್ವರನ್ನು ಬಂಧಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ವರದಕ್ಷಿಣೆ ಕಿರುಕುಳ: ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರದಕ್ಷಿಣೆ ಕಿರುಕುಳದಿಂದ ನೊಂದು ಗೃಹಿಣಿ ಆತ್ಮಹತ್ಯೆ ಮಾಡಿಕೊಂಡಿದ್ದು, ಪತಿಯನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಸಾಹಳ್ಳಿ ಗ್ರಾಮದ ಭಾರತಿ(22) ಆತ್ಮಹತ್ಯೆ ಮಾಡಿಕೊಂಡವರು.

ಪತಿ ಲೋಕೇಶ್ ಅವರನ್ನು ಬಂಧಿಸಲಾಗಿದೆ. ಇದೇ ಪ್ರಕರಣದ ಸಂಬಂಧ ಯಶೋಧಮ್ಮ, ಶಿವಣ್ಣ, ದೀಪಕ್, ಮೇಘನಾ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ.



ಭಾರತಿ

ಮಳವಳ್ಳಿ ತಾಲ್ಲೂಕಿನ ಎನ್‌ಇಎಸ್ ಬಡಾವಣೆ ನಿವಾಸಿ ಲೋಕೇಶ್ ಅವರ ಜತೆಗೆ ಭಾರತಿ ಅವರ ಮದುವೆ ಕಳೆದ ವರ್ಷ ನಡೆದಿತ್ತು. ಮದುವೆ ಸಂದರ್ಭದಲ್ಲಿ 200 ಗ್ರಾಂ. ಚಿನ್ನಾಭರಣ, ₹1 ಲಕ್ಷ ನಗದು ನೀಡಲಾಗಿತ್ತು. ಆರಂಭದಲ್ಲಿ ದಂಪತಿ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ. ಕ್ರಮೇಣ ಗಲಾಟೆ ಆರಂಭವಾಯಿತು. ಪ್ರತ್ಯೇಕ ಮನೆ ಮಾಡಲು ಮುಂಗಡವಾಗಿ ಹಣ ಸಹ ನೀಡಲಾಗಿತ್ತು. ಬೆಂಗಳೂರಿನ ಮಾರುತಿ ನಗರದಲ್ಲಿ ದಂಪತಿ ವಾಸವಿದ್ದರು. ಅದಾದ ಮೇಲೂ ಕಿರುಕುಳ ನೀಡುತ್ತಿದ್ದರು. ಹೆಚ್ಚಿನ ವರದಕ್ಷಿಣೆಗಾಗಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿದ್ದರಿಂದ ಪುತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆರೋಪಿಸಿ ಅವರ ತಂದೆ ಸುಬ್ಬೇಗೌಡ ಅವರು ದೂರು ನೀಡಿದ್ದಾರೆ.

ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ತಮ್ಮ ಪುತ್ರಿಯ ಈ ಸ್ಥಿತಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಬೈಕ್ ಕೊಡಿಸದಿದ್ದಕ್ಕೆ ನೊಂದ ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಬಳಿಯ ಥಣಿಸಂದ್ರದಲ್ಲಿ ಬಿಎಸ್ಸಿ ವಿದ್ಯಾರ್ಥಿಯೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಯ್ಯಪ್ಪ (20) ಆತ್ಮಹತ್ಯೆ ಮಾಡಿಕೊಂಡವರು.



ಅಯ್ಯಪ್ಪ

‘ತಮಿಳುನಾಡು ಮೂಲದ ಅಯ್ಯಪ್ಪ ಅವರು ತಾಯಿ ಜತೆಗೆ ಬೆಂಗಳೂರಿಗೆ ಬಂದು ಥಣಿಸಂದ್ರದಲ್ಲಿ ನೆಲೆಸಿದ್ದರು. ಆರು ವರ್ಷದ ಹಿಂದೆ ಅಯ್ಯಪ್ಪ ಅವರ ತಂದೆ ಮೃತಪಟ್ಟಿದ್ದರು. ತಾಯಿ, ಮನೆ ಕೆಲಸ ಮಾಡಿಕೊಂಡು ಮಗನನ್ನು ಓದಿಸುತ್ತಿದ್ದರು. ಖಾಸಗಿ ಕಾಲೇಜಿನಲ್ಲಿ ಎರಡನೇ ವರ್ಷದ ಬಿಎಸ್ಸಿ ವ್ಯಾಸಂಗ ಮಾಡುತ್ತಿದ್ದ ಅಯ್ಯಪ್ಪಗೆ ಬೈಕ್‌ನಲ್ಲಿ ಓಡಾಡುವ ವ್ಯಾಮೋಹ ಹೆಚ್ಚಾಗಿತ್ತು. ಬೈಕ್ ಕೊಡಿಸುವಂತೆ ಅಮ್ಮನ ಬಳಿ ಕೇಳುತ್ತಿದ್ದರು. ಆರ್ಥಿಕ ತೊಂದರೆಯಿಂದ ಪುತ್ರನಿಗೆ ಬೈಕ್ ಕೊಡಿಸಲು ತಾಯಿಗೆ ಸಾಧ್ಯವಾಗಿರಲಿಲ್ಲ. ಸ್ವಲ್ಪ ದಿನ ತಾಳ್ಮೆ ವಹಿಸುವಂತೆ ಸಮಾಧಾನ ಮಾಡಿ, ಬೈಕ್ ಕೊಡಿಸಲು ತಾಯಿ ಹಣ ಹೊಂದಿಸುವ ಪ್ರಯತ್ನ ಮಾಡುತ್ತಿದ್ದರು. ಅದು ಪುತ್ರನಿಗೆ ಸಮಾಧಾನ ತಂದಿರಲಿಲ್ಲ’ ಎಂದು ಮೂಲಗಳು ತಿಳಿಸಿವೆ.

ಬುಧವಾರ ಅಯ್ಯಪ್ಪ ಅವರ ತಾಯಿ ಬೆಳಿಗ್ಗೆ 6 ಗಂಟೆಗೆ ಕೆಲಸಕ್ಕೆ ತೆರಳಿದ್ದರು. ಸಂಜೆ 4.30ರ ಸುಮಾರಿಗೆ ಮನೆಗೆ ವಾಪಸ್ಸಾದಾಗ ಮಗ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಯಿತು. ಇದರಿಂದ ಗಾಬರಿಗೊಂಡ ತಾಯಿ ಸಂಬಂಧಿಕರು ಹಾಗೂ ಸ್ಥಳೀಯರಿಗೆ ಮಾಹಿತಿ ನೀಡಿದ್ದರು. ಸಂಬಂಧಿಕರು ನೀಡಿದ ಮಾಹಿತಿ ಆಧರಿಸಿ ಹೆಣ್ಣೂರು ಪೊಲೀರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ತಾಯಿ ಬೈಕ್ ಕೊಡಿಸಲು ಮುಂದಾಗಿದ್ದ ವಿಷಯ ಅಯ್ಯಪ್ಪ ಅವರ ಗಮನಕ್ಕೆ ಬಂದಿರಲಿಲ್ಲ. ಬೈಕ್ ಕೊಡಿಸಲಿಲ್ಲ ಎಂದು ನೊಂದು ಆತ್ಮಹತ್ಯೆ ಮಡಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ಉಚಿತ ಆರೋಗ್ಯ ತಪಾಸಣಾ ಶಿಬಿರ: ಆಯೋಜನೆ: ಪಿಇಎಸ್ ಯೂನಿವರ್ಸಿಟಿ ಹಾಸ್ಪಿಟಲ್, ಸ್ಥಳ: ದಿ ಬೆಂಗಳೂರು ಫ್ರೂಟ್ ಕಮಿಷನ್ ಏಜೆಂಟ್ಸ್ ಅಸೋಸಿಯೇಷನ್, ಎಪಿಎಂಸಿ ಸಬ್ ಮಾರುಕಟ್ಟೆ ಯಾರ್ಡ್, ಸಿಂಗೇನ ಅಗ್ರಹಾರ, ಬೆಳಿಗ್ಗೆ 9

ವಿಜ್ಞಾನ ಪ್ರದರ್ಶನದ ಉದ್ಘಾಟನೆ: ಎಸ್. ಸೀತಾ, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಳಿಗ್ಗೆ 9.30

‘ಸಾಹಿತ್ಯ, ಸಮಾಜ ಮತ್ತು ಜಾಗತಿಕ ಮಾಧ್ಯಮ’ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಚೆನ್‌ರಾಜ್ ರಾಯಚಂದ್, ರಾಜ್ ಸಿಂಗ್, ದಿನೇಶ್ ನೀಲಕಂಠ್, ಜಿತೇಂದ್ರ ಮಿಶ್ರಾ, ರವೀಂದ್ರ ಭಂಡಾರಿ, ಶ್ರದ್ಧಾ ಕನ್ವರ್, ಬಿ.ಕೆ. ರವಿ, ಆಯೇಷಾ ಖಾನುಂ, ಜಾರ್ಜ್ ಅಲ್ಫರ್ಡ್ ಜೇಮ್ಸ್, ಆಯೋಜನೆ: ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಸ್ಥಳ: ಜೈನ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ಮುಖ್ಯರಸ್ತೆ, ಬೆಳಿಗ್ಗೆ 9.30

ಶಿವಣ್ಣ ಕೆಂಸಿ ಅವರ ‘ತೆರೆದ ನೋಟ’ ಪುಸ್ತಕ ಬಿಡುಗಡೆ: ಕೆ. ಷರೀಫಾ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಪುಸ್ತಕದ ಕುರಿತು: ರಘುನಾಥ ಚ.ಹ., ಅತಿಥಿಗಳು: ಎಚ್. ಎನ್. ಸುಬ್ರಹ್ಮಣ್ಯ, ವೆಂಕಟಶಿವಾರೆಡ್ಡಿ, ಬಿ.ಎಸ್. ಅರುಣ್ ಕುಮಾರ್, ಉಪಸ್ಥಿತಿ: ಮಮತಾ ಕೆ.ಎನ್., ಆಯೋಜನೆ: ಕೌದಿ ಪ್ರಕಾಶನ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5



ಬಂಜಗೆರೆ ಜಯಪ್ರಕಾಶ್

39ನೇ ವರ್ಷದ ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಬೆಳಿಗ್ಗೆ 10ಕ್ಕೆ ಲಕ್ಷ್ಮಿ ಹೋಮ, ಸಂಗೀತ ಕಾರ್ಯಕ್ರಮ: ಆಲ್ ಓಕೆ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ

ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನಾ ಸಮಾರಂಭ: ಅತಿಥಿ: ಮಗೇಶ್ವರನ್ ಆರ್., ಆಯೋಜನೆ ಮತ್ತು ಸ್ಥಳ: ಬಿಷಪ್ ಕಾಟನ್ ವುಮೆನ್ಸ್ ಕ್ರಿಶ್ಚಿಯನ್ ಕಾಲೇಜು, ಸಿಎಸ್‌ಐ ಕಾಂಪೌಂಡ ಮಿಷನ್ ರಸ್ತೆ, ಬೆಳಿಗ್ಗೆ 10

ಎಂ.ವಿ. ರಾಜಶೇಖರನ್ ಜನ್ಮ ದಿನಾಚರಣೆ, ‘ಭಾರತ ಸಂವಿಧಾನದ ಆಶಯಗಳು–ಸ್ವಾತಂತ್ರ್ಯ ನಂತರ ನಮ್ಮ ನಡೆ’ ದತ್ತಿ ಉಪನ್ಯಾಸ ಮತ್ತು ಉದ್ಘಾಟನೆ: ಎಂ. ವೀರಪ್ಪ ಮೊಯಿಲಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಶಯ ನುಡಿ: ಎಚ್. ಹನುಮಂತಪ್ಪ, ಅತಿಥಿಗಳು: ಮಂಜುನಾಥ್ ಪಿ. ಬಿಜ್ಜಳ್ಳಿ, ಎಚ್. ಶಿವಲಿಂಗಯ್ಯ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಎಂ.ಆರ್. ಫೌಂಡೇಷನ್, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಡಿ. ವೀರೇಂದ್ರ ಹೆಗ್ಗಡೆ ಅವರ ಸಂಗ್ರಹದ ಕಾರುಗಳ ಪ್ರದರ್ಶನ: ಉದ್ಘಾಟನೆ: ಕೆ.ಜೆ. ಜಾರ್ಜ್, ಸ್ಥಳ: ತ್ರಿಪುರವಾಸಿನಿ ಅರಮನೆ ಮೈದಾನ ಗೇಟ್ ಸಂಖ್ಯೆ–2, ಮೇಖ್ರಿ ವೃತ್ತ, ಬೆಳಿಗ್ಗೆ 11

2022–24ನೇ ಸಾಲಿನ ಬಿ.ಇಡಿ ವಿದ್ಯಾರ್ಥಿಗಳ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿಗಳು: ಎಂ.ಎಸ್. ತಳವಾರ, ನಿರ್ಮಲ್‌ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಟಿ.ಆರ್. ವೆಂಕಟರೆಡ್ಡಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, 16ನೇ ಮುಖ್ಯರಸ್ತೆ, ನಾಲ್ಕನೇ ಬಡಾವಣೆ, ಜಯನಗರ, ಬೆಳಿಗ್ಗೆ 11.30

‘ಲಲಿತ ಕಲೆಗಳಲ್ಲಿ ಬದಲಾಗುತ್ತಿರುವ ಸನ್ನಿವೇಶಗಳು’ ಆರ್ಟಿಸ್ಟಿಕ್ ಎವಲೋಷನ್: ಭಾಷಣಕಾರರು: ಜಿ. ಸುಬ್ರಮಣಿಯನ್, ಹರಿರಾಮ್ ವೀರರಾಘವನ್, ರಮೇಶ್ ಚಂದ್ರ, ಮಹೇಶ್ ಪತ್ತಾರ್, ಅಧ್ಯಕ್ಷತೆ: ಮಹೇಂದ್ರ ಡಿ., ಆಯೋಜನೆ ಮತ್ತು ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಮಲ್ಲತ್ತಹಳ್ಳಿ, ಸಂಜೆ 4

ವಾರ್ಷಿಕೋತ್ಸವ, ‘ಡಾ.ಎಸ್. ಲಕ್ಷ್ಮೀದೇವಿ ಸಮಗ್ರ ಪ್ರಶಸ್ತಿ ಪುರಸ್ಕಾರ’ ಪ್ರದಾನ: ಅಧ್ಯಕ್ಷತೆ: ಬಿ.ವಿ. ರಾಜಾರಾಂ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಶ್ರೀನಿವಾಸ್ ಜಿ. ಕಪ್ಪಣ್ಣ, ಪ್ರಶಸ್ತಿ ಪುರಸ್ಕೃತರು: ಲೀಲಾಸಂಪಿಗೆ, ಎಂ.ಎಸ್. ವಿದ್ಯಾ, ಆಯೋಜನೆ: ಡಾ.ಎಸ್. ಲಕ್ಷ್ಮೀದೇವಿ ಸ್ಮಾರಕ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

‘ಎಸ್.ಜಿ. ಸುಂದರಸ್ವಾಮಿ’ ಅವರ ಜನ್ಮ ಶತಮಾನೋತ್ಸವದ ಸ್ಮರಣಾರ್ಥ ‘ಡಿಜಿಟಲ್ ಜಗತ್ತಿನಲ್ಲಿ ಮಾನವ ಹಕ್ಕುಗಳ ರಕ್ಷಣೆಯ ಸವಾಲುಗಳು’ ಎಂಬ ಉಪನ್ಯಾಸ: ಶ್ಯಾಮ್ ದಿವಾನ್, ಅತಿಥಿಗಳು: ಅನು ಶಿವರಾಮನ್, ಎ.ಎಸ್. ಬೋಪಣ್ಣ, ಅಧ್ಯಕ್ಷತೆ: ಬಿ.ವಿ. ಆಚಾರ್ಯ, ಆಯೋಜನೆ: ಕರ್ನಾಟಕ ಜ್ಯೂರಿಸ್ಟ್ಸ್ ಟ್ರಸ್ಟ್, ‘ಕರ್ನಾಟಕ (ಇಂಡಿಯಾ) ಸೆಕ್ಷನ್ ಆಫ್ ಇಂಟರ್ ನ್ಯಾಷನಲ್ ಕಮಿಷನ್ ಆಫ್ ಜ್ಯೂರಿಸ್ಟ್ಸ್, ಸ್ಥಳ: ಹೈಕೋರ್ಟ್ ಕಟ್ಟಡದ ಎರಡನೇ ಮಹಡಿಯಲ್ಲಿರುವ ಮುಖ್ಯ ಪೋಷಕರ ಸಭಾಂಗಣ, ಸಂಜೆ 4.30

ಹರಿನಾಮ ಸಂಕೀರ್ತನೆ: ಗಾಯನ: ರೂಪಾ ಪ್ರಭಂಜನ, ಹಾರ್ಮೋನಿಯಂ: ಸೃಷ್ಟಿ ದೇಸಾಯಿ, ತಬಲಾ: ಋತುಪರ್ಣ ದೇಸಾಯಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನ ಪ್ರಚಾರ ಪರಿಷತ್, ಸ್ಥಳ: ನರಸಿಂಹ ಪ್ರವಚನ ಮಂದಿರ, ಇಎಸ್‌ಐ ಆಸ್ಪತ್ರೆ ಬಸ್‌ನಿಲ್ದಾಣದ ಹತ್ತಿರ, ರಾಜಾಜಿನಗರ, ಸಂಜೆ 6.30

ಹರಿದಾಸ ಮಂಜರಿ: ಗಾಯನ: ಜಿ. ಹಿಮಜಾ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ವಜ್ರಕ್ಷೇತ್ರ ಅಭಯ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

ಮಹಾಕವಿ ಭಾಸನ ನಾಟಕೋತ್ಸವ ‘ಕರ್ಣಭಾರ’ ನಾಟಕ ಪ್ರದರ್ಶನ: ರಚನೆ: ಭಾಸ, ನಿರ್ದೇಶನ: ಶಿವು ಹೊನ್ನಿಗನಹಳ್ಳಿ, ಆಯೋಜನೆ: ಬಿಂಕ ಬಿನ್ನಾಣರು ರಂಗ ತಂಡ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ರಾಜಾನುಕುಂಟೆ: ರೈಲು ನಿಲುಗಡೆ ರದ್ದು

ಬೆಂಗಳೂರು: ರಾಜಾನುಕುಂಟೆ ನಿಲ್ದಾಣ ದಲ್ಲಿ ನಿರ್ಮಾಣ ಕಾಮಗಾರಿ-ಕೈಗೊಳ್ಳುತ್ತಿರುವುದರಿಂದ ಸೆಪ್ಟೆಂಬರ್ 17ರಿಂದ ಅಕ್ಟೋಬರ್ 16ರವರೆಗೆ ಈ ನಿಲ್ದಾಣದಲ್ಲಿ ರೈಲುಗಳ ನಿಲುಗಡೆಯನ್ನು ರದ್ದುಪಡಿಸಲಾಗಿದೆ.

ಹಿಂದೂಪುರ–ಕೆಎಸ್‌ಆರ್ ಬೆಂಗಳೂರು ಮೆಮು, ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ–ಕೆಎಸ್‌ಆರ್ ಬೆಂಗಳೂರು ಮೆಮು, ಧರ್ಮಾವರಂ–ಕೆಎಸ್‌ಆರ್ ಬೆಂಗಳೂರು ಮೆಮು ರೈಲುಗಳು ಇಲ್ಲಿ ನಿಲುಗಡೆ ಹೊಂದಿದ್ದು, ಒಂದು ತಿಂಗಳ ಅವಧಿಯಲ್ಲಿ ನಿಲುಗಡೆ ಇರುವುದಿಲ್ಲ.

ರಸ್ತೆ, ಮೇಲ್ಸೇತುವೆ, ಮೆಟ್ರೊ ಕಾಮಗಾರಿಗಳ ಪರಿಶೀಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಸೆ.20ರೊಳಗೆ ರಸ್ತೆ ಗುಂಡಿ ದುರಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಎಲ್ಲ ರಸ್ತೆಗಳ ಗುಂಡಿಗಳನ್ನು ಸೆಪ್ಟೆಂಬರ್ 20ರೊಳಗೆ ಮುಚ್ಚಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ನಗರದ ರಸ್ತೆ ಗುಂಡಿಗಳ ನಿರ್ಮೂಲನೆ ಹಾಗೂ ರಸ್ತೆ ಅಭಿವೃದ್ಧಿ, ಮೂಲಸೌಕರ್ಯ ಕಾಮಗಾರಿಗಳನ್ನು ಗುರುವಾರ ವೀಕ್ಷಿಸಿದ ನಂತರ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಬಿಬಿಎಂಪಿಯ ಸ್ವಂತ ಮಿಶ್ರಣ ಘಟಕದಿಂದ ಡಾಂಬರು ಪೂರೈಸಲಾಗುತ್ತಿದೆ. ಗುಂಡಿಗಳನ್ನು ಪಾರದರ್ಶಕವಾಗಿ ಗುರುತಿಸಿ, ದುರಸ್ತಿ-ಪಡಿಸಲು 'ರಸ್ತೆ ಗುಂಡಿ ಗಮನ' ಆ್ಯಪ್ ಉಪಯೋಗಿಸಲಾಗುತ್ತಿದೆ. 1,376 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು, 2,684 ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದೆ ಎಂದಿದ್ದಾರೆ.

₹1,700 ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ಇದರಿಂದ ರಸ್ತೆಗಳು ದೀರ್ಘ ಬಾಳಿಕೆ ಬರುತ್ತವೆ. ನಗರದಲ್ಲಿ ಒಟ್ಟು 1,611 ಕಿ.ಮೀ ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳಿದ್ದು, 459 ಕಿ.ಮೀ. ಉದ್ದದ ರಸ್ತೆ ಹಾಳಾಗಿದೆ. ಈ ರಸ್ತೆಯನ್ನು ₹659.71 ಕೋಟಿ ವೆಚ್ಚದಲ್ಲಿ ನವೆಂಬರ್‌ನಿಂದ ಡಾಂಬರೀಕರಣ ಮಾಡಲಾಗುತ್ತದೆ ಎಂದಿದ್ದಾರೆ.

ರಸ್ತೆಗಳ ತಳಭಾಗದಲ್ಲಿ ಬೆಸ್ಕಾಂ ಕೇಬಲ್, ನೀರು ಸರಬರಾಜು, ಒಳಚರಂಡಿ ಕೊಳವೆಗಳು, ಗೇಲ್ ಅನಿಲ ಪೂರೈಕೆ ಕೊಳವೆಗಳು, ಕೆಪಿಟಿಸಿಎಲ್‌ನ ಬೃಹತ್, ಹೆಚ್ಚಿನ ಸಾಮರ್ಥ್ಯದ ಕೇಬಲ್‌ಗಳ ಅಳವಡಿಕೆ, ಒಎಫ್‌ಸಿ ಕೇಬಲ್‌ಗಳ ಅಳವಡಿಕೆಯಿಂದ ರಸ್ತೆಯ ಮೇಲ್ಮೈ ಭಾಗವು ಶಿಥಿಲಗೊಂಡು ರಸ್ತೆ ಗುಂಡಿ ಉಟಾಗುತ್ತಿರುವುದನ್ನು ಪರಿಶೀಲನೆ ವೇಳೆ ಗಮನಿಸಲಾಗಿದೆ ಎಂದು ಹೇಳಿದ್ದಾರೆ.

ರಸ್ತೆ ಗುಂಡಿ ಮುಚ್ಚುವ ಪ್ರಕ್ರಿಯೆಯು ಜಾರಿಯಲ್ಲಿದ್ದು, ರಸ್ತೆ ಗುಂಡಿ ಉದ್ಭವಿಸಿದ ಕೆಲವೇ ಸಮಯದಲ್ಲಿ ಅವುಗಳನ್ನು ಮುಚ್ಚಲು ಕ್ರಮವಹಿಸಲಾಗಿರುತ್ತದೆ. ರಸ್ತೆ ಅಗೆತದಿಂದಾಗುವ ಗುಂಡಿಗಳನ್ನು ಬೆಸ್ಕಾಂ, ಕೆಪಿಟಿಸಿಎಲ್, ಗೇಲ್ ಗ್ಯಾಸ್ ಕಂಪನಿಯವರೇ ಮುಚ್ಚುವಂತೆ ಆದೇಶ ನೀಡಲಾಗಿದೆ. ಜಲಮಂಡಳಿ ಸೇರಿದಂತೆ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲಾಗಿದ್ದು, ರಸ್ತೆ ಅಗೆಯುವ ಮತ್ತು ದುರಸ್ತಿಗೊಳಿಸುವ ಪ್ರಕ್ರಿಯೆಯನ್ನು ಕ್ರಮಬದ್ಧಗೊಳಿಸಲಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಹೆಬ್ಬಾಳದ ಬಳಿ ಬಿಡಿಎ ಮೇಲ್ಸೇತುವೆ ಕಾಮಗಾರಿ, ಹೊರವರ್ತುಲ ರಸ್ತೆಯ ಕರಿಯಣ್ಣನ ಪಾಳ್ಯದ ಬಳಿ ಸರ್ವೀಸ್ ರಸ್ತೆಯ ಡಾಂಬರೀಕರಣ, ಹೆಣ್ಣೂರು ಜಂಕ್ಷನ್ ಬಳಿ ಡಾಂಬರೀಕರಣ, ಕೆ.ಆರ್. ಪುರ ರೈಲು ನಿಲ್ದಾಣದ ಬಳಿ ಮೆಟ್ರೊ ಕಾಮಗಾರಿ ನಕ್ಷೆಗಳ ವೀಕ್ಷಣೆ ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಂತರ, ಅವರು ನಮ್ಮ ಮೆಟ್ರೊದಲ್ಲಿ ವಿಧಾನಸೌಧಕ್ಕೆ ಪ್ರಯಾಣಿಸಿದರು.

ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಬೈರತಿ ಸುರೇಶ್, ಶಾಸಕರಾದ ರಿಜ್ವಾನ್ ಅರ್ಷದ್, ಎನ್.ಎ. ಹ್ಯಾರಿಸ್, ಬೈರತಿ ಬಸವರಾಜು, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಬಿಬಿಎಂಪಿ ಆಡಳಿತಾಧಿಕಾರಿ ಎಸ್. ಆರ್. ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.



'ನಗರ ಸಂಚಾರ'ದ ನಂತರ ನಮ್ಮ ಮೆಟ್ರೊದಲ್ಲಿ ವಿಧಾನಸೌಧಕ್ಕೆ ಪ್ರಯಾಣಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಲಕಿಯೊಂದಿಗೆ ಮಾತುಕತೆ ನಡೆಸಿದರು ಪ್ರಜಾವಾಣಿ ಚಿತ್ರ

ಹೆಚ್ಚು ಹಾಳಾಗಿರುವ ರಸ್ತೆಗೆ ಡಾಂಬರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ವಲಯದಲ್ಲಿ ಹೆಚ್ಚು ಹಾಳಾಗಿರುವ ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುತ್ತಿದೆ ಎಂದು ವಲಯ ಆಯುಕ್ತೆ ಅರ್ಚನಾ ತಿಳಿಸಿದರು.

ಪಶ್ಚಿಮ ವಲಯದ ಓಕಳೀಪುರ ಸಮೀಪದ ಸುಜಾತಾ ಟಾಕೀಸ್ ಮುಂಭಾಗ ಮಿಲ್ಲಿಂಗ್‌ನೊಂದಿಗೆ ರಸ್ತೆ ದುರಸ್ತಿ ಕಾಮಗಾರಿಯನ್ನು ಗುರುವಾರ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಪ್ರಮುಖ ರಸ್ತೆಗಳ ಕೆಲ ಭಾಗವು ಪೂರ್ಣಮಟ್ಟದಲ್ಲಿ ಹಾಳಾಗಿದ್ದಲ್ಲಿ, ಸಮತಟ್ಟಾಗಿ ಇಲ್ಲದಿದ್ದಲ್ಲಿ ಅಥವಾ ಸಡಿಲವಾಗಿದ್ದಲ್ಲಿ ಅಂತಹ ಜಾಗವನ್ನು ಮಿಲ್ಲಿಂಗ್ ಮಾಡಿ, ದೂಳನ್ನು ಸ್ವಚ್ಛಗೊಳಿಸಿ ಡಾಂಬರ್ ಹಾಕಲಾಗುತ್ತಿದೆ ಎಂದು ತಿಳಿಸಿದರು.

'ಹಾಟ್ ಮಿಕ್ಸ್' ಹಾಗೂ 'ಕೋಲ್ಡ್ ಮಿಕ್ಸ್' ಬಳಸಿ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತದೆ. ರಸ್ತೆ ಗುಂಡಿಗಳನ್ನು ಮುಚ್ಚುತ್ತಿರುವ ಬಗ್ಗೆ ಪ್ರತಿದಿನ ಅಧಿಕಾರಿಗಳಿಂದ ವರದಿ ಪಡೆದುಕೊಳ್ಳಲಾಗುತ್ತಿದೆ ಎಂದರು.

ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಪ್ರಮುಖ ರಸ್ತೆಗಳು ಹಾಗೂ ವಾರ್ಡ್ ರಸ್ತೆಗಳಿಗೆ ಪ್ರತ್ಯೇಕವಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ರಸ್ತೆ ಗುಂಡಿಗಳನ್ನು ಶೀಘ್ರವಾಗಿ ಮುಚ್ಚಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ವಲಯ ಜಂಟಿ ಆಯುಕ್ತ ಸಂಗಪ್ಪ, ಮುಖ್ಯ ಎಂಜಿನಿಯರ್ ಶಶಿಕುಮಾರ್, ಕಾರ್ಯಪಾಲಕ ಎಂಜಿನಿಯರ್‌ರಾದ ದೇವರಾಜ್, ಕೀರ್ತಿಕುಮಾರ್ ಉಪಸ್ಥಿತರಿದ್ದರು.



ಸುಜಾತಾ ಟಾಕೀಸ್ ಮುಂಭಾಗ ರಸ್ತೆ ಡಾಂಬರೀಕರಣವನ್ನು ಬಿಬಿಎಂಪಿ ಪಶ್ಚಿಮ ವಲಯ ಆಯುಕ್ತೆ ಅರ್ಚನಾ ಪರಿಶೀಲಿಸಿದರು

ಮರ ಗಣತಿಗೆ ತಂತ್ರಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅರಣ್ಯ ಘಟಕವು ಈ ಬಾರಿ ಪಾಲಿಕೆ ವ್ಯಾಪ್ತಿಯಲ್ಲಿನ ಮರಗಳ ಗಣತಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ (ಕೆಎಸ್‌ಆರ್‌ಎಸ್‌ಎಸಿ) ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ತಂತ್ರಾಂಶವನ್ನು ಬಳಸುತ್ತಿದೆ.

ನಗರದಲ್ಲಿ ಸರ್ಕಾರಿ ಕಚೇರಿಗಳ ಆವರಣ, ರಸ್ತೆ ಬದಿ, ಖಾಸಗಿ ಅಪಾರ್ಟ್‌ಮೆಂಟ್, ಸಂಸ್ಥೆಗಳು ಸೇರಿದಂತೆ ಖಾಸಗಿ ಬಡಾವಣೆಗಳಲ್ಲಿ ಬೆಳೆದಿರುವ ಹಾಗೂ ಬೆಳೆಯುತ್ತಿರುವ ಮರಗಳ ಗಣತಿಯನ್ನು ಜನವರಿಯಿಂದ ನಡೆಸಲಾಗುತ್ತಿದೆ.

ಬೆಂಗಳೂರು ನಗರದ ಭೌಗೋಳಿಕ ವಿಸ್ತೀರ್ಣ 840 ಚದರ ಕಿಲೋಮೀಟರ್ ಇದೆ. ತಲಾ 100 ಚದರ ಕಿಲೋಮೀಟರ್‌ನ ಎಂಟು ವಿಭಾಗ ಮಾಡಿಕೊಳ್ಳಲಾಗಿದೆ. ಈ ವಿಭಾಗಗಳನ್ನು ಯುನಿಟ್ ಎಂದು ಪರಿಗಣಿಸಿ, ಎಂಟು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಅವರು ಮರಗಳ ಜಾತಿ, ಸುತ್ತಳತೆ, ಚಿತ್ರಗಳನ್ನು ತಂತ್ರಾಂಶದಲ್ಲಿ ನಮೂದಿಸಿ ಗಣತಿ ನಡೆಸಲಿದ್ದಾರೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಲ್.ಜಿ ಸ್ವಾಮಿ ತಿಳಿಸಿದ್ದಾರೆ.

198 ವಾರ್ಡ್‌ಗಳಲ್ಲಿ ಮರಗಣತಿ ಕಾರ್ಯ ಪ್ರಗತಿಯಲ್ಲಿದ್ದು, ಇದುವರೆಗೂ ಸುಮಾರು 1,43,100 ಮರಗಳನ್ನು ಗುರುತಿಸಲಾಗಿದೆ. ಡಿಸೆಂಬರ್ ಅಂತ್ಯಕ್ಕೆ ಗಣತಿ ಮುಗಿಯಲಿದೆ ಎಂದು ಹೇಳಿದರು.



ವಿಜಯ ಮ್ಯೂಸಿಕ್ ಸ್ಕೂಲ್ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಧೂಮಪಾನ ಆರೋಗ್ಯಕ್ಕೆ ಹಾನಿಕರ' ಭಾವಗೀತೆಗಳ ಧ್ವನಿ ಸುರುಳಿ ಬಿಡುಗಡೆ ಮಾಡಲಾಯಿತು. ನಟ ಅನಿರುದ್ಧ ಅವರನ್ನು ಸಂಸ್ಥೆಯ ಅಧ್ಯಕ್ಷೆ ಜಯಲಕ್ಷ್ಮೀ ನಾಗೇಂದ್ರ, ಕವಿ ಕಾ.ವೆಂ. ಶ್ರೀನಿವಾಸ ಮೂರ್ತಿ ಹಾಗೂ ಸಂಗೀತ ನಿರ್ದೇಶಕರಾದ ಪ್ರಸನ್ನ, ಹರೀಶ್ ಗೌರವಿಸಿದರು

'ವಸತಿ ನಿಲಯ: ಗಡಿನಾಡು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದರಿಂದ ಹತ್ತನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ಹೊರನಾಡು, ಗಡಿನಾಡು ವಿದ್ಯಾರ್ಥಿಗಳು, ಕರ್ನಾಟಕದಲ್ಲಿ ಉನ್ನತ ವ್ಯಾಸಂಗ ಮಾಡಲು ಬಯಸಿದರೆ ನಿರ್ಬಂಧ ವಿಧಿಸದೆ ಇಲ್ಲಿನ ಸರ್ಕಾರಿ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಅವಕಾಶ ಕಲ್ಪಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರಿಗೆ ಪತ್ರ ಬರೆದಿದ್ದಾರೆ.

'ದೇಶದ ಯಾವುದೇ ಭಾಗದಲ್ಲಿ ಒಂದರಿಂದ ಹತ್ತನೆ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ಅಭ್ಯರ್ಥಿಗಳಿಗೆ ರಾಜ್ಯದಲ್ಲಿ ಉನ್ನತ ವ್ಯಾಸಂಗಕ್ಕೆ ಸರ್ಕಾರವು ಮೀಸಲಾತಿ ಕಲ್ಪಿಸಿದೆ. ಅದರಂತೆ, ಇಲ್ಲಿ ತಮ್ಮ ವ್ಯಾಸಂಗ ಮುಂದುವರೆಸಲು ಬಯಸುವ ಈ ವಿದ್ಯಾರ್ಥಿಗಳಿಗೆ ಇಲಾಖೆಗಳ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಅವಕಾಶ ಕಲ್ಪಿಸಬೇಕಿದೆ ಎಂದಿದ್ದಾರೆ.

'ಮಹದಾಯಿ: ಸರ್ವಪಕ್ಷ ನಿಯೋಗ ಕೊಂಡೊಯ್ಯಲಿ'

ಬೆಂಗಳೂರು: ಉತ್ತರ ಕರ್ನಾಟಕದ ಪ್ರಮುಖ ನೀರಾವರಿ ಯೋಜನೆ ಆಗಿರುವ ಮಹದಾಯಿ, ಕಳಸಾ–ಬಂಡೂರಿ ಯೋಜನೆ ಅನುಷ್ಠಾನಗೊಳಿಸುವಂತೆ ಸರ್ವಪಕ್ಷ ನಿಯೋಗವನ್ನು ದೆಹಲಿಗೆ ಕೊಂಡೊಯ್ದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆಗ್ರಹಿಸಿದೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಎಎಪಿ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, 'ಮಹದಾಯಿ ನ್ಯಾಯಾಧೀಕರಣದಿಂದ 2018ರ ಆಗಸ್ಟ್ 14ರಂದು ತೀರ್ಪು ಪ್ರಕಟವಾಗಿದೆ. ತೀರ್ಪಿನಲ್ಲಿ 13.42 ಟಿಎಂಸಿ ಅಡಿ ನೀರು ರಾಜ್ಯಕ್ಕೆ ಹಂಚಿಕೆಯಾಗಿದೆ. ಕಳಸಾ ನೀರು ಬಳಕೆಗೆ ಕಳಸಾ, ಹಲತಾರ ಅಣೆಕಟ್ಟೆ ನಿರ್ಮಾಣದ ಅವಶ್ಯಕತೆ ಇದೆ. ಅಣೆಕಟ್ಟೆ ನಿರ್ಮಾಣದ ಜಮೀನು ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿದೆ. ಹೀಗಾಗಿ ಕೇಂದ್ರ ಪರಿಸರ ಹಾಗೂ ಅರಣ್ಯ ಇಲಾಖೆ ಅನುಮತಿ ಸಿಕ್ಕಿಲ್ಲ. ಗೋವಾ ಸರ್ಕಾರ ಪರಿಸರದ ನೆಪವೊಡ್ಡಿ ಅಡ್ಡಿಪಡಿಸುತ್ತಿದೆ' ಎಂದು ದೂರಿದ್ದಾರೆ.

ಆಸ್ತಿ: ತಿಂಗಳಾಂತ್ಯಕ್ಕೆ 'ಡಿಜಿಟಲ್ ಖಾತಾ'

ಬಿಬಿಎಂಪಿ: ಕರಡು ಇ–ಖಾತಾ ಆನ್‌ಲೈನ್‌ನಲ್ಲಿ ಲಭ್ಯ; ಆಕ್ಷೇಪಣೆಗೆ ತಿಂಗಳು ಅವಕಾಶ

• ಆರ್. ಮಂಜುನಾಥ್

ಬೆಂಗಳೂರು: ನಗರದ ಆಸ್ತಿ ಮಾಲೀಕರಿಗೆ 'ಭೂ ಆಧಾರ್' ದಾಖಲೆಯಂತೆ ಪರಿಗಣಿಸಲಾಗುವ ಡಿಜಿಟಲ್ ಖಾತಾ ಅಥವಾ ಇ–ಖಾತಾ ಸೆಪ್ಟೆಂಬರ್ ಅಂತ್ಯದೊಳಗೆ ಲಭ್ಯವಾಗಲಿದೆ.

ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿಯ ಖಾತಾ ಆನ್‌ಲೈನ್‌ನಲ್ಲಿ ಲಭ್ಯವಾಗುತ್ತಿದ್ದರೂ, ಈ ವ್ಯವಸ್ಥೆಯಿಂದ ಬಿಬಿಎಂಪಿ ಹಿಂದೆ ಉಳಿದಿತ್ತು. ನಗರದ ಆಸ್ತಿ ಮಾಲೀಕರಿಗೂ ಇ–ಖಾತಾ ನೀಡುವ ಉದ್ದೇಶದಿಂದ ಒಂದು ವರ್ಷದಿಂದ ಪ್ರಕ್ರಿಯೆ ಆರಂಭವಾಗಿತ್ತು. ಇದೀಗ ಅಂತಿಮ ಹಂತದಲ್ಲಿದ್ದು, 20 ಲಕ್ಷ ಆಸ್ತಿಗಳ ಇ–ಖಾತಾ ಸಿದ್ಧಗೊಳ್ಳುತ್ತಿದೆ. ಆಸ್ತಿಗಳ ಎಲ್ಲ ಮಾಹಿತಿಗಳನ್ನೂ ಡಿಜಿಟಲೀಕರಣ ಮಾಡಲಾಗಿದೆ.

ಕರಡು ಇ–ಖಾತಾಗಳಲ್ಲಿ ಆಸ್ತಿಯ ಚಿತ್ರ ಸೇರಿದಂತೆ ಅಕ್ಷಾಂಶ, ರೇಖಾಂಶವನ್ನೂ ದಾಖಲಿಸಲಾಗುತ್ತಿದೆ. ಇದು ಸೆಪ್ಟೆಂಬರ್ ಅಂತ್ಯದೊಳಗೆ ಆನ್‌ಲೈನ್‌ನಲ್ಲಿ ಲಭ್ಯವಾಗುತ್ತದೆ. ನಗರ ಆಸ್ತಿ ಮಾಲೀಕತ್ವ ದಾಖಲೆ (ಯುಪಿಒಆರ್) ಯೋಜನೆಯಡಿ ಈಗಾಗಲೇ ಸಂಗ್ರಹಿಸಲಾಗಿರುವ ವಿವರಗಳನ್ನೂ ಬಿಬಿಎಂಪಿ ಇ-ಖಾತಾದಲ್ಲಿ ಅಳವಡಿಸುತ್ತಿದೆ.

ಆಸ್ತಿ ಮಾಲೀಕರಿಗೆ ಕರಡು ಇ–ಖಾತಾ ಲಭ್ಯವಾದ ಮೇಲೆ ಅದರಲ್ಲಿನ ವಿವರಗಳನ್ನು ಪರಿಶೀಲಿಸಬೇಕು. ಯಾವುದಾದರೂ ಬದಲಾವಣೆ ಇದ್ದರೆ ಆನ್‌ಲೈನ್‌ನಲ್ಲೇ ಆಕ್ಷೇಪಣೆ ಸಲ್ಲಿಸಬೇಕು. ಅಲ್ಲದೆ, ಕೆಲವು ದಾಖಲೆಗಳನ್ನು ಮಾಲೀಕರು ಸಲ್ಲಿಸಬೇಕಾಗುತ್ತದೆ. ಅದೆಲ್ಲವನ್ನೂ ಒಳಗೊಂಡ ಅಂತಿಮ ಇ–ಖಾತಾವನ್ನು ನ. 1ರಂದು ನಾಗರಿಕರಿಗೆ ಲಭ್ಯವಾಗುವಂತೆ ಮಾಡಲು ಪಾಲಿಕೆ ಉದ್ದೇಶಿಸಿದೆ.

'ಇ–ಖಾತಾ ಒಂದು ಬಾರಿ ಲಭ್ಯವಾದ ಮೇಲೆ ಆಸ್ತಿ ಮಾಲೀಕರಿಗೆ ಅದು 'ಭೂ–ಆಧಾರ್' ಇದ್ದಂತೆ. ಆಸ್ತಿ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಚಿತ್ರ ಹಾಗೂ ಸ್ಥಳದ ಕುರಿತ ನಿರ್ದಿಷ್ಟ ಮಾಹಿತಿಯೊಂದಿಗೆ ದಾಖಲೆ ಲಭ್ಯವಾಗುತ್ತದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಆಸ್ತಿಯೊಂದಿಗೆ ಅಧಿಕೃತವಾಗಿ ಇ-ಖಾತಾ ಲಭ್ಯವಾದ ಮೇಲೆ ಮುಂದಿನ ಎಲ್ಲ ಪ್ರಕ್ರಿಯೆಗಳೂ ಆನ್‌ಲೈನ್‌ನಲ್ಲೇ ನಡೆಯುತ್ತವೆ. ಎಲ್ಲ ಮಾಹಿತಿಗಳು ಉಪ ನೋಂದಣಾಧಿಕಾರಿ ಕಚೇರಿಗಳಿಗೂ ಲಭ್ಯವಾಗುವಂತೆ ಮಾಡಲಾಗುತ್ತದೆ. ನಂತರ ಆಸ್ತಿ ಮಾರಾಟದ ಪ್ರಕ್ರಿಯೆಯಾದ ಮೇಲೆ ಖಾತಾ ಬದಲಾವಣೆಗೆ ಯಾವುದೇ ಕಚೇರಿಗೆ ಹೋಗುವಂತಿಲ್ಲ. ಹೊಸ ಮಾಲೀಕರಿಗೆ ವರ್ಗವಾದ ಇ–ಖಾತಾ ಲಭ್ಯವಾಗುತ್ತದೆ' ಎಂದರು.

ಮುಖ್ಯಾಂಶಗಳು

- ಇ–ಖಾತಾದಲ್ಲಿ ಆಸ್ತಿ ಚಿತ್ರ
- ಅಕ್ಷಾಂಶ, ರೇಖಾಂಶವೂ ದಾಖಲು
- ಆನ್‌ಲೈನ್‌ನಲ್ಲೇ ವರ್ಗಾವಣೆ ಪ್ರಕ್ರಿಯೆ



ಮಾಲೀಕರು ಸಹಕರಿಸಿ: ಮೌದ್ಗಿಲ್

'ನಗರದ ಆಸ್ತಿಗಳ ಅಕ್ಷಾಂಶ, ರೇಖಾಂಶ (ಲ್ಯಾಟಿಟ್ಯೂಡ್ ಮತ್ತು ಲಾಂಗಿಟ್ಯೂಡ್) ಸೆರೆಹಿಡಿಯಲು ಪ್ರತಿ ವಾರ್ಡ್‌ಗೆ 150 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಈ ಸಿಬ್ಬಂದಿ ಬಂದಾಗ ಆಸ್ತಿ ಮಾಲೀಕರು ಅವರೊಂದಿಗೆ ಸಹಕರಿಸಬೇಕು' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮನವಿ ಮಾಡಿದರು.

'ಅಕ್ಷಾಂಶ, ರೇಖಾಂಶದ ಮಾಹಿತಿ ಸರಿಯಾಗಿ ದಾಖಲಾಗುವಂತೆ ಆಸ್ತಿಗಳ ಮಾಲೀಕರು ಎಚ್ಚರಿಕೆ ವಹಿಸಬೇಕು' ಎಂದರು.



ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ 2024–25ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾಮಟ್ಟದ 17 ವರ್ಷದೊಳಗಿನ ಮಕ್ಕಳ ವಾಲಿಬಾಲ್ ಪಂದ್ಯಾವಳಿಯಲ್ಲಿ ಹೆಗ್ಗನಹಳ್ಳಿ ಕ್ಲಸ್ಟರ್‌ನಲ್ಲಿ ನಿಸರ್ಗ ಪ್ರೌಢಶಾಲಾ ಬಾಲಕರ ತಂಡ ಪ್ರಥಮ ಸ್ಥಾನ ಗಳಿಸಿತು. ಡಿವಿಷನ್ ಹಂತಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಎಚ್‌.ಎನ್‌. ಗಂಗಾಧರ್, ಕ್ಷೇತ್ರ ಶಿಕ್ಷಣಾಧಿಕಾರಿ ಆಂಜಿನಪ್ಪ, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಅಶೋಕ್, ಸಿ.ಆರ್.ಪಿ ಕುಮಾರ್, ವಿದ್ಯಾಸಂಸ್ಕೃತಿ ಶಾಲಾ ಕಾರ್ಯದರ್ಶಿ ಹರ್ಷವರ್ಧನ್, ಕ್ರೀಡಾ ಕಾರ್ಯದರ್ಶಿ ರಮೇಶಪ್ಪ ಸಾಬಲೂರ, ಮುಖ್ಯ ಶಿಕ್ಷಕಿ ಪುಷ್ಪಲತಾ, ದೈಹಿಕ ಶಿಕ್ಷಣ ಶಿಕ್ಷಕ ಚಂದ್ರು ಹಾಗೂ ಹರ್ಷ ಉಪಸ್ಥಿತರಿದ್ದರು

ಹೆಬ್ಬಾಳ: ರಸ್ತೆ ವಿಸ್ತರಣೆಗೆ ಜಾಗಬಿಡಲು ಮನವಿ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಹೆಬ್ಬಾಳ ಕೆಂಪಾಪುರ, ಕಾಫಿಬೋರ್ಡ್ ಲೇಔಟ್ ಜೈನ್ ಹೆರಿಟೇಜ್ ಶಾಲೆಯ ಪಕ್ಕದಲ್ಲಿ ಹಲವು ವರ್ಷಗಳಿಂದ ಬಂದ್ ಆಗಿರುವ ರಸ್ತೆಯನ್ನು ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಿ, ಸಂಚಾರದಟ್ಟಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಸಂಬಂಧ ಸ್ಥಳೀಯ ನಿವಾಸಿಗಳು ಕಾಫಿಬೋರ್ಡ್ ಲೇಔಟ್‌ನ ರಾಮ ಮಂದಿರ ಉದ್ಯಾನದಲ್ಲಿ ಸಭೆ ನಡೆಸಿದರು.

ಸುತ್ತಮುತ್ತಲ ಬಡಾವಣೆಗಳ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳು ಮತ್ತು ನಿವಾಸಿಗಳು ಹಾಗೂ ಸ್ಥಳೀಯ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

ಕಾಫಿ ಬೋರ್ಡ್ ಬಡಾವಣೆ ಮತ್ತು ಮರಿಯಣ್ಣಪಾಳ್ಯದಿಂದ ಕೆಂಪಾಪುರದ ವೀರಾಂಜನೇಯಸ್ವಾಮಿ ದೇವಸ್ಥಾನದ ಮೂಲಕ ಹೆಬ್ಬಾಳ ವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದೆ. ಈ ರಸ್ತೆಯ ಅಕ್ಕಪಕ್ಕದಲ್ಲಿ ಪಾಲಿಕೆಯ ಮಾಜಿ ಸದಸ್ಯರಾದ ಜಯಪ್ಪರೆಡ್ಡಿ ಮತ್ತು ಮಾರಿಮುತ್ತು ಅವರ ಆಸ್ತಿಗಳಿವೆ. ರಸ್ತೆ ವಿಸ್ತರಣೆಗಾಗಿ ತಮ್ಮ ಆಸ್ತಿಯಲ್ಲಿ ಸ್ವಲ್ಪಜಾಗ ಬಿಟ್ಟು ಕೊಡುವಂತೆ ಈ ಹಿಂದೆ ಸ್ಥಳೀಯ ನಿವಾಸಿಗಳು ಇಬ್ಬರಿಗೂ ಮನವಿ ಮಾಡಿದ್ದರು. ಈಗಲೂ ಸಭೆಯಲ್ಲಿ ಮತ್ತೊಮ್ಮೆ ಮನವಿ ಮಾಡಲಾಯಿತು.

ಸಭೆಯ ಮನವಿಗೆ ಸ್ಪಂದಿಸಿದ ಜಯಪ್ಪರೆಡ್ಡಿ ಅವರು, ಸಾರ್ವಜನಿಕರಿಗೆ ಒಳ್ಳೆಯದಾಗುವುದಾದರೆ ರಸ್ತೆ ವಿಸ್ತರಣೆಗಾಗಿ ತಮ್ಮ ಜಾಗದಲ್ಲಿ ಐದು ಅಡಿ ಬಿಟ್ಟುಕೊಡುವುದಾಗಿ ಘೋಷಿಸಿದರು.

ನಿಮ್ಹಾನ್ಸ್: ಮಾನಸಿಕ ಆರೋಗ್ಯ ಸಂತೆ ಅ.15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಅಕ್ಟೋಬರ್ 15ರಂದು ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಮಾನಸಿಕ ಆರೋಗ್ಯ ಸಂತೆ ಹಮ್ಮಿಕೊಂಡಿದೆ.

ಬೆಳಿಗ್ಗೆ 10 ಗಂಟೆಯಿಂದ ನಡೆಯುವ ಮೂರನೇ ಆವೃತ್ತಿಯ ಈ ಸಂತೆಗೆ ಉಚಿತ ಪ್ರವೇಶ ಇರಲಿದೆ. ಮಾನಸಿಕ ಆರೋಗ್ಯ ಸಮಸ್ಯೆಗಳ ಬಗೆಗಿನ ಕಳಂಕ ಹೋಗಲಾಡಿಸಿ, ರೋಗದ ಬಗ್ಗೆ ಅರಿವು ಮೂಡಿಸುವುದು ಈ ಸಂತೆಯ ಮುಖ್ಯ ಉದ್ದೇಶವಾಗಿದೆ ಎಂದು ಸಂಸ್ಥೆ ತಿಳಿಸಿದೆ.

'ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯವೂ ಅತಿ ಮುಖ್ಯ. ವಿವಿಧ ವಿಭಾಗಗಳಿಂದ ಲಭ್ಯವಿರುವ ಸೇವೆಗಳ ಬಗ್ಗೆ ಮಾಹಿತಿ ನೀಡಲು ಮತ್ತು ಜನರಲ್ಲಿ ಮಾನಸಿಕ ಆರೋಗ್ಯ ಸಾಕ್ಷರತೆಯನ್ನು ಹೆಚ್ಚಿಸಲು ಈ ಸಂತೆ ಆಯೋಜಿಸಲಾಗಿದೆ' ಎಂದು ಹೇಳಿದೆ.

'ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಪ್ರಕಾರ, ದೇಶದಲ್ಲಿ 2022ರಲ್ಲಿ 1.70 ಲಕ್ಷ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ. 2021ಕ್ಕೆ ಹೋಲಿಸಿದಲ್ಲಿ ಆತ್ಮಹತ್ಯೆ ಪ್ರಕರಣಗಳು ಶೇ 4.2 ರಷ್ಟು ಹೆಚ್ಚಳವಾಗಿವೆ. ಕೌಟುಂಬಿಕ ಸಮಸ್ಯೆಗಳು, ಅಸ್ವಸ್ಥತೆ, ವೃತ್ತಿಪರ ಸಮಸ್ಯೆ, ಮಾದಕ ಹಾಗೂ ಮದ್ಯವ್ಯಸನ, ದಿವಾಳಿತನ ಅಥವಾ ಸಾಲ, ನಿರುದ್ಯೋಗ ಸೇರಿ ವಿವಿಧ ಸಮಸ್ಯೆಗಳು ಆತ್ಮಹತ್ಯೆಗೆ ಕಾರಣವಾಗಿವೆ. ಮಾನಸಿಕ ಆರೋಗ್ಯವು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದ ಕ್ಷೇತ್ರಗಳಲ್ಲಿ ಒಂದಾಗಿದೆ' ಎಂದು ತಿಳಿಸಿದೆ.

ಆದೇಶ ಹಿಂಪಡೆಯಲು ಸೆ.15ರ ಗಡುವು

ವಿವಿಧೆಡೆ ಪ್ರತಿಭಟನೆಗೆ ಅವಕಾಶ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಪ್ರತಿಭಟನೆ ನಡೆಸಲು ಅವಕಾಶ ಕಲ್ಪಿಸಿರುವ ಆದೇಶವು ಅಸಾಂವಿಧಾನಿಕವಾಗಿದ್ದು, ಇದೇ 15ರೊಳಗೆ (ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನ) ಈ ಆದೇಶವನ್ನು ಹಿಂಪಡೆದುಕೊಳ್ಳಬೇಕು' ಎಂದು ಹೋರಾಟದ ಹಕ್ಕಿಗಾಗಿ ಜನಾಂದೋಲನ ಸಮಿತಿ ರಾಜ್ಯ ಸರ್ಕಾರಕ್ಕೆ ಗಡುವು ನೀಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇತಿಹಾಸಕಾರ ರಾಮಚಂದ್ರ ಗುಹಾ, 'ರಾಜ್ಯ ಸರ್ಕಾರ ಇದೇ 15ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಮಾಡಲು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿರುವುದು ಸ್ವಾಗತಾರ್ಹ. ಆದರೆ, ರಾಜ್ಯ ರಾಜಧಾನಿಯಲ್ಲಿ ಜನಸಾಮಾನ್ಯರಿಗೆ ಶಾಂತಿಯುತವಾಗಿ ಪ್ರತಿಭಟಿಸುವ ಹಕ್ಕನ್ನು ಕಸಿದುಕೊಂಡು, ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿದ ಸ್ಥಳಗಳಲ್ಲಿ ಪ್ರತಿಭಟನೆಗೆ ನಿರ್ಬಂಧ ಹೇರಲಾಗಿದೆ. ಇದು ಖಂಡನೀಯ. ಸರ್ಕಾರ ಕೂಡಲೇ ಈ ಆದೇಶವನ್ನು ಹಿಂಪಡೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

'ಬೆಂಗಳೂರು ನಗರ ಪ್ರದೇಶದ ಪುರಭವನ, ಮೌರ್ಯ ವೃತ್ತ, ಗಾಂಧಿ ಪ್ರತಿಮೆ, ಮೈಸೂರು ಬ್ಯಾಂಕ್ ವೃತ್ತದಂತ ಕೆಲವು ಸಾರ್ವಜನಿಕ ಪ್ರದೇಶಗಳಲ್ಲಿ ಶಾಂತಿಯುತ ಪ್ರತಿಭಟನೆ ಮಾಡಲು ಅವಕಾಶ ಕಲ್ಪಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬರ ಹಕ್ಕು' ಎಂದು ಪ್ರತಿಪಾದಿಸಿದರು.

ಜನವಾದಿ ಮಹಿಳಾ ಸಂಘಟನೆ ರಾಜ್ಯ ಘಟಕದ ಉಪಾಧ್ಯಕ್ಷೆ ಕೆ.ಎಸ್. ವಿಮಲಾ ಮಾತನಾಡಿ, 'ಹಿಂದಿನ ಬಿಜೆಪಿ ಸರ್ಕಾರ ತೆಗೆದುಕೊಂಡ ನಿರ್ಧಾರದಿಂದ ಬೆಂಗಳೂರಿನಲ್ಲಿ ಪ್ರತಿಭಟಿಸುವ ಹಕ್ಕನ್ನು ಕಳೆದುಕೊಂಡಿದ್ದೇವೆ. ಕಳೆದ ಎರಡು ವರ್ಷಗಳಿಂದ ಪೊಲೀಸರು ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಪ್ರತಿಭಟನೆ, ಸಾರ್ವಜನಿಕ ಸಭೆ ಮತ್ತು ಮೆರವಣಿಗೆಗಳಿಗೆ ಅನುಮತಿ ನಿರಾಕರಿಸುತ್ತಿದ್ದಾರೆ. ಇದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ' ಎಂದು ದೂರಿದರು.

ಸಾಹಿತಿ ಕೆ. ಮರುಳಸಿದ್ದಪ್ಪ, ಲೇಖಕಿ ವಿಜಯಾ, ಹೋರಾಟಗಾರ್ತಿ ಮೀನಾಕ್ಷಿ ಬಾಳಿ, ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ, ಸೇರಿದಂತೆ 593 ಜನ ಸಹಿ ಮಾಡಿರುವ ಪತ್ರವನ್ನು ಬಿಡುಗಡೆ ಮಾಡಲಾಯಿತು.

ಕಾರ್ಮಿಕ ಸಂಘಗಳ ಜಂಟಿ ಒಕ್ಕೂಟದ ಸಂಚಾಲಕ ಕೆ.ವಿ. ಭಟ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ಮೋಹನ್ ರಾಜ್, ಅಖಿಲ ಭಾರತ ವಕೀಲರ ಸಂಘದ ಅಧ್ಯಕ್ಷೆ ಮೈತ್ರೇಯಿ ಸುದ್ದಿಗೋಷ್ಠಿಯಲ್ಲಿದ್ದರು.

ಮುಖ್ಯಾಂಶಗಳು

- ಜನಾಂದೋಲನ ಸಮಿತಿಯಿಂದ ಒತ್ತಾಯ
- ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬರ ಹಕ್ಕು
- ಗುಹಾ ಸೇರಿ 593 ಜನ ಸಹಿ ಮಾಡಿರುವ ಪತ್ರ

ಪ್ರಜಾವಾಣಿ ಶುಕ್ರವಾರ, 13 ಸೆಪ್ಟೆಂಬರ್ 2024

ಸಿನಿಮಾ ಪುರವಣಿ



ವಿಕ್ಕಿ ವರುಣ್

‘ಫಲಿತಾಂಶಕ್ಕಾಗಿ ಕಾಯುತ್ತಿರುವೆ

ವಿಕ್ಕಿ ವರುಣ್ ನಟಿಸಿ, ನಿರ್ದೇಶಿಸಿರುವ ‘ಕಾಲಾಪತ್ಥರ್’ ಚಿತ್ರ ಇಂದು (ಸೆ.13) ತೆರೆಗೆ ಬರುತ್ತಿದೆ. ತಮ್ಮ ಪಾತ್ರ ಹಾಗೂ ನಿರ್ದೇಶನದ ಬಗ್ಗೆ ಮಾತನಾಡಿದ್ದಾರೆ.

ವಿನಾಯಕ ಕೆ.ಎಸ್

- **ಚಿತ್ರದಲ್ಲಿ ನಿಮ್ಮ ಪಾತ್ರವೇನು?**
ಶಂಕರ್ ಎಂಬ ಪಾತ್ರ ಮಾಡಿದ್ದೇನೆ. ಈತ ಗಡಿ ಭದ್ರತಾ ಪಡೆಯ(ಬಿಎಸ್‌ಎಫ್) ಯೋಧ. ಆದರೆ ಇದು ಸೈನ್ಯದ ಕುರಿತಾದ ಕಥೆಯಲ್ಲ, ಸೇನೆಯಲ್ಲಿ ಕೆಲಸ ಮಾಡುವ ವ್ಯಕ್ತಿಯ ಕುರಿತಾದ ಚಿತ್ರ. ಆತನ ವೈಯಕ್ತಿಕ ಬದುಕಿನ ಸುತ್ತ ಚಿತ್ರ ಸಾಗುತ್ತದೆ. ಕುಟುಂಬ, ಸಂಬಂಧ ಮೊದಲಾದ ಸಂಗತಿಗಳಿವೆ.
- **ಎಲ್ಲೆಲ್ಲಿ ಚಿತ್ರೀಕರಣಗೊಂಡಿದೆ?**
ಜಮ್ಮು–ಕಾಶ್ಮೀರ, ರಾಜಸ್ಥಾನ, ವಿಜಯಪುರ, ಬೆಂಗಳೂರು, ಸಕಲೇಶಪುರ ಮೊದಲಾದೆಡೆ ಚಿತ್ರೀಕರಣ ಮಾಡಿದ್ದೇವೆ.
- **ಇದು ನೈಜಘಟನೆ ಆಧಾರಿತ ಚಿತ್ರವೇ?**
ಇಲ್ಲ, ಇದು ಯಾವ ವ್ಯಕ್ತಿಗೂ ಸಂಬಂಧಿತ ಕಥೆಯಲ್ಲ. ಸೈನಿಕನ ಬದುಕಿನ ಕಥೆಯಾಗಿದ್ದರಿಂದ ಆ ಜಾಗಗಳಲ್ಲಿ ಚಿತ್ರೀಕರಣ ಮಾಡಿದ್ದೇವೆ. ಆದರೆ ಸಂಪೂರ್ಣ ಕಾಲ್ಪನಿಕ. ಯಾವುದೇ ಜಾತಿ, ಪಂಗಡ, ಪ್ರದೇಶಕ್ಕೆ ಸೀಮಿತವಾದ ಕಥೆಯೂ ಅಲ್ಲ.
- **ಚಿತ್ರದಲ್ಲಿ ‘ಕಾಲಾಪತ್ಥರ್’ ಎಂದರೇನು?**
ಒಂದು ಕಪ್ಪುಕಲ್ಲು. ಉತ್ತರ ಭಾರತದ ವ್ಯಕ್ತಿಯೊಬ್ಬ ಶಿಲೆಗೆ ಇಟ್ಟ ನೆಚ್ಚಿನ ಹೆಸರು ‘ಕಾಲಾಪತ್ಥರ್’. ಆದರೆ ಇದಕ್ಕೂ ಬಾಲಿವುಡ್‌ನ ‘ಕಾಲಾಪತ್ಥರ್’ ಸಿನಿಮಾಕ್ಕೂ ಯಾವುದೇ ಸಂಬಂಧವಿಲ್ಲ. ಚಿತ್ರ ನೋಡಿದಾಗ ಇದೇ ಶೀರ್ಷಿಕೆ ಏಕೆ ಎಂಬುದು ಗೊತ್ತಾಗುತ್ತದೆ.
- **ನಟನೆಯಿಂದ ನಿರ್ದೇಶನದತ್ತ ಹೊರಳಿದ್ದು ಯಾಕೆ?**
ನಿರ್ದೇಶಕನಾಗಬೇಕೆಂಬ ಕನಸಿನೊಂದಿಗೆ 2009ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟೆ. ‘ದುನಿಯಾ’ ಸೂರಿ ಅವರ ಬಳಿ ಸಹಾಯಕ ನಿರ್ದೇಶಕನಾಗಿ ಸೇರಿಕೊಂಡೆ. ಅವರು ನಟನೆಗೆ ಅವಕಾಶ ನೀಡಿದರು. ‘ಕೆಂಡಸಂಪಿಗೆ’ ಚಿತ್ರದಲ್ಲಿ ನಾಯಕನನ್ನಾಗಿ ಮಾಡಿದರು. ಆದರೆ ನಿರ್ದೇಶಕನಾಗಬೇಕೆಂಬ ನನ್ನೊಳಗಿನ ಹಂಬಲ ಹಾಗೆಯೇ ಉಳಿದಿತ್ತು. ಅದು ಈ ಚಿತ್ರದ ಮೂಲಕ ಈಡೇರುತ್ತಿದೆ.
- **ಹದಿನೈದು ವರ್ಷದ ಸಿನಿಪಯಣ ಹೇಗಿತ್ತು?**
ಸಿನಿಮಾ ನನಗೆ ಬದುಕು, ಹೆಸರು ಎಲ್ಲವನ್ನೂ ನೀಡಿದೆ. ಏಳುಬೀಳುಗಳ ನಡುವೆಯೂ ಈ ಕ್ಷೇತ್ರ ಆಯ್ದುಕೊಂಡಿದ್ದಕ್ಕೆ ನನಗೆ ಸಂಪೂರ್ಣ ಖುಷಿಯಿದೆ.
- **ಏಳು ವರ್ಷದ ಹಳೆಯ ಕಥೆ ಎಂದಿದ್ದೀರಿ, ಇಂದಿಗೆ ಎಷ್ಟು ಪ್ರಸ್ತುತ?**
ಕಥೆಯ ಎಳೆ ಹಳತು. ಹಾಗೆ ನೋಡಿದರೆ ಸುರೇಂದ್ರನಾಥ್ ಅವರು 1993ರಲ್ಲಿ ಬರೆದ ಕಥೆ 2015ರಲ್ಲಿ ‘ಕೆಂಡಸಂಪಿಗೆ’ ಸಿನಿಮಾವಾಗಿ ತೆರೆಯ ಮೇಲೆ ಬಂದಿತ್ತು. ಚಿತ್ರಕಥೆಯನ್ನು ಆವತ್ತಿನ ಕಾಲಘಟ್ಟಕ್ಕೆ ತಕ್ಕಂತೆ ಮಾಡಿಕೊಳ್ಳಲಾಗಿತ್ತು. ‘ಕಾಲಾಪತ್ಥರ್’ ಚಿತ್ರಕಥೆಯನ್ನು ಇವತ್ತಿಗೆ ತಕ್ಕಂತೆ ಮಾಡಿಕೊಂಡಿದ್ದೇವೆ.
- **ಹೊಸಬರ ಸಿನಿಮಾಕ್ಕೆ ಇರುವ ಸವಾಲುಗಳೇನು?**
ಇವತ್ತು ಸಿನಿಮಾ ಪೂರ್ಣಗೊಳಿಸುವುದು ಸುಲಭವಾಗಿದೆ. ಸಾಕಷ್ಟು ತಂತ್ರಜ್ಞಾನವಿದೆ. ಆದರೆ ಸಿನಿಮಾ ಮಾಡಿದ ನಂತರ ಜನರಿಗೆ ತಲುಪಿಸುವುದು, ಪ್ರಚಾರ, ಬಿಡುಗಡೆ ಬಹಳ ಕಷ್ಟ. ಎಷ್ಟು ಪ್ರಚಾರ ಮಾಡಿದರೂ ಸಾಲದು ಎಂಬಂತಿದೆ. ಒಮ್ಮೆ ಜನಕ್ಕೆ ತಲುಪಿದರೆ ತಾನಾಗಿಯೇ ಸಿನಿಮಾ ಯಶಸ್ವಿಯಾಗುತ್ತದೆ. ಎಷ್ಟೇ ಪ್ರಚಾರ ಮಾಡಿದರೂ ಸಿನಿಮಾದ ಒಳಗೆ ಜೀವ ಇರಬೇಕು, ಸತ್ವ ಬೇಕು. ಗಟ್ಟಿಯಾದ ಕಥೆ ಬೇಕು. ಆಗ ಮಾತ್ರ ಜನ ಸಿನಿಮಾವನ್ನು ಒಪ್ಪಿಕೊಳ್ಳುತ್ತಾರೆ. ಇದು ನಮ್ಮ ಸಿನಿಮಾಗೆ ಮಾತ್ರವಲ್ಲ. ಎಲ್ಲ ಸಿನಿಮಾಗಳಿಗೂ ಅನ್ವಯವಾಗುತ್ತದೆ. ಎಷ್ಟೇ ಪ್ರಯತ್ನ ಮಾಡಿದರೂ, ಕಷ್ಟಪಟ್ಟರೂ ಜನರು ನೀಡುವ ತೀರ್ಪು ಅಂತಿಮ. ಅವರಿಗೆ ಸಿನಿಮಾ ಇಷ್ಟವಾಗಬೇಕು. ಅವರ ಫಲಿತಾಂಶಕ್ಕೆ ಕಾಯುತ್ತಿರುವೆ.
- **ನಿಮ್ಮ ಮುಂದಿನ ಸಿನಿಮಾಗಳು...**
ಒಂದು ಸಿನಿಮಾಕ್ಕೆ ನಟನಾಗಿ ಅವಕಾಶ ಬಂದಿದೆ. ನನ್ನ ನಿರ್ದೇಶನದ ಮತ್ತೊಂದು ಸಿನಿಮಾ ಮಾತುಕತೆ ಹಂತದಲ್ಲಿದೆ.

ಸಂಜುವಿಗೆ ಪ್ರಜ್ವಲ್ ಸಾಥ್



ಸಾತ್ವಿಕಾ ರಾವ್

ನಟ ಯತಿರಾಜ್ ನಿರ್ದೇಶನದ ‘ಸಂಜು’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪ್ರಜ್ವಲ್ ದೇವರಾಜ್ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಕೋರಿದರು.

‘ಇದು ನನ್ನ ನಿರ್ದೇಶನದ ಆರನೇ ಚಿತ್ರ. ಈ ಚಿತ್ರಕ್ಕೆ ‘ಅಗಮ್ಯ ಪಯಣಿಗ’ ಎಂಬ ಅಡಿಬರಹವಿದೆ. ಇದೊಂದು ಬಸ್ ನಿಲ್ದಾಣದಲ್ಲಿ ನಡೆಯುವ ಕಥೆ. ಇಲ್ಲಿ ನಾಯಕ ಸಾಮಾನ್ಯ ಜನರ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾನೆ. ಆತನ ಬದುಕಿನಲ್ಲೂ ಸಾಕಷ್ಟು ಏರಿಳಿತಗಳಿರುತ್ತವೆ. ನಾಯಕಿ ಬದುಕು ಕೂಡ ಇದಕ್ಕೆ ಹೊರತಾಗಿಲ್ಲ. ಮಡಿಕೇರಿಯಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣವಾಗಿದೆ. ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ’ ಎಂದರು ನಿರ್ದೇಶಕ ಯತಿರಾಜ್.

ಮನ್ವಿತ್ ಚಿತ್ರದ ನಾಯಕ. ನಾಯಕಿಯಾಗಿ ರೇಖಾದಾಸ್ ಪುತ್ರಿ ಸಾತ್ವಿಕಾ ರಾವ್ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ಸಂತೋಷ್ ಬಂಡವಾಳ ಹೂಡಿದ್ದಾರೆ. ವಿಜಯ್ ಹರಿತ್ಸ ಸಂಗೀತ ನಿರ್ದೇಶನ, ವಿದ್ಯಾ ನಾಗೇಶ್ ಛಾಯಾಚಿತ್ರಗ್ರಹಣವಿದೆ. ಸುಂದರಶ್ರೀ, ತೇಜಸ್ವಿನಿ, ಬಲ ರಾಜವಾಡಿ, ಮಹಾಂತೇಶ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಎಲ್ಲಿಗೆ ಪಯಣ.. ಎಂದ ಅಭಿಮನ್ಯು



ಅಭಿಮನ್ಯು ಕಾಶಿನಾಥ್

ಹೆಸರಾಂತ ನಿರ್ದೇಶಕ ಕಾಶಿನಾಥ್ ಅವರ ಪುತ್ರ ಅಭಿಮನ್ಯು ಕಾಶಿನಾಥ್ ‘ಎಲ್ಲಿಗೆ ಪಯಣ ಯಾವುದೋ ದಾರಿ’ ಚಿತ್ರದ ಮೂಲಕ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಕಾರ್‌ನಲ್ಲಿ ಪಯಣಕ್ಕೆ ಹೊರಡುವ ದೃಶ್ಯದ ಟೀಸರ್ ಈ ಚಿತ್ರ ವಿಭಿನ್ನ ಕಥೆಯನ್ನು ಹೊಂದಿರುವ ಸುಳಿವು ನೀಡುತ್ತಿದೆ. ಸಾಕಷ್ಟು ವರ್ಷಗಳ ಕಾಲ ಚಿತ್ರರಂಗದ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಅನುಭವ ಹೊಂದಿರುವ ಕಿರಣ್ ಎಸ್. ಸೂರ್ಯ ಈ ಚಿತ್ರದ ಮೂಲಕ ನಿರ್ದೇಶಕರಾಗಿದ್ದಾರೆ.

‘ಪ್ರೀತಿಯ ಜೊತೆಗೆ ಥ್ರಿಲ್ಲರ್ ಜಾನರ್ ಹೊಂದಿರುವ ಚಿತ್ರ. ಹಾಗೆಂದ ಮಾತ್ರಕ್ಕೆ ಆ ಪರಿಧಿಗೆ ಸೀಮಿತವಾದ ಕಥೆ ಇಲ್ಲಿದೆ ಎಂದುಕೊಳ್ಳುವಂತಿಲ್ಲ. ಕೇವಲ ಕೊಲೆಯೊಂದರ ಸುತ್ತ ಕಥೆ ಸಾಗುವುದಿಲ್ಲ. ಇದುವರೆಗೆ ನೋಡಿದ್ದು ನಿಜವೋ ಸುಳ್ಳೋ ಎಂಬ ಅನುಮಾನ ಮೂಡಿಸುವ ರೀತಿಯಲ್ಲಿ ಕಥೆ ಸಾಗುತ್ತದೆ. ವಿಶೇಷವೆಂದರೆ ಕಿಚ್ಚ ಸುದೀಪ್ ಈ ಚಿತ್ರದ ಹಾಡೊಂದನ್ನು ಹಾಡಿದ್ದಾರೆ’ ಎಂದರು ನಿರ್ದೇಶಕರು.

ಸುದರ್ಶನ ಆರ್ಟ್ಸ್ ಬ್ಯಾನರಿನಡಿಯಲ್ಲಿ ಜತಿನ್ ಪಟೇಲ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಅಭಿಮನ್ಯು ಕಾಶಿನಾಥ್ ಅವರಿಗೆ ಸ್ಫೂರ್ತಿ ಉಡಿಮನೆ ನಾಯಕಿಯಾಗಿ ಸಾಥ್ ಕೊಟ್ಟಿದ್ದಾರೆ. ವಿಜಯಶ್ರೀ ಕಲಬುರ್ಗಿ, ಬಲ ರಾಜವಾಡಿ, ಶೋಭನ್, ಅಯಾಂಕ್, ರಿನಿ ಬೋಪಣ್ಣ ಮುಂತಾದವರ ತಾರಾಗಣವಿದೆ. ಪ್ರಣವ್ ರಾವ್ ಸಂಗೀತ ನಿರ್ದೇಶನ, ಸತ್ಯ ರಾಮ್ ಛಾಯಾಚಿತ್ರಗ್ರಹಣವಿದೆ.

ನಿಮ್ದೆ ಕಥೆ ಎನ್ನುತ್ತಿರುವ ಹೊಸಬರು



ಅಭಿಲಾಷ ದಳಪತಿ, ರಾಶಿಕಾ ಶೆಟ್ಟಿ

ಬಹುತೇಕ ಹೊಸಬರಿಂದಲೇ ಕೂಡಿರುವ ‘ನಿಮ್ದೆ ಕಥೆ’ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಅಭಿಲಾಷ ದಳಪತಿ ಮತ್ತು ರಾಶಿಕಾ ಶೆಟ್ಟಿ ಜೋಡಿಯಾಗಿ ನಟಿಸಿದ್ದಾರೆ. ಸಿ.ಎಸ್. ರಾಘವೇಂದ್ರ ಆ್ಯಕ್ಷನ್ ಕಟ್ ಹೇಳಿರುವ ಚಿತ್ರಕ್ಕೆ ಶ್ರೀನಿವಾಸ ರೆಡ್ಡಿ ಮತ್ತು ಅರವಿಂದ್ ಯು.ಎಸ್ ಬಂಡವಾಳ ಹೂಡಿದ್ದಾರೆ.

‘ಇದೊಂದು ಹಾಸ್ಯಮಯ, ಭಾವನಾತ್ಮಕ ಹಾಗೂ ಸ್ವಲ್ಪ ಸಸ್ಪೆನ್ಸ್ ಹೊಂದಿರುವ ಚಿತ್ರ. ಬೆಂಗಳೂರು ಮತ್ತು ಮೈಸೂರು ಸುತ್ತ ಮುತ್ತ ಚಿತ್ರೀಕರಣಗೊಂಡಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸವು ಮುಕ್ತಾಯ ಹಂತದಲ್ಲಿ ಇದ್ದು, ಇದೇ ನವೆಂಬರ್ ತಿಂಗಳಿನಲ್ಲಿ ಚಿತ್ರ ಬಿಡುಗಡೆಯಾಗಲು ಎಲ್ಲಾ ಸಿದ್ಧತೆ ನಡೆಯುತ್ತಿದೆ’ ಎಂದಿದ್ದಾರೆ ನಿರ್ದೇಶಕರು.

ಸಿಹಿಕಹಿ ಚಂದ್ರು, ‘ಕಾಮಿಡಿ ಕಿಲಾಡಿ’ ಖ್ಯಾತಿಯ ಮನೋಹರ್ ಗೌಡ, ಕೆ.ವಿ.ಮಂಜಯ್ಯ, ಜ್ಯೋತಿ ಮರೂರ್ ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ. ಪ್ರವೀಣ್ ನಿಕೇತನ್ ಸಂಗೀತ ಸಂಯೋಜನೆ, ಪ್ರಶಾಂತ್ ಸಾಗರ್ ಛಾಯಾಚಿತ್ರಗ್ರಹಣ, ಸುನಿಲ್ ಎಸ್ ಸಂಕಲನವಿದೆ.

ಮೂರು ಚಿತ್ರಗಳು ತೆರೆಗೆ



‘ಕಾಲಾಪತ್ಥರ್’ ಸೇರಿದಂತೆ ಮೂರು ಚಿತ್ರಗಳು ಈ ವಾರ (ಸೆ.13) ತೆರೆ ಕಾಣುತ್ತಿವೆ.

ರಾನಿ:

ಕಿರುತೆರೆ ನಟ ಕಿರಣ್ ರಾಜ್ ನಾಯಕನಾಗಿ ಅಭಿನಯಿಸಿರುವ ‘ರಾನಿ’ ಚಿತ್ರ ಗುರುವಾರವೇ (ಸೆ.12) ತೆರೆ ಕಂಡಿದೆ. ಗುರುತೇಜ್ ಶೆಟ್ಟಿ ನಿರ್ದೇಶನವನ್ನು ಸ್ಟಾರ್ ಕ್ರಿಯೇಷನ್ಸ್ ನಿರ್ಮಾಣ ಮಾಡಿದೆ.

‘ಇದೊಂದು ಕುಟುಂಬ ಸಮೇತ ನೋಡಬಹುದಾದ ಚಿತ್ರ. ಆ್ಯಕ್ಷನ್, ಸೆಂಟಿಮೆಂಟ್, ಥ್ರಿಲ್ಲರ್ ಎಲ್ಲದರ ಸಂಗಮವೇ ‘ರಾನಿ’. ಪ್ರೇಕ್ಷಕನಿಗೆ ಬೇಕಾದ ಎಲ್ಲಾ ಅಂಶಗಳಿರುವ ಚಿತ್ರ. 200ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆ ಕಂಡಿದೆ’ ಎಂದಿದ್ದಾರೆ ನಿರ್ದೇಶಕರು.

ರಾಘವೇಂದ್ರ ಬಿ. ಕೋಲಾರ ಛಾಯಾಚಿತ್ರಗ್ರಹಣ ಹಾಗೂ ಮಣಿಕಾಂತ್ ಕದ್ರಿ ಸಂಗೀತವಿದೆ. ರಾಧ್ಯ ಹಾಗೂ ಸಮೀಕ್ಷ ಈ ಚಿತ್ರದ ನಾಯಕಿಯರು. ಯಶ್ ಶೆಟ್ಟಿ, ಕರಿಸುಬ್ಬು, ಧರ್ಮಣ್ಣ ಮುಂತಾದ ಕಲಾವಿದರು ಚಿತ್ರದಲ್ಲಿದ್ದಾರೆ.

ವಿಕಾಸ ಪರ್ವ:

ಕಿರುತೆರೆ ಮತ್ತು ಹಿರಿತೆರೆ ನಟ ರೋಹಿತ್ ನಾಗೇಶ್ ನಾಯಕನಾಗಿ ನಟಿಸಿರುವ ಚಿತ್ರ ‘ವಿಕಾಸ ಪರ್ವ’. ವಿಶೃತ್ ನಾಯಕ್ ಕಥೆ, ಚಿತ್ರಕಥೆ ಬರೆದಿದ್ದು, ಅನ್ಬು ಅರಸ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಸ್ವಾತಿ ಚಿತ್ರದ ನಾಯಕಿ.

‘ರಾಜ್ಯದಲ್ಲಿ ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ. ಸಾಮಾಜಿಕ ಕಳಕಳಿಯುಳ್ಳ ಕಥಾಹಂದರ ಈ ಚಿತ್ರದಲ್ಲಿದ್ದು, ಸಮಾಜದ ಪ್ರತಿಯೊಂದು ಮನೆಯಲ್ಲೂ ಇರಬಹುದಾದ ಗಹನವಾದ ಸಮಸ್ಯೆಯೊಂದನ್ನು ನಮ್ಮ ಚಿತ್ರದಲ್ಲಿ ಹೇಳಿದ್ದೇವೆ. ಅದೇನೆಂದು ನೀವು ಚಿತ್ರಮಂದಿರದಲ್ಲೇ ನೋಡಬೇಕು. ಬೆಂಗಳೂರು, ಚಿಕ್ಕಮಗಳೂರು, ಸಕಲೇಶಪುರ, ಶನಿವಾರಸಂತೆ ಸುತ್ತಮುತ್ತ ಎರಡು ಹಂತಗಳಲ್ಲಿ ಚಿತ್ರದ ಶೂಟಿಂಗ್ ಮಾಡಿದ್ದೇವೆ’ ಎಂದಿದ್ದಾರೆ ರೋಹಿತ್ ನಾಗೇಶ್.

ಅಶ್ವಿನ್ ಹಾಸನ್, ಕುರಿರಂಗ, ಬಲ ರಾಜವಾಡಿ, ನಿಶ್ವಿಕಾಗೌಡ ತಾರಾಗಣದಲ್ಲಿದ್ದಾರೆ. ಎ.ಪಿ.ಓ. ಸಂಗೀತ ನಿರ್ದೇಶನದ ಮೂರು ಹಾಡುಗಳಿದ್ದು, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯವಿದೆ. ನವೀನ್ ಸುವರ್ಣ ಛಾಯಾಚಿತ್ರಗ್ರಹಣ, ಶ್ರೀನಿವಾಸ ಕಲಾಲ್ ಸಂಕಲನವಿದೆ.

ಬಿಡುಗಡೆಯಾಯ್ತು ‘ತಾರಕೇಶ್ವರ’ನ ಹಾಡು



ಚಿತ್ರತಂಡ

ಭಕ್ತಿ ಪ್ರಧಾನ ‘ತಾರಕೇಶ್ವರ’ ಚಿತ್ರದ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಶಾಸಕ ಡಾ. ಸಿ.ಎನ್. ಅಶ್ವಥ್ ನಾರಾಯಣ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ.ಸುರೇಶ್ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಪುರುಷೋತ್ತಮ್ ಓಂಕಾರ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ‘ಶಿವಪುರಾಣದಲ್ಲಿ ತಾರಕಾಸುರ ರಾಕ್ಷಸನಾದರೂ, ತಂದೆ ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಲು ತಪಸ್ಸು ಮಾಡಿ ತನಗೆ ಸಾವು ಬರಬಾರದೆಂದು ಬ್ರಹ್ಮನಿಂದ ವರ ಪಡೆದುಕೊಳ್ಳುತ್ತಾನೆ. ಮುಂದೆ ಯಾವ ರೀತಿ ಹೋರಾಟ ಮಾಡುತ್ತಾನೆಂದು ಕುತೂಹಲದ ಸನ್ನಿವೇಶಗಳೊಂದಿಗೆ ತೋರಿಸಲಾಗಿದೆ. ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರು ಮೊದಲಾದೆಡೆ ಚಿತ್ರೀಕರಣ ನಡೆಸಲಾಗಿದೆ’ ಎಂದರು ನಿರ್ದೇಶಕರು.

‘ನಾನು ಈಶ್ವರ ಪಾತ್ರ ಮಾಡಿದಾಗ ಎಲ್ಲರೂ ಇಷ್ಟಪಟ್ಟರು. ನಂತರ ‘ಗಂಗೆಗೌರಿ’ ಚಿತ್ರ ಪ್ರಾರಂಭಿಸಿದೆ. ಅದರ ಎಡಿಟಿಂಗ್ ಸಮಯದಲ್ಲಿ ಈ ಚಿತ್ರ ಮಾಡುವ ಬಗ್ಗೆ ಪ್ರಸ್ತಾಪ ಬಂತು’ ಎಂದು ಚಿತ್ರ ಪ್ರಾರಂಭದ ಕುರಿತು ಮಾಹಿತಿ ನೀಡಿದರು ನಟ, ನಿರ್ಮಾಪಕ ಗಣೇಶ್‌ರಾವ್ ಕೇಸರ್‌ಕರ್.

ಪಾರ್ವತಿಯಾಗಿ ರೂಪಾಲಿ ಕಾಣಿಸಿಕೊಂಡಿದ್ದಾರೆ. ಬಾಲನಟಿ ಋತುಸ್ಪರ್ಶ, ಸುಮಿತ ಪ್ರವೀಣ್, ಅನ್ನಪೂರ್ಣ ಮೊದಲಾದವರು ಚಿತ್ರದಲ್ಲಿದ್ದಾರೆ. ರಾಜ್‌ಭಾಸ್ಕರ್ ಸಂಗೀತ, ಮುತ್ತುರಾಜ್ ಛಾಯಾಚಿತ್ರಗ್ರಹಣ, ಅನಿಲ್‌ಕುಮಾರ್ ಸಂಕಲನವಿದೆ.

ಶೀರ್ಷಿಕೆಯಾಯ್ತು ‘ಕ್ಲೈಮ್ಯಾಕ್ಸ್ ಇರುವುದಿಲ್ಲ’



ರೂಪಶ್ರೀ

ಇತ್ತೀಚಿನ ದಿನಗಳಲ್ಲಿ ಭಿನ್ನ ಶೀರ್ಷಿಕೆಯ ಸಿನಿಮಾಗಳು ಹೆಚ್ಚಾಗಿವೆ. ಅದೇ ಸಾಲಿಗೆ ಸೇರುವ ಮತ್ತೊಂದು ಚಿತ್ರ ‘ಈ ಸಿನಿಮಾಗೆ ಕ್ಲೈಮ್ಯಾಕ್ಸ್ ಇರುವುದಿಲ್ಲ’ ಇತ್ತೀಚೆಗಷ್ಟೇ ಸೆಟ್ಟೇರಿದೆ.

ಆರ್.ಕೆ.ಗಾಂಧಿ ನಿರ್ದೇಶನದ ಈ ಚಿತ್ರವನ್ನು ಸ್ನೇಹಾಲಯಂ ಕ್ರಿಯೇಷನ್ಸ್ ಲಾಂಛನದಲ್ಲಿ ರಾಜೀವ್ ಕೃಷ್ಣ ನಿರ್ಮಾಣ ಮಾಡುತ್ತಿದ್ದಾರೆ.

‘ಗೋವಾಕ್ಕೆ ಟ್ರಿಪ್ ಹೊರಡುವ ಆರು ಹುಡುಗ, ಹುಡುಗಿಯರ ಜೀವನದಲ್ಲಿ ಆಗಂತುಕನೊಬ್ಬ ಬಂದಾಗ ಅವರಿಗೆ ಎದುರಾಗುವ ಸಂಕಷ್ಟಗಳು ಹಾಗೂ ಅವುಗಳನ್ನು ಆ ಸ್ನೇಹಿತರು ಹೇಗೆ ಎದುರಿಸುತ್ತಾರೆ ಎಂಬುದೇ ಈ ಚಿತ್ರದ ಕಥೆ. ಸಕಲೇಶಪುರ, ಮಂಗಳೂರು, ಬೆಂಗಳೂರು, ಚಿಕ್ಕಬಳ್ಳಾಪುರ ಸುತ್ತಮುತ್ತ ಎರಡು ಹಂತಗಳಲ್ಲಿ ಚಿತ್ರೀಕರಣ ನಡೆಯಲಿದೆ’ ಎಂದು ಮಾಹಿತಿ ನೀಡಿದರು ನಿರ್ದೇಶಕರು.

‘ಬಾಹುಬಲಿ’ ಖ್ಯಾತಿಯ ಪ್ರಭಾಕರ್ ಖಳನಾಯಕನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಹರಿ ಬಂಗಾರಪೇಟ್, ರೂಪಶ್ರೀ, ದೀನ ಉಪ್ಪಾಡ, ರಾಮ್ ಜನಾರ್ದನ್ ಮುಂತಾದವರು ತಾರಾಗಣದಲ್ಲಿದ್ದಾರೆ. ಪ್ರಮೋದ್.ಆರ್ ಮತ್ತು ಬಿ.ಯುವರಾಜ್ ಅವರ ಛಾಯಾಚಿತ್ರಗ್ರಹಣ, ಅನಿರುದ್ಧ ಶಾಸ್ತ್ರಿ ಸಂಗೀತ ಚಿತ್ರಕ್ಕಿದೆ.

ಕೇಜ್ರಿವಾಲ್ ಅರ್ಜಿ: 'ಸುಪ್ರೀಂ' ತೀರ್ಪು ಇಂದು


ಕೇಜ್ರಿವಾಲ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಪ್ರಕರಣದಲ್ಲಿ ಜಾಮೀನು ಕೋರಿ ಮತ್ತು ತನ್ನನ್ನು ಸಿಬಿಐ ಬಂಧಿಸಿದ್ದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳ ತೀರ್ಪನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಪ್ರಕಟಿಸಲಿದೆ.

ಸುಪ್ರೀಂ ಕೋರ್ಟ್ ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಸೆ.13ರ ಪ್ರಕರಣಗಳ ಪಟ್ಟಿಯ ಪ್ರಕಾರ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ ತೀರ್ಪು ಪ್ರಕಟಿಸಲಿದೆ. ನ್ಯಾಯಮೂರ್ತಿ ಉಜ್ವಲ್ ಭುಯಾನ್ ಅವರೂ ಇರುವ ಪೀಠವು ಸೆ.5ರಂದು ತೀರ್ಪನ್ನು ಕಾಯ್ದಿರಿಸಿತ್ತು.

ಜಾಮೀನು ನಿರಾಕರಿಸಿದ್ದನ್ನು ಹಾಗೂ ಸಿಬಿಐ ಬಂಧಿಸಿರುವುದನ್ನು ಪ್ರಶ್ನಿಸಿ ಕೇಜ್ರಿವಾಲ್, ಎರಡು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದರು.

ಬಿಜೆಪಿಯೇತರ ಪಕ್ಷಗಳ ಸರ್ಕಾರವಿರುವ 5 ರಾಜ್ಯಗಳ ಪ್ರತಿಪಾದನೆ

'ತೆರಿಗೆ: 50ರಷ್ಟು ಪಾಲು ಕೊಡಿ'

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇಂದ್ರದ ವಿವಿಧ ತೆರಿಗೆಗಳಲ್ಲಿ ರಾಜ್ಯಗಳಿಗೆ ಶೇ 50ರಷ್ಟು ಪಾಲು ನೀಡಬೇಕು ಎಂದು ಬಿಜೆಪಿಯೇತರ ಸರ್ಕಾರವಿರುವ ಐದು ರಾಜ್ಯಗಳು ಗುರುವಾರ ಪ್ರತಿಪಾದಿಸಿವೆ. ಸೆಸ್ ಮತ್ತು ಸರ್ಚಾರ್ಜ್‌ಗಳಲ್ಲಿ ಹೆಚ್ಚಳ ಮಾಡುವ ಕೇಂದ್ರ ಸರ್ಕಾರದ ನಡೆಯನ್ನು ಕೂಡ ಬಲವಾಗಿ ವಿರೋಧಿಸಿವೆ.

ತೆರಿಗೆ ಪಾಲಿನಲ್ಲಿ ಆಗುತ್ತಿರುವ ತಾರತಮ್ಯ ವಿರೋಧಿಸಿ ಹಾಗೂ ರಾಜ್ಯಗಳ ಬೇಡಿಕೆಗಳ ಕುರಿತು 16ನೇ ಹಣಕಾಸು ಆಯೋಗದ ಮೇಲೆ ಒತ್ತಡ ಹೇರುವುದಕ್ಕಾಗಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಆಯೋಜಿಸಿದ್ದ ವಿಪಕ್ಷಗಳ ಆಡಳಿತವಿರುವ ರಾಜ್ಯಗಳ ಹಣಕಾಸು ಸಚಿವರ ಸಭೆಯಲ್ಲಿ ಈ ಕುರಿತು ಚರ್ಚಿಸಲಾಯಿತು.

ತೆರಿಗೆ ಪಾಲಿನಲ್ಲಿನ ತಾರತಮ್ಯ ವಿಚಾರವಾಗಿ ಹಣಕಾಸು ಆಯೋಗ ಮೇಲೆ ಒತ್ತಡ ಹೇರುವ ಉದ್ದೇಶಕ್ಕಾಗಿ 'ಸಂಯುಕ್ತ ರಂಗ' ರಚಿಸುವ ಅಗತ್ಯತೆಯನ್ನು ಸಭೆಯಲ್ಲಿ ಪಾಲ್ಗೊಂಡಿದ್ದ ಸಚಿವರು ಪ್ರತಿಪಾದಿಸಿದರು.

> **ಕೇಂದ್ರ ಸರ್ಕಾರ ಸೆಸ್ ಮತ್ತು ಸರ್ಚಾರ್ಜ್ ಸಂಗ್ರಹಿಸಿದ್ದರಿಂದಾಗಿ ಕಳೆದ ವರ್ಷ ಕರ್ನಾಟಕ ಅಂದಾಜು ₹53 ಸಾವಿರ ಕೋಟಿ ಕಳೆದುಕೊಂಡಿತು**
>
> **ಕೃಷ್ಣ ಬೈರೇಗೌಡ** ಕಂದಾಯ ಸಚಿವ

ಕರ್ನಾಟಕ, ಕೇರಳ, ಪಂಜಾಬ್, ತಮಿಳುನಾಡು ಹಾಗೂ ತೆಲಂಗಾಣ ರಾಜ್ಯಗಳ ವಿತ್ತ ಸಚಿವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ತೆರಿಗೆಯಲ್ಲಿ ರಾಜ್ಯಗಳಿಗೆ ಬರಬೇಕಾದ ಪಾಲು ಸೇರಿದಂತೆ ವಿವಿಧ ವಿಷಯಗಳ ಕುರಿತ ಹಣಕಾಸು ಆಯೋಗಕ್ಕೆ ಸಲ್ಲಿಸಬೇಕಾದ ಜಂಟಿ ಹೇಳಿಕೆಯ ಕರಡನ್ನು ಸಿದ್ಧಪಡಿಸುವ ಕುರಿತು ಸಹ ಸಭೆಯಲ್ಲಿ ತೀರ್ಮಾನಿಸಲಾಯಿತು.

ಕರ್ನಾಟಕ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಕೇಂದ್ರ ವಿಧಿಸುವ ಸೆಸ್‌ಗಳು ಹಾಗೂ ಸರ್ಚಾರ್ಜ್‌ಗೆ ಸಂಬಂಧಿಸಿ ಶೇ 5ರಷ್ಟು ಮಿತಿ ಜಾರಿಗೊಳಿಸಬೇಕು' ಎಂಬ ಸಲಹೆ ನೀಡಿದರು.

'ಶೇ 5ಕ್ಕಿಂತ ಹೆಚ್ಚು ಸೆಸ್ ಮತ್ತು ಸರ್ಚಾರ್ಜ್ ಸಂಗ್ರಹಗೊಂಡಲ್ಲಿ, ಹೆಚ್ಚುವರಿ ಕರವನ್ನು ರಾಜ್ಯಗಳಿಗೆ ಹಂಚಿಕೆ ಮಾಡುವ ಭಾಗವಾಗಿ ಪರಿಗಣಿಸಬೇಕು' ಎಂಬ ಸಲಹೆಯನ್ನೂ ಮುಂದಿಟ್ಟರು.

ರಾಜ್ಯಗಳಿಗೆ ಅನುದಾನ ಹಂಚಿಕೆ ಮಾಡಲು, 2011ರಲ್ಲಿದ್ದ ಜನಸಂಖ್ಯೆಯನ್ನು ಆಧಾರವನ್ನಾಗಿ ಪರಿಗಣಿಸುವ ಹಣಕಾಸು ಆಯೋಗದ ಕ್ರಮವನ್ನು ದಕ್ಷಿಣದ ಎಲ್ಲ ರಾಜ್ಯಗಳು ವಿರೋಧಿಸಿದವು.

ಕೇಂದ್ರದ ಈ ಕ್ರಮವು, ಜನಸಂಖ್ಯೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಣ ಮಾಡಿದ ರಾಜ್ಯಗಳಿಗೆ ದಂಡ ವಿಧಿಸಿದಂತಿದೆ. ಈ ವಿಚಾರದಲ್ಲಿ ವಿಫಲವಾಗಿರುವ ರಾಜ್ಯಗಳಿಗೆ ಹೆಚ್ಚು ಅನುದಾನ ನೀಡಲು ಅವಕಾಶ ನೀಡಿದಂತಾಗಿದೆ ಎಂಬ ಅಭಿಪ್ರಾಯವೂ ಸಭೆಯಲ್ಲಿ ವ್ಯಕ್ತವಾಯಿತು.

'ಸಭೆ ನಡೆಸಲು ಕರ್ನಾಟಕ ಯೋಜನೆ'

ತಿರುವನಂತಪುರ: 'ರಾಜ್ಯಗಳ ಬೇಡಿಕೆಗಳು ಹಾಗೂ ಕಾಳಜಿಗಳ ಕುರಿತು ಗಮನಹರಿಸುವಂತೆ 16ನೇ ಹಣಕಾಸು ಆಯೋಗದ ಮೇಲೆ ಒತ್ತಡ ಹೇರುವುದಕ್ಕಾಗಿ ಕನಿಷ್ಠ 9 ರಾಜ್ಯಗಳ ಸಚಿವರ ಸಭೆ ಆಯೋಜಿಸಲು ಕರ್ನಾಟಕ ಪ್ರಯತ್ನಿಸುತ್ತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಗುರುವಾರ ಹೇಳಿದ್ದಾರೆ.

ಇಲ್ಲಿ ನಡೆದ ಐದು ರಾಜ್ಯಗಳ ಸಚಿವರ ಸಭೆಯಲ್ಲಿ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ನಡೆಯಲಿರುವ ಮುಂದಿನ ಸಭೆಯಲ್ಲಿ ಪಾಲ್ಗೊಳ್ಳುವಂತೆ ಮಹಾರಾಷ್ಟ್ರ, ಆಂಧ್ರಪ್ರದೇಶ, ಹರಿಯಾಣ ಮತ್ತು ಗುಜರಾತ್ ರಾಜ್ಯಗಳ ಸಚಿವರನ್ನು ಕೋರಲಾಗಿದೆ' ಎಂದರು.

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.-28042024-253907
CG-DL-E-28042024-253907

असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 1711] नई दिल्ली, शुक्रवार, अप्रैल 26, 2024 / वैशाख 6, 1946
No. 1711] NEW DELHI, FRIDAY, APRIL 26, 2024 / VAISAKHA 6, 1946

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
ಚಿಂತಾಮಣಿ ಇಂದ ಆಂಧ್ರಪ್ರದೇಶ ಬಾರ್ಡರ್ ಸೆಕ್ಷನ್ (ರಾ.ಹೆ. 69)
ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ವೃತ್ತ, ಪಿ.ಡಬ್ಲ್ಯೂಡಿ. ಆವರಣ, ಬೆಂಗಳೂರು–560001.

ಸಾರ್ವಜನಿಕ ಪ್ರಕಟಣೆ
(ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಜಿ) ರಂತೆ)

ಎಸ್.ಓ. ನಂ. 1803(ಇ), ದಿನಾಂಕ: 26.04.2024– ಅಧಿಸೂಚನೆ ಸಂಖ್ಯೆ : ಎಸ್.ಓ. ನಂ. 730(ಇ) ದಿನಾಂಕ: 16.02.2024ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997 ರ ಸೆಕ್ಷನ್ 3 (ಡಿ) (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು **ಕರ್ನಾಟಕ ರಾಜ್ಯದಲ್ಲಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 69ರಲ್ಲಿ stretch of land from (Design Ch.0.00 (Existing Ch. Km.428.880) to Design Ch.15.400 (Existing Ch.444.010)** (**ಚಿಂತಾಮಣಿ ಇಂದ ಆಂಧ್ರಪ್ರದೇಶ ಬಾರ್ಡರ್ ಸೆಕ್ಷನ್**) ರವರೆಗೆ ಎರಡು/ನಾಲ್ಕು ಪಥದ ರಸ್ತೆಯನ್ನಾಗಿ ಅಗಲಪಡಿಸುವ ಕಾಮಗಾರಿ ಮಾಡುವ ಸಲುವಾಗಿ **ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು** ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ಸದರಿ ಕಾಯ್ದೆಯ ಸೆಕ್ಷನ್ 3ಎ ರ ಸಬ್‌ಸೆಕ್ಷನ್ (3)ರಡಿ ಈ ಪ್ರಕಟಣೆಯನ್ನು **"ಪ್ರಜಾವಾಣಿ"** ಮತ್ತು **"ದಿ ಟೈಮ್ಸ್ ಆಫ್ ಇಂಡಿಯಾ"** ದಿನಪತ್ರಿಕೆಗಳಲ್ಲಿ ದಿನಾಂಕ **22ನೇ ಫೆಬ್ರವರಿ 2024** ರ ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರನುಸಾರ ಸಾರ್ವಜನಿಕರಿಂದ ಸ್ವೀಕೃತಗೊಂಡಿರುವ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಡಿ) (1) ಹಾಗೂ (2)ರ ಅನ್ವಯ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ. ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಪ್ರಕಾರ 3(ಜಿ)(1), 3(ಜಿ)(2), 3(ಜಿ)(3) ಮತ್ತು 3(ಜಿ)(4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲಾತಿ ಪತ್ರಗಳೊಂದಿಗೆ ಈ ಕೆಳಕಾಣಿಸಿದ ವಿಳಾಸದಲ್ಲಿ ಹಾಜರಾಗುವುದು.

ಗ್ರಾಮಗಳ ಹೆಸರು	ವಿಚಾರಣೆಯ ದಿನಾಂಕ ಮತ್ತು ಸಮಯ	ಭೂಮಾಲೀಕರು/ ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
ಚಿಂತಾಮಣಿ ತಾಲ್ಲೂಕು: ಮುಂಗನಹಳ್ಳಿ, ದೊಡ್ಡಿಹಳ್ಳಿ, ತಿಣಕಲ್ಲು, ಬೊಮ್ಮೇಕಲ್ಲು, ಕೆಂಪದೇನಹಳ್ಳಿ, ದೊಡ್ಡಕೊಂಡ್ರಹಳ್ಳಿ, ಗುಟ್ಟಹಳ್ಳಿ, ಉಳವಕಾಯಲಹಳ್ಳಿ, ವಡ್ಡಹಳ್ಳಿ, ಮೈಲಾಪುರ, ನಾಗದೇವನಹಳ್ಳಿ, ಮಾದಿಕೆರೆ, ಚಟ್ಲಪಲ್ಲಿಗಡ್ಡ, ಕಲ್ಲಹಳ್ಳಿ, ಕಾಟಮಾಚನಹಳ್ಳಿ, ಚಿನ್ನಸಂದ್ರ	**20.09.2024** ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ	ಪ್ರವಾಸಿ ಮಂದಿರ, ಚಿಂತಾಮಣಿ

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ – 69
ಚಿಂತಾಮಣಿ ಇಂದ ಆಂಧ್ರಪ್ರದೇಶ ಬಾರ್ಡರ್ ಸೆಕ್ಷನ್
ಕೆ.ಆರ್. ವೃತ್ತ, ಪಿ.ಡಬ್ಲ್ಯೂಡಿ. ಆವರಣ, ಬೆಂಗಳೂರು–560001.

ಷೆಡ್ಯೂಲ್

ಕರ್ನಾಟಕ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 69ರಲ್ಲಿ stretch of land from (Design Ch.0.00 (Existing Ch. Km.428.880) to Design Ch.15.400 (Existing Ch.444.010) (ಚಿಂತಾಮಣಿ ಇಂದ ಆಂಧ್ರಪ್ರದೇಶ ಬಾರ್ಡರ್ ಸೆಕ್ಷನ್) ರವರೆಗೆ ನಾಲ್ಕು ಪಥದ ರಸ್ತೆ ಮತ್ತು ರಸ್ತೆ ಅಗಲೀಕರಣಕ್ಕೆ ಜಮೀನು/ಅವಶ್ಯಕವಾಗಿರುವ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ/ಸ್ವತ್ತುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ **ಜಿಲ್ಲೆಯ ಹೆಸರು : ಚಿಕ್ಕಬಳ್ಳಾಪುರ**

ಕ್ರ. ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟೇರ್)	ಭೂಮಾಲೀಕರು/ಹಿತಾಸಕ್ತಿಯುಳ್ಳವರ ಹೆಸರು
1	2	3	4	5	6
ತಾಲ್ಲೂಕು: ಚಿಂತಾಮಣಿ					
ಗ್ರಾಮದ ಹೆಸರು : ಮುಂಗನಹಳ್ಳಿ					
1	15/2	ಖಾಸಗಿ	ಖುಷ್ಕಿ	0.0025	ಕೆ.ಎಂ.ನಾರಾಯಣಸ್ವಾಮಿ ಬಿನ್ ಮುನಿಸಾಮಿ
2	15/5	ಖಾಸಗಿ	ಖುಷ್ಕಿ	0.0025	ಹನುಮಯ್ಯ ಉರುಫ್ ದೊಡ್ಡಪ್ಪಯ್ಯ ಬಿನ್ ಹನುಮಂತು
3	15/6	ಖಾಸಗಿ	ಖುಷ್ಕಿ	0.0055	ಕೆ.ಎಂ.ನಾರಾಯಣಸ್ವಾಮಿ ಬಿನ್ ಮುನಿಸಾಮಿ
4	25/1	ಖಾಸಗಿ	ಖುಷ್ಕಿ	0.0303	ಸುಜಾತಮ್ಮ ಕೋಂ ಎಂ.ಎಸ್.ವೆಂಕಟಸುಬ್ಬಾರೆಡ್ಡಿ
5	25/2	ಖಾಸಗಿ	ಖುಷ್ಕಿ	0.0255	ಸುಬ್ಬಾರೆಡ್ಡಿ ಕೆ.ವಿ ಬಿನ್ ವೆಂಕಟಸಾಮಿರೆಡ್ಡಿ
6	25/3	ಖಾಸಗಿ	ಖುಷ್ಕಿ	0.0025	ಎಸ್.ರವಿಚಂದ್ರ ಬಿನ್ ಎಂ ಸೀನಪ್ಪ, ನಟರಾಜು
7	25/6	ಖಾಸಗಿ	ಖುಷ್ಕಿ	0.0202	ಸುಬ್ಬಾರೆಡ್ಡಿ ಕೆ.ವಿ ಬಿನ್ ವೆಂಕಟಸಾಮಿರೆಡ್ಡಿ
8	28	ಖಾಸಗಿ	ಖುಷ್ಕಿ	0.0955	ದೊಡ್ಡಪ್ಪ ಬಿನ್ ಸೊನ್ನಯ್ಯ
9	29/1	ಖಾಸಗಿ	ಖುಷ್ಕಿ	0.0475	ನಾರೆಪ್ಪ ಬಿನ್ ಮುನಿವೆಂಕಟರಾಮಣ್ಣ
10	29/3	ಖಾಸಗಿ	ಖುಷ್ಕಿ	0.0275	ವೀರಪ್ಪ ಬಿನ್ ಲೇಟ್ ವೆಂಕಟರವಣಪ್ಪ, ಗೋಪಾಲಪ್ಪ ಬಿನ್ ಲೇಟ್ ವೆಂಕಟರವಣಪ್ಪ
11	36/1	ಖಾಸಗಿ	ಖುಷ್ಕಿ	0.0505	ಮುನಿನಾರಾಯಣಪ್ಪ ಬಿನ್ ಕೃಷ್ಣಪ್ಪ
12	36/2	ಖಾಸಗಿ	ಖುಷ್ಕಿ	0.0155	ಎಂ.ಕೃಷ್ಣಾರೆಡ್ಡಿ ಬಿನ್ ಮುನಿವೆಂಕಟರೆಡ್ಡಿ
13	36/3	ಖಾಸಗಿ	ಖುಷ್ಕಿ	0.0175	ರತ್ನಮ್ಮ ಕೋಂ ಮುನಿನಾರಾಯಣಪ್ಪ
14	37/1	ಖಾಸಗಿ	ಖುಷ್ಕಿ	0.0075	ಆಂಜನೇಯರೆಡ್ಡಿ ಎಂ.ಎಲ್. ಬಿನ್ ಲೇಟ್ ಎಂ.ಕೆ.ಲಕ್ಷ್ಮೀನಾರಾಯಣರೆಡ್ಡಿ
15	37/2	ಖಾಸಗಿ	ಖುಷ್ಕಿ	0.0055	ಟಿ.ನಾರೆಪ್ಪ ಬಿನ್ ತಿಪ್ಪಾರೆಡ್ಡಿ
16	37/3	ಖಾಸಗಿ	ಖುಷ್ಕಿ	0.0075	ಮುನಿನಾರಾಯಣಪ್ಪ ಬಿನ್ ಕೃಷ್ಣಪ್ಪ
17	38/1	ಖಾಸಗಿ	ಖುಷ್ಕಿ	0.0275	ಆಂಜನೇಯರೆಡ್ಡಿ. ಎಂ.ಎಲ್. ಬಿನ್ ಲೇಟ್ ಎಂ.ಕೆ.ಲಕ್ಷ್ಮೀನಾರಾಯಣರೆಡ್ಡಿ
18	38/2	ಖಾಸಗಿ	ಖುಷ್ಕಿ	0.0255	ದೊಡ್ಡಪ್ಪ ಬಿನ್ ಸೊನ್ನಯ್ಯ
19	38/3	ಖಾಸಗಿ	ಖುಷ್ಕಿ	0.0155	ವೀರಪ್ಪ ಬಿನ್ ಲೇಟ್ ವೆಂಕಟರವಣಪ್ಪ, ಗೋಪಾಲಪ್ಪ ಬಿನ್ ಲೇಟ್ ವೆಂಕಟರವಣಪ್ಪ
20	39	ಖಾಸಗಿ	ಖುಷ್ಕಿ	0.2202	ಖರಾಬು ಕೆರೆ
21	62/1	ಖಾಸಗಿ	ಖುಷ್ಕಿ	0.0055	ಕೆ.ಎನ್.ನಾಗರಾಜು ಬಿನ್ ನಾರೆಪ್ಪ
22	63/1	ಖಾಸಗಿ	ಖುಷ್ಕಿ	0.2825	ಎಂ.ವಿ.ಶ್ರೀರಾಮರೆಡ್ಡಿ ಬಿನ್ ವೆಂಕಟಪ್ಪ, ನಾರಾಯಣಪ್ಪ ಬಿನ್ ಸೋ..ಮುನಿವೆಂಕಟಪ್ಪ, ನಾರಾಯಣಪ್ಪ ಬಿನ್ ದೊಡ್ಡಹನುಮಂತು, ವೆಂಕಟಮ್ಮ ಕೋಂ ಹನುಮಯ್ಯ, ಎಸ್.ನಾರಾಯಣಸ್ವಾಮಿ ಬಿನ್ ಸುಬ್ಬಣ್ಣ, ಅಂಜಪ್ಪ, ಬೈರೆಡ್ಡಿ, ಈರಪ್ಪರೆಡ್ಡಿ.
ಗ್ರಾಮದ ಹೆಸರು : ದೊಡ್ಡಿಹಳ್ಳಿ					
23	41	ಖಾಸಗಿ	ಖುಷ್ಕಿ	0.1111	ತೋಕಮುನಿಗ
24	42	ಖಾಸಗಿ	ಖುಷ್ಕಿ	0.0755	ಶ್ರೀ.ಬಿ.ಎನ್.ಆನಂದರೆಡ್ಡಿ ಬಿನ್ ಬಿ.ಎನ್.ನಾರಾಯಣಸ್ವಾಮಿ
25	52	ಖಾಸಗಿ	ಖುಷ್ಕಿ	0.1202	ಆಣೆಪ್ಪ ಬಿನ್ ದಿವಂಗತ ವೆಂಕಟರಾಯಪ್ಪ
26	64	ಖಾಸಗಿ	ಖುಷ್ಕಿ	0.0025	ದಿಗಗೋರು ಸುಬ್ಬಯ್ಯ, ಮುನಿಬೈರಪ್ಪ ಬಿನ್ ಲೇಟ್ ನಂಜುಂಡಪ್ಪ, ರವಣಮ್ಮ ಬಿನ್ ದೊಡ್ಡಗೂರಪ್ಪ, ಮುನಿಯಮ್ಮ ಕೋಂ ಲೇಟ್ ಮುನಿಬೈರಪ್ಪ.
27	65	ಖಾಸಗಿ	ಖುಷ್ಕಿ	0.1825	ಗೋಕಾಡು, ವೆಂಕಟಮ್ಮ ಕೋಂ ವೆಂಕಟರಾಯಪ್ಪ, ಪೆದ್ದಪೇದಣ್ಣ ಬಿನ್ ಲೇಟ್ ಬಾಚನಾಯಕ, ಗೋಪಿಗ ತೋಕ ಮುನಿಗ
28	75	ಖಾಸಗಿ	ಖುಷ್ಕಿ	0.1202	ನಾರಾಯಣ ಸ್ವಾಮಿ ಬಿನ್ ನಾರಾಯಣಪ್ಪ ಮತ್ತು ಇತರರು
ಗ್ರಾಮದ ಹೆಸರು : ತಿಣಕಲ್ಲು					
29	104	ಖಾಸಗಿ	ಖುಷ್ಕಿ	0.0525	ಟಿ.ವೆಂಕಟರವಣಪ್ಪ ಬಿನ್ ಲೇಟ್ ಚಿಕ್ಕತಿಮ್ಮಣ್ಣ ಉರುಫ್ ತಿಮ್ಮಣ್ಣ, ಅಂಜನಪ್ಪ ಬಿನ್ ಹನುಮಂತರಾಯಪ್ಪ, ಕೆ.ಕನಕಮ್ಮ ಕೋಂ ಮದ್ದುಕೃಷ್ಣಾಚಾರಿ, ಶಿಲ್ಪಾ ಸಿ ಕೋಂ ದಿನೇಶ್, ಬಿ.ಎಂ, ರತ್ನಮ್ಮ ಕೋಂ ಬಾಬಣ್ಣ, ಎಂ,ವೆಂಕಟಪ್ಪ, ಮುನಿಶಾಮಪ್ಪ, ಮುನಿನಾರಾಯಣಮ್ಮ ಕೋಂ ಲೇಟ್ ನಾಗಪ್ಪ (104/1, 104/2, 104/3, 104/6, 104/8)
30	106/2	ಖಾಸಗಿ	ಖುಷ್ಕಿ	0.0075	ಲಕ್ಷ್ಮೀದೇವಮ್ಮ ಕೋಂ ಲೇಟ್ ಟಿ.ಎನ್.ಕೃಷ್ಣಪ್ಪ, ಈರಮ್ಮ ಕೋಂ ಲೇಟ್‌ಚಿಕ್ಕನಾರಾಯಣಪ್ಪ, ವೆಂಕಟಲಕ್ಷ್ಮಮ್ಮ ಕೋಂ ವೆಂಕಟರಾಯಪ್ಪ, ಭಾಗ್ಯಮ್ಮ ಕೋಂ ಆಂಜಿನಪ್ಪ, ಗೌರಮ್ಮ ಕೋಂ ಮುನಿರಾಮಯ್ಯ, ಮಂಜುಳಮ್ಮ ಕೋಂ ಚಂದ್ರಪ್ಪ.
31	107	ಖಾಸಗಿ	ಖುಷ್ಕಿ	0.1055	ನಾಗಮ್ಮ ಕೋಂ ವೆಂಕಟರಾಯಪ್ಪ, ರತ್ನಮ್ಮ–ಮುನಿನರಸಿಂಹಪ್ಪ, ನಾರಾಯಣಸ್ವಾಮಿ ಬಿನ್ ಲೇಟ್ ವೆಂಕಟರಾಯಪ್ಪ ಉರುಫ್ ವೆಂಕಟರಾಯಪ್ಪ, ಮುನಿಯಪ್ಪ ಬಿನ್ ಚಿಕ್ಕಮುನಿಯಪ್ಪ, ಟಿ.ಎಂ.ರಮೇಶ್, ಟಿ.ಎಂ.ಮಂಜುನಾಥ್ ಮತ್ತು ಮೈನರ್ ಪುತ್ರ ನಾಗರಾಜ್, ಟಿ.ಎಂ.ನಾರಾಯಣಸ್ವಾಮಿ ಬಿನ್ ಮುನಿಯಪ್ಪ, ಲಕ್ಷ್ಮಿದೇವಮ್ಮ ಕೋಂ ಲೇಟ್ ಟಿ.ಎನ್. ಕೃಷ್ಣಪ್ಪ (107/2ಎ1, 107/3)
32	113/1	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ	0.0455	ವೆಂಕಟರಾಯಪ್ಪ ಬಿನ್ ಜನಾರ್ಧನಪ್ಪ, ನಾರಾಯಣಸ್ವಾಮಿ ಬಿನ್ ಲೇಟ್ ವೆಂಕರಾಯಪ್ಪ ಉರುಫ್ ವೆಂಕಟರಾಮಪ್ಪ
33	114/2	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ	0.0051	ವೆಂಕಟರಾಯಪ್ಪ ಬಿನ್ ಜನಾರ್ಧನಪ್ಪ, ನಾರಾಯಣಸ್ವಾಮಿ ಬಿನ್ ಲೇಟ್ ವೆಂಕರಾಯಪ್ಪ ಉರುಫ್ ವೆಂಕಟರಾಮಪ್ಪ
ಗ್ರಾಮದ ಹೆಸರು : ಬೊಮ್ಮೇಕಲ್ಲು					
34	161	ಖಾಸಗಿ	ಖುಷ್ಕಿ	0.0202	ಅಕ್ಕಯಮ್ಮ, ದೇವಮ್ಮ ಕೋಂ ಲೇಟ್ ಬಿ.ಕೆಂಪಣ್ಣ
ಗ್ರಾಮದ ಹೆಸರು : ಕೆಂಪದೇನಹಳ್ಳಿ					
35	107	ಖಾಸಗಿ	ಖುಷ್ಕಿ	0.0725	ಗಜೇಂದ್ರಕುಮಾರ್ ಕೆ ವಿ
36	117	ಖಾಸಗಿ	ಖುಷ್ಕಿ	0.0404	ಮೋಹನ್‌ಗೌಡ ಜಿ ಬಿನ್ ಗೋವಿಂದರಾಜು ಆರ್, ಮನೋಜ್‌ಕುಮಾರ್ ಜಿ
ಗ್ರಾಮದ ಹೆಸರು : ದೊಡ್ಡಕೊಂಡ್ರಹಳ್ಳಿ					
37	57/1	ಖಾಸಗಿ	ಖುಷ್ಕಿ	0.0055	ಸುಬ್ಬಣ್ಣ ಬಿನ್ ಮಾಚನಬೋವಿ
38	65	ಸಾಮಾನ್ಯ (ಖಾಸಗಿ/ ಸರ್ಕಾರಿ)	ಖುಷ್ಕಿ/ ಖರಾಬು	2.1425	ಸರಕಾರಿ ಖರಾಬು, ಕೃಷ್ಣಾರೆಡ್ಡಿ ಬಿನ್ ವೆಂಕಟಪ್ಪ, ಮುನಿಯಪ್ಪ ಬಿನ್ ಲೇಟ್ ನಾರಾಯಣಪ್ಪ, ಮುನಿಯಪ್ಪ ಬಿನ್ ಲೇಟ್ ಸುಬ್ಬಣ್ಣ, ಚಿನ್ನಪ್ಪ ಬಿನ್ ಮುನಿಸಾಮಿ, ಎಂ.ಕೃಷ್ಣಪ್ಪ ಬಿನ್ ಮುನಿವಿಲ್ಲನಬೋವಿ, ಚಿಕ್ಕನಾರಾಯಣಸ್ವಾಮಿ ಬಿನ್ ಚಿಕ್ಕಚೌಡಪ್ಪ.
39	72	ಖಾಸಗಿ	ಖುಷ್ಕಿ	0.0707	ಅಂಜಪ್ಪ ಬಿನ್ ಲೇಟ್ ಚೆನ್ನಪ್ಪ, ಹನುಮಂತಪ್ಪ ಬಿನ್ ಲೇಟ್ ಚೆನ್ನಪ್ಪ, ನಾರಾಯಣಪ್ಪ ಬಿನ್ ಲೇಟ್ ಚೆನ್ನಪ್ಪ, ಮುನಿಯಪ್ಪ ಬಿನ್ ಲೇಟ್ ಚೆನ್ನಪ್ಪ, ರಾಮಾಂಜಪ್ಪ ಬಿನ್ ಲೇಟ್ ಚೆನ್ನಪ್ಪ.
40	73	ಖಾಸಗಿ	ಖುಷ್ಕಿ	0.0475	ಚಿಕ್ಕನಾರಾಯಣಸ್ವಾಮಿ ಬಿನ್ ಚಿಕ್ಕಚೌಡಪ್ಪ, ದೊಡ್ಡನಾಗಪ್ಪ ಬಿನ್ ಚಿಕ್ಕಚೌಡಪ್ಪ, ಸಂದಪ್ಪ ಬಿನ್ ಚಿಕ್ಕಚೌಡಪ್ಪ, ಮುನಿನಾಗಪ್ಪ ಬಿನ್ ಚಿಕ್ಕಚೌಡಪ್ಪ, ಚಿಕ್ಕನಾರಾಯಣಸ್ವಾಮಿ ಬಿನ್ ಚಿಕ್ಕಚೌಡಪ್ಪ, ನಾಗಮ್ಮ, ವೆಂಕಟರವಣಪ್ಪ, ಮುನಿಯಮ್ಮ ಮತ್ತು ಇತರರು (73/4, 73/5, 73/6, 73/7, 73/8)
41	84/7	ಖಾಸಗಿ	ಖುಷ್ಕಿ	0.0025	ಭಾಗ್ಯಮ್ಮ ಕೋಂ ಮಂಜುನಾಥ
42	92	ಖಾಸಗಿ	ಖುಷ್ಕಿ	0.1055	ಗೋಪಿನಾಯಕ ಬಿನ್ ಮುನೆಪ್ಪ, ವೆಂಕಟರಾಯಪ್ಪ ಬಿನ್ ಮುನಿವೆಂಕಟಪ್ಪ (92/1, 92/2)
43	96/2	ಖಾಸಗಿ	ಖುಷ್ಕಿ	0.0265	ಸುಬ್ಬಣ್ಣ ಬಿನ್ ಲೇಟ್ ಕಣಿಯಪ್ಪ
ಗ್ರಾಮದ ಹೆಸರು : ಗುಟ್ಟಹಳ್ಳಿ					
44	21/2	ಖಾಸಗಿ	ತರಿ	0.0075	ಕೆ.ಎನ್. ಮಂಜುನಾಥ್ ಬಿನ್ ಲೇಟ್ ನಾರಾಯಣಪ್ಪ, ಕೆ.ರವಿಕುಮಾರ್ ಬಿನ್ ಕೆ.ಕೃಷ್ಣಪ್ಪ
45	22	ಖಾಸಗಿ	ತರಿ	0.0755	ಟಿ.ಗೋಪಾಲರೆಡ್ಡಿ ಬಿನ್ ತಮ್ಮಣ್ಣ, ಕೆ.ಎನ್.ಅವುಲಪ್ಪ.
46	25	ಖಾಸಗಿ	ಖುಷ್ಕಿ	0.0155	ಎಸ್.ಎ.ಪದ್ಮನಾಭಯ್ಯ ಬಿನ್ ಆಡೆಪ್ಪ, ದಿನೇಶ್ ಬಾಬು, ರಾಮಪ್ಪ ಬಿನ್ ಲೇಟ್ ದೊಡ್ಡಕದಿರಪ್ಪ.
47	35	ಖಾಸಗಿ	ಖುಷ್ಕಿ	0.3525	ರೇಖಾ ಕೋಂ ಬಿ.ಕೆ ಸುರೇಶ್ ಬಾಬು, ಕೆ.ಪಿ.ಅಮಲಾ ಕೋಂ ಕೆ.ಎಚ್.ಪ್ರಭಾಕರ್, ಎನ್.ಲಕ್ಷ್ಮಿ ಕೋಂ ಎನ್.ನರಸಿಂಹರಾಜು, ಶಾರದ ಕೋಂ ಗಂಗಾಧರ್, ಅಪ್ಸರ್ ಪಾಷಾ
48	55/1	ಖಾಸಗಿ	ಖುಷ್ಕಿ	0.2475	ಟಿ.ಗೋಪಾಲರೆಡ್ಡಿ, ಗೋಪಾಲರೆಡ್ಡಿ ಬಿನ್ ಲೇಟ್ ತಮ್ಮಣ್ಣ.
49	55/2	ಖಾಸಗಿ	ಖುಷ್ಕಿ	0.2805	ಎಸ್.ಮುನಿರಾಜು ಬಿನ್ ಶ್ರೀನಿವಾಸರೆಡ್ಡಿ
ಗ್ರಾಮದ ಹೆಸರು : ಉಳವಕಾಯಲಹಳ್ಳಿ					
50	12	ಖಾಸಗಿ	ಖುಷ್ಕಿ	0.1055	ಬೀಬಿ ಜಾನ್ ಕೋಂ ಅಬ್ದುಲ್‌ರಜಾಕ್, ಎಂ.ಅಬ್ದುಲ್‌ರಜಾಕ್ ಮಹಮ್ಮದ್ ಬಾಷಾ, ಅನ್ವರ್ ಪಾಷಾ, ಎಂ.ಗೌಸ್ ಪೀರ್
51	15	ಖಾಸಗಿ	ಖುಷ್ಕಿ	0.0151	ಕೆ.ಕೃಷ್ಣಪ್ಪ ಬಿನ್ ಲೇಟ್ ಕರಿಯಪ್ಪ, ಕೆ ಕೃಷ್ಣಪ್ಪ (15/1, 15/2)
52	41	ಖಾಸಗಿ	ಖುಷ್ಕಿ	0.0224	ಪಿ.ಜ್ಯೋತಿ ಕೋಂ ಎನ್.ನಾಗರಾಜ್ (41/1, 41/2, 41/3, 41/4)
53	43	ಖಾಸಗಿ	ಭಾಗಾಯ್ತು	0.036	ಹುಲ್ಲುಬನ್ನಿ ಖರಾಬು, ಭೂರಹಿತರಿಗೆ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆಗಾಗಿ ತಾಲ್ಲೂಕು ಪಂಚಾಯಿತಿಗೆ ಮೀಸಲಿಡಲಾಗಿದೆ. (43/1, 43/2, 43./3, 43/4)
ಗ್ರಾಮದ ಹೆಸರು : ವಡ್ಡಹಳ್ಳಿ					
54	48	ಖಾಸಗಿ	ಖುಷ್ಕಿ	0.0025	ಈರಪ್ಪ
55	51	ಸಾಮಾನ್ಯ (ಖಾಸಗಿ/ ಸರ್ಕಾರಿ)	ಖುಷ್ಕಿ/ ಖರಾಬು	0.2787	ಚಂದ್ರಶೇಖರ ವಿ.ಎಂ. ಬಿನ್ ಮುನಿಯಪ್ಪ ಮತ್ತು ಇತರರು (51/1, 51/2, 51/3)
56	53/2ಬಿ	ಖಾಸಗಿ	ಖುಷ್ಕಿ	0.0325	ನಾಗಮ್ಮ ಕೋಂ ಮುನೆಪ್ಪ
ಗ್ರಾಮದ ಹೆಸರು : ಮೈಲಾಪುರ					
57	37/1	ಖಾಸಗಿ	ಖುಷ್ಕಿ	0.0255	ಮುನಿವೆಂಕಟಪ್ಪ ಬಿನ್ ನಾರಾಯಣಪ್ಪ
58	41	ಖಾಸಗಿ	ಖುಷ್ಕಿ	0.2125	ರಾಮೇಗೌಡ ಬಿನ್ ಆರ್ ವೆಂಕಟೇಗೌಡ
59	43/3	ಖಾಸಗಿ	ಖುಷ್ಕಿ	0.0325	ಮುಳವಾಗಿಲಪ್ಪ ಬಿನ್ ವೆಂಕಟಪ್ಪ, ರಾಮಚಂದ್ರಪ್ಪ ಬಿನ್ ನಾರಾಯಣಪ್ಪ, ನಾರಾಯಣಪ್ಪ ಬಿನ್ ಈರಪ್ಪ, ದಾಸಪ್ಪ ಬಿನ್ ಈರಪ್ಪ, ವೆಂಕಟರಾಯಪ್ಪ ಬಿನ್ ಈರಪ್ಪ.
60	46	ಖಾಸಗಿ	ಖುಷ್ಕಿ	0.0256	ಮಂಜುಳಾ ಕೋಂ ಜೆ.ಲೋಕೇಶ್
ಗ್ರಾಮದ ಹೆಸರು : ನಾಗದೇವನಹಳ್ಳಿ					
61	72	ಸರ್ಕಾರಿ	ಟ್ಯಾಂಕ್	0.2035	ಖರಾಬು ಕೆರೆ
62	90	ಖಾಸಗಿ	ಖುಷ್ಕಿ	0.0075	ಡಿ.ಎನ್.ಆಂಜನೇಯರೆಡ್ಡಿ ಬಿನ್ ನಾರಾಯಣಪ್ಪ, ಸಿ.ವಿ.ರಾಮಚಂದ್ರರೆಡ್ಡಿ ವೈ.ಸಿ. ವೆಂಕಟರೆಡ್ಡಿ
63	91/1	ಖಾಸಗಿ	ಖುಷ್ಕಿ	0.0175	ತಿರುಪಿಳ್ಳಪ್ಪ, ಚಿಕ್ಕದೇವಪ್ಪ ಬಿನ್ ದೊಡ್ಡಚೌಡಪ್ಪ, ನಾರಾಯಣಸ್ವಾಮಿ ಬಿನ್ ಚಿಕ್ಕದೇವಪ್ಪ.
ಗ್ರಾಮದ ಹೆಸರು : ಮಾದಿಕೆರೆ					
64	190	ಖಾಸಗಿ	ಖುಷ್ಕಿ	0.0555	ಸೊನ್ನಮ್ಮ ಕೋಂ ನಾರಾಯಣಸ್ವಾಮಿ
65	191	ಸರ್ಕಾರಿ	ಖರಾಬು	0.0125	ಸರ್ಕಾರಿ ತೋಪು
66	205	ಖಾಸಗಿ	ಖುಷ್ಕಿ	0.0125	ಕೆ.ರಾಜಶೇಖರಾಚಾರಿ ಬಿನ್ ಲೇಟ್ ರಾಮಮೂರ್ತಾಚಾರಿ, ಟಿ.ಆರ್. ರಾಮಾಚಾರಿ ಬಿನ್ ಚಿಕ್ಕನಾರಾಯಣಾಚಾರಿ
67	208	ಖಾಸಗಿ	ಖುಷ್ಕಿ	0.0101	ವೈ.ಕೆ. ರವಣಶ್ರೀ ಕೋಂ ಎಂ.ವೆಂಕಟೇಶ್, ಚಿನ್ನಪ್ಪ ಬಿನ್ ಗಂಗಪ್ಪ ಮತ್ತು ಇತರರು
68	209	ಖಾಸಗಿ	ಖುಷ್ಕಿ	0.2556	ಜಯಮ್ಮ ಕೋಂ ಲೇಟ್ ನಾರೆಪ್ಪ, ಎ.ಕೆ.ವೆಂಕಟರವಣಪ್ಪ ಬಿನ್ ಲೇಟ್ ಗಂಗಲಪ್ಪಚಿನ್ನಪ್ಪ, ಬಿನ್ ಲೇಟ್ ಗಂಗಪ್ಪ, ಶಂಕರಪ್ಪ ಬಿನ್ ನಾರಾಯಣಪ್ಪ, ಎನ್.ವಿ.ಮಮತಾ ಕೋಂ ರಾಧಾಕೃಷ್ಣ (209/6, 209/7, 209/10, 209/11, 209/13, 209/14)
69	212	ಖಾಸಗಿ	ಖುಷ್ಕಿ	0.0075	ಉಷಾ ಕೋಂ ಲೇಟ್ ನಾಗಭೂಷಣ ವೈ.ಕೆ, ಶೋಭಾ.ಎಂ. ಕೋಂ ಮಂಜುನಾಥರೆಡ್ಡಿ (212/2, 212/3)
70	228	ಖಾಸಗಿ	ಭಾಗಾಯ್ತು/ ಎನ್‌ಎಕೆ	0.0606	ಓ.ಎಂ.ಅಶೋಕ್ ಬಾಬು ಬಿನ್ ಲೇಟ್ ಓಲೇಟಿ ಮುನಿಸ್ವಾಮಯ್ಯಶೆಟ್ಟಿ, ಎನ್.ಎ.ಕೆ., ಶ್ರೀನಿವಾಸರೆಡ್ಡಿ ಬಿನ್ ಚಿಕ್ಕವೆಂಕಟರಾಯಪ್ಪ, ಅಶೋಕ್ ಬಾಬು ಓ.ಎಂ. ಬಿನ್ ಓ.ಮುನಿಸ್ವಾಮಯ್ಯಶೆಟ್ಟಿ, ಎಸ್.ಸುರೇಶ್ ಲೇಟ್ ಪಿ.ಷಡಕ್ಷರಿ, ಎಂ.ವಿ.ನಾಗರಾಜ್–ವೆಂಕಟೇಶಪ್ಪ, ಓ.ಎಂ.ಅಶೋಕಬಾಬು ಬಿನ್ ಓ.ಮುನಿಸ್ವಾಮಯ್ಯಶೆಟ್ಟಿ, ಸೊನ್ನಮ್ಮ ಲೇಟ್ ಆರ್.ನಾರಾಯಣಸ್ವಾಮಿ, ವಿ.ಕೃಷ್ಣಪ್ಪ ಬಿನ್ ಚಿಕ್ಕವೆಂಕಟರಾಯಪ್ಪ. (228/3, 228/4, 228/5, 228/6, 228/7)
ಗ್ರಾಮದ ಹೆಸರು : ಚಟ್ಲಪಲ್ಲಿಗಡ್ಡ					
71	11	ಖಾಸಗಿ	ಖುಷ್ಕಿ	0.0505	ಸರ್ಕಾರಿ ಖರಾಬು
72	38	ಖಾಸಗಿ	ಖುಷ್ಕಿ/ ಎನ್‌ಎಕೆ	0.022	ಗವಾಸ್ ಎಂ. ಬಿನ್ ಎಸ್.ಪಿ.ಬಾಷಾ, ಎಸ್.ರಾಮಮೂರ್ತಿ ಬಿನ್ ಸುಬ್ಬರಾಯಪ್ಪ, ಸಿ.ವಿ.ವೆಂಕಟಸ್ವಾಮಿ ಬಿನ್ ಲೇಟ್ ವೆಂಕಟಶಾಮಿಭೋವಿ (38/1, 38/2, 38/3)
73	39	ಖಾಸಗಿ	ಖುಷ್ಕಿ/ ಎನ್‌ಎಕೆ	0.0955	ಎಂ.ಎನ್.ಮುನಿಶಾಮಿರೆಡ್ಡಿ ಬಿನ್ ಲೇಟ್ ಎಂ.ನಾರಾಯಣರೆಡ್ಡಿ, ಸದಾಶಿವರೆಡ್ಡಿ ಬಿನ್ ಲೇಟ್ ಎಂ.ನಾರಾಯಣರೆಡ್ಡಿ, ಕೃಷ್ಣಮೂರ್ತಿ ಬಿನ್ ಯಕ್ಕಲ ಎಸ್.ಎನ್.ಎಂ.ಭಾನುಮತಿ ಕೋಂ ಲೇಟ್ ಎಸ್.ಎನ್.ಮೋಹನರಾಜ್ (39/1, 39/2, 39/3)
74	9	ಖಾಸಗಿ	ಖುಷ್ಕಿ	0.0175	ಲಕ್ಷ್ಮೀಕಾಂತಮ್ಮ ಕೋಂ ನಾರಾಯಣಸ್ವಾಮಿ, ಕೆ.ಎಂ.ಸೀನಪ್ಪ ಬಿನ್ ಲೇಟ್ ಮುನಿವೆಂಕಟಪ್ಪ, ಕೆ.ಎಂ.ಕೃಷ್ಣಪ್ಪ ಬಿನ್ ಲೇಟ್ ಮುನಿವೆಂಕಟಪ್ಪ ಮತ್ತು ಇತರರು
ಗ್ರಾಮದ ಹೆಸರು : ಕಲ್ಲಹಳ್ಳಿ					
75	52	ಸಾಮಾನ್ಯ (ಖಾಸಗಿ/ ಸರ್ಕಾರಿ)	ಖುಷ್ಕಿ/ ಬಿಲ್ಟಪ್ ಏರಿಯಾ	0.0202	ವೆಂಕಟಮ್ಮ ಬಿನ್ ಮಾರೆಪ್ಪ, ಕೆ.ಸಿ.ಶ್ರೀರಾಮರೆಡ್ಡಿ ಬಿನ್ ಚಿಕ್ಕಹನುಮಂತು, ಕೆ.ಸಿ.ಸೊಣ್ಣಪ್ಪರೆಡ್ಡಿ, ವೆಂಕಟಮ್ಮ ಬಿನ್ ಮಾರೆಪ್ಪ ಮತ್ತು ಇತರರು
76	53	ಖಾಸಗಿ	ಖುಷ್ಕಿ	0.0404	ಕೆ.ಆರ್. ನಾರಾಯಣಪ್ಪ ಬಿನ್ ರಾಮಯ್ಯ, ವೆಂಕಟೇಶ್ ಬಿನ್ ಲೇಟ್ ಕೆ.ರಾಮಪ್ಪ ಉರುಫ್ ಶೆಟ್ಟಿಪಲ್ಲಿ ರಾಮಯ್ಯ, ಗೋವಿಂದ್ ಬಿನ್ ಲೇಟ್ ಕೆ. ರಾಮಪ್ಪ ಉರುಫ್ ಶೆಟ್ಟಿಪಲ್ಲಿ ರಾಮಯ್ಯ
ಗ್ರಾಮದ ಹೆಸರು : ಕಾಟಮಾಚನಹಳ್ಳಿ					
77	18	ಸಾಮಾನ್ಯ (ಖಾಸಗಿ/ ಸರ್ಕಾರಿ)	ಖುಷ್ಕಿ/ ಬಿಲ್ಟಪ್ ಏರಿಯಾ/ ಖರಾಬು	0.1111	ಗೋಮಾಳ, ಎಂ.ಚಂದ್ರಪ್ಪ ಬಿನ್ ಲೇಟ್ ಮುನಿಯಪ್ಪ, ಸರ್ಕಾರಿ ಈಜುಕೊಳ ನಿರ್ಮಾಣಕ್ಕೆ ಮೀಸಲಿಡಲಾಗಿದೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು.
78	4	ಖಾಸಗಿ	ಖುಷ್ಕಿ	0.1055	ಎನ್.ಬಚ್ಚಾರೆಡ್ಡಿ ಬಿನ್ ನಾರಾಯಣಪ್ಪ, ಕೆ.ಎನ್.ಬೈರೆಡ್ಡಿ ಬಿನ್ ನಾರಾಯಣಪ್ಪ ಮತ್ತು ಇತರರು
79	5	ಖಾಸಗಿ	ಖುಷ್ಕಿ	0.1012	ಸರ್ಕಾರಿ ತೋಪು
80	6	ಖಾಸಗಿ	ಖುಷ್ಕಿ	0.0055	ಹುಲ್ಲು ಬನ್ನಿ ಖರಾಬು, ಸುಬ್ಬಾರೆಡ್ಡಿ ಬಿನ್ ಮಚಗಿರೆಡ್ಡಿ, ಕೆ.ಪಿ.ನಾರಾಯಣಸ್ವಾಮಿ ಬಿನ್ ಪೆದ್ದಪ್ಪಯ್ಯ, ಒಬಿಸಿ ವಿದ್ಯಾರ್ಥಿ ನಿಲಯಕ್ಕೆ ಮೀಸಲಿಡಲಾಗಿದೆ.
ಗ್ರಾಮದ ಹೆಸರು : ಚಿನ್ನಸಂದ್ರ					
81	ರಸ್ತೆ	ಸರ್ಕಾರಿ	ಖರಾಬು	0.1575	ರಸ್ತೆ
	ಒಟ್ಟು			7.43960000000001	

[F. No. RW/NH-69/Km0.00toKm15.58/22-23/3D]

ಅಭಯ್ ಜೈನ್, ಉಪ ಕಾರ್ಯದರ್ಶಿ

ದಾಸರಹಳ್ಳಿ: ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ಪೀಣ್ಯದಾಸರಹಳ್ಳಿ: ಒಂದೇ ದಿನದಲ್ಲಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 300ಕ್ಕೂ ಹೆಚ್ಚು ಸದಸ್ಯರನ್ನು ನೋಂದಾಯಿಸುವ ಮೂಲಕ ಬೆಂಗಳೂರು ಉತ್ತರದಲ್ಲಿ ಬಿಜೆಪಿ ಸದಸ್ಯತ್ವ ನೋಂದಣಿ ಸಂಚಾಲಕರು ಹಾಗೂ ಶಾಸಕ ಎಸ್.ಮುನಿರಾಜು ಚಾಲನೆ ನೀಡಿದರು.

ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ಬಿಜೆಪಿ ಮಂಡಲ ಘಟಕದಿಂದ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ ನಡೆಯಿತು.

ಬಳಿಕ ಶಾಸಕ ಎಸ್.ಮುನಿರಾಜು ಮಾತನಾಡಿ, '2014 ರಲ್ಲಿ ಸದಸ್ಯತ್ವ ನೋಂದಣಿಯಲ್ಲಿ ಇಡೀ ರಾಜ್ಯದಲ್ಲೇ ದಾಸರಹಳ್ಳಿ ಕ್ಷೇತ್ರ ಮುಂಚೂಣಿಯಲ್ಲಿತ್ತು. ಅದೇ ರೀತಿ ಈ ಸಲವೂ ಒಂದೂವರೆ ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿಹೊಂದಲಾಗಿದೆ' ಎಂದರು.

ಮಂಡಲ ಅಧ್ಯಕ್ಷ ಮೇದರಹಳ್ಳಿ ಸೋಮಶೇಖರ್, ದಾಸರಹಳ್ಳಿ ಸಂಚಾಲಕ ವಿನೋದ್ ಗೌಡ, ಪಾಲಿಕೆ ಮಾಜಿ ಸದಸ್ಯರಾದ ಉಮಾದೇವಿ ನಾಗರಾಜ್, ಶಶಿ ಶಿವಕುಮಾರ್, ಬಿಜೆಪಿ ಮುಖಂಡರಾದ ಅಬ್ಬಿಗೆರೆ ಮಂಜುನಾಥಗೌಡ, ಬಿ ಟಿ ಶ್ರೀನಿವಾಸ್, ಗಂಗಾಧರ್, ಮಧುಸೂದನ್ ಇದ್ದರು.

ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಮಾರ್ಗರೇಟ್ ಆಳ್ವ ಹೇಳಿಕೆ

ನೌಕರರು ಸಂವಿಧಾನಕ್ಕೆ ಬದ್ಧರಾಗಿರಬೇಕು

ಪ್ರಜಾವಾಣಿ ವಾರ್ತೆ



ಕರ್ನಾಟಕ ರಾಜ್ಯ ಸರ್ಕಾರಿ ಮಹಿಳೆಯರ ನೌಕರ ಸಂಘ ನಗರದಲ್ಲಿ ಗುರುವಾರ ಆಯೋಜಿಸಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಸಚಿವ ದಿನೇಶ್ ಗುಂಡೂರಾವ್ 'ವೀಣಾ ಟೀಚರ್' ಶೈಕ್ಷಣಿಕ ಕಿರುಚಿತ್ರ ಬಿಡುಗಡೆ ಮಾಡಿದರು. ನಿವೃತ್ತ ಐಎಎಸ್ ಅಧಿಕಾರಿ ಬಿ.ಆರ್. ಮಮತಾ, ಸಾಹಿತಿ ರಾಧಾಕೃಷ್ಣ ಕೆ.ಇ., ಮಾಜಿ ರಾಜ್ಯಪಾಲರಾದ ಮಾರ್ಗರೇಟ್ ಆಳ್ವ, ಮಾಜಿ ಸಚಿವೆ ರಾಣಿ ಸತೀಶ್ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹಾಜರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಆರ್‌ಎಸ್‌ಎಸ್ ಶಾಖೆಗಳಿಗೆ ಸರ್ಕಾರಿ ನೌಕರರು ಹೋಗಬಹುದು ಎಂದು ಅಧಿಕೃತವಾಗಿ ಸುತ್ತೋಲೆ ಹೊರಡಿಸಿರುವುದು ತಪ್ಪು ಎಂದು ಮಾಜಿ ರಾಜ್ಯಪಾಲರಾದ ಮಾರ್ಗರೇಟ್ ಆಳ್ವ ತಿಳಿಸಿದರು.

ರಾಜ್ಯ ಸರ್ಕಾರಿ ಮಹಿಳೆಯರ ನೌಕರ ಸಂಘ ಗುರುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಒಮ್ಮೆ ಸರ್ಕಾರಿ ನೌಕರರಾಗಿ ನೇಮಕಗೊಂಡ ಮೇಲೆ ಸಂವಿಧಾನಕ್ಕೆ ಬದ್ಧರಾಗಿ ಕೆಲಸ ಮಾಡಬೇಕು. ಯಾವುದೇ ಧರ್ಮ, ಜಾತಿ, ಪಕ್ಷಗಳಿಗೆ ಸೀಮಿತರಾಗದೇ ವೃತ್ತಿ ನಿರ್ವಹಿಸಬೇಕು. ವೈಯಕ್ತಿಕ ನಿಲುವುಗಳು ಬೇರೆ. ಅದನ್ನು ಸರ್ಕಾರವೇ ಹೇಳಬಾರದು. ಇದು ನೌಕರರ ನಡುವೆ ಭೇದವನ್ನು ಉಂಟು ಮಾಡಲಿದೆ' ಎಂದು ತಿಳಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಮಹಿಳೆಯರು ಪುರುಷರಿಗಿಂತ ಮುಂದೆ ಇದ್ದಾರೆ. ಅದನ್ನು ಒಪ್ಪಿಕೊಳ್ಳುವ ಮನಃಸ್ಥಿತಿಯನ್ನು ಪುರುಷರು ಬೆಳೆಸಿಕೊಳ್ಳಬೇಕು. ಪುರುಷರಂತೆ ಮಹಿಳೆಯರೂ ಕೆಲವು ತಪ್ಪುಗಳನ್ನು ಮಾಡುತ್ತಿರಬಹುದು. ತಪ್ಪಾದಾಗ ತಿದ್ದುವ ಕೆಲಸ ಮಾಡಬಹುದು. ಆದರೆ, ಮಹಿಳೆ ಎನ್ನುವ ಕಾರಣಕ್ಕೆ ಶೋಷಣೆ, ಅಪಹಾಸ್ಯ ಮಾಡಬಾರದು' ಎಂದು ತಿಳಿಸಿದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ತನ್ನ ನಿವೃತ್ತಿ ಹಣ ₹70 ಲಕ್ಷವನ್ನು ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಗೆ ನೀಡಿದ ಶಿಕ್ಷಣ ಮಾತೆ ಲೂಸಿಯಮ್ಮ ಅವರನ್ನು ಸನ್ಮಾನಿಸಲಾಯಿತು. 'ದೇಶದ ಅಭಿವೃದ್ಧಿ ಪಥದಲ್ಲಿ ಸರ್ಕಾರಿ ಮಹಿಳಾ ನೌಕರರ ಕೊಡುಗೆ' ಬಗ್ಗೆ ನಿವೃತ್ತ ಐಎಎಸ್ ಅಧಿಕಾರಿ ಬಿ.ಆರ್. ಮಮತಾ ಮಾತನಾಡಿದರು.

ಶೈಕ್ಷಣಿಕ ಕಿರುಚಿತ್ರ 'ವೀಣಾ ಟೀಚರ್', 'ಸಂಕಲ್ಪ' ಪುಸ್ತಕ ಬಿಡುಗಡೆ ಮಾಡಲಾಯಿತು. ಸಾಧಕ ನೌಕರರನ್ನು ಸನ್ಮಾನಿಸಲಾಯಿತು.

ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಮಾಜಿ ಸಚಿವೆ ರಾಣಿ ಸತೀಶ್, ಸಾಹಿತಿ ರಾಧಾಕೃಷ್ಣ ಕೆ.ಇ., ಮಂಡ್ಯದ ಹೆಚ್ಚುವರಿ ಜಿಲ್ಲಾಧಿಕಾರಿ ಎಚ್.ಎಲ್. ನಾಗರಾಜ್, ಸಾವಿತ್ರಿಬಾಯಿ ಪುಲೆ ಶಿಕ್ಷಕರ ಸಂಘದ ರಾಷ್ಟ್ರೀಯ ಅಧ್ಯಕ್ಷೆ ಲತಾ ಮುಳ್ಳೂರ, ಇತಿಹಾಸ ಪ್ರಾಧ್ಯಪಕರಾದ ಅನುರಾಧಾ, ಕೊಪ್ಪಳ ಸಿಇಒ ಮಲ್ಲಿಕಾರ್ಜುನ್, ರಾಜ್ಯ ಸರ್ಕಾರಿ ಮಹಿಳೆಯರ ನೌಕರ ಸಂಘದ ಅಧ್ಯಕ್ಷೆ ರಮಾ ಆರ್., ಪ್ರಧಾನ ಕಾರ್ಯದರ್ಶಿ ಸಿ.ವಿ. ಶೈಲಜಾ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ಬೆಂಗಳೂರಿನ ಆಸುಪಾಸು ಐದು ಟೌನ್‌ಶಿಪ್ - ಸಚಿವ ಜಮೀರ್

ಬೆಂಗಳೂರು: 'ಭೂಸ್ವಾಧೀನ ವಿಚಾರದಲ್ಲಿ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬೆಂಗಳೂರು ಹೊರವಲಯದ ಐದು ಕಡೆ ಗೃಹ ಮಂಡಳಿ ವತಿಯಿಂದ ಟೌನ್‌ಶಿಪ್ ನಿರ್ಮಿಸಲು ತೀರ್ಮಾನಿಸಲಾಗಿದೆ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ಈ ಸಂಬಂಧ ಗೃಹ ಮಂಡಳಿ ಕಚೇರಿಯಲ್ಲಿ ಶಾಸಕರ ಜತೆ ಗುರುವಾರ ಸಭೆ ನಡೆಸಿದ ಸಚಿವರು, 'ಟೌನ್‌ಶಿಪ್ ನಿರ್ಮಾಣಕ್ಕೆ ಜಮೀನು ಸ್ವಾಧೀನ ನಡಸುವ ಸಂಬಂಧ ರೈತರ ಅದಾಲತ್ ನಡೆಸಲಾಗುವುದು. ರೈತರ ಒಪ್ಪಿಗೆ ಪಡೆದ ನಂತರವೇ ಮುಂದಿನ ಪ್ರಕ್ರಿಯೆ ನಡೆಸಲಾಗುವುದು' ಎಂದರು.

'ದಾಬಸ್ ಪೇಟೆ, ಸೋಲೂರು, ಹೊಸಕೋಟೆ, ಬಿಡದಿ, ರಾಮನಗರ ಭಾಗದಲ್ಲಿ ಜಮೀನು ಲಭ್ಯತೆ ಆಧಾರದಲ್ಲಿ ಟೌನ್‌ಶಿಪ್ ನಿರ್ಮಿಸಲು ತೀರ್ಮಾನಿಸಲಾಗಿದೆ. ಅದಕ್ಕೂ ಮೊದಲು ಸ್ಥಳೀಯ ರೈತರ ಅದಾಲತ್ ನಡೆಸುವ ಬಗ್ಗೆ ಶಾಸಕರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದರು.

'ರೈತರು ಸ್ವಯಂಪ್ರೇರಿತರಾಗಿ 50:50 ಹಂಚಿಕೆ ಆಧಾರದಲ್ಲಿ ಜಮೀನು ನೀಡಲು ಒಪ್ಪಿದರೆ ಭೂಸ್ವಾಧೀನ ಮಾಡಿಕೊಳ್ಳಲು ನಮ್ಮ ವಿರೋಧ ಇಲ್ಲ' ಎಂದು ಸಭೆಯಲ್ಲಿದ್ದ ಶಾಸಕರಾದ ಹೊಸಕೋಟೆಯ ಶರತ್ ಬಚ್ಚೇಗೌಡ, ಮಾಗಡಿಯ ಎಚ್.ಸಿ. ಬಾಲಕೃಷ್ಣ, ನೆಲಮಂಗಲದ ಎನ್. ಶ್ರೀನಿವಾಸ್, ದೊಡ್ಡಬಳ್ಳಾಪುರದ ಧೀರಜ್ ಮುನಿರಾಜು ಹೇಳಿದರು.

ಐದು ಕಡೆ ತಲಾ ಎರಡು ಸಾವಿರ ಎಕರೆ ಜಾಗದಲ್ಲಿ ಟೌನ್‌ಶಿಪ್ ನಿರ್ಮಾಣಕ್ಕೆ ಆದಷ್ಟು ಬೇಗ ಪ್ರಕ್ರಿಯೆ ಪ್ರಾರಂಭಗೊಳಿಸಲು ಗೃಹ ಮಂಡಳಿಯ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಆಯುಕ್ತೆ ಕವಿತಾ ಮಣ್ಣಿಕೇರಿ ಇದ್ದರು.



ಬೆಂಗಳೂರು ಸೈಬರ್ ವಂಚನೆಯ ಹಬ್: ದಯಾನಂದ

ಬೆಂಗಳೂರು: 'ಬೆಂಗಳೂರು ನಗರವು ಸೈಬರ್ ವಂಚನೆಗಳ ಹಬ್ ಆಗಿ ಬದಲಾಗುತ್ತಿದ್ದು ವಿದ್ಯಾವಂತರು, ವೃತ್ತಿಪರರೇ ಹೆಚ್ಚಾಗಿ ವಂಚನೆಗೆ ಒಳಗಾಗುತ್ತಿದ್ದಾರೆ. ಸೈಬರ್ ಜಗತ್ತಿನಲ್ಲಿ ವ್ಯವಹರಿಸುವಾಗ ಹೆಚ್ಚು ಎಚ್ಚರದಿಂದ ಇರಬೇಕು' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಸಲಹೆ ನೀಡಿದರು.

ಬೆಂಗಳೂರು ಆಕಾಶವಾಣಿ, ಮಂಗಳೂರಿನ ಮೀಡಿಯಾ ಅಲ್ಯುಮ್ನಿ ಅಸೋಸಿಯೇಷನ್ ಆಫ್ ಮಂಗಳೂರು ಗೋಲ್ಡ್ (ಮ್ಯಾಮ್) ಮತ್ತು ನಗರದ ಶಾರದಾ ವಿಕಾಸ ಟ್ರಸ್ಟ್ ಸಹಯೋಗದಲ್ಲಿ ರಾಕ್‌ಫೋರ್ಡ್ ಗ್ಲೋಬಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸೈಬರ್ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸೈಬರ್ ಅಪರಾಧ ನಡೆದ ತಕ್ಷಣವೇ ನಮಗೆ ಮಾಹಿತಿ ನೀಡಿದರೆ, ವಂಚಿಸಿದ ಹಣವನ್ನು ವಾಪಸ್ ಪಡೆಯಬಹುದು. ವಂಚನೆಗೆ ಒಳಗಾಗಿರುವುದು ಗೊತ್ತಾದ ತಕ್ಷಣವೇ, 1930 ಸಹಾಯವಾಣಿಗೆ ಕರೆ ಮಾಡಬಹುದು. ಎನ್‌ಸಿಆರ್‌ಪಿ ಪೋರ್ಟಲ್‌ನಲ್ಲೂ ದೂರು ನೀಡಬಹುದು' ಎಂದು ಹೇಳಿದರು.

ಬೆಂಗಳೂರು ಆಕಾಶವಾಣಿಯ ಸಹಾಯಕ ನಿರ್ದೇಶಕ ಎ.ಎಸ್. ಶಂಕರನಾರಾಯಣ, ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾದ ಹಿರಿಯ ನಿರ್ದೇಶಕ ಕೆ.ವೆಂಕಟೇಶ್ ಮೂರ್ತಿ, ಬೆಂಗಳೂರು ಉತ್ತರ ಸೆನ್ ಠಾಣೆ ಇನ್‌ಸ್ಪೆಕ್ಟರ್ ಶಿವರತ್ನ ಎಸ್. ಮತ್ತು ಆಲ್ಟ್‌ಯನ್ ಟೆಕ್ನಾಲಜೀಸ್ ಆಡಳಿತ ನಿರ್ದೇಶಕ ತರುಣ್ ಕೃಷ್ಣಮೂರ್ತಿ ಅವರು ಸೈಬರ್ ಅಪರಾಧಗಳ ಬಗ್ಗೆ ವಿವರಿಸಿದರು.

ಶಾರದಾ ವಿಕಾಸ ಟ್ರಸ್ಟ್ ಅಧ್ಯಕ್ಷ ಡಿ.ವಿ.ವೆಂಕಟಾಚಲಪತಿ, ಏವಿಯೇಷನ್ ಅಕಾಡೆಮಿ ಸಿಇಒ ಶ್ರೀಲತಾ ದಿವಾಕರ್, ಮ್ಯಾಮ್ ಅಧ್ಯಕ್ಷ ನವೀನ್ ಅಮ್ಮೆಂಬಳ, ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕಿ ಫ್ಲೋರಿನ್ ರೋಜ್ ಭಾಗವಹಿಸಿದ್ದರು.

ನ್ಯೂಜೆರ್ಸಿಯ ಆದಿ ಚುಂಚನಗಿರಿ ಮಠಕ್ಕೆ ಡಿ.ಕೆ.ಶಿವಕುಮಾರ್ ಭೇಟಿ

ಪ್ರಜಾವಾಣಿ ವಾರ್ತೆ



ನ್ಯೂಜೆರ್ಸಿಯ ಫ್ರಾಂಕ್ಲಿನ್ ಟೌನ್‌ಶಿಪ್‌ನಲ್ಲಿ 20 ಎಕರೆಯಲ್ಲಿ ನಿರ್ಮಾಣ ಗೊಳ್ಳುತ್ತಿರುವ ಆದಿ ಚುಂಚನಗಿರಿ ಮಠಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಅವರ ಪತ್ನಿ ಉಷಾ ಶಿವಕುಮಾರ್ ಭೇಟಿ ನೀಡಿದರು. ಶ್ರೀಶೈಲನಾಥ ಸ್ವಾಮೀಜಿ, ದಯಾಶಂಕರ್ ಅಡಪ ಇದ್ದರು

ಬೆಂಗಳೂರು: ನ್ಯೂಜೆರ್ಸಿಯ ಫ್ರಾಂಕ್ಲಿನ್ ಟೌನ್‌ಶಿಪ್‌ನಲ್ಲಿ 20 ಎಕರೆಯಲ್ಲಿ ನಿರ್ಮಾಣ ಗೊಳ್ಳುತ್ತಿರುವ ಆದಿ ಚುಂಚನಗಿರಿ ಮಠಕ್ಕೆ ಭೇಟಿ ನೀಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕನ್ನಡಿಗರು ಮತ್ತು ಆದಿಚುಂಚನಗಿರಿ ಮಠದ ಭಕ್ತರು ಭೈರವ ನಾಥ ಪೀಠ ಸ್ಥಾಪನೆಗೆ ಆರ್ಥಿಕ ಸಹಾಯ ಮಾಡುವಂತೆ ಮನವಿ ಮಾಡಿದ್ದಾರೆ.

'ಬಾಲಗಂಗಾಧರನಾಥ ಸ್ವಾಮೀಜಿ ಮಹಾರಾಷ್ಟ್ರದಲ್ಲಿ ಸ್ಥಾಪಿಸಿದ್ದ ಭೈರವನಾಥ ದೇವಾಲಯಕ್ಕೆ ಹಿಂದೆ ನಾನು ಭೇಟಿ ನೀಡಿದ್ದೆ. ಅತ್ಯಂತ ಶಕ್ತಿಶಾಲಿಯಾದ ದೇವಸ್ಥಾನವನ್ನು ನ್ಯೂಜೆರ್ಸಿಯಲ್ಲಿ ಸ್ಥಾಪಿಸಲು ಅಮೆರಿಕ ಸರ್ಕಾರ ಅನುಮತಿ ನೀಡಿರುವುದೇ ವಿಸ್ಮಯ' ಎಂದಿದ್ದಾರೆ.

'ನಿರ್ಮಲಾನಂದನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಈ ಕನಸು ಈಡೇರುತ್ತಿದೆ. ಆಧ್ಯಾತ್ಮದ ಪರಂಪರೆಯನ್ನು ರಕ್ಷಿಸಿ, ಉತ್ತೇಜನ ನೀಡಲು ಅವರ ಮಾರ್ಗದರ್ಶನದಲ್ಲಿ ಈ ಯೋಜನೆ ಪ್ರಗತಿ ಸಾಧಿಸುತ್ತಿದೆ. ಇದರ ಶಂಕುಸ್ಥಾಪನೆಗೆ ನನ್ನನ್ನು ಆಹ್ವಾನಿಸಿದ್ದರು' ಎಂದರು.

ದಕ್ಷಿಣ ಭಾರತದ ದೇವಾಲಯಗಳ ವಾಸ್ತುಶಿಲ್ಪವಾಗಿರುವ ಆಗಮ ಶಾಸ್ತ್ರದಂತೆ ಈ ಮಠವನ್ನು ನಿರ್ಮಾಣ ಮಾಡಲಾಗುತ್ತಿದ್ದು, ಯೋಜನೆ ಕುರಿತು ಮುಖ್ಯ ವಾಸ್ತುಶಿಲ್ಪಿ ಬಾಬು ಕೀಲಾರ ಅವರು ಶಿವಕುಮಾರ್‌ಗೆ ಮಾಹಿತಿ ನೀಡಿದರು.

ಪ್ರಾದೇಶಿಕ ಅಸಮತೋಲನ: ಸಿಸಿಡಿಐ ಅಧ್ಯಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ಲಭ್ಯವಿರುವ ಅಂಕಿಅಂಶಗಳ ಆಧಾರದಲ್ಲಿ ಎಲ್ಲ ತಾಲ್ಲೂಕುಗಳ ಹಿಂದುಳಿದಿರುವಿಕೆಯನ್ನು ಅಧ್ಯಯನ ಮಾಡಿ 'ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ' (ಸಿಸಿಡಿಐ) ಗುರುತಿಸಲು ರಾಜ್ಯ ಸರ್ಕಾರ ರಚಿಸಿರುವ ಆರ್ಥಿಕ ತಜ್ಞ ಪ್ರೊ. ಆರ್. ಗೋವಿಂದ ರಾವ್ ಅಧ್ಯಕ್ಷತೆಯ 'ಕರ್ನಾಟಕ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿ' ಕೆಲಸ ಆರಂಭಿಸಿದೆ.

ಈ ಸಮಿತಿಗೆ ಸೂರ್ಯನಾರಾಯಣ ಹಿಲ್ಲೆಮನೆ, ಚಿಕ್ಕಮಗಳೂರಿನ ಎ.ಆರ್. ವಾಸವಿ, ಕಲಬುರಗಿಯ ವಾಸುದೇವ ಸೇಡಂ ಧಾರವಾಡದ ಎಸ್.ಜಿ. ಬಾಗಲಕೋಟೆ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಡಿ.ಎಂ. ನಂಜುಂಡಪ್ಪ ವರದಿಯು ಸುಮಾರು 22 ವರ್ಷಗಳಷ್ಟು ಹಳೆಯದು. ಆಗ ರಾಜ್ಯದಲ್ಲಿ 175 ತಾಲ್ಲೂಕುಗಳಿದ್ದವು. ಪ್ರಸ್ತುತ 240 ತಾಲ್ಲೂಕುಗಳಿವೆ. ಈ ತಾಲ್ಲೂಕುಗಳ ಅಭಿವೃದ್ಧಿ ಹಂತವನ್ನು ಪರಿಶೀಲಿಸಿ ಹೊಸದಾಗಿ ಸಿಸಿಡಿಐ ಗುರುತಿಸುವ ಹೊಣೆಯನ್ನು ಈ ಸಮಿತಿಗೆ ನೀಡಲಾಗಿದೆ.

ಏಳನೇ ವೇತನ ಆಯೋಗ ಕಾರ್ಯನಿರ್ವಹಿಸುತ್ತಿದ್ದ ಅರಮನೆ ರಸ್ತೆಯಲ್ಲಿ ಔಷಧಿ ನಿಯಂತ್ರಕರ ಕಚೇರಿಯ ಮೂರನೇ ಮಹಡಿಯಲ್ಲಿ ಸಮಿತಿಯ ಕಚೇರಿ ಉದ್ಘಾಟನೆ ಬುಧವಾರ ನಡೆಯಿತು. ಯೋಜನಾ ಇಲಾಖೆಯ ಪ್ರದೇಶಾಭಿವೃದ್ಧಿ ಮಂಡಳಿ ನಿರ್ದೇಶಕ ಡಿ. ಚಂದ್ರಶೇಖರಯ್ಯ ಇದ್ದರು.

ನಂಜುಂಡಪ್ಪ ವರದಿ ಆಧರಿಸಿ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ₹61,330 ಕೋಟಿ ಅನುದಾನ ಒದಗಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2023ರ ಚಳಿಗಾಲದ ಅಧಿವೇಶನ ದಲ್ಲಿ ಸದನಕ್ಕೆ ತಿಳಿಸಿದ್ದರು. ಅದೇ ಸಂದರ್ಭದಲ್ಲಿ, ನಂಜುಂಡಪ್ಪನವರ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿಯನ್ನು ಅಧ್ಯಯನ ಮಾಡಲು ಉನ್ನತ ಸಮಿತಿ ರಚಿಸುವುದಾಗಿ ಅವರು ಘೋಷಿಸಿದ್ದರು. ಅದರ ಮುಂದುವರಿದ ಭಾಗವಾಗಿ ಹೊಸ ಸಮಿತಿ ರಚಿಸಲಾಗಿದೆ.

ಮುಂದಿನ ಬಜೆಟ್‌ನಲ್ಲಿ ಎನ್‌ಎಲ್‌ಟಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಪರಿವರ್ತನೆಯ ಮೂಲಕ ಗ್ರಾಮ ಪಂಚಾಯತಿಗಳ ಸಾಮರ್ಥ್ಯ ವೃದ್ಧಿಗಾಗಿ ದಿಕ್ಸೂಚಿ ಕಲಿಕಾ ತಂತ್ರಜ್ಞಾನ (ಎನ್‌ಎಲ್‌ಟಿ- ನ್ಯಾವಿಗೇಟೆಡ್ ಲರ್ನಿಂಗ್ ಟೆಕ್ನಾಲಜಿ) ಮತ್ತು ಇತರ ಸೀಮಾತೀತ ತಂತ್ರಜ್ಞಾನಗಳನ್ನು ಬಳಸುವ ಯೋಜನೆಯನ್ನು ರಾಜ್ಯದ ಮುಂದಿನ ಬಜೆಟ್‌ನಲ್ಲಿ ಅಳವಡಿಸಲು ಪ್ರಯತ್ನಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಭರವಸೆ ನೀಡಿದರು.

ನಗರದ ಅರಮನೆ ಮೈದಾನದ ಕೆ.ಸಿ. ಕ್ಲಬ್ ಆವರಣದಲ್ಲಿ ಕೃಷಿ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘ ಆಯೋಜಿಸಿದ್ದ 'ಅಗ್ರಿ ಬೆಸ್ಟ್ ಕ್ಲಬ್-75'ರಲ್ಲಿ ಮಾತನಾಡಿದ ಅವರು, ಈ ಬಗ್ಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ಸಚಿವರ ಜೊತೆಗೂ ಚರ್ಚಿಸುವುದಾಗಿ ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘವು ಇಂಥ ವಿಚಾರಗಳನ್ನು ತನ್ನ ಕಾರ್ಯಕ್ಷೇತ್ರದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಸಂಪೂರ್ಣ ಸ್ವರಾಜ್ ಫೌಂಡೇಶನ್ ಸಂಸ್ಥಾಪಕ ಹಾಗೂ ನಿರ್ವಾಹಕ ಟ್ರಸ್ಟಿ ಶಂಕರ ಕೆ. ಪ್ರಸಾದ್ ಮಾತನಾಡಿ, 'ಎನ್‌ಎಲ್‌ಟಿ ಯಂತಹ ಉಪಕ್ರಮಗಳು ಗ್ರಾಮೀಣ ಸಮುದಾಯಗಳಲ್ಲಿ ಸಕಾರಾತ್ಮಕ ಪರಿಣಾಮ ಬೀರುತ್ತವೆ' ಎಂದು ಹೇಳಿದರು.

ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕೆ.ಎನ್.ಗೋಪಾಲ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ರೇಸ್

ಫಿನಾಮಿನನ್ ಗೆಲ್ಲುವ ನಿರೀಕ್ಷೆ

ಎಫ್.ಕೆ.ಇರಾನಿ ಮೆಮೋರಿಯಲ್ ಮಿಲಿಯನ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಿನಾಮಿನನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಪೋಲಾರ್ ವಿಂಡ್ 5, ವರ್ದಾನ್ 4, ವೈಟ್ ಲೈಸ್ 11
2ನೇ ರೇಸ್: ಓ ಮಂಚಲಿ 3, ಸಿಯೋಲ್ 2, ನ್ಯಾಚುರಲ್ ಒನ್ 1
3ನೇ ರೇಸ್: ಫಾರೆಸ್ಟ್ ವ್ಯೂ 6, ಕಾನ್ಫಿಡೆಂಟ್ ಗೇಮ್ 1, ಆರಿಲೆ 3
4ನೇ ರೇಸ್: ಜೆರ್ಸಿ ಕಿಂಗ್ 3, ಇಂಡಿಯನ್ ಬ್ಲೂಸ್ 1, ದಿ ಫ್ಲೈಯಿಂಗ್ ಫೀಟ್ 5
5ನೇ ರೇಸ್: ಫಿನಾಮಿನನ್ 2, ರಾಡ್ನಿ 6, ಡಿವೈನ್ ಆರ್ಟ್ 3
6ನೇ ರೇಸ್: ಕ್ಸಾರ್ 3, ಟಾಮ್ ಕ್ರೂಸರ್ 4, ಕೋರ್ಟ್ ಜೆಸ್ಟರ್ 6
7ನೇ ರೇಸ್: ಸಿಲ್ವರ್ ಸ್ಪ್ರಿಂಗ್ 1, ಟವರ್ ಕ್ವೆಸ್ಟ್ 7, ಸ್ಪಿರಿಚ್ಯುಯಲ್ ಫೋರ್ಸ್ 6

ಉತ್ತಮ ಬೆಟ್: ಜೆರ್ಸಿ ಕಿಂಗ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ವಿಶ್ವಕರ್ಮ ಪ್ರದರ್ಶನ: ಜೇಡಿ ಮಣ್ಣಿಗೆ ಬೇಕು ಮೀಸಲು ಕೆರೆ, ರಾಜ್ಯದಲ್ಲಿ ಬಿದಿರು, ಈಚಲು ಗರಿಗೂ ಕೊರತೆ

ಕುಶಲಕರ್ಮಿ ಕಸುಬುಗಳ ಸವಾಲು ಅನಾವರಣ

ಪ್ರಜಾವಾಣಿ ವಾರ್ತೆ



ಮೇಳದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಬಿದಿರಿನ ಬುಟ್ಟಿ ಖರೀದಿಸಿದರು



ಜೇಡಿ ಮಣ್ಣಿನಲ್ಲಿ ತಯಾರಿಸಿದ ಕುಂಬಾರಿಕೆಯ ಸಾಮಗ್ರಿಗಳನ್ನು ಪ್ರದರ್ಶಿಸಿದ ಎಸ್‌.ಬಿ. ಹಾಲೇಶ್

ಬೆಂಗಳೂರು: ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಅಭಿವೃದ್ಧಿ ಮತ್ತು ಸೌಲಭ್ಯ ಕಚೇರಿ (ಎಂಎಸ್‌ಎಂಇ) ಆವರಣದಲ್ಲಿ ಗುರುವಾರದಿಂದ ಆರಂಭವಾದ ಮೂರು ದಿನಗಳ ಪ್ರಧಾನಮಂತ್ರಿ ವಿಶ್ವಕರ್ಮ ಪ್ರದರ್ಶನ ಮತ್ತು ವ್ಯಾಪಾರ ಮೇಳ–2024 ಕರಕುಶಲ ಸಾಮಗ್ರಿಗಳ ಪ್ರದರ್ಶನದ ಜೊತೆಗೆ ಕುಶಲಕರ್ಮಿ ಕಸುಬುಗಳ ಸಮಸ್ಯೆಗಳನ್ನೂ ಅನಾವರಣಗೊಳಿಸಿತು.

ಬಿದಿರು, ಜೇಡಿಮಣ್ಣು, ಮರ, ಲೋಹದ ಸಾಮಗ್ರಿಗಳು, ಕೈಮಗ್ಗದ ಖಾದಿ ಬಟ್ಟೆಗಳು, ಚರ್ಮದ ಪಾದರಕ್ಷೆಗಳು, ಕಲಾತ್ಮಕ ಮೀನಿನ ಬಲೆಗಳು, ಕಬ್ಬಿಣದ ಕೃಷಿ ಸಲಕರಣೆಗಳು, ಬಾಳೆ ದಿಂಡಿನಲ್ಲಿ ತಯಾರಿಸಿದ ಪರಿಕರಗಳು, ಈಚಲು ಪೊರಕೆಗಳು ಮೇಳದಲ್ಲಿ ಗಮನ ಸೆಳೆದವು. ಕುಶಲಕರ್ಮಿಗಳ ಕೈಚಳಕದಲ್ಲಿ ಮೂಡಿದ ಪ್ರತಿ ಸಾಮಗ್ರಿಗಳಲ್ಲೂ ವಿಶೇಷ ಛಾಪು ಕಾಣುತ್ತಿತ್ತು. ಆ ವಿಶೇಷತೆಯ ಹಿಂದಿನ ಶ್ರಮದ ಕಥೆ ಮಾತ್ರ ಭಿನ್ನವಾಗಿದ್ದವು.

ಮೇಳದಲ್ಲಿದ್ದ 56 ಮಳಿಗೆಗಳಲ್ಲಿ ಹೆಚ್ಚಿನ ಮಳಿಗೆಗಳು ಕುಂಬಾರರ ಕೈಚಳಕದಲ್ಲಿ ಮೂಡಿದ ಮಡಕೆ, ಕುಡಿಕೆ, ಮ್ಯಾಜಿಕ್ ದೀಪ, ಗಣಪತಿ ದೀಪ, ವಾಸ್ತು ದೀಪ, ನೀರಿನ ಬಾಟಲ್, ಹೂ ಬಾನಿ, ಹೂಜಿಗಳು, ಚಹ ಲೋಟಗಳು, ನೀರಿನ ಲೋಟಗಳು, ಬಗೆಬಗೆಯ ಅಲಂಕಾರದ ಬುದ್ಧನ ವಿಗ್ರಹಗಳು ಕಣ್ಮನ ಸೆಳೆದವು.

ಪ್ರತಿ ಹೋಬಳಿಗೂ ಬೇಕು ಒಂದು ಕೆರೆ: 'ಉದ್ಯೋಗ ಖಾತ್ರಿ ಸೇರಿದಂತೆ ವಿವಿಧ ಯೋಜನೆಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ದೊರೆತಿದೆ. ಯೋಜನೆ ಬಳಸಿಕೊಂಡು ಎಲ್ಲ ಕೆರೆಗಳ ಹೂಳು ತೆಗೆಯಲಾಗಿದೆ. ಇದರಿಂದ ಜೇಡಿ ಮಣ್ಣು ಸಿಗುತ್ತಿಲ್ಲ. ಅದಕ್ಕಾಗಿ ಪ್ರತಿ ಹೋಬಳಿಯಲ್ಲೂ ಕನಿಷ್ಠ ಒಂದು ಕೆರೆ ಮೀಸಲಿಡಬೇಕು. ಸಿದ್ಧಪಡಿಸಿದ ಸಾಮಗ್ರಿ ಸುಡಲು ರಿಯಾಯಿತಿ ದರದಲ್ಲಿ ಅರಣ್ಯ ಇಲಾಖೆ ಕಟ್ಟಿಗೆ ಪೂರೈಸಬೇಕು. ಈ ಎರಡು ಕೆಲಸ ಆಗದಿದ್ದರೆ ಕೆಲ ವರ್ಷಗಳಲ್ಲೇ ಕುಂಬಾರಿಕೆ ಕಲೆ ನಶಿಸಲಿದೆ' ಎನ್ನುತ್ತಾರೆ ಶಿವಮೊಗ್ಗ ಜಿಲ್ಲೆ ಹಾರನಹಳ್ಳಿ ಸಂಕದೇವನಕೊಪ್ಪದ ಎಸ್‌.ಬಿ. ಹಾಲೇಶ್.

ಮೇಳದಲ್ಲಿ ಸಾಕಷ್ಟು ಗಮನ ಸೆಳೆದದ್ದು ಬಿದಿರಿನ ಸಾಮಗ್ರಿಗಳು. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಜೀವಂತಿಕೆ ಉಳಿಸಿಕೊಂಡಿರುವ ಬಿದಿರಿನ ಕಸುಬುದಾರಿಕೆಯೂ ಕಚ್ಚಾ ಸಾಮಗ್ರಿಗಳ ಕೊರತೆಯ ಕಾರಣ ನಶಿಸುತ್ತಿದೆ. ಬಿದಿರಿನ ತೊಟ್ಟಿಲು, ಬಾಗಿನದ ಮೊರಗಳಿಗೆ ಶ್ರಾವಣ, ದೀಪಾವಳಿ ಸಮಯದಲ್ಲಿ ಭಾರಿ ಬೇಡಿಕೆ ಇರುತ್ತದೆ.

ಸಾವಿರಾರು ಕುಟುಂಬಗಳಿಗೆ ಕೆಲಸವಿಲ್ಲ: 'ರಾಜ್ಯದಲ್ಲಿ ಗುಣಮಟ್ಟದ ಬಿದಿರು ಸಿಗುತ್ತಿಲ್ಲ. ಹಾಗಾಗಿ, ಆಂಧ್ರಪ್ರದೇಶ, ಗೋವಾದಿಂದ ತರಿಸುತ್ತಿದ್ದೇವೆ. ಕೊರತೆಯ ಕಾರಣ ಸಾವಿರಾರು ಕುಟುಂಬಗಳು ಕೆಲಸವಿಲ್ಲದೇ ಬೇರೆಕಡೆ ಚದುರಿವೆ. ಸರ್ಕಾರ ಬಿದಿರು ಬೆಳೆಸಲು ಜಮೀನು ನೀಡಬೇಕು. ಶೇ 90ರಷ್ಟು ಕುಟುಂಬಗಳು ಬೀದಿ ಬದಿ, ಮನೆಯ ಅಂಗಳದಲ್ಲೇ ಹೆಣಿಗೆ ಮಾಡುತ್ತವೆ. ಅವರಿಗೆ ಪ್ರತ್ಯೇಕ ಜಾಗ ಮೀಸಲಿಡಬೇಕು' ಎನ್ನುತ್ತಾರೆ ಆದಿಕಲ್ಲಮ್ಮ ಮೇದ ಸಮುದಾಯ ಸಂಘದ ನಾಗರತ್ನಾ, ಮುರಳಿ.

ಬಿದಿರು ಸಾಮಗ್ರಿ ತಯಾರಿಸುವ ಕಸುಬಿನಂತೆ ಈಚಲು ಗರಿಗಳನ್ನು ಬಳಸಿ ಕಸ ಗುಡಿಸುವ ಪೊರಕೆ ತಯಾರಿಸುವವರೂ ಇಂತಹದೇ ಸ್ಥಿತಿ ಅನುಭವಿಸುತ್ತಿದ್ದಾರೆ.

'ಈಚಲು ಗರಿಗಳಿಗಾಗಿ ವರ್ಷದ ಕೆಲವು ತಿಂಗಳು ಆಂಧ್ರಪ್ರದೇಶಕ್ಕೆ ತೆರಳುತ್ತೇವೆ. ವರ್ಷಕ್ಕೆ 100 ಪೆಂಡಿ (35ರಿಂದ 40 ಕೆ.ಜಿ.) ತಂದು ವರ್ಷವಿಡೀ ಕೆಲಸ ಮಾಡುತ್ತೇವೆ. ₹50ಕ್ಕೆ ಒಂದು ಜೊತೆ ಮಾರಾಟ ಮಾಡುತ್ತೇವೆ. ಹೊಟ್ಟೆ, ಬಟ್ಟೆಗಷ್ಟೇ ದುಡಿಮೆ' ಎನ್ನುತ್ತಾರೆ ಹರಪನಹಳ್ಳಿ ತಾಲ್ಲೂಕು ಇಟ್ಟಿಗುಡಿಯ ಪ್ರೇಮಾ ಶಿವಕುಮಾರ್.

ಮೇಳಗಳ ಮೂಲಕ ಬೆಂಬಲ: ಶೋಭಾ ಕರಂದ್ಲಾಜೆ

ಪ್ರತಿಯೊಬ್ಬ ಕಲಾವಿದನಿಗೂ ಕಲೆಯೇ ಜೀವಾಳ. ಮೇಳಗಳನ್ನು ಆಯೋಜಿಸುವ ಮೂಲಕ ಕೇಂದ್ರ ಸರ್ಕಾರ ಬೆಂಬಲ ನೀಡುತ್ತಿದೆ ಎಂದು ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಪ್ರಧಾನಮಂತ್ರಿ ವಿಶ್ವಕರ್ಮ ಪ್ರದರ್ಶನ ಮತ್ತು ವ್ಯಾಪಾರ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಕಲಾವಿದರಿಗೆ ಆರ್ಥಿಕ ನೆರವು, ಸಾಲ ಸೌಲಭ್ಯ ಒದಗಿಸಲು ಕೇಂದ್ರ ಸರ್ಕಾರ ಪಿಎಂ ವಿಶ್ವಕರ್ಮ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಅವುಗಳ ಸೌಲಭ್ಯವನ್ನು ಪಡೆಯಬೇಕು ಎಂದರು.

‘ಭ್ರಷ್ಟಾಚಾರ ದಸರಾ’

ಹುಣಸೂರು: 'ಈ ಬಾರಿ ಮೈಸೂರು ದಸರಾ ನಡೆಸಲು ಸರ್ಕಾರ ₹40 ಕೋಟಿ ಅನುದಾನ ನೀಡಿದ್ದರೂ ಜಿಲ್ಲಾ ಉಸ್ತುವಾರಿ ಸಚಿವರು ಪ್ರಾಯೋಜಕರಿಗಾಗಿ ಹುಡುಕಾಟ ನಡೆಸಿದ್ದಾರೆ. ಈಗ ಭ್ರಷ್ಟಾಚಾರ ದಸರಾ ಆವರಿಸಿದೆ' ಎಂದು ವಿಧಾನಪರಿಷತ್ ಸದಸ್ಯ ಎಚ್‌.ವಿಶ್ವನಾಥ್ ಟೀಕಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಎಸ್‌.ಎಂ.ಕೃಷ್ಣ ನೇತೃತ್ವದ ಸರ್ಕಾರದ ವೇಳೆ, ಸರ್ಕಾರದ ಅನುದಾನ ಇಲ್ಲದೆಯೇ ಸಾರ್ವಜನಿಕ ಸಹಭಾಗಿತ್ವದಲ್ಲಿ ದಸರಾ ನಡೆಸಲಾಗಿತ್ತು' ಎಂದರು.

ಕೈಗಾರಿಕಾ ಬಳಕೆಗೆ ಕಲುಷಿತ ನೀರು: ಸಿ.ಎಂಗೆ ಖಂಡ್ರೆ ಪತ್ರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಕಲುಷಿತಗೊಂಡು ಬಳಕೆಯಾಗದೇ ಇರುವ ನೀರನ್ನು ಶುದ್ಧೀಕರಿಸಿ ಕಟ್ಟಡ ನಿರ್ಮಾಣ, ಕೈಗಾರಿಕೆಗಳ ಬಳಕೆಗೆ ಪೂರೈಕೆ ಮಾಡುವ ಸಂಬಂಧ ಸಮಾಲೋಚನೆ ನಡೆಸಲು ಜಲಸಂಪನ್ಮೂಲ ಮತ್ತು ಸಣ್ಣ ನೀರಾವರಿ ಸಚಿವರ ಸಭೆ ಕರೆಯುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

'ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಬೆಂಗಳೂರಿನಲ್ಲಿ ಕಲುಷಿತಗೊಂಡಿರುವ ಕೆರೆಗಳ ಬಳಿ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಬೇಕು. ಈ ಘಟಕಗಳಲ್ಲಿ ನೀರು ಶುದ್ಧೀಕರಿಸಿ ಕಟ್ಟಡ ನಿರ್ಮಾಣ ಮತ್ತು ಪೀಣ್ಯ ಕೈಗಾರಿಕಾ ಪ್ರದೇಶ ಸೇರಿ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿರುವ ಕೈಗಾರಿಕಾ ಘಟಕಗಳಿಗೆ ಪೂರೈಕೆ ಮಾಡಬಹುದು. ಇದರಿಂದ ಸರ್ಕಾರಕ್ಕೂ ಆದಾಯ ಬರುತ್ತದೆ. ಕುಡಿಯುವ ನೀರನ್ನು ಅನ್ಯ ಉದ್ದೇಶಕ್ಕೆ ಬಳಸುವುದೂ ತಗ್ಗುತ್ತದೆ' ಎಂದು ಪತ್ರದಲ್ಲಿ ಖಂಡ್ರೆ ಹೇಳಿದ್ದಾರೆ.

ಬೆಂಗಳೂರಿನ ಬಹುಮಹಡಿ ಕಟ್ಟಡ ಗಳಲ್ಲಿ ಉತ್ಪತ್ತಿ ಆಗುತ್ತಿರುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ಕಟ್ಟಡ ನಿರ್ಮಾಣಕ್ಕೆ ಮಾರಾಟ ಮಾಡುವ ಕುರಿತ ಪರಿಸರ ಇಲಾಖೆಯ ಪ್ರಸ್ತಾವನೆಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಈ ಸಂಬಂಧ ನೀತಿಯೊಂದನ್ನು ರೂಪಿಸಲಾಗಿದೆ. ಈ ನಿರ್ಧಾರಕ್ಕೆ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ರಿಯಲ್ ಎಸ್ಟೇಟ್ ಸಂಸ್ಥೆಗಳ ಸಭೆಯಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ ಎಂದು ಖಂಡ್ರೆ ತಿಳಿಸಿದ್ದಾರೆ.

'ಇದು ಕಾರ್ಯಗತಗೊಂಡಾಗ ತ್ಯಾಜ್ಯ ನೀರು ಕೆರೆ, ನದಿಗಳಿಗೆ ಸೇರುವುದು ತಪ್ಪುತ್ತದೆ. ನಗರದಲ್ಲಿ ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳಲು ಅನುಕೂಲ ವಾಗುತ್ತದೆ ಎಂದಿದ್ದಾರೆ.

ಪ್ರವಾದಿ ಮಹಮ್ಮದ್ ಕುರಿತು ವಿಶೇಷ ಅಭಿಯಾನ ಇಂದಿನಿಂದ

ಬೆಂಗಳೂರು: ಜಮಾಅತೆ ಇಸ್ಲಾಮೀ ಹಿಂದ್ ಕರ್ನಾಟಕವು, 'ಪ್ರವಾದಿ ಮಹಮ್ಮದ್ ಮಹಾನ್ ಚಾರಿತ್ರ್ಯವಂತ' ಎಂಬ ಧ್ಯೇಯ ವಾಕ್ಯದಡಿ ಇದೇ ಶುಕ್ರವಾರದಿಂದ (ಸೆಪ್ಟೆಂಬರ್) 22ರವರೆಗೆ ರಾಜ್ಯದಾದ್ಯಂತ ವಿಶೇಷ ಅಭಿಯಾನ ಹಮ್ಮಿಕೊಂಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಮಾಅತೆ ಇಸ್ಲಾಮೀ ಹಿಂದ್‌ನ ರಾಜ್ಯ ಘಟಕದ ಕಾರ್ಯದರ್ಶಿ ಮೌಲಾನಾ ವಹೀದುದ್ದೀನ್ ಖಾನ್ ಉಮರಿ, 'ಸಮಾಜ ದಲ್ಲಿರುವ ಪರಸ್ಪರ ಅಪನಂಬಿಕೆ, ದ್ವೇಷ, ಪೂರ್ವಗ್ರಹಗಳನ್ನು ಹೋಗಲಾಡಿಸಿ, ಶಾಂತಿ, ಸೌಹಾರ್ದ ಮತ್ತು ಮಾನವೀಯತೆಯನ್ನು ಬೆಳೆಸುವುದು ಈ ಅಭಿಯಾನದ ಉದ್ದೇಶವಾಗಿದೆ. ಪ್ರವಾದಿ ಮಹಮ್ಮದ್ ಅವರ ವ್ಯಕ್ತಿತ್ವ, ಸಂದೇಶ ಮತ್ತು ಬೋಧನೆಗಳು ಸರ್ವಕಾಲಕ್ಕೂ ಪ್ರಸ್ತುತವಾಗಿದ್ದು, ಇವುಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಮೂಲಕ ಜಾಗೃತಿ ಮೂಡಿಸಲಾಗುತ್ತದೆ' ಎಂದರು.

'ರಾಜ್ಯದಾದ್ಯಂತ ಸಮ್ಮೇಳನಗಳು, ವಿಚಾರಗೋಷ್ಠಿಗಳು, ಸಂವಾದ ಕಾರ್ಯಕ್ರಗಳು, ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಪ್ರಬಂಧ ಮತ್ತು ರಸಪ್ರಶ್ನೆ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು' ಎಂದು ತಿಳಿಸಿದರು.

ಜಮಾಅತೆ ಇಸ್ಲಾಮೀ ಹಿಂದ್ ರಾಜ್ಯ ಘಟಕದ ಕಾರ್ಯದರ್ಶಿ ಅಕ್ಬರ್ ಅಲಿ ಉಡುಪಿ, ಮುಹಮ್ಮದ್ ನವಾಝ್, ಮುಹಮ್ಮದ್ ತಲ್ಹಾ ಸಿದ್ದಿಬಾಪ, ರಿಯಾಜ್ ಅಹ್ಮದ್ ಉಪಸ್ಥಿತರಿದ್ದರು.

ರಾಜೀನಾಮೆಗೆ ಸಿದ್ಧ: ಮಮತಾ ಬ್ಯಾನರ್ಜಿ

ಸಂತ್ರಸ್ತೆಗೆ ನ್ಯಾಯ, ಜನರಿಗೆ ಆರೋಗ್ಯ ಸೇವೆ ಸಿಗುವಂತಾಗಬೇಕು: ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ



ಪ್ರತಿಭಟನನಿರತ ವೈದ್ಯರು ಸಚಿವಾಲಯದತ್ತ ಸಾಗಿದರು ಪಿಟಿಐ ಚಿತ್ರ

ಕೋಲ್ಕತ್ತ:'ರಾಜ್ಯದ ಜನರ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧ. ಆದರೆ, ಸಂತ್ರಸ್ತೆಗೆ ನ್ಯಾಯ ಹಾಗೂ ಜನಸಾಮಾನ್ಯರಿಗೆ ಆರೋಗ್ಯ ಸೇವೆ ಸಿಗುವಂತಾಗಬೇಕು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಹೇಳಿದ್ದಾರೆ.

ಮಾತುಕತೆ ನಡೆಸಲು ಪ್ರತಿಭಟನೆ ನಿರತ ವೈದ್ಯರಿಗಾಗಿ ಎರಡು ಗಂಟೆಗಳಷ್ಟು ಕಾದ ನಂತರ ಸುದ್ದಿಗೋಷ್ಠಿ ನಡೆಸಿದ ಮಮತಾ ಬ್ಯಾನರ್ಜಿ ಈ ಮಾತು ಹೇಳಿದರು.

ಬಿಜೆಪಿ ಮತ್ತು ಎಡಪಕ್ಷಗಳ ವಿರುದ್ಧ ಹರಿಹಾಯ್ದ ಅವರು, 'ಮಾತುಕತೆಗಾಗಿ ಕರೆದಿದ್ದ ಸಭೆಯನ್ನು ಬಹಿಷ್ಕರಿಸುವಂತೆ ಪ್ರತಿಭಟನೆ ನಿರತ ವೈದ್ಯರಿಗೆ ಪ್ರತಿಪಕ್ಷಗಳು ಸೂಚನೆ ನೀಡುತ್ತಿವೆ' ಎಂದು ಆರೋಪಿಸಿದರು.

'ಅವರಿಗೆ (ವಿರೋಧ ಪಕ್ಷಗಳಿಗೆ) ನ್ಯಾಯ ಬೇಕಾಗಿಲ್ಲ, ಅವರಿಗೆ ಮುಖ್ಯಮಂತ್ರಿ ಕುರ್ಚಿ ಬೇಕು. ನನಗೆ ಮುಖ್ಯಮಂತ್ರಿ ಸ್ಥಾನ ಬೇಕಿಲ್ಲ, ಆದರೆ ಜನರಿಗೆ ನ್ಯಾಯ ಸಿಗಬೇಕು. ತಿಲೋತ್ತಮಗೆ (ಅತ್ಯಾಚಾರಕ್ಕೆ ಒಳಗಾಗಿ ಕೊಲೆಗೀಡಾದ ವೈದ್ಯೆಯ ಕಲ್ಪಿತ ಹೆಸರು) ನ್ಯಾಯ ಸಿಗಬೇಕು' ಎಂದ ಅವರು, ಕರ್ತವ್ಯಕ್ಕೆ ಮರಳುವಂತೆ ವೈದ್ಯರಿಗೆ ಕೈಮುಗಿದು ಒತ್ತಾಯಿಸಿದರು.

ರಾಜೀನಾಮೆ ಕೇಳಿಲ್ಲ: 'ನಾವು ಮುಖ್ಯಮಂತ್ರಿಯ ರಾಜೀನಾಮೆಯನ್ನು ಕೇಳಿಯೇ ಇಲ್ಲ. ಸಂತ್ರಸ್ತೆಗೆ ನ್ಯಾಯ ಸಿಗಬೇಕೆಂಬುದಷ್ಟೇ ನಮ್ಮ ಬೇಡಿಕೆ. ಸಭೆ ನಡೆಯದಿದ್ದಕ್ಕೆ ನಮಗೂ ಬೇಸರವಿದೆ. ಸರ್ಕಾರದ ಪ್ರತಿಕ್ರಿಯೆಗಾಗಿ ನಾವು ಇನ್ನೂ ಕಾಯುತ್ತೇವೆ' ಎಂದು ಪ್ರತಿಭಟನನಿರತ ವೈದ್ಯರು ಪ್ರತಿಕ್ರಿಯಿಸಿದರು.

ಮಮತಾ ಬ್ಯಾನರ್ಜಿ ಹೇಳಿದ್ದೇನು

- 33 ದಿನಗಳಿಂದ ನಾವು ಸಾಕಷ್ಟು ಅವಮಾನಗಳನ್ನು ಸಹಿಸಿಕೊಂಡಿದ್ದೇವೆ. ಆದರೆ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಧಿಕ್ಕರಿಸಿ, ಕರ್ತವ್ಯಕ್ಕೆ ಹಾಜರಾಗದಿರುವ ವೈದ್ಯರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ
- ಕಿರಿಯ ವೈದ್ಯರ ಬೇಡಿಕೆಯಂತೆ ಮಾತುಕತೆಯ ನೇರ ಪ್ರಸಾರ ಮಾಡಲು ಸಾಧ್ಯವಿಲ್ಲ. ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿರುವ ಕಾರಣ ಹಾಗೆ ಮಾಡಲು ಬರುವುದಿಲ್ಲ
- ಕಿರಿಯ ವೈದ್ಯರ ಪ್ರತಿಭಟನೆಯಿಂದ ರಾಜ್ಯದಲ್ಲಿ 27 ರೋಗಿಗಳು ಮೃತಪಟ್ಟಿದ್ದಾರೆ. ಸುಮಾರು 7 ಲಕ್ಷ ಜನರು ಬಳಲುತ್ತಿದ್ದಾರೆ. ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ವೈದ್ಯರು ಕರ್ತವ್ಯಕ್ಕೆ ಹಾಜರಾಗಬೇಕು

ನೇರ ಪ್ರಸಾರಕ್ಕೆ ಪಟ್ಟು; ನಡೆಯದ ಸಭೆ

ಮಾತುಕತೆಯ ನೇರ ಪ್ರಸಾರ ಮಾಡಬೇಕು ಎಂಬ ಬೇಡಿಕೆಯನ್ನು ಕಿರಿಯ ವೈದ್ಯರು ಸಡಿಲಿಸದ ಪರಿಣಾಮ, ಸರ್ಕಾರದ ಜತೆಗೆ ಗುರುವಾರವೂ ಸಭೆ ನಡೆಯಲಿಲ್ಲ. ಇದರಿಂದ ಪಶ್ಚಿಮ ಬಂಗಾಳದಲ್ಲಿ ವೈದ್ಯರ ಬಿಕ್ಕಟ್ಟು ಮುಂದುವರಿದಿದೆ.

ಇಲ್ಲಿನ ಆರ್‌.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಆಗಸ್ಟ್ 9ರಂದು ನಡೆದಿದ್ದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ– ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ವೈದ್ಯರು ಪ್ರತಿಭಟನೆ ನಡೆಸುತ್ತಿದ್ದಾರೆ.

ಮುಖ್ಯಮಂತ್ರಿ ಸಮ್ಮುಖದಲ್ಲಿಯೇ ಸಭೆ ನಡೆಯಬೇಕು ಎಂಬ ಪ್ರತಿಭಟನನಿರತ ವೈದ್ಯರ ಬೇಡಿಕೆಗೆ ಸರ್ಕಾರ ಸಮ್ಮತಿಸಿತ್ತು. ಹೀಗಾಗಿಯೇ ಗುರುವಾರ ಸಂಜೆ 5 ಗಂಟೆಗೆ ನಿಗದಿಯಾಗಿದ್ದ ಸಭೆಗೆ ಹಾಜರಾಗಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಕಿರಿಯ ವೈದ್ಯರ ಆಗಮನಕ್ಕಾಗಿ ಸುಮಾರು ಎರಡು ಗಂಟೆ ಕಾಯ್ದರು.

> ಈ ಬಿಕ್ಕಟ್ಟು ಇಂದು ಬಗೆಹರಿಯಲಿದೆ ಎಂದು ನಿರೀಕ್ಷೆಸುತ್ತಿದ್ದ ಜನರಲ್ಲಿ ನಾನು ಕ್ಷಮೆ ಕೋರುತ್ತೇನೆ
> **ಮಮತಾ ಬ್ಯಾನರ್ಜಿ**
> ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಸಂಜೆ 5.25ಕ್ಕೆ ಸಚಿವಾಲಯ ತಲುಪಿದ ಪ್ರತಿಭಟನಕಾರರು, ಗಂಟೆಗೂ ಹೆಚ್ಚು ಕಾಲ ಪ್ರವೇಶ ದ್ವಾರದಲ್ಲಿಯೇ ನಿಂತರು. ಮಾತುಕತೆಯನ್ನು ನೇರ ಪ್ರಸಾರ ಮಾಡಬೇಕು ಎಂಬ ತಮ್ಮ ಷರತ್ತನ್ನು ಸಡಿಲಿಸಲು ಕಿರಿಯ ವೈದ್ಯರು ಸಮ್ಮತಿಸಲಿಲ್ಲ. ಎರಡೂ ಕಡೆಯವರು ತಮ್ಮ ನಿಲುವುಗಳಿಗೆ ದೃಢವಾಗಿ ನಿಂತ ಪರಿಣಾಮ ಗುರುವಾರ ಯಾವುದೇ ಮಾತುಕತೆ ನಡೆಯಲಿಲ್ಲ.

ಕಸರತ್ತು: ಡಿಜಿಪಿ ರಾಜೀವ್ ಕುಮಾರ್, ಎಡಿಜಿ (ದಕ್ಷಿಣ ಬಂಗಾಳ) ಸುಪ್ರತಿಮ್ ಸರ್ಕಾರ್ ಮತ್ತು ರಾಜ್ಯದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಸೇರಿದಂತೆ ಹಿರಿಯ ಅಧಿಕಾರಿಗಳು ವೈದ್ಯರ ನಿಯೋಗ ಮತ್ತು ಇತರ ಅಧಿಕಾರಿಗಳ ಜತೆ ನಿರಂತರ ಮಾತುಕತೆ ನಡೆಸಿ ಮನವೊಲಿಸಲು ನಡೆಸಿದ ಪ್ರಯತ್ನಗಳು ಫಲ ನೀಡಲಿಲ್ಲ.

ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್, 'ಮಾತುಕತೆಯ ನೇರ ಪ್ರಸಾರ ಸಾಧ್ಯವಿಲ್ಲ ಎಂಬುದನ್ನು ಕಿರಿಯ ವೈದ್ಯರಿಗೆ ಕಳುಹಿಸಿದ್ದ ಪತ್ರದಲ್ಲಿ ಉಲ್ಲೇಖಿಸಿದ್ದೆ. ಆದರೆ ಸಭೆಯ ಸಂವಾದವನ್ನು ರೆಕಾರ್ಡ್ ಮಾಡಿ, ದಾಖಲೀಕರಣ ಮಾಡುತ್ತೇವೆ ಎಂದೂ ಭರವಸೆ ನೀಡಿದೆವು' ಎಂದರು.

ಹರಿಯಾಣ: 89 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಪ್ರಜಾ ಮತ
ಜನತಂತ್ರದ ಹಬ್ಬ

ನವದೆಹಲಿ: ಹರಿಯಾಣ ವಿಧಾನಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆಯು ಗುರುವಾರ ಮುಕ್ತಾಯಗೊಂಡಿದ್ದು, ಒಂದು ಕ್ಷೇತ್ರವನ್ನು ಸಿಪಿಎಂಗೆ ಬಿಟ್ಟು ಉಳಿದ 89 ಕ್ಷೇತ್ರ ಗಳಲ್ಲಿ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಭೀವಾನಿ ಕ್ಷೇತ್ರವನ್ನು ಸಿಪಿಎಂಗೆ ಬಿಟ್ಟುಕೊಟ್ಟಿದೆ.

ಸಂಸದ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಪುತ್ರ ಆದಿತ್ಯ ಸುರ್ಜೇವಾಲಾ ಅವರನ್ನು ಕೈಥಲ್ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಕಾಂಗ್ರೆಸ್, ಬುಧವಾರ ರಾತ್ರಿ 11.30ರ ಬಳಿಕ 48 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿ, 40 ಅಭ್ಯರ್ಥಿಗಳ ಹೆಸರು ಪ್ರಕಟಿಸಿತು. ತಡರಾತ್ರಿ ಐದು ಅಭ್ಯರ್ಥಿಗಳು ಮತ್ತು ಗುರುವಾರ ಬೆಳಿಗ್ಗೆ 10.42ಕ್ಕೆ ಇಬ್ಬರು ಹಾಗೂ ಮಧ್ಯಾಹ್ನ 2.05 ನಿಮಿಷಕ್ಕೆ ಒಬ್ಬರ ಹೆಸರನ್ನು ಘೋಷಿಸಿತು.

ಸಿಪಿಎಂನೊಂದಿಗೆ ಮೈತ್ರಿ ಮಾತುಕತೆ ನಡೆಯುತ್ತಿದ್ದ ಕಾರಣ ನಾಮಪತ್ರ ಸಲ್ಲಿಕೆಯ ಕೊನೇ ಕ್ಷಣದಲ್ಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಿತು.

ಸಿಪಿಎಂ ಕೇಳಿದ್ದ ಯಾವುದೇ ಕ್ಷೇತ್ರವನ್ನು ಬಿಟ್ಟುಕೊಡಲು ಕಾಂಗ್ರೆಸ್ ಸಿದ್ಧವಿರಲಿಲ್ಲ. ಹೀಗಾಗಿ ಬಿಕ್ಕಟ್ಟು ಉಂಟಾಗಿ ಸಿಪಿಎಂ ಐದು ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ನಾಮಪತ್ರ ಹಿಂಪಡೆಯುವ ದಿನವಾದ ಸೆಪ್ಟೆಂಬರ್ 16ರ ಒಳಗಾಗಿ ಬಿಕ್ಕಟ್ಟು ಶಮನವಾಗಬಹುದೆಂದು ಅದು ಭಾವಿಸಿದೆ. ಈ ಮಧ್ಯೆ ಭೀವಾನಿ ಕ್ಷೇತ್ರವನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಕಾಂಗ್ರೆಸ್‌ನ ಈ ನಡೆಯು ಇತರೆ ಕ್ಷೇತ್ರಗಳಲ್ಲಿ ಸಿಪಿಎಂ ಮತಗಳನ್ನು ಸೆಳೆಯಲು ಅನುಕೂಲವಾಗುತ್ತದೆಂದು ನಾಯಕರು ಭಾವಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹರಿಯಾಣ ವಿಧಾನಸಭೆ ವಿಸರ್ಜನೆ: ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ರಾಜ್ಯ ವಿಧಾನಸಭೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಗುರುವಾರ ವಿಸರ್ಜಿಸಿದರು. ಹೊಸ ಸರ್ಕಾರ ಸ್ಥಾಪನೆಯಾಗು ವರೆಗೂ ನಯಾಬ್ ಸಿಂಗ್ ಸೈನಿ ಅವರು ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ತಿಳಿಸಿವೆ.

19 ಅಭ್ಯರ್ಥಿಗಳನ್ನು ಘೋಷಿಸಿದ ಎಎಪಿ

ಚಂಡೀಗಢ (ಪಿಟಿಐ): ಹರಿಯಾಣ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ 19 ಅಭ್ಯರ್ಥಿಗಳನ್ನು ಒಳಗೊಂಡ ಮತ್ತೊಂದು ಪಟ್ಟಿಯನ್ನು ಆಮ್ ಆದ್ಮಿ ಪಕ್ಷ (ಎಎಪಿ) ಗುರುವಾರ ಬಿಡುಗಡೆ ಮಾಡಿದೆ.

ಹಿರಿಯ ನಾಯಕ ಪ್ರೇಮ್ ಗರ್ಗ್ ಅವರನ್ನು ಪಂಚಕುಲಾದಿಂದ ಕಣಕ್ಕಿಳಿಸಿದೆ. ಎಲನಾಬಾದ್ ಕ್ಷೇತ್ರದಲ್ಲಿ ಮನೀಶ್ ಅರೋರಾ ಅವರನ್ನು ಕಣಕ್ಕಿಳಿಸಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಭರವಸೆ

‘ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಉನ್ನತೀಕರಣ’

ಪ್ರಜಾವಾಣಿ ವಾರ್ತೆ



ಡಿಜಿಟಲ್ ಡೆಂಟಿಸ್ಟ್ರಿ ಕೇಂದ್ರವನ್ನು ಡಾ. ಶರಣ ಪ್ರಕಾಶ ಪಾಟೀಲ ಉದ್ಘಾಟಿಸಿದರು. ಡಾ. ಗಿರೀಶ್ ಬಿ. ಗಿರಡ್ಡಿ ಮತ್ತು ಮೊಹಮ್ಮದ್ ಮೊಹಸಿನ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಇಲ್ಲಿನ ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಅತ್ಯಾಧುನಿಕ ಉಪಕರಣಗಳನ್ನು ಒದಗಿಸುವ ಜೊತೆಗೆ ಉನ್ನತೀಕರಣಕ್ಕೆ ಆದ್ಯತೆ ನೀಡಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಭರವಸೆ ನೀಡಿದರು.

ಸಂಸ್ಥೆಯು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪದವಿ ಪ್ರದಾನ ಮತ್ತು ಡಿಜಿಟಲ್ ಡೆಂಟಿಸ್ಟ್ರಿ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಇಲ್ಲಿನ ದಂತ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ದೇಶದ ಅತ್ಯಂತ ಹಳೆಯ ದಂತ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ. 1958ರಲ್ಲಿ ಸ್ಥಾಪನೆಯಾದ ಈ ಕಾಲೇಜು, ದಂತ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯಲ್ಲಿ ಆರು ದಶಕಗಳ ಕಾಲ ಸೇವೆ ಒದಗಿಸಿದೆ. ಈ ದಂತ ವೈದ್ಯಕೀಯ ಶಿಕ್ಷಣ ಸಂಸ್ಥೆ ನಮ್ಮ ರಾಜ್ಯದ ಹೆಮ್ಮೆಯಾಗಿದ್ದು, ಈಗ ಎಲ್ಲ ವಿಭಾಗಗಳಲ್ಲಿ ಆಧುನೀಕರಣದ ಅಗತ್ಯವಿದೆ. ಶೀಘ್ರದಲ್ಲೇ ಈ ಸಂಸ್ಥೆಗೂ ಸುಧಾರಿತ ಉಪಕರಣಗಳು ಮತ್ತು ಸೌಲಭ್ಯಗಳನ್ನು ಒದಗಿಸಲಾಗುವುದು' ಎಂದರು.

'ತಂತ್ರಜ್ಞಾನಗಳು ದಂತ ವೈದ್ಯ ವಿಜ್ಞಾನದಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿವೆ. ಡಿಜಿಟಲ್ ಡೆಂಟಿಸ್ಟ್ರಿಯು ನಿಖರ ಶಸ್ತ್ರಚಿಕಿತ್ಸೆಗೆ ಸಹಕಾರಿಯಾಗಿದೆ. ಇದರ ನೆರವಿನಿಂದ ವೇಗವಾಗಿ ಚಿಕಿತ್ಸೆ ಒದಗಿಸಲೂ ಸಾಧ್ಯವಾಗುತ್ತದೆ' ಎಂದರು.

ಸಮಾರಂಭದಲ್ಲಿ 50ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ. ಗಿರೀಶ್ ಗಿರಡ್ಡಿ, ದಂತ ವೈದ್ಯ ಡಾ. ಕಿರಣ್ ಉಪಸ್ಥಿತರಿದ್ದರು.

ಅತ್ಯಾಧುನಿಕ ಸೌಲಭ್ಯ

ಸಂಸ್ಥೆಯಲ್ಲಿನ ಡಿಜಿಟಲ್ ಡೆಂಟಿಸ್ಟ್ರಿ ಕೇಂದ್ರ ಅತ್ಯಾಧುನಿಕ ಸೌಲಭ್ಯವನ್ನು ಒಳಗೊಂಡಿದೆ. ಕಂಪ್ಯೂಟರ್ ಆಧಾರಿತ ಸ್ಕ್ಯಾನಿಂಗ್, 3ಡಿ ಪ್ರಿಂಟಿಂಗ್, ಕೋನ್ ಬೀಮ್ ಕಂಪ್ಯೂಟೆಡ್ ಟೊಮೊಗ್ರಫಿ (ಸಿಬಿಸಿಟಿ), ಶಸ್ತ್ರಚಿಕಿತ್ಸೆ ಮತ್ತು 'ಇಂಪ್ಲಾಂಟಾಲಜಿ' ಸೇರಿ ವಿವಿಧ ಸೌಲಭ್ಯ ಹೊಂದಿದೆ. ರೂಟ್ ಕೆನಾಲ್ ಚಿಕಿತ್ಸೆಗೆ 'ಮೈಕ್ರೋಸ್ಕೋಪಿಕ್ ಎಂಡೋಡಾಂಟಿಕ್ಸ್' ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ ಎಂದು ಸಂಸ್ಥೆಯ ವೈದ್ಯರು ತಿಳಿಸಿದರು.

ಬೂದಿ ಮುಚ್ಚಿದ ಕೆಂಡದಂತಿರುವ ನಾಗಮಂಗಲ ಪಟ್ಟಣ ● ಬೀದಿಗೆ ಬಿದ್ದ ವ್ಯಾಪಾರಿಗಳು

ಜನರ ನೆಮ್ಮದಿ ಕಸಿದ ಗಲಭೆ, ತಗ್ಗದ ಆತಂಕ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ದೇವಾಲಯಗಳ ನಾಡು’ ನಾಗಮಂಗಲದಲ್ಲಿ ನಡೆದ ಗಲಭೆ ಪ್ರಕರಣ ಎರಡು ಕೋಮುಗಳ ವ್ಯಾಪಾರಿಗಳ ಬದುಕನ್ನು ಬೀದಿಗೆ ದೂಡಿದೆ. ಕೋಮುದ್ವೇಷದ ಸಂಕೋಲೆಗೆ ಸಿಲುಕಿದ ಯುವಕರ ಕುಟುಂಬಸ್ಥರು ಕಣ್ಣೀರು ಸುರಿಸುವಂತಾಗಿದೆ. ಪರಿಸ್ಥಿತಿ ಮೇಲ್ನೋಟಕ್ಕೆ ಬೂದಿ ಮುಚ್ಚಿದ ಕೆಂಡದಂತಿದೆ.

ಇಲ್ಲಿ ಹಲವು ವರ್ಷಗಳ ಹಿಂದೆ ಗಣೇಶ ಹಬ್ಬದಲ್ಲಿ ಮುಸ್ಲಿಮರೂ ಬಂದು ಪೂಜೆ ಮಾಡಿಸುತ್ತಿದ್ದರು. ಸೌಹಾರ್ದದ ಪ್ರತೀಕವಾಗಿದ್ದ ಹಬ್ಬವು ಕಿಡಿಗೇಡಿಗಳ ಕೃತ್ಯದಿಂದಾಗಿ ಜನರ ನೆಮ್ಮದಿಯನ್ನೇ ಕಸಿದಿದೆ. ಮನೆಯಿಂದ ಹೊರಗೆ ಬರಲು ಹೆದರುತ್ತಿದ್ದಾರೆ. ಪೊಲೀಸರು ಪಟ್ಟಣಕ್ಕೆ ಸರ್ಪಗಾವಲು ಹಾಕಿದ್ದಾರೆ.

ಮುಜೀಬ್ ಎಂಬ ವ್ಯಾಪಾರಿ ₹25 ಲಕ್ಷ ವೆಚ್ಚದಲ್ಲಿ ಇಟ್ಟಿದ್ದ ಪಾತ್ರೆ ಅಂಗಡಿ ಕಣ್ಣ ಮುಂದೆಯೇ ಹಾನಿಗೊಂಡಿದೆ. ಹಾನಿಗೊಂಡ ಅಂಗಡಿ ಮುಂದೆ ಕುಳಿತಿದ್ದ ಅವರು ‘ಬ್ಯಾಂಕಿನ ಸಾಲ ತೀರಿಸುವುದು ಹೇಗೆ’ ಎಂದು ಮರುಗಿದರು. ‘ವಿಷ ಕುಡಿಯುವುದೇ ಉಳಿದಿರುವ ದಾರಿ’ ಎಂದು ರೋದಿಸಿದರು.

‘ಬಟ್ಟೆ ಶೋರೂಂಗೆ ಬೆಂಕಿ ಹಚ್ಚುತ್ತಾರೆಂಬ ವಿಷಯ ತಿಳಿದು ಓಡಿ ಬಂದೆ. ಯುವಕರು ಬಾಟಲಿ, ಮಾರಕಾಸ್ತ್ರ ಹಿಡಿದು ದಾಳಿಗೆ ಮುಂದಾದರು. ಪೊಲೀಸರೇ ಹೆದರಿ ಓಡಲು ಶುರು ಮಾಡಿದರು. ಪ್ರಾಣ ಉಳಿದರೆ ಸಾಕೆಂದು ನಾನೂ ಓಡಿದೆ., 7 ಕಾರ್ಮಿಕರೊಂದಿಗೆ ಬೀದಿಗೆ ಬಿದ್ದಿದ್ದೇನೆ’ ಎಂದು ಸಾಗರ ಟೆಕ್ಸ್‌ಟೈಲ್ ಮಾಲೀಕ ಭೀಮರಾಜ್ ಕಣ್ಣೀರು ಹಾಕಿದರು.



ಬಂಧಿತರ ಬಿಡುಗಡೆಗೆ ಆಗ್ರಹಿಸಿ ನಾಗಮಂಗಲ ಪಟ್ಟಣ ಪೊಲೀಸ್ ಠಾಣೆ ಎದುರು ಗುರುವಾರ ಉಭಯ ಸಮುದಾಯದವರು ಪ್ರತಿಭಟಿಸಿದರು – ಪ್ರಜಾವಾಣಿ ಚಿತ್ರ

ಘಟನೆಯ ನಂತರ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಮಾಜಿ ಶಾಸಕ ಸುರೇಶಗೌಡ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ, ಮಾಜಿ ಸಚಿವ ಸಿ.ಟಿ.ರವಿ ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಿದರು.

ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ: ಗಲಭೆಯಲ್ಲಿ ನಷ್ಟ ಹೊಂದಿದ ಅಂಗಡಿ ಮಾಲೀಕರ ಸಮಸ್ಯೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಆಲಿಸಿದರು. ‘ತಾಲ್ಲೂಕಿನ ಪರಿಸ್ಥಿತಿ ಶಾಂತವಾಗಿತ್ತು. ನೆನ್ನೆ ಇಂಥ ಘಟನೆ ಜರುಗಿರುವುದು ಬೇಸರದ ಸಂಗತಿಯಾಗಿದೆ. ಯಾವುದೇ ಒಂದು ಕೋಮಿಗೆ ಪ್ರಾಮುಖ್ಯ ನೀಡುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಲಿದೆ’ ಎಂದು ಹೇಳಿದರು.

ಗಣೇಶನ ಮೂರ್ತಿ ಪ್ರತಿಷ್ಠಾಪಿಸಿದ್ದೇ ತಪ್ಪಾ?: ‘27 ವರ್ಷಗಳಿಂದ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಿದ್ದೇವೆ. ಬೇರೆ ಕೋಮಿನವರು ಮಾಡಿದ ತಪ್ಪಿಗೆ, ಮೂರ್ತಿ ಕೂರಿಸಿದ್ದವರನ್ನೇ ಏಕೆ ಪೊಲೀಸರು ಬಂಧಿಸಿದ್ದಾರೆ? ಮನೆಗಳಿಗೆ ಪೊಲೀಸರು ಮಧ್ಯರಾತ್ರಿ ಒಂದು ಗಂಟೆಗೆ ನುಗ್ಗಿದ್ದು ಏಕೆ? ಎಂದು ಬದ್ರಿಕೊಪ್ಪಲು ಮಹಿಳೆಯರು ಕೋಪವ್ಯಕ್ತಪಡಿಸಿದ್ದಾರೆ.

ಎರಡು ಕೋಮಿನವರು ಪೊಲೀಸ್ ಠಾಣೆಯ ಮುಂದೆ ಜಮಾಯಿಸಿ, ‘ಬಂಧಿಸಿರುವ ಅಮಾಯಕ ಹುಡುಗರನ್ನು ಬಿಟ್ಟುಬಿಡಿ, ಅವರದ್ದೇನೂ ತಪ್ಪಿಲ್ಲ’ ಎಂದು ಗೋಗರೆದರು.

ಬೆರಳಚ್ಚು ತಂಡ ಭೇಟಿ: ಬೆರಳಚ್ಚು ತಂಡ ಭೇಟಿ ನೀಡಿ ಸ್ಥಳದಲ್ಲಿ ಸಾಕ್ಷ್ಯ ಸಂಗ್ರಹಿಸಿದೆ. ಬೆಂಕಿ ಹಚ್ಚಿದ್ದು ಯಾರು? ಪೆಟ್ರೋಲ್ ಬಾಂಬ್ ಹಾಕಿದ್ದು ಯಾರು? ನಿಷೇಧಿತ ಸ್ಫೋಟಕವೇ? ಸ್ಫೋಟಕ ಬಳಸಲಾಗಿದೆಯೇ? ಎಂದು ಶೋಧ ನಡೆಸಿದೆ. ಸುಟ್ಟು ಕರಕಲಾದ ಅಂಗಡಿಗಳಿಗೆ ಪೊಲೀಸರೊಂದಿಗೆ ಭೇಟಿ ನೀಡಿ, ಮಾಹಿತಿ ಕಲೆ ಹಾಕಿದೆ.

‘ಸಾವಿರಾರು ಕಲ್ಲುಗಳು ಎಲ್ಲಿಂದ ಬಂದವು?’

‘ಗಲಭೆ ನಡೆದ ಸ್ಥಳಕ್ಕೆ ಸಾವಿರಾರು ಕಲ್ಲುಗಳು ಒಮ್ಮೆಗೇ ಎಲ್ಲಿಂದ ಬಂದವು? ಕಳೆದ ವರ್ಷವೂ ಇಂಥದ್ದೇ ಘಟನೆ ನಡೆದಿತ್ತು. ಪೊಲೀಸರು ಏನು ಮಾಡುತ್ತಿದ್ದಾರೆ? ಸರ್ಕಾರ ಇದರ ಹೊಣೆ ಹೊರಬೇಕು. ಹಾನಿಗೊಳಗಾದ ಜನರ ಜೀವನ ಕಟ್ಟಿಕೊಳ್ಳಲು ಪರಿಹಾರ ನೀಡಬೇಕು’ ಎಂದು ಮಾಜಿ ಶಾಸಕ ಸುರೇಶ್ ಗೌಡ ಒತ್ತಾಯಿಸಿದರು.

‘ಸಾರ್ವಜನಿಕರ ಆಸ್ತಿ ಪಾಸ್ತಿ ನಷ್ಟವಾಗಿದೆ. ಜನರಿಗೆ ರಕ್ಷಣೆ ಇಲ್ಲದ, ಇಂಥ ಆಡಳಿತ ಬೇಕೆ? ನನ್ನ ಮನೆಯ ಮೇಲೂ ಕಲ್ಲು ತೂರಾಟ ಮಾಡಲಾಗಿದೆ. ರಾಜ್ಯದಲ್ಲಿ ಕಾನೂನು ಇದೆಯೇ? ಭ್ರಷ್ಟಾಚಾರಿಗಳನ್ನು ತಾಲ್ಲೂಕಿನ ತುಂಬಿಕೊಂಡು ಏನು ಮಾಡುತ್ತಿದ್ದಾರೆ? ಎಂದು ವಾಗ್ದಾಳಿ ನಡೆಸಿದರು.

ಎಡಿಜಿಪಿ, ಐಜಿ, ಎಸ್ಪಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದಾರೆ. ಮುಖ್ಯವೃತ್ತ, ಪ್ರಮುಖ ರಸ್ತೆಗಳಲ್ಲಿ ಪೊಲೀಸ್ ತುಕಡಿಗಳನ್ನು ನಿಯೋಜಿಸಲಾಗಿದ್ದು, ಬಿಗಿ ಭದ್ರತೆ ಒದಗಿಸಲಾಗಿದೆ. ಪೊಲೀಸರು ವಾಹನಗಳ ಮೂಲಕ ಗಸ್ತು ತಿರುಗುತ್ತಿದ್ದಾರೆ.

ರಾಜ್ಯದಲ್ಲಿ ತುಷ್ಟೀಕರಣ, ವೋಟ್ ಬ್ಯಾಂಕ್ ರಾಜಕಾರಣದಿಂದ ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ಸಿಗುತ್ತಿದೆ. ಸರ್ಕಾರ ರಕ್ಷಣೆ ನೀಡುತ್ತಿದೆ. ನಾಗಮಂಗಲ ಪ್ರಕರಣದಲ್ಲಿ ಯಾರೇ ತಪ್ಪು ಮಾಡಿದರೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ರಾಜ್ಯ ಸರ್ಕಾರ ಹಗರಣಗಳಲ್ಲಿ ಮುಳುಗಿದ್ದು, ಜನರ ಗಮನವನ್ನು ಬೇರೆಡೆ ಸೆಳೆಯಲು ದೇಶದ್ರೋಹಿ ಸಂಘಟನೆಗಳ ಜೊತೆ ಕಾಂಗ್ರೆಸ್ ಕೈಜೋಡಿಸಿರುವ ಅನುಮಾನ ಇದೆ. ಹೀಗಾಗಿ, ನಾಗಮಂಗಲದ ಘಟನೆಯ ತನಿಖೆಯನ್ನು ಎನ್ಐಎಗೆ ವಹಿಸಬೇಕು
ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ನಾಗಮಂಗಲದ ಘಟನೆ ಪೂರ್ವ ನಿಯೋಜಿತ. ಗಣಪತಿ ಮೂರ್ತಿ ವಿಸರ್ಜನೆಯ ಸಾಮೂಹಿಕ ಮೆರವಣಿಗೆ ಮಸೀದಿ ಬಳಿ ಬಂದಾಗ ಡೊಳ್ಳು ಬಾರಿಸಿ, ಮಂಗಳವಾದ್ಯ ನುಡಿಸಬಾರದು ಎಂಬ ನಿಯಮ ಇದೆಯೇ?
ಕೆ.ಎಸ್.ಈಶ್ವರಪ್ಪ, ಮಾಜಿ ಸಚಿವ

ಗಣಪತಿ ಮೆರವಣಿಗೆಗೆ ಅನುಮತಿ ನೀಡಿ, ಭದ್ರತೆ ನೀಡಿದ್ದೆವು. ಎರಡೂ ಕಡೆಯವರು ಕಲ್ಲು ತೂರಾಟ ನಡೆಸಿದ್ದಾರೆ. ಸಿ.ಸಿ.ಟಿ.ವಿ. ಕ್ಯಾಮೆರಾ ಪರಿಶೀಲನೆ ನಡೆದಿದೆ. ಬಿಗಿ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿದೆ
ಮಲ್ಲಿಕಾರ್ಜುನ ಬಾಲದಂಡಿ, ಪೊಲೀಸ್ ವರಿಷ್ಠಾಧಿಕಾರಿ, ಮಂಡ್ಯ

ಎರಡೂ ಕೋಮಿನವರು ಮಚ್ಚು, ಲಾಂಗ್, ದೊಣ್ಣೆ, ಕಲ್ಲುಗಳನ್ನು ತೆಗೆದುಕೊಂಡು ನಮ್ಮನ್ನು ಕೊಲೆ ಮಾಡಲೆಂದೇ ಓಡಿಸಿಕೊಂಡು ಬಂದರು. ಘಟನೆಯಲ್ಲಿ ನನಗೆ, ಇಬ್ಬರು ಕಾನ್‌ಸ್ಟೆಬಲ್‌ಗಳಿಗೆ ಗಾಯಗಳಾಗಿವೆ
ರವಿ ಬಿ.ಜೆ, ಪಿಎಸ್ಐ, ನಾಗಮಂಗಲ ಠಾಣೆ

27 ವರ್ಷಗಳಿಂದ ನಾವು ಗಣೇಶನ ಮೂರ್ತಿ ಕೂರಿಸುತ್ತಿದ್ದೇವೆ. ಅನ್ಯರು ಮಾಡಿದ ತಪ್ಪಿಗೆ, ಗಣಪತಿ ಮೂರ್ತಿ ಕೂರಿಸಿದ್ದ ಹುಡುಗರನ್ನು ಏಕೆ ಪೊಲೀಸರು ಬಂಧಿಸಿದ್ದಾರೆ?
ಬದ್ರಿಕೊಪ್ಪದ ಮಹಿಳೆಯರು, ನಾಗಮಂಗಲ

ಬಟ್ಟೆ ಶೋರೂಂಗೆ ಬೆಂಕಿ ಹಚ್ಚಿದ್ದರಿಂದ ಕೋಟ್ಯಂತರ ನಷ್ಟವಾಗಿದೆ. ಕೆಲಸಕ್ಕಿದ್ದ 7 ಕಾರ್ಮಿಕರೊಂದಿಗೆ ಬೀದಿಗೆ ಬಿದ್ದಿದ್ದೇನೆ. ಸರ್ಕಾರ ನೆರವು ನೀಡಬೇಕು
ಭೀಮರಾಜ್, ಮಾಲೀಕ, ಸಾಧನ ಟೆಕ್ಸ್‌ಟೈಲ್ಸ್

ನಾಗಮಂಗಲ ಗಲಭೆ: 54 ಬಂಧನ

ಒಂದನೇ ಪುಟದಿಂದ...

ಕಾರಣವೇನು?: ‘ಪಟ್ಟಣದ ಬದ್ರಿಕೊಪ್ಪಲಿನ ಗಜಪಡೆ ಯುವಕ ಸಂಘದವರು ನಡೆಸುತ್ತಿದ್ದ ಗಣೇಶ ಮೂರ್ತಿಯ ಮೆರವಣಿಗೆಯು ಮೈಸೂರು ರಸ್ತೆಯ ಮಸೀದಿ ಬಳಿ ಬಂದಾಗ 150ಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಯುವಕರು ಪಟಾಕಿ ಸಿಡಿಸಿ, ಕುಣಿಯುತ್ತಾ ‘ಜೈ ಶ್ರೀರಾಮ್’ ಘೋಷಣೆಯನ್ನು ಕೂಗಿದರು.

ಅದೇ ವೇಳೆ, ಸುತ್ತಮುತ್ತಲಿನ ಮುಸ್ಲಿಂ ಯುವಕರು ಗುಂಪುಗೂಡಿದ್ದು, ಪ್ರತಿಯಾಗಿ ‘ಅಲ್ಲಾಹು ಅಕ್ಬರ್’ ಘೋಷಣೆ ಕೂಗಿದರು. ಇದು, ಉಭಯ ಗುಂಪಿನ ನಡುವಿನ ಮಾತಿನ ಚಕಮಕಿ ಕಾರಣವಾಗಿ, ನಂತರ ಪರಸ್ಪರ ಕೈ ಮಿಲಾಯಿಸುವ ಹಂತಕ್ಕೆ ಹೋಯಿತು.

‘ಇದೇ ವೇಳೆ ಗುಂಪೊಂದು ಕಲ್ಲು ತೂರಾಟ ನಡೆಸಿತು. ‘ಗುಂಪು ಚದುರಿಸಲು ಲಘು ಲಾಠಿ ಪ್ರಹಾರ ನಡೆಸಿ, ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಎರಡೂ ಗುಂಪಿನವರು ಗಲಭೆ ಉಂಟುಮಾಡಲೆಂದೇ ಮಾರಕಾಸ್ತ್ರ, ಕಬ್ಬಿಣದ ಸರಳು, ಕಲ್ಲು, ದೊಣ್ಣೆಗಳನ್ನು ಹಿಡಿದು ಪ್ರಚೋದನಾತ್ಮಕ ಘೋಷಣೆ ಕೂಗಿದರು’ ಎಂದು ದೂರು ದಾಖಲಾಗಿದೆ.

ಗುರುವಾರ ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿದ್ದ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ‘ಆಕಸ್ಮಿಕ ಘಟನೆಯು ಗಲಭೆಗೆ ಕಾರಣವಾಗಿದೆ. ಕೋಮು ಸೌಹಾರ್ದ ಕದಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ’ ಎಂದು ಹೇಳಿದರು.

‘ಹಾನಿಗೊಳಗಾದ ಅಂಗಡಿ ಹಾಗೂ ಮನೆಗಳ ನಷ್ಟ ಅಂದಾಜಿಸಲಾಗುತ್ತಿದೆ. ಮಾಲೀಕರಿಗೆ ನ್ಯಾಯ ಒದಗಿಸುವುದು ನಮ್ಮ ಹೊಣೆ. ಘಟನೆಯನ್ನು ರಾಜಕೀಯವಾಗಿ ಬಳಸದೇ ವಿರೋಧ ಪಕ್ಷಗಳು ಜವಾಬ್ದಾರಿಯಿಂದ ವರ್ತಿಸಬೇಕು’ ಎಂದು ಪ್ರತಿಕ್ರಿಯಿಸಿದರು.

ಪೆಟ್ರೋಲ್ ಬಾಂಬ್ ಬಳಕೆ?: ‘ಪೆಟ್ರೋಲ್ ಬಾಂಬ್ ಬಳಸಿ ಅಂಗಡಿ, ಶೋರೂಂಗಳಿಗೆ ಬೆಂಕಿ ಹಚ್ಚಲಾಗಿದೆ’ ಎಂದು ವ್ಯಾಪಾರಿಗಳು ದೂರಿದರು. ಆದರೆ, ಇದನ್ನು ಪೊಲೀಸರು ನಿರಾಕರಿಸಿದ್ದಾರೆ. ‘ಸರ್ಕಾರ ನಿರ್ದಿಷ್ಟ ಸಮುದಾಯವರ ಓಲೈಕೆಯನ್ನು ನಿಲ್ಲಿಸಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಮಾಜಿ ಶಾಸಕ ಸುರೇಶಗೌಡ ಆಗ್ರಹಿಸಿದ್ದಾರೆ.

ನ್ಯಾಯಾಂಗ ಬಂಧನ: ಬಂಧಿತ 54 ಆರೋಪಿಗಳನ್ನು ಸ್ಥಳೀಯ ಕೋರ್ಟ್ ಸೆ.25ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಅಮಾಯಕರ ಬಂಧನ ಆರೋಪ, ಪ್ರತಿಭಟನೆ

‘ಅಮಾಯಕರನ್ನು ಬಂಧಿಸಲಾಗಿದೆ. ಅವರನ್ನು ಕೂಡಲೇ ಬಿಡುಗಡೆಗೊಳಿಸಿ’ ಎಂದು ಪಟ್ಟಣದ ಠಾಣೆ ಎದುರು ಎರಡೂ ಕೋಮಿನವರು ಗುರುವಾರ ಪ್ರತಿಭಟಿಸಿದರು.

‘ತಪ್ಪಿತಸ್ಥರನ್ನು ಬಿಡುವುದಿಲ್ಲ. ಅಮಾಯಕರ ಬಂಧನವಾಗಿದ್ದಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ ಬಿಡುಗಡೆಗೆ ಸೂಚಿಸಲಾಗಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಈ ಸಂದರ್ಭದಲ್ಲಿ ಭರವಸೆ ನೀಡಿದರು.

‘ಪರಿಸ್ಥಿತಿ ಪೂರ್ಣ ನಿಯಂತ್ರಣಕ್ಕೆ ಬರುವವರೆಗೆ ಬಂದೋಬಸ್ತ್ ಒದಗಿಸಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಎಸ್ಪಿ ಮತ್ತು ಐ.ಜಿ ಅವರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ವಾತಾವರಣ ತಿಳಿಗೊಳಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದ್ದಾರೆ.



ಬೀದರ್‌ನ ಚೌಬಾರ ಮುಖ್ಯರಸ್ತೆಯಲ್ಲಿ ಬುಧವಾರ ಮಧ್ಯರಾತ್ರಿ ವಿವಿಧ ಗಣೇಶ ಮಂಡಳಿಯ ಕಾರ್ಯಕರ್ತರು ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ಗಣೇಶ ಮೂರ್ತಿ ಮೆರವಣಿಗೆ ವೇಳೆ ಬೀದರ್‌ನಲ್ಲಿ ಘಟನೆ

ಮೆರವಣಿಗೆ ನಿಲ್ಲಿಸಿ ನಡುರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೀದರ್: ಗಣೇಶ ಮೂರ್ತಿಗಳ ಮೆರವಣಿಗೆ ವೇಳೆ ಡಿ.ಜೆ ಅನ್ನು ಬಂದ್ ಮಾಡಿಸಿದ ಪೊಲೀಸರ ಕ್ರಮವನ್ನು ವಿರೋಧಿಸಿ ವಿವಿಧ ಗಣೇಶ ಮಂಡಳಿಯ ಕಾರ್ಯಕರ್ತರು ಗಣೇಶನ ಮೂರ್ತಿಗಳ ಮೆರವಣಿಗೆ ನಿಲ್ಲಿಸಿ, ಬುಧವಾರ ಮಧ್ಯರಾತ್ರಿ ನಡುರಸ್ತೆಯಲ್ಲೇ ಕುಳಿತು ಧರಣಿ ನಡೆಸಿದರು.

ರಾತ್ರಿ 12 ಗಂಟೆ ಕಳೆದಂತೆ ಪೊಲೀಸರು ಆಯಾ ಗಣೇಶ ಮಂಡಳಿಯವರ ಗಣೇಶನ ಮೂರ್ತಿಗಳ ಜೊತೆಗಿದ್ದ ಡಿ.ಜೆಗಳನ್ನು ಬಂದ್ ಮಾಡಿಸಿದ್ದರು.

ಪೊಲೀಸರ ಈ ನಡೆ ವಿರುದ್ಧ ಕೆರಳಿದ ಮಂಡಳಿಯ ಕಾರ್ಯಕರ್ತರು ಮೆರವಣಿಗೆ ಅರ್ಧದಲ್ಲಿಯೇ ಕೈಬಿಟ್ಟು, ವಾಹನಗಳನ್ನು ಬಂದ್ ಮಾಡಿಸಿ ನಡುರಸ್ತೆಯಲ್ಲೇ ಧರಣಿ ಕುಳಿತರು. ಪೊಲೀಸರ ವಿರುದ್ಧ ಘೋಷಣೆಗಳನ್ನೂ ಕೂಗಿದರು. ‘ಜೈಶ್ರೀರಾಮ’ ಎಂದು ಘೋಷಣೆ ಹಾಕಿದರು. ಶ್ರೀರಾಮನ ಭಜನೆ ಮಾಡಿದರು.

ಪರಿಸ್ಥಿತಿಯನ್ನು ಗಮನಿಸಿ ಸ್ಥಳಕ್ಕೆ ಧಾವಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು, ಗಣೇಶ ಮಹಾ ಮಂಡಳಿಯ ಪ್ರಮುಖರ ಜೊತೆಗೆ ನಡೆಸಿದ ಸಂಧಾನ ಫಲಿಸಲಿಲ್ಲ. ಪೊಲೀಸರು ಕೂಡ ಪಟ್ಟು ಸಡಿಲಿಸಲಿಲ್ಲ. ಹೀಗಾಗಿ, ತಡರಾತ್ರಿ 3ರವರೆಗೆ ಅನಿಶ್ಚಿತ ವಾತಾವರಣ ಮುಂದುವರಿಯಿತು.

ಆ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಯಿತು. ಬಳಿಕ ಒಂದೊಂದೇ ಗಣೇಶ ಮಂಡಳಿಯ ಡಿ.ಜೆಗಳನ್ನು ಸ್ಥಳದಿಂದ ಕಳಿಸಿ, ಮೂರ್ತಿಗಳನ್ನು ವಿಸರ್ಜನೆಗೆ ಕೊಂಡೊಯ್ಯಬೇಕು ಎಂದು ಪೊಲೀಸರು ಸೂಚಿಸಿದರು. ಇದರಿಂದ ಬೇಸರಗೊಂಡ ಗಣೇಶ ಮಂಡಳಿಯವರು ಅಲ್ಲಿಂದ ನಿರ್ಗಮಿಸಿದರು. ನಸುಕಿನ ಜಾವ 4 ಗಂಟೆಗೆ ವಾತಾವರಣ ಸಂಪೂರ್ಣ ತಿಳಿಯಾಯಿತು.

ಮುಖ್ಯಾಂಶಗಳು

- ರಾತ್ರಿ 12ಕ್ಕೆ ಡಿ.ಜೆ ಸ್ಥಗಿತಕ್ಕೆ ಪೊಲೀಸರ ತಾಕೀತು
- ಪೊಲೀಸರ ನಡೆಗೆ ಆಕ್ರೋಶ, ರಸ್ತೆಯಲ್ಲೇ ಶ್ರೀರಾಮಭಜನೆ

ಮೀಸಲಾತಿ ವಿರೋಧ ಬಿಜೆಪಿಗೆ ರಕ್ತಗತ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಸಲಾತಿ ವಿರೋಧವನ್ನು ರಕ್ತಗತವಾಗಿಸಿಕೊಂಡಿರುವ ಬಿಜೆಪಿ ನಾಯಕರಿಗೆ ರಾಹುಲ್‌ಗಾಂಧಿಯವರ ಹೇಳಿಕೆ ಅರ್ಥ ಮಾಡಿಕೊಳ್ಳುವ ಜ್ಞಾನವಾಗಲಿ, ವ್ಯವಧಾನವಾಗಲಿ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ‘ರಾಹುಲ್‌ಗಾಂಧಿ ಹೇಳಿಕೆ ಕುರಿತು ಬಿಜೆಪಿ ನಾಯಕರು ಮಾಡುತ್ತಿರುವ ಪ್ರತಿಭಟನೆ, ಪ್ರಾಣಿ ಹಿಂಸೆ ವಿರುದ್ಧ ಕಟುಕರು ಪ್ರತಿಭಟನೆ ಮಾಡಿದಂತೆ’ ಎಂದು ಅವರು ಹೇಳಿದ್ದಾರೆ.

‘ವಿದ್ಯೆ, ಉದ್ಯೋಗ ಮತ್ತು ಅವಕಾಶಗಳಲ್ಲಿ ಸರ್ವರಿಗೂ ಸಮಾನ ಪಾಲನ್ನು ನೀಡುವುದೇ ಮೀಸಲಾತಿಯ ಮೂಲ ಉದ್ದೇಶ. ಆ ಉದ್ದೇಶ ಸಾಧನೆಯಾದ ನಂತರ ಮೀಸಲಾತಿ ಏಕೆ ಬೇಕು? ಇದನ್ನು ರಾಹುಲ್ ಗಾಂಧಿ ಮಾತ್ರವಲ್ಲ, ನಾನೂ ಹೇಳುತ್ತೇನೆ. ಇದು ಹೇಗೆ ಮೀಸಲಾತಿ ವಿರೋಧಿ ಹೇಳಿಕೆ ಆಗುತ್ತದೆ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

‘ಸರ್ವರಿಗೂ ಶಿಕ್ಷಣ, ಉದ್ಯೋಗ ಮತ್ತು ಅವಕಾಶಗಳಲ್ಲಿ ಸಮಾನಪಾಲು ಸಿಗಬೇಕೆಂಬ ಉದ್ದೇಶದಿಂದಲೇ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮೀಸಲಾತಿ ನೀತಿಯನ್ನು ಸಂವಿಧಾನದಲ್ಲಿ ಅಳವಡಿಸಿದ್ದರು. ಆದರೆ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಸಮಾನ ಅವಕಾಶ ಇನ್ನೂ ಸಿಕ್ಕಿಲ್ಲ. ಸಾಮಾಜಿಕ ಅಸಮಾನತೆ ಕಡಿಮೆಯಾಗಿಲ್ಲ. ಇದಕ್ಕೆ ಬಿಜೆಪಿ ನಾಯಕರಂತಹ ಜಾತಿ ಪಟ್ಟಭದ್ರರು ಕಾರಣ ಎನ್ನುವುದು ಗೋಡೆ ಬರಹದಷ್ಟು ಸ್ಪಷ್ಟ’ ಎಂದು ಹೇಳಿದ್ದಾರೆ.

‘ಆರ್‌ಎಸ್‌ಎಸ್ ಹುಟ್ಟಿನಿಂದಲೇ ವರ್ಣ ವ್ಯವಸ್ಥೆಯನ್ನು ಸಮರ್ಥಿಸಿಕೊಂಡು ಬಂದಿದೆ. ಸಾಮಾಜಿಕ ನ್ಯಾಯದಾನದ ಅವಕಾಶಗಳು ತೆರೆದುಕೊಂಡಾಗೆಲ್ಲ ಬಿಜೆಪಿ ಅದರ ವಿರುದ್ಧ ಹೋರಾಟ ನಡೆಸಿಕೊಂಡು ಬಂದಿದೆ’ ಎಂದು ಅವರು ಹೇಳಿದ್ದಾರೆ.

ಎಸ್‌ಎಸ್‌ಎಲ್‌ಸಿ ಅರ್ಧವಾರ್ಷಿಕ ಪರೀಕ್ಷೆ 24ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಅರ್ಧ ವಾರ್ಷಿಕ ಪರೀಕ್ಷೆಗಳು (ಸಂಕಲನಾತ್ಮಕ ಮೌಲ್ಯ ಮಾಪನ–1) ಸೆ. 24ರಿಂದ ಅ.1ರವರೆಗೆ ನಡೆಯಲಿವೆ.

ಇದೇ ಮೊದಲ ಬಾರಿ ಎಲ್ಲ ಪ್ರೌಢಶಾಲೆಗಳಲ್ಲೂ ಏಕರೂಪದ ಪರೀಕ್ಷೆ ನಡೆಸಲಾಗುತ್ತಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಎಲ್ಲ ವಿಷಯಗಳ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ್ದು, ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುತ್ತದೆ. ಪರೀಕ್ಷಾ ಸಮಯಕ್ಕೆ ಸರಿಯಾಗಿ ಎಲ್ಲ ಶಾಲೆಗಳಿಗೂ ತಲುಪಲಿವೆ. ಪ್ರಾಯೋಗಿಕ ಮತ್ತು ಮೌಖಿಕ ಪರೀಕ್ಷೆಗಳು ಅ.1ರಂದು ಮಧ್ಯಾಹ್ನ 2ರಿಂದ ಆಯಾ ಶಾಲೆಗಳಲ್ಲಿ ನಡೆಸಲು ಮಂಡಳಿ ಸೂಚಿಸಿದೆ.

ಬೋಯಿಕೇರಿ, ನೆಲ್ಯಹುದಿಕೇರಿ ಗ್ರಾಮದ ಹಿಂದೂ, ಮುಸ್ಲಿಮರು ಒಗ್ಗೂಡಿ ಆಚರಣೆ

ಸೌಹಾರ್ದಕ್ಕೆ ಸಾಕ್ಷಿಯಾದ ಗಣೇಶೋತ್ಸವ

ಪ್ರಜಾವಾಣಿ ವಾರ್ತೆ

ಸುಂಟಿಕೊಪ್ಪ/ಸಿದ್ದಾಪುರ (ಕೊಡಗು ಜಿಲ್ಲೆ): ಸಮೀಪದ ಬೋಯಿಕೇರಿಯ ಸಿದ್ಧಿ ಬುದ್ಧಿ ವಿನಾಯಕ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆಯಲ್ಲಿ ಮುಸ್ಲಿಮರೂ ಭಾಗವಹಿಸಿ ಭಾವೈಕ್ಯ ಮೆರೆದರು. ನೀರು, ಸಿಹಿತಿಂಡಿ, ಕೇಕ್, ತಂಪು ಪಾನೀಯ ವಿತರಿಸಿದರು.

ಮಸೀದಿಯ ಮುಂಭಾಗ ಬಂದ ಮೆರವಣಿಗೆಯನ್ನು ಸೇರಿಸಿಕೊಂಡ ಅವರು, ಎಲ್ಲರಿಗೂ ಸಿಹಿತಿಂಡಿ ವಿತರಿಸಿ ಶುಭ ಕೋರಿದರು. ಸ್ಥಳೀಯರಾದ ಗಣೇಶ್, ಸ್ವಾಗತ್, ರಮೇಶ್, ರೆಹಮತ್ ಖಾನ್, ಸಮ್ಮದ್, ಜಲೀಲ್, ಸಿದ್ದೀಕ್, ಬಶೀರ್ ಸೇರಿದಂತೆ ದೇವಾಲಯ ಸಮಿತಿಯ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಿದ್ದಾಪುರದ ನೆಲ್ಯಹುದಿಕೇರಿ ಗ್ರಾಮದ ಗೌರಿ ಗಣೇಶ ಆಚರಣಾ ಸಮಿತಿಯಲ್ಲಿ ಹಿಂದೂ, ಮುಸ್ಲಿಮ್ ಹಾಗೂ ಕ್ರೈಸ್ತ ಧರ್ಮದ ಯುವಕರಿದ್ದು, ಸೌಹಾರ್ದಕ್ಕೆ ಸಾಕ್ಷಿಯಾಗಿದ್ದಾರೆ.

ಗ್ರಾಮದ ಶ್ರೀ ಸಿದ್ಧಿ ವಿನಾಯಕ ಮಿತ್ರ ಮಂಡಳಿಯು 12 ವರ್ಷಗಳಿಂದ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಿದೆ. ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಕ್ರೈಸ್ತ ಧರ್ಮದ ಯುವಕ ಕ್ಸೇವಿಯಾರ್ ಹಾಗೂ ಸಮಿತಿ ಸದಸ್ಯರಾಗಿ ಮುಸ್ಲಿಂ ಧರ್ಮದ ಯುವಕ ನೌಫಲ್ ಸೇವೆ ಸಲ್ಲಿಸುತ್ತಿದ್ದಾರೆ.

‘ನಾನು ಎರಡು ವರ್ಷಗಳಿಂದ ಅಧ್ಯಕ್ಷನಾಗಿದ್ದು, ಗ್ರಾಮದ ಯುವಕರೆಲ್ಲರೂ ಒಗ್ಗಟ್ಟಿನಿಂದ ಉತ್ಸವವನ್ನು ನಡೆಸಿದ್ದೇವೆ’ ಎಂದು ಕ್ಸೇವಿಯಾರ್ ಅವರು ಪ್ರತಿಕ್ರಿಯಿಸಿದರು.



ಬೋಯಿಕೇರಿಯಲ್ಲಿ ಹಿಂದೂ–ಮುಸ್ಲಿಮರು ಒಗ್ಗೂಡಿ ಗಣೇಶ ಮೂರ್ತಿ ವಿಸರ್ಜನೆಯಲ್ಲಿ ಪಾಲ್ಗೊಂಡರು

ತಲೆಮರೆಸಿಕೊಂಡಿರುವ ಆರೋಪಿ ಪತ್ತೆಗೆ ಶೋಧ

₹1.5 ಕೋಟಿ ಸುಲಿಗೆ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ



ಮನೋಜ್ ಸೈನಿ



ನಾಗೇಶ್ ಬಾಬು



ಸೋನಾಲಿ



ಅಭಿಷೇಕ್

ಸಿಸಿಬಿ ವಿಚಾರಣೆ

ಬೆಂಗಳೂರು: ಉದ್ಯಮಿಯೊಬ್ಬರ ಕಂಪನಿ ಮೇಲೆ ದಾಳಿ ನಡೆಸಿ, ₹1.5 ಕೋಟಿ ಸುಲಿಗೆ ಮಾಡಿದ್ದ ಆರೋಪದ ಅಡಿ ಬಂಧನಕ್ಕೆ ಒಳಗಾಗಿ ಸಿಸಿಬಿ ಕಸ್ಟಡಿಯಲ್ಲಿರುವ ಕೇಂದ್ರ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಲಾಖೆ ಪ್ರಾದೇಶಿಕ ಕಚೇರಿಯ ಅಧೀಕ್ಷಕ ಸೇರಿ ನಾಲ್ವರು ಅಧಿಕಾರಿಗಳ ವಿಚಾರಣೆಯನ್ನು ತನಿಖಾಧಿಕಾರಿಗಳು ತೀವ್ರಗೊಳಿಸಿದ್ದಾರೆ.

ಜೀವನ್ ಬಿಮಾನಗರದ ಜಿ.ಎಂ. ಪಾಳ್ಯದ ಉದ್ಯಮಿ ಕೇಶವ್ ತಕ್ ಅವರು ನೀಡಿದ ದೂರು ಆಧರಿಸಿ ಜಿಎಸ್‌ಟಿ ಗುಪ್ತಚರ ವಿಭಾಗದ ಮಹಾ ನಿರ್ದೇಶನಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯ ವ್ಯಾಪ್ತಿಯ ದಕ್ಷಿಣ ವಲಯದ ಅಧೀಕ್ಷಕ ಅಭಿಷೇಕ್, ಹಿರಿಯ ಗುಪ್ತಚರ ಅಧಿಕಾರಿಗಳಾದ ಮನೋಜ್ ಸೈನಿ, ನಾಗೇಶ್ ಬಾಬು ಹಾಗೂ ಗುಪ್ತಚರ ಅಧಿಕಾರಿ ಸೋನಾಲಿ ಸಹಾಯ್ ಅವರನ್ನು ಬಂಧಿಸಿ, 10 ದಿನ ಸಿಸಿಬಿ ಕಸ್ಟಡಿಗೆ ಪಡೆದುಕೊಂಡಿತ್ತು. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

‘ಆರೋಪಿಗಳಿಂದ ಮೊಬೈಲ್ ಫೋನ್, ಚೆಕ್‌ಬುಕ್, ಲ್ಯಾಪ್‌ಟಾಪ್ ಜಪ್ತಿ ಮಾಡಿಕೊಳ್ಳಲಾಗಿತ್ತು. ಮೊಬೈಲ್ ಫೋನ್ ಹಾಗೂ ಲ್ಯಾಪ್‌ಟಾಪ್‌ಗಳನ್ನು ಸೈಬರ್ ತಜ್ಞರು ಪರಿಶೀಲನೆ ನಡೆಸಲಿದ್ದಾರೆ. ಇನ್ನೂ ಕೆಲವು ಉದ್ಯಮಿಗಳಿಗೆ ಆರೋಪಿಗಳು ಇದೇ ಮಾದರಿಯಲ್ಲಿ ವಂಚನೆ ನಡೆಸಿರುವ ಸಾಧ್ಯತೆಯಿದ್ದು, ಆ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಮನೆ ಸೇರಿದಂತೆ ವಿವಿಧ ಸ್ಥಳಗಳಿಗೆ ಗುರುವಾರ ಆರೋಪಿಗಳನ್ನು ಕರೆದೊಯ್ದು ಮಹಜರು ನಡೆಸಲಾಯಿತು’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ಗೆ ಕೃತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮುಸ್ಲಿಂ ಲೇಖಕರ ಸಂಘವು ಮುಸ್ಲಿಂ ಬರಹಗಾರರ ಉತ್ತಮ ಕನ್ನಡ ಕೃತಿಗೆ ನೀಡುವ ರಾಜ್ಯ ಮಟ್ಟದ ‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ಗೆ ಕೃತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಆಸಕ್ತ ಮುಸ್ಲಿಂ ಬರಹಗಾರರು 2023ರಲ್ಲಿ ಪ್ರಕಟವಾದ ತಮ್ಮ ಕನ್ನಡ ಕೃತಿಯ ನಾಲ್ಕು ಪ್ರತಿಗಳನ್ನು ಇದೇ 20ರ ಒಳಗೆ ಸಂಚಾಲಕರು, ಮುಸ್ಲಿಂ ಸಾಹಿತ್ಯ ಪ್ರಶಸ್ತಿ, ಮುಸ್ಲಿಂ ಲೇಖಕರ ಸಂಘ, ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು- 575001 ಈ ವಿಳಾಸಕ್ಕೆ ಕಳುಹಿಸಬೇಕು. ಅನುವಾದಿತ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸುವುದಿಲ್ಲ ಎಂದು ಸಂಘದ ಅಧ್ಯಕ್ಷ ಉಮರ್ ಯು.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9845054191

ಸಿಸಿಬಿ ಕಸ್ಟಡಿಯಲ್ಲಿರುವ ಬಂಧಿತ ನಕ್ಸಲ್

ಅನಿರುದ್ಧ್ ಗೆಳತಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಹಸ್ಯ ಸಭೆ ನಡೆಸಿದ್ದ ಆರೋಪದ ಮೇಲೆ ಬಂಧಿಸಿರುವ ನಕ್ಸಲ್ ಅನಿರುದ್ಧ್ ರಾಜನ್ ಅವರ ಗೆಳತಿಗೆ ಸಿಸಿಬಿ ಪೊಲೀಸರು ನೋಟಿಸ್ ಜಾರಿಗೊಳಿಸಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ ಸಕ್ರಿಯ ಸದಸ್ಯರಾಗಿರುವ ಅನಿರುದ್ಧ್ ರಾಜನ್, ನಗರದ ಅಜ್ಞಾತ ಸ್ಥಳವೊಂದರಲ್ಲಿ ಮೂರು ದಿನ ಅಡಗಿದ್ದರು. ಇದೇ ವೇಳೆ ನಗರದಲ್ಲಿ ನೆಲಸಿರುವ ಗೆಳತಿಯನ್ನು ಭೇಟಿ ಮಾಡಿ, ಕೆಂಪೇಗೌಡ ಬಸ್ ನಿಲ್ದಾಣದ ಮೂಲಕ ಚೆನ್ನೈಗೆ ಪರಾರಿಯಾಗಲು ಮುಂದಾಗಿದ್ದರು. ಆಗ ಸಿಸಿಬಿ ಪೊಲೀಸರು ಹಾಗೂ ಭಯೋತ್ಪಾದನೆ ನಿಗ್ರಹ ದಳದ (ಎಟಿಎಸ್) ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಅವರನ್ನು ಬಂಧಿಸಿದ್ದರು.

‘ಆರೋಪಿಯು ಸಿಸಿಬಿ ಕಸ್ಟಡಿಯಲ್ಲಿದ್ದು, ವಿಚಾರಣೆ ಮುಂದುವರಿದಿದೆ. ವಿಚಾರಣೆ ವೇಳೆ ಆತ ಪ್ರೇಯಸಿಯನ್ನು ಭೇಟಿ ಮಾಡಲು ಬಂದಿದ್ದೆ ಎಂದೂ ಹೇಳಿದ್ದಾರೆ. ಹೀಗಾಗಿ, ಆತನ ಪ್ರೇಯಸಿಗೆ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.



ಅನಿರುದ್ಧ್ ರಾಜನ್

‘ಪ್ರೇಯಸಿ ನೀಡುವ ಹೇಳಿಕೆ ಆಧರಿಸಿ ಮುಂದಿನ ತನಿಖೆ ನಡೆಸಲಾಗುವುದು. ಇಬ್ಬರಿಗೂ ಹೇಗೆ ಪರಿಚಯ? ಅನಿರುದ್ಧ್ ನಕ್ಸಲ್ ಸಂಘಟನೆಯ ಸದಸ್ಯ ಎಂಬುದು ಗೊತ್ತಿರಲಿಲ್ಲವೆ? ಆರೋಪಿ ಏನು ಕೆಲಸ ಮಾಡುತ್ತಿದ್ದರು? ಭೇಟಿ ವೇಳೆ ಯಾವ ವಿಷಯದ ಕುರಿತು ಚರ್ಚೆಯಾಗಿತ್ತು ಎಂಬ ಮಾಹಿತಿಯನ್ನೂ ವಿಚಾರಣೆ ವೇಳೆ ಕಲೆ ಹಾಕಲಾಗುವುದು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಅನಿರುದ್ಧ್ ಬಳಿಯಿಂದ ಎರಡು ಪೆನ್‌ಡ್ರೈವ್ ವಶಕ್ಕೆ ಪಡೆಯಲಾಗಿದೆ. ಮೊಬೈಲ್ ಪರಿಶೀಲನೆ ವೇಳೆ ಗೆಳತಿಯೊಂದಿಗೆ ನಡೆಸಿರುವ ಚರ್ಚೆಯ ಮಾಹಿತಿ ಸಹ ಸಿಕ್ಕಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಅನಿರುದ್ಧ್ ಲೆಕ್ಕ ಪರಿಶೋಧಕ (ಸಿ.ಎ) ಪರೀಕ್ಷೆಯನ್ನು ಎದುರಿಸಿ, ಅನುತ್ತೀರ್ಣಗೊಂಡಿದ್ದರು. ನಂತರ, ನಕ್ಸಲ್ ಸಂಘಟನೆಗಳ ಜೊತೆಗೆ ಒಡನಾಟ ಹೊಂದಿದ್ದರು. ಸಂಘಟನೆ ಬಲಪಡಿಸಲು ದೇಣಿಗೆ ಸಂಗ್ರಹಿಸುವುದು ಹಾಗೂ ಆ ಹಣವನ್ನು ನಕ್ಸಲ್ ಸಂಘಟನೆಗಳಿಗೆ ಹಂಚಿಕೆ ಮಾಡುವ ಕೆಲಸ ಮಾಡುತ್ತಿದ್ದರು. ಆರೋಪಿ ಹಲವು ವರ್ಷ ಹರಿಯಾಣದಲ್ಲಿ ನೆಲೆಸಿದ್ದರು. ಅಲ್ಲಿಂದ ಭೂಗತ ಚಟುವಟಿಕೆಗಳಲ್ಲಿ ತೊಡಗಿದ್ದರು. ಐದು ವರ್ಷಗಳಿಂದ ಉತ್ತರ ಭಾರತದ ವಿವಿಧ ರಾಜ್ಯಗಳಲ್ಲಿ ಹೆಚ್ಚು ಸಕ್ರಿಯ ಆಗಿರುವ ನಕ್ಸಲ್ ಗುಂಪಿನ ಜೊತೆ ಗುರುತಿಸಿಕೊಂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

‘ಕನ್ನಡದಲ್ಲಿ ಔಷಧ ಚೀಟಿ ಸಾಧಕ ಬಾಧಕಗಳ ಚರ್ಚೆ’

ಬೆಂಗಳೂರು: ‘ವೈದ್ಯರು ಕನ್ನಡದಲ್ಲಿ ಔಷಧ ಚೀಟಿ ಬರೆಯುವುದನ್ನು ಕಡ್ಡಾಯಗೊಳಿಸುವ ವಿಚಾರದಲ್ಲಿ ಸಾಕಷ್ಟು ತಾಂತ್ರಿಕ ಸಂಗತಿಗಳು ಮಿಳಿತವಾಗಿವೆ. ಕನ್ನಡದಲ್ಲಿ ವೈದ್ಯಕೀಯ ವ್ಯವಹಾರ ಅನುಷ್ಠಾನದ ಪೂರ್ವದಲ್ಲಿ ಸಾಧಕ ಬಾಧಕಗಳ ಬಗ್ಗೆ ವಿಸ್ತೃತ ಚರ್ಚೆ ಅಗತ್ಯ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

‘ಸರ್ಕಾರಿ ವೈದ್ಯರು ಕನ್ನಡದಲ್ಲಿಯೇ ಔಷಧ ಚೀಟಿ ಬರೆಯಲು ಶೀಘ್ರ ಆದೇಶ ಜಾರಿ ಮಾಡಿ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ದಿನೇಶ್ ಗುಂಡೂರಾವ್ ಅವರಿಗೆ ಇದೇ 9ರಂದು ಪತ್ರದ ಮೂಲಕ ಮನವಿ ಮಾಡಿದ್ದರು. ಅದಕ್ಕೆ ಸಚಿವರು ಪತ್ರದ ಮೂಲಕ ಸ್ಪಂದಿಸಿದ್ದಾರೆ.



‘ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ವೈದ್ಯರು, ರೋಗಿಗಳು, ಶುಶ್ರೂಷಕರು, ಔಷಧ ವರ್ತಕರು ಕನ್ನಡವನ್ನು ಸರಿಯಾಗಿ ಅರ್ಥೈಸಿಕೊಳ್ಳುವುದರಲ್ಲಿ ಎಡವಿದರೆ ರೋಗಿಗಳ ಜೀವನ್ಮರಣದ ಅಪಾಯವೂ ಉದ್ಭವಿಸಬಹುದು. ಜನರ ಆರೋಗ್ಯವನ್ನು ಕಾಯುವ ವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ ಪ್ರಮುಖ ಬದಲಾವಣೆಗಳ ಮುನ್ನ ಎಲ್ಲ ಭಾಗೀದಾರರ ಜತೆಗೆ ಸಂವಾದ ಅಗತ್ಯ. ಪ್ರಾಧಿಕಾರದ ಸಲಹೆಯನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದು, ಆಸಕ್ತರ ಸಹಮತಿಯೊಂದಿಗೆ ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

‘ಜಾಹೀರಾತಿನಲ್ಲಿ ಅಂಬೇಡ್ಕರ್ ಜೊತೆ ಗಾಂಧೀಜಿ, ನೆಹರೂ ಇರಲಿ’

ಬೆಂಗಳೂರು: ‘ಅಂತರರಾಷ್ಟ್ರೀಯ ‘ಪ್ರಜಾಪ್ರಭುತ್ವದ ದಿನ’ವಾದ ಸೆ. 15ರಂದು ರಾಜ್ಯ ಸರ್ಕಾರ ಆಯೋಜಿಸುತ್ತಿರುವ ‘ಪ್ರಜಾಪ್ರಭುತ್ವಕ್ಕಾಗಿ ಕೈ ಜೋಡಿಸೋಣ’ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಜೊತೆ ಗಾಂಧೀಜಿ ಮತ್ತು ನೆಹರೂ ಅವರ ಭಾವಚಿತ್ರ ಇರುವ ಜಾಹೀರಾತು ಪ್ರಕಟಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿಯ ಸಲಹೆಗಾರರೂ ಆಗಿರುವ ಆಳಂದ ಶಾಸಕ ಬಿ.ಆರ್. ಪಾಟೀಲ ನೇತೃತ್ವದ ಸಮಾಜವಾದಿ ಅಧ್ಯಯನ ಕೇಂದ್ರವು ಪತ್ರ ಬರೆದಿದೆ.

ಕೇಂದ್ರದ ಸಂಚಾಲಕ ಶ್ರೀಕಂಠ ಮೂರ್ತಿ, ಅಲಿಬಾಬು, ನಾಗೇಶ್, ಕೆ.ಎಸ್. ನಾಗರಾಜ್, ದಯಾನಂದ, ಬಾಪು ಹೆದ್ದೂರ ಶೆಟ್ಟಿ, ಜಿ.ವಿ. ಸುಂದರ್, ಪ್ರೊ. ಹನುಮಂತ, ಪ್ರೊ. ನರಸಿಂಹಪ್ಪ, ಡಾ. ಟಿ.ಎನ್. ಪ್ರಕಾಶ್, ಕಾಳಪ್ಪ, ಇಂದು ರಂಗರಾಜ್ ಎಂಬವರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ. ‘ಇತ್ತೀಚಿನ ದಿನಗಳಲ್ಲಿ, ಕೇಂದ್ರ ಸರ್ಕಾರ, ಬಿಜೆಪಿ ಮತ್ತು ಸಂಘ ಪರಿವಾರ ಮಹಾತ್ಮ ಗಾಂಧೀಜಿ ಮತ್ತು ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಚಾರಿತ್ರ್ಯವಧೆ ಮಾಡುತ್ತಲೇ ಬಂದಿವೆ. ಈ ದೇಶದ ಏಕತೆ, ಏಕಾತ್ಮತೆ ಮತ್ತು ಸಮಗ್ರತೆಗೆ ದುಡಿದ ಗಾಂಧೀಜಿಯವರ ತ್ಯಾಗಕ್ಕೆ ಮಸಿ ಬಳಿಯಲು ಟೊಂಕ ಕಟ್ಟಿದ್ದಾರೆ. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವನ್ನು ಅನುಷ್ಠಾನಕ್ಕೆ ತರಲು ನೆಹರೂ ಅವರ ಬದ್ಧತೆಯನ್ನು ನಾವು ಮರೆಯಲು ಸಾಧ್ಯವಿಲ್ಲ’ ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ಪಿಎಸ್ಐ: ಪರೀಕ್ಷೆ ದಿನ ಶೀಘ್ರ ನಿಗದಿ’

ಒಂದನೇ ಪುಟದಿಂದ...

‘22ರಂದು ಯುಪಿಎಸ್‌ಸಿ ಮುಖ್ಯ ಪರೀಕ್ಷೆ ಇರುವುದರಿಂದ 28ಕ್ಕೆ ಮುಂದೂಡಲಾಗಿತ್ತು. ಆದರೆ, 28ರಂದು ಯುಪಿಎಸ್‌ಸಿ ಇಂಗ್ಲಿಷ್ ಪರೀಕ್ಷೆ ಇರುವ ಕಾರಣ ಮತ್ತೆ ಮುಂದೂಡಲು ನಿರ್ಧರಿಸಿದ್ದು, ಒಂದೆರಡು ದಿನಗಳಲ್ಲಿ ಸೂಕ್ತವಾದ ದಿನಾಂಕವನ್ನು ಪ್ರಕಟಿಸಲಾಗುವುದು’ ಎಂದಿದ್ದಾರೆ.

‘ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಬರೆದ ರಾಜ್ಯದ ಅಭ್ಯರ್ಥಿಗಳ ಪೈಕಿ, 100ಕ್ಕೂ ಹೆಚ್ಚು ಮಂದಿ ಮುಖ್ಯ ಪರೀಕ್ಷೆ ಬರೆಯಲು ಅರ್ಹತೆ ಪಡೆದಿದ್ದಾರೆ. ಯುಪಿಎಸ್‌ಸಿ ಮತ್ತು ಪಿಎಸ್ಐ ಪರೀಕ್ಷೆಯನ್ನು ಒಂದೇ ದಿನ ನಿಗದಿಪಡಿಸಿದರೆ, ಹುದ್ದೆ ಆಕಾಂಕ್ಷಿಗಳಿಗೆ ಯಾವುದಾದರೂ ಒಂದು ಪರೀಕ್ಷೆ ಬರೆಯುವ ಅವಕಾಶ ತಪ್ಪುತ್ತದೆ. ಹೀಗಾಗಿ, ಪಿಎಸ್ಐ ಪರೀಕ್ಷೆಯನ್ನು ಮುಂದೂಡುವಂತೆ ಆಕಾಂಕ್ಷಿಗಳು ಮನವಿ ಸಲ್ಲಿಸಿದ್ದರು. ಬಿಜೆಪಿ ನಿಯೋಗ ಕೂಡಾ ಮನವಿ ಸಲ್ಲಿಸಿತ್ತು’ ಎಂದು ಪರಮೇಶ್ವರ ಹೇಳಿದ್ದಾರೆ.

‘ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿಗೆ ವಯೋಮಿತಿ ಹೆಚ್ಚಳದ ಕುರಿತು ಬೇರೆ ರಾಜ್ಯಗಳಿಂದ ಮಾಹಿತಿ ಕಲೆ ಹಾಕಿದ್ದೇವೆ. ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದೂ ಅವರು ವಿವರಿಸಿದ್ದಾರೆ.

ದ್ವಿತೀಯ ಪಿಯು ಪರೀಕ್ಷಾ ಅವಧಿ ಕಡಿತ

ಒಂದನೇ ಪುಟದಿಂದ...

ಭೌತ ವಿಜ್ಞಾನ, ರಸಾಯನ ವಿಜ್ಞಾನ, ವಿದ್ಯುನ್ಮಾನ ವಿಜ್ಞಾನ, ಗಣಕ ವಿಜ್ಞಾನ, ಗೃಹ ವಿಜ್ಞಾನ ಸೇರಿದಂತೆ ಪ್ರಾಯೋಗಿಕ ಪರೀಕ್ಷೆ ಇರುವ ಕೆಲ ವಿಷಯಗಳಲ್ಲಿ ಲಿಖಿತ ಪರೀಕ್ಷೆಯನ್ನು 70 ಅಂಕಗಳಿಗೆ ಹಾಗೂ ಪ್ರಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಲ್ಲಿ 80 ಅಂಕಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ. ವಿದ್ಯಾರ್ಥಿಗಳು 80 ಅಂಕಗಳಿಗೆ ಉತ್ತರಿಸಬೇಕಾದ ವಿಷಯಗಳ ಪ್ರಶ್ನೆಪತ್ರಿಕೆಗಳು ಒಟ್ಟು 120 ಅಂಕಗಳ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಅವುಗಳಲ್ಲಿ 80 ಅಂಕಗಳಿಗಷ್ಟೇ ಉತ್ತರಿಸಬೇಕು. 70 ಅಂಕಗಳಿಗೆ ಉತ್ತರಿಸಬೇಕಾದ ವಿಷಯಗಳ ಪ್ರಶ್ನೆಪತ್ರಿಕೆಗಳು 105 ಅಂಕಗಳ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಅವುಗಳಲ್ಲಿ 70 ಅಂಕಗಳಿಗಷ್ಟೇ ಉತ್ತರಿಸಬೇಕು.

ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವಾಗ ಪಠ್ಯಕ್ರಮದಲ್ಲೇ ಇರುವ ವಿಷಯಗಳನ್ನು ಒಳಗೊಂಡ ಪ್ರಶ್ನೆಗಳನ್ನು ಸಿದ್ಧಪಡಿಸುವುದು ಕಡ್ಡಾಯ ಎಂದೂ ಮಂಡಳಿ ಹೇಳಿದೆ.

ಬಿಜೆಪಿ ಭಿನ್ನರ ಮುನಿಸಿಗೆ ‘ಸಂಘ’ದ ಮುಲಾಮು

ನಾಯಕತ್ವದ ಬಗ್ಗೆ ಕಿಡಿ –ಒಗ್ಗಟ್ಟಿನ ಜಪ • ಅಶಿಸ್ತಿನಿಂದ ವರ್ತಿಸಿದರೆ ಶಿಸ್ತುಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯಲ್ಲಿನ ‘ಭಿನ್ನ’ ಬಣಗಳ ಮುನಿಸು ಮತ್ತು ಅಸಮಾಧಾನವನ್ನು ಸದ್ಯದ ಮಟ್ಟಿಗೆ ಶಮನಗೊಳಿಸುವಲ್ಲಿ ಆರ್‌ಎಸ್‌ಎಸ್ ಮುಖಂಡರು ಯಶಸ್ವಿಯಾಗಿದ್ದಾರೆ ಎಂದು ತಿಳಿದು ಬಂದಿದೆ.

ಇದೇ ವೇಳೆ ಬಿಜೆಪಿ ಕೆಲವು ‘ರೆಬೆಲ್’ ನಾಯಕರು ಪಕ್ಷದೊಳಗಿನ ವಿದ್ಯಮಾನಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ. ‘ವೈಮನಸ್ಸು ಬಿಟ್ಟು, ಒಂದಾಗಿ ಹೋಗದೆ ಇದ್ದರೆ ಮುಂದೆ ಕಷ್ಟವಾಗಬಹುದು. ಕಠಿಣ ನಿರ್ಧಾರ ತೆಗೆದುಕೊಳ್ಳಬಹುದು ಎಂಬ ಎಚ್ಚರಿಕೆಯನ್ನೂ ಸಂಘದ ನಾಯಕರು ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

ಬಿ.ವೈ.ವಿಜಯೇಂದ್ರ ರಾಜ್ಯ ಘಟಕದ ಅಧ್ಯಕ್ಷರಾದ ಬಳಿಕ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಪ್ರಮುಖರ ಸಮ್ಮುಖದಲ್ಲಿ ನಡೆದ ಮೊದಲ ದೊಡ್ಡ ಮಟ್ಟದ ಸಮನ್ವಯ ಸಭೆ ಸರಸ್ವತಿನಗರದ ರಾಷ್ಟ್ರೋತ್ಥಾನ ಕೇಂದ್ರದಲ್ಲಿ ಗುರುವಾರ ನಡೆಯಿತು. ಎರಡೂ ಬಣಗಳ ಎಲ್ಲ ಪ್ರಮುಖ ನಾಯಕರು ಭಾಗಿಯಾಗಿದ್ದರು.

‘ಆರಂಭದಲ್ಲಿ ಬಿಜೆಪಿ ನಾಯಕರಿಗೆ ಅವರವರ ಅಭಿಪ್ರಾಯಗಳನ್ನು ಹೇಳಿಕೊಳ್ಳಲು ಅವಕಾಶ ನೀಡಲಾಯಿತು. ಬಳಿಕ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಆರ್‌ಎಸ್‌ಎಸ್ ಸಹ ಸರಕಾರ್ಯವಾಹ ಮುಕುಂದ ಮಾತನಾಡಿದರು. ಕೆಲವು ನಾಯಕರು ವಿಜಯೇಂದ್ರರ ಕಾರ್ಯ ವೈಖರಿಯ ಬಗ್ಗೆ ವಾಗ್ದಾಳಿ ನಡೆಸಿದರು. ಇದಕ್ಕೆ ವಿಜಯೇಂದ್ರ ಸಮಜಾಯಿಷಿ ನೀಡಿದರು’ ಎಂದು ಮೂಲಗಳು ತಿಳಿಸಿವೆ.

‘ಈಗಿನ ನಾಯಕತ್ವದಲ್ಲಿ ಸಂಘಟನೆ ಕಷ್ಟ’

‘ಪ್ರಬುದ್ಧತೆ ಇರುವವರಿಗೆ ಪಕ್ಷದ ಹೊಣೆಗಾರಿಕೆ ನೀಡಬೇಕಿತ್ತು. ಈಗಿನ ನಾಯಕತ್ವದಲ್ಲಿ ಸಂಘಟನೆ ಕಷ್ಟ. ಅನುಭವಿಗಳಿಗೆ ಆದ್ಯತೆ ನೀಡಬೇಕು’ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಅಸಮಾಧಾನ ಹೊರಹಾಕಿದ್ದಾಗಿ ಮೂಲಗಳು ತಿಳಿಸಿವೆ.

ಶಾಸಕ ಬಸನಗೌಡ ಪಾಟೀಲ ಯತ್ನಾಳ, ‘ಪಕ್ಷವು ಕುಟುಂಬ ರಾಜಕಾರಣ, ಭ್ರಷ್ಟಾಚಾರ ವಿರೋಧಿಸಿಕೊಂಡು ಬಂದಿದೆ. ಆದರೆ, ಅಂತಹದ್ದೇ ಹಿನ್ನೆಲೆಯವರಿಗೆ ನಾಯಕತ್ವ ನೀಡಲಾಗಿದೆ’ ಎಂದು ಟೀಕಿಸಿದ್ದಾಗಿ ತಿಳಿಸಿವೆ.

‘ನನ್ನ ಮೇಲಿನ ಆರೋಪ ಮಾಡುತ್ತಿದ್ದಾರೆ. ಹಾಗೆಂದು ನಾನು ಪಕ್ಷ, ಸಂಘಟನೆ ಕಾರ್ಯದಿಂದ ವಿಮುಖನಾಗಿದ್ದೇನಾ?’ ಎಂದು ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದರು ಎಂದು ತಿಳಿಸಿವೆ.

ಬಿ.ವೈ.ವಿಜಯೇಂದ್ರ ಅವರು, ‘ನಾನು ಉದ್ದೇಶಪೂರ್ವಕವಾಗಿ ಯಾರನ್ನೂ ನೋಯಿಸುವ ಕೆಲಸ ಮಾಡಿಲ್ಲ. ವರಿಷ್ಠರು ಒಪ್ಪಿಸಿದ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ಸಮಜಾಯಿಷಿ ನೀಡಿದರು’ ಎಂದುಹೇಳಿವೆ.

ಆರ್‌ಎಸ್‌ಎಸ್ ನಾಯಕರ ಎಚ್ಚರಿಕೆ

- ರಾಜ್ಯದಲ್ಲಿ ಬಿಜೆಪಿಗೆ ಭಾರಿ ಹಿನ್ನಡೆ ಆಗಿದೆ. ಇದಕ್ಕೆ ಪಕ್ಷದ ನಾಯಕರೇ ಕಾರಣ. ಆಡಳಿತ ಪಕ್ಷದ ವೈಫಲ್ಯ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಡುವುದನ್ನು ಬಿಟ್ಟು, ನೀವೇ ಪರಸ್ಪರ ಹೋರಾಟದಲ್ಲಿ ತೊಡಗಿದ್ದೀರಿ. ಮುಂದೆ ವೈಮನಸ್ಸನ್ನು ಬಿಟ್ಟು ಒಟ್ಟಾಗಿ ಹೋಗಬೇಕು
- ಪಕ್ಷದ ಒಳಗಿನ ವಿಷಯಕ್ಕೆ ಮಾಧ್ಯಮಗಳ ಮುಂದೆ ಏಕೆ ಹೋಗಬೇಕು? ನಿಮ್ಮ ಸಮಸ್ಯೆ, ಅಭಿಪ್ರಾಯಗಳು ಏನೇ ಇದ್ದರೂ ಪಕ್ಷದ ಒಳಗೇ ಇದ್ದು ಬಗೆಹರಿಸಿಕೊಳ್ಳಬೇಕು. ಪಕ್ಷದ ಶಿಸ್ತು ಉಲ್ಲಂಘಿಸುವವರು ಎಷ್ಟೇ ದೊಡ್ಡವರಾಗಿದ್ದರೂ ಪಕ್ಷ ಕ್ರಮ ತೆಗೆದುಕೊಳ್ಳುತ್ತದೆ
- ಭಿನ್ನಾಭಿಪ್ರಾಯ, ಅಸಮಾಧಾನ ರಹಸ್ಯವಾಗಿಲ್ಲ. ಅವನ್ನೆಲ್ಲ ಕೊನೆ ಹಾಡಬೇಕು. ತಪ್ಪುಗಳನ್ನು ಎಲ್ಲರೂ ಸರಿಪಡಿಸಿಕೊಳ್ಳಬೇಕು ಮತ್ತು ಇಲ್ಲವಾದರೆ ನಿಮ್ಮ ಪಕ್ಷಕ್ಕೂ ಬೇರೆ ಪಕ್ಷಕ್ಕೆ ಏನು ವ್ಯತ್ಯಾಸ. ಅಧಿಕಾರ ಕೆಲವರಿಗೆ ಸಿಗದೇ ಇರಬಹುದು, ಮುಂದೆ ಸಿಕ್ಕೇ ಸಿಗುತ್ತದೆ
- ನೀವು ಕಾಂಗ್ರೆಸ್‌ನವರ ರೀತಿಯೇ ವರ್ತಿಸುವುದಾದರೆ ಸಂಘ ಏಕೆ ಮಧ್ಯ ಪ್ರವೇಶ ಮಾಡಬೇಕು? ದೇಶದ ಜನ ಸಂಘ ಮತ್ತು ಬಿಜೆಪಿಯ ಮೇಲೆ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಅವರ ನಿರೀಕ್ಷೆಗೆ ಧಕ್ಕೆ ಉಂಟಾಗಬಾರದು. ನೀವು ಬೇರೆಯವರ ದಾರಿಯಲ್ಲಿ ನಡೆಯುವುದಾದರೆ ಸಂಘ ಏಕೆ ನಿಮ್ಮ ಬೆಂಬಲಕ್ಕೆ ನಿಲ್ಲಬೇಕು? ‘ಇದರಲ್ಲಿ ನಮ್ಮ ಸ್ವಾರ್ಥ ಏನಿದೆ? ದೇಶ, ಹಿಂದುತ್ವ, ಹಿಂದೂಗಳ ರಕ್ಷಣೆ ಮತ್ತು ಅಭಿವೃದ್ಧಿ ಆದ್ಯತೆ ಆಗಬೇಕು
- ವಾಲ್ಮೀಕಿ ಹಗರಣ ಖಂಡಿಸಿ ಬಳ್ಳಾರಿಗೆ ಪಾದಯಾತ್ರೆಯನ್ನು ಒಗ್ಗಟ್ಟಿನಿಂದ ಮಾಡಿ ಪಕ್ಷದ ನೈಜ ಶಕ್ತಿ ಅನಾವರಣಗೊಳಿಸಬೇಕು.

ಪಾದಯಾತ್ರೆ ಬಗ್ಗೆ ಒಮ್ಮೊಮ್ಮೆ ಭಿನ್ನ ಹೇಳಿಕೆ ಕೊಡುವುದು ಸರಿಯಲ್ಲ

ಭಾಗಿಯಾಗಿದ್ದ ಪ್ರಮುಖರು: ಆರ್‌ಎಸ್‌ಎಸ್ ಮುಖಂಡರಾದ ಮುಕುಂದ, ಸುಧೀರ್ ಕುಮಾರ್, ತಿಪ್ಪೇಸ್ವಾಮಿ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ಅಗರ್‌ವಾಲ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಪ್ರತಿಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ, ಸಿ.ಎನ್.ಅಶ್ವತ್ಥ ನಾರಾಯಣ, ಪ್ರತಾಪಸಿಂಹ, ಸಿ.ಟಿ.ರವಿ, ರಮೇಶ ಜಾರಕಿಹೊಳಿ ಸೇರಿ 40 ನಾಯಕರು.

ಮುಡಾ: ಹೈಕೋರ್ಟ್‌ನಲ್ಲಿ ಹೀಗಿತ್ತು ವಾದಸರಣಿ

ಬೆಂಗಳೂರು: ‘ಮುಡಾ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಕ್ರಿಮಿನಲ್ ಪ್ರಕರಣದ ತನಿಖೆಗೆ ರಾಜ್ಯಪಾಲರು ನೀಡಿರುವ ಆದೇಶವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯನ್ನು ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಪೂರ್ಣಗೊಳಿಸಿದರು. 3ಅರ್ಜಿ ಕಾಯ್ದಿರಿಸಿದ ನ್ಯಾಯಮೂರ್ತಿಗಳು ಮಧ್ಯಾಹ್ನ 12 ಗಂಟೆಯಿಂದ ಸಂಜೆ 6.25ರವರೆಗೆ ಪ್ರಕರಣದ ವಿಚಾರಣೆಯನ್ನು ಆಲಿಸಿದರು.

ಪ್ರಜಾವಾಣಿ ವಾರ್ತೆ

‘ವಿಷಲ್ ಬ್ಲೋವರ್‌ಗಳ ವಿರುದ್ಧ ಆರೋಪಗಳು ಬರುವುದು ಸಹಜ...’

‘ವಿಜಿಲ್ ಪ್ರಕರಣವೊಂದರಲ್ಲಿ ಟಿ.ಜೆ. ಅಬ್ರಹಾಂಗೆ ಸುಪ್ರೀಂ ಕೋರ್ಟ್ ₹25 ಲಕ್ಷ ದಂಡ ಹಾಕಿದೆ’ ಎಂದು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರ ಆರೋಪಕ್ಕೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಪ್ರತಿಕ್ರಿಯೆ ನೀಡಿ ಹೀಗೆ.

- ಮುಖ್ಯಮಂತ್ರಿ ವಿರುದ್ಧದ ಕ್ರಿಮಿನಲ್ ಪ್ರಕರಣದ ತನಿಖೆಗೆ ರಾಜ್ಯಪಾಲರು ನೀಡಿರುವ ಆದೇಶ ತರ್ಕರಹಿತ ಅನುಮತಿ. ಅನುಮತಿ ನೀಡುವ ಮುನ್ನ ತಮ್ಮ ವಿವೇಚನೆಯನ್ನು ಹೇಗೆ ಬಳಸಿದ್ದೇನೆ ಎಂದು ಅವರು ಎಲ್ಲಿಯೂ ತಿಳಿಸಿಲ್ಲ.

ಪ್ರಕರಣದ ಆರೋಪದಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರು, ಮಾಜಿ ಸಚಿವ ಶಶಿಕಲಾ ಜೊಲ್ಲೆ ವಿರುದ್ಧದ ದೂರಿನ ಕುರಿತು ಹಗರಣದ ಆರೋಪಕ್ಕೆ ತನಿಖೆಗೆ ಅನುಮತಿ ನೀಡದಿರಲು ಕಾರಣಗಳನ್ನು ನೀಡಿದ್ದಾರೆ. ಆದರೆ, ಸಿದ್ದರಾಮಯ್ಯನವರ ಪ್ರಕರಣದಲ್ಲಿ ಈ ತಾರತಮ್ಯಪೂರಿತ ನಡೆ ಅನುಸರಿಸಿದ್ದಾರೆ.

ಅಭಿಷೇಕ್ ಮನು ಸಿಂಘ್ವಿ

ವಾದ ಸರಣಿ ಹೀಗಿತ್ತು

- ಕಳೆದ ಐವತ್ತು ವರ್ಷಗಳಲ್ಲಿ ಸಿದ್ದರಾಮಯ್ಯ ಮತ್ತವರ ಐದು ವರ್ಷಗಳ ಅಧಿಕಾರಾವಧಿ ಪೂರೈಸಿದ ಮುಖ್ಯಮಂತ್ರಿ ಎನಿಸಿದ್ದಾರೆ. ಐದು ವರ್ಷಗಳ ನಂತರ ಮತ್ತೊಮ್ಮೆ ಸಿ.ಎಂ ಆಗಿ ಆಯ್ಕೆಯಾಗಿದ್ದಾರೆ. ಆರೋಪಿತ ಸಿ.ಎಂ ಆಗಿರುವವರ ಮುಖ್ಯವಿ ಸ್ಥಳಗಳು ಹೀಗೇನು ಮಾಡುವ ಆಸಕ್ತರು. ಈ ಕೇಸಿನಲ್ಲಿ ಸಿದ್ದರಾಮಯ್ಯನವರ ಪಾತ್ರವೇನ ಎಂದು ಎಲ್ಲೂ ಹೇಳಿಲ್ಲ. ಸಿದ್ದರಾಮಯ್ಯನವರ ಸಹಿಯೇ ಇಲ್ಲದ 23 ವರ್ಷಗಳ ಹಳೆಯ

ಅಸೂಯೆಯಿಂದ ಈ ರೀತಿ ಏನಾದರೂ ಮಾಡಿರಬಹುದು. ಅದಕ್ಕೇನಾ ಸಿದ್ದರಾಮಯ್ಯರನ್ನು ಹೊಣೆ ಮಾಡುವುದು ಸರಿಯಲ್ಲ.

ರವಿವರ್ಮ ಕುಮಾರ್, ಸಿ.ಎಂ ಪರ ಹಿರಿಯ ವಕೀಲ

- ರಾಜ್ಯಪಾಲರು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸಿಲ್ಲ. ಹೀಗಾಗಿ, ರಾಜ್ಯಪಾಲರ ಆದೇಶವನ್ನು ಅನೂರ್ಜಿತಗೊಳಿಸಬೇಕು.

ಕೆ.ಶಶಿಕಿರಣ ಶೆಟ್ಟಿ, ಸರ್ಕಾರದ ಪರ ಅಡ್ವೊಕೇಟ್ ಜನರಲ್

- ಭೂ ಸ್ವಾಧೀನ ಪ್ರಕರಣಗಳಲ್ಲಿ ಜಮೀನು ಕಳೆದುಕೊಂಡವರಿಗೆ ಪರಿಹಾರ ರೂಪದಲ್ಲಿ ನೀಡಲಾಗುವ ನಿವೇಶನಗಳು ಸಹಜ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡ ಬಡಾವಣೆಯಲ್ಲಿ ಎಲ್ಲಿ ಅಭಿವೃದ್ಧಿ ಮಾಡಿರುತ್ತದೋ ಅಲ್ಲೇ ಅವರ ಸಮಾನಾಂತರ ಮೌಲ್ಯದ ವ್ಯಾಪ್ತಿ ಪ್ರದೇಶದಲ್ಲೇ ಬದಲಿ ನಿವೇಶನ ಪಡೆಯಬೇಕು.

ಲಕ್ಷ್ಮಿ ಅಯ್ಯಂಗಾರ್, ದೂರುದಾರ ಸ್ನೇಹಮಯಿ ಕೃಷ್ಣ ಪರ ಹಿರಿಯ ವಕೀಲೆ

ಕುಟುಂಬಸ್ಥರು, ವಕೀಲರಿಂದ ದರ್ಶನ್ ಭೇಟಿ

ಪ್ರಜಾವಾಣಿ ವಾರ್ತೆ


ಬಳ್ಳಾರಿ: ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರನ್ನು ಪತ್ನಿ ವಿಜಯಲಕ್ಷ್ಮಿ, ತಮ್ಮ ದಿನಕರ್ ಮತ್ತು ವಕೀಲರು ಇಲ್ಲಿನ ಕಾರಾಗೃಹದಲ್ಲಿ ಗುರುವಾರ ಭೇಟಿಯಾಗಿ, ಅರ್ಧಗಂಟೆ ಚರ್ಚಿಸಿದರು.

ಮಧ್ಯಾಹ್ನ 12.30 ರಿಂದ 1ಗಂಟೆಯವರೆಗೆ ಭೇಟಿಯಾಯಿತು. ವಿಶೇಷ ಭದ್ರತಾ ಕೊಠಡಿಯಿಂದ ಬರುವಾಗ ಮತ್ತು ಮರಳುವಾಗ ದರ್ಶನ್ ಕೈಯಲ್ಲಿ ಏನೂ ಇರಲಿಲ್ಲ. ಗುವಾಹಟಿಯ ಕಾಮಾಕ್ಯ ದೇವಸ್ಥಾನದಿಂದ ತರಲಾಗಿದ್ದ ಪ್ರಸಾದವನ್ನು ದರ್ಶನ್ ಅವರಿಗೆ ಪತ್ನಿ ವಿಜಯಲಕ್ಷ್ಮೀ ನೀಡಿದರು ಎನ್ನಲಾಗಿದೆ. ಅದು ಖಚಿತವಾಗಿಲ್ಲ.

‘ದೋಷಾರೋಪ ಪಟ್ಟಿ ಮತ್ತು ಕಾನೂನು ಹೋರಾಟದ ಬಗ್ಗೆ ಚರ್ಚಿಸಿದೆವು. ಹಿರಿಯ ವಕೀಲರ ಜೊತೆ ಚರ್ಚಿಸಿ, ಜಾಮೀನು ಅರ್ಜಿ ಸಲ್ಲಿಕೆ ಕುರಿತು ತೀರ್ಮಾನಿಸುತ್ತೇವೆ’ ಎಂದು ಅವರ ವಕೀಲರು ತಿಳಿಸಿದರು.

ಮಾಧ್ಯಮಗಳಿಗೆ ಬೆರಳು: ವಕೀಲರ ಭೇಟಿಗೆ ಮಧ್ಯಾಹ್ನ 4.15ಕ್ಕೆ ವಿಶೇಷ ಭದ್ರತಾ ಕೊಠಡಿಯಿಂದ ಜೈಲಿನ ಸಂದರ್ಶಕರ ಕೊಠಡಿಗೆ ನಡೆದು ಹೋಗುತ್ತಿದ್ದ ದರ್ಶನ್, ಕಾರಾಗೃಹದ ಗೇಟು ಬಳಿ ನಿಂತಿದ್ದ ಮಾಧ್ಯಮದವರನ್ನು ಕಂಡು ಮಧ್ಯದ ಬೆರಳು ಪ್ರದರ್ಶಿಸಿದರು. ಕೊಠಡಿಗೆ ಮರಳುವಾಗಲೂ ಅವರು ಮಧ್ಯದ ಬೆರಳನ್ನು ಪ್ರದರ್ಶಿಸಿದರು. ಈ ವಿಡಿಯೊ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿದೆ.

ಕೃಷ್ಣೆಗೌಡರಿಗೆ ‘ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ’


ಪ್ರೊ.ಕೃಷ್ಣೆಗೌಡ

ಬ್ರಹ್ಮಾವರ (ಉಡುಪಿ): ಕೋಟತಟ್ಟು ಗ್ರಾಮ ಪಂಚಾಯಿತಿ, ಕೋಟ ಡಾ.ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ನೀಡುವ ‘ಡಾ.ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ’ಗೆ ವಾಗ್ಮಿ, ಸಾಹಿತಿ ಪ್ರೊ. ಕೃಷ್ಣೆಗೌಡ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ₹ 75 ಸಾವಿರ ನಗದು ಒಳಗೊಂಡಿದೆ.

ಅ.10ರಂದು ಕೋಟ ಶಿವರಾಮ ಕಾರಂತರ ಜನ್ಮದಿನದಂದು ಕಾರಂತರ ಬೆಳ್ಳಿ ಮೂರ್ತಿಯೊಂದಿಗೆ ಪ್ರಶಸ್ತಿ ಪ್ರದಾನ ಆಗಲಿದೆ ಎಂದು ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಆನಂದ ಸಿ ಕುಂದರ್ ಅವರು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಹೆಚ್ಚಿನ ಮನುಷ್ಯರು ತಾವು ಎಂದಿಗೂ ಸಾಯುವುದೇ ಇಲ್ಲವೇನೋ ಎಂಬಂತೆ ಬದುಕುತ್ತಾರೆ ಮತ್ತು ನಂತರ ತಾವು ಎಂದೂ ಬದುಕಿಯೇ ಇರಲಿಲ್ಲವೇನೋ ಎಂಬಂತೆ ಸತ್ತು ಹೋಗುತ್ತಾರೆ.

-ದಲೈಲಾಮ

‘ಆಯುಷ್ಮಾನ್ ಭಾರತ’ ವಿಸ್ತರಣೆ ಅಗತ್ಯವಾಗಿದ್ದ ನಡೆ, ಸ್ವಾಗತಾರ್ಹ

‘ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ’ಯ ಅಡಿಯಲ್ಲಿ ಆರೋಗ್ಯ ವಿಮಾ ರಕ್ಷೆಯನ್ನು 70 ವರ್ಷ ಹಾಗೂ ಅದಕ್ಕಿಂತ ಹೆಚ್ಚು ವಯಸ್ಸಾಗಿರುವವರಿಗೆ ವಿಸ್ತರಿಸಲು ಕೇಂದ್ರ ಸಚಿವ ಸಂಪುಟವು ತೀರ್ಮಾನಿಸಿರುವುದು, ಆರೋಗ್ಯ ವಿಮೆಯ ಸೌಲಭ್ಯವನ್ನು ವಿಸ್ತರಿಸುವಲ್ಲಿ ಬಹಳ ಮುಖ್ಯವಾದ ಹೆಜ್ಜೆ. ಈ ಕ್ರಮ ಸ್ವಾಗತಾರ್ಹ. ಆರೋಗ್ಯ ವಿಮಾ ಕ್ಷೇತ್ರದಲ್ಲಿನ ಬಹುದೊಡ್ಡ ಕೊರತೆಯೊಂದನ್ನು ತುಂಬುವ ಕೆಲಸವನ್ನು ಈ ತೀರ್ಮಾನವು ಮಾಡಲಿದೆ. ಕೇಂದ್ರದ ತೀರ್ಮಾನದ ಪರಿಣಾಮವಾಗಿ, ನಾಲ್ಕೂವರೆ ಕೋಟಿ ಕುಟುಂಬಗಳ ಆರು ಕೋಟಿಗೂ ಹೆಚ್ಚು ಮಂದಿ ಹಿರಿಯ ನಾಗರಿಕರಿಗೆ ಪ್ರಯೋಜನ ಆಗಲಿದೆ. ಈ ಹಿರಿಯ ನಾಗರಿಕರ ಆದಾಯ ಪ್ರಮಾಣ, ಅವರ ಸಾಮಾಜಿಕ ಸ್ಥಿತಿ ಯಾವುದೇ ಆಗಿದ್ದರೂ ಅವರಿಗೆ ವಿಮಾ ರಕ್ಷೆ ಸಿಗಲಿದೆ. ಈ ಕ್ರಮವು ಬಿಜೆಪಿಯ ಚುನಾವಣಾ ಭರವಸೆಗಳಲ್ಲಿ ಒಂದಾಗಿತ್ತು. ಈಗ ಕೇಂದ್ರ ಸಂಪುಟವು ಇದನ್ನು ಈಡೇರಿಸುವ ಕೆಲಸ ಮಾಡಿದೆ. ಈ ತೀರ್ಮಾನದ ಕಾರಣದಿಂದಾಗಿ ಮೊದಲ ವರ್ಷದಲ್ಲಿ ಕೇಂದ್ರ ಸರ್ಕಾರವು ₹3,437 ಕೋಟಿ ವೆಚ್ಚ ಮಾಡಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. ಖಾಸಗಿ ಆರೋಗ್ಯ ವಿಮಾ ಯೋಜನೆಗಳನ್ನು ಪಡೆದಿರುವವರಿಗೂ ಇಎಸ್ಐ (ನೌಕರರ ರಾಜ್ಯ ವಿಮೆ) ಸೌಲಭ್ಯ ಪಡೆದಿರುವವರಿಗೂ ‘ಆಯುಷ್ಮಾನ್ ಭಾರತ’ ಯೋಜನೆಯ ಪ್ರಯೋಜನ ದಕ್ಕಲಿದೆ. ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ (ಸಿಜಿಎಚ್‌ಎಸ್) ಹಾಗೂ ಇತರ ಕೆಲವು ಯೋಜನೆಗಳ ವ್ಯಾಪ್ತಿಯಲ್ಲಿ ಇರುವವರು ತಮಗೆ ಇನ್ನು ಮುಂದೆ ಯಾವ ಯೋಜನೆಯ ಪ್ರಯೋಜನ ಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕಿದೆ.



ಅನುಷ್ಠಾನದಲ್ಲಿನ ಸಮಸ್ಯೆಗಳು, ಕೊರತೆಗಳನ್ನು ನಿವಾರಿಸಿದರೆ, ಈ ಯೋಜನೆಯು ಹೆಚ್ಚು ಪರಿಣಾಮಕಾರಿ ಆಗುತ್ತದೆ

ಆದರೆ ಈ ಯೋಜನೆಯಲ್ಲಿ ಕೆಲವು ಮಿತಿಗಳು ಕೂಡ ಇವೆ. ಯೋಜನೆಯ ಅಡಿಯಲ್ಲಿ ಹಿರಿಯ ನಾಗರಿಕರಿಗೆ ₹5 ಲಕ್ಷದವರೆಗೆ ವಿಮಾ ರಕ್ಷೆ ದೊರೆಯುತ್ತದೆ. ಒಂದು ಕುಟುಂಬದಲ್ಲಿ ಈ ಯೋಜನೆಯ ಪ್ರಯೋಜನ ಪಡೆಯಲು ಒಬ್ಬರಿಗಿಂತ ಹೆಚ್ಚು ಮಂದಿ ಅರ್ಹತೆ ಪಡೆದಿದ್ದರೆ, ಈ ಮೊತ್ತವು ಅವರಿಬ್ಬರ ನಡುವೆ ಹಂಚಿಹೋಗುತ್ತದೆ. ಆಯುಷ್ಮಾನ್ ಭಾರತ ಯೋಜನೆಯ ಅಡಿ ವಿಮಾ ರಕ್ಷೆಯನ್ನು ಪಡೆಯಲು ಅರ್ಹತೆ ಹೊಂದಿದ ಹಿರಿಯ ನಾಗರಿಕರ ಕುಟುಂಬವು ಯೋಜನೆಯ ವ್ಯಾಪ್ತಿಗೆ ಈಗಾಗಲೇ ಬಂದಿದ್ದರೆ, ಆ ಹಿರಿಯ ನಾಗರಿಕರು ತಮಗೆ ಸಿಗುವ ವಿಮಾ ರಕ್ಷೆಯ ಮೊತ್ತವನ್ನು ಕುಟುಂಬದ ಇತರರ ಜೊತೆ ಹಂಚಿಕೊಳ್ಳಬೇಕಿಲ್ಲ. ಹಿರಿಯ ನಾಗರಿಕರಿಗೆ ಅನ್ವಯವಾಗುವಂತೆ ಯೋಜನೆಯನ್ನು ಶೀಘ್ರವೇ ವಿಸ್ತರಿಸಲಾಗುತ್ತದೆ. ಯೋಜನೆಯ ಪ್ರಯೋಜನಗಳ ಬಗ್ಗೆ ಅತಿಶಯದಿಂದ ಮಾತನಾಡುವ ಅಗತ್ಯ ಇಲ್ಲ. ಯೋಜನೆಯ ಫಲಾನುಭವಿಗಳಾಗಲು ಅರ್ಹತೆ ಹೊಂದಿರುವವರ ಸಂಖ್ಯೆ ದೊಡ್ಡದಿದೆ. ಅವರಿಗಾಗಿ ಕೇಂದ್ರ ಸರ್ಕಾರವು ನೆರವಿನ ಹಸ್ತವೊಂದನ್ನು ಚಾಚಿರುವುದು ಗಮನಾರ್ಹವೇ ಹೌದು. ಜೀವನದ ಅತ್ಯಂತ ಮೂಲಭೂತ ಅಗತ್ಯಗಳಲ್ಲಿ ಉತ್ತಮ ಆರೋಗ್ಯಸೇವೆ ಕೂಡ ಒಂದು. ಅದರಲ್ಲೂ ಮುಖ್ಯವಾಗಿ, ಹಿರಿಯ ನಾಗರಿಕರಿಗೆ ಈ ಸೇವೆ ಬಹಳ ಮುಖ್ಯ. ಈ ಸೇವೆಯನ್ನು ಅವರಿಗೆ ಸಮರ್ಪಕವಾಗಿ ಒದಗಿಸುವ ಹೊಣೆಯು ಸರ್ಕಾರಗಳ ಮೇಲೆ ಇರುತ್ತದೆ. ದೇಶದಲ್ಲಿ ಆರೋಗ್ಯ ವಿಮಾ ಸೌಲಭ್ಯವನ್ನು ಹೊಂದಿರುವವರ ಪ್ರಮಾಣವು ಬಹಳ ಕಡಿಮೆ ಇದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 27ರಷ್ಟು ಮಂದಿ ಮಾತ್ರ ಈ ಸೌಲಭ್ಯವನ್ನು ಹೊಂದಿದ್ದಾರೆ. ಯಾವುದೇ ಆರೋಗ್ಯ ವಿಮಾ ಯೋಜನೆಯು ಅದೆಷ್ಟು ಮುಖ್ಯವಾಗುತ್ತದೆ ಎಂಬುದನ್ನು ಈ ಪ್ರಮಾಣವೇ ಹೇಳುತ್ತದೆ. ಹಿರಿಯ ನಾಗರಿಕರು ಸೇರಿದಂತೆ ಯಾವುದೇ ವರ್ಗಕ್ಕೆ ಆರೋಗ್ಯ ವಿಮಾ ಸೌಲಭ್ಯವನ್ನು ಒದಗಿಸುವುದು ಬಹಳ ಮುಖ್ಯವಾದ ಒಂದು ಸಾಮಾಜಿಕ ಅಭಿವೃದ್ಧಿ ಕ್ರಮವಾಗುತ್ತದೆ.

ಆರೋಗ್ಯ ವಿಮಾ ಯೋಜನೆಗಳ ವಿಚಾರವಾಗಿ ಇನ್ನಷ್ಟು ಮುಂದೆ ಸಾಗಲು ಸರ್ಕಾರಕ್ಕೆ ಅವಕಾಶಗಳಿವೆ. ಬಹುತೇಕ ಯೋಜನೆಗಳು ಆಸ್ಪತ್ರೆಯಲ್ಲಿ ದಾಖಲಾದ ನಂತರದ ಹಾಗೂ ಅದಕ್ಕೆ ಸಂಬಂಧಿಸಿದ ವೆಚ್ಚಗಳಿಗೆ ಮಾತ್ರ ಅನ್ವಯವಾಗುತ್ತವೆ. ಈ ಮಾತಿಗೆ ಸಿಜಿಎಚ್‌ಎಸ್ ಒಂದು ಅಪವಾದ ಆಗಿರಬಹುದು. ಬಹುತೇಕ ಯೋಜನೆಗಳು ಹೊರರೋಗಿ ವಿಭಾಗದ (ಒಪಿಡಿ) ವೆಚ್ಚಗಳನ್ನು ಒಳಗೊಳ್ಳುವುದಿಲ್ಲ. ಹಿರಿಯ ನಾಗರಿಕರು ಆರೋಗ್ಯ ಸೇವೆಗಳ ವಿಚಾರವಾಗಿ ಮಾಡುವ ವೆಚ್ಚಗಳಲ್ಲಿ ಶೇ 50ರಿಂದ ಶೇ 80ರಷ್ಟು ಭಾಗವು ಹೊರರೋಗಿ ವಿಭಾಗಗಳಲ್ಲಿ, ವಿವಿಧ ಪರೀಕ್ಷೆಗಳಿಗಾಗಿ ಮತ್ತು ಔಷಧಗಳ ಖರೀದಿಗಾಗಿ ಆಗಿರುತ್ತದೆ ಎಂದು ಅಂದಾಜಿಸಲಾಗಿದೆ. ಈ ಮೊತ್ತವನ್ನು ಭರಿಸುವುದು ಹಲವರಿಗೆ ಕಷ್ಟವಾಗುತ್ತಿದೆ. ಈಗ ಚಾಲ್ತಿಯಲ್ಲಿ ಇರುವ ಆರೋಗ್ಯ ವಿಮಾ ಯೋಜನೆಗಳ ವ್ಯಾಪ್ತಿಯನ್ನು ಈ ವೆಚ್ಚಗಳಿಗೆ ವಿಸ್ತರಿಸುವ ಅಗತ್ಯ ಇದೆ. ಅಗತ್ಯ ಎದುರಾದರೆ, ಬೇರೆ ದೇಶಗಳಲ್ಲಿ ಬಹಳ ಚೆನ್ನಾಗಿ ನಡೆಯುತ್ತಿರುವ ಆರೋಗ್ಯ ವಿಮಾ ಯೋಜನೆಗಳಲ್ಲಿನ ಒಳ್ಳೆಯ ಅಂಶಗಳನ್ನು ಭಾರತದ ಸಂದರ್ಭಕ್ಕೆ ಹೊಂದಿಕೆಯಾಗುವಂತೆ ಅಳವಡಿಸಿಕೊಳ್ಳಬಹುದು. ಆಯುಷ್ಮಾನ್ ಭಾರತ ಯೋಜನೆಯ ಅನುಷ್ಠಾನದಲ್ಲಿನ ಸಮಸ್ಯೆಗಳು, ಅಗತ್ಯ ಮೂಲಸೌಕರ್ಯಗಳ ಕೊರತೆ, ಭ್ರಷ್ಟಾಚಾರದ ಸಮಸ್ಯೆಯನ್ನು ಕೂಡ ನಿವಾರಿಸಬೇಕು. ಆಗ ಯೋಜನೆಯ ಪ್ರಯೋಜನವು ಹೆಚ್ಚು ಪರಿಣಾಮಕಾರಿಯಾಗಿ ಸಿಗುತ್ತದೆ.

ದಿನದ ಟ್ವೀಟ್


ಖಾಸಗಿತನಕ್ಕೆ ಧಕ್ಕೆ ಸಲ್ಲದು



ದರ್ಶನ್ ಮತ್ತು ಪವಿತ್ರಾ ಗೌಡ ನಡುವಿನ ಖಾಸಗಿ ಸಂಭಾಷಣೆಯನ್ನು ಕೆಲವು ಟಿ.ವಿ. ಚಾನೆಲ್‌ಗಳು ವರದಿ ಮಾಡಿರುವುದು ಕೆಟ್ಟ ಅಭಿರುಚಿ ಆಗಿದೆ. 2017ರಲ್ಲಿ ರತನ್ ಟಾಟಾ ಅವರು ನೀರಾ ರಾಡಿಯಾ ಜೊತೆಗಿನ ತಮ್ಮ ಖಾಸಗಿ ಸಂಭಾಷಣೆ ಸೋರಿಕೆಯಾದಾಗ ಸರ್ಕಾರದ ವಿರುದ್ಧ ಹೂಡಿದ್ದ ಮೊಕದ್ದಮೆಗೆ ಸಂಬಂಧಿಸಿದಂತೆ, ಖಾಸಗಿತನದ ಹಕ್ಕು ಮೂಲಭೂತ ಹಕ್ಕಾಗಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ



ಸಿಜೆಐ ಚಂದ್ರಚೂಡ್ ಅವರು ತಮ್ಮ ಮನೆಯ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೋದಿ ಅವರಿಗೆ ಅವಕಾಶ ಮಾಡಿಕೊಟ್ಟಿದ್ದು ಆಘಾತಕಾರಿ. ನಾಗರಿಕರ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವ ಮತ್ತು ಸರ್ಕಾರವು ಸಂವಿಧಾನದ ಮಿತಿಯೊಳಗೆ ಕಾರ್ಯ ನಿರ್ವಹಿಸುವಂತೆ ಮಾಡುವ ಹೊಣೆ ಹೊತ್ತಿರುವ ನ್ಯಾಯಾಂಗಕ್ಕೆ ಇದು ಅತ್ಯಂತ ಕೆಟ್ಟ ಸಂದೇಶವನ್ನು ರವಾನಿಸುತ್ತದೆ...

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

25 ವರ್ಷಗಳ ಹಿಂದೆ

ಸೋಮವಾರ, 13-9-1999

- **ದೇಶದ 80 ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಆಜ್ಞೆ**

ನವದೆಹಲಿ, ಸೆ. 12 (ಪಿಟಿಐ)- ಎರಡನೇ ಹಂತದಲ್ಲಿ ಶನಿವಾರ ದೇಶದ ವಿವಿಧೆಡೆ ನಡೆದ ಮತದಾನದ ಪೈಕಿ ಒಟ್ಟು 80 ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಚುನಾವಣಾ ಆಯೋಗ ಆದೇಶ ನೀಡಿದೆ.

ಆರು ರಾಜ್ಯಗಳಲ್ಲಿ ಈ ಮರು ಮತದಾನ ನಡೆಯಲಿದೆ. ಆಂಧ್ರ ಪ್ರದೇಶದಲ್ಲಿ (22) ಅತಿ ಹೆಚ್ಚು ಮರು ಮತದಾನ ನಡೆದರೆ, ರಾಜಸ್ಥಾನದಲ್ಲಿ 20, ತಮಿಳುನಾಡಿನಲ್ಲಿ 19, ಮಧ್ಯಪ್ರದೇಶದಲ್ಲಿ 14, ಕರ್ನಾಟಕದಲ್ಲಿ ಮೂರು ಹಾಗೂ ಕೇರಳದಲ್ಲಿ ಎರಡು ಕಡೆ ಮರು ಮತದಾನ ನಡೆಯಲಿದೆ. ‘ಈ ಮತಗಟ್ಟೆಗಳಲ್ಲಿ ಅಕ್ರಮ ನಡೆದಿರುವುದು ನಮ್ಮ ಗಮನಕ್ಕೆ ಬಂದಿದೆ’ ಎಂದು ಚುನಾವಣಾ ಆಯೋಗ ಹೇಳಿದೆ.

- **ಅಸ್ಥಿರತೆ ಲಾಭ ಪಡೆಯಲು ಪಾಕ್ ಹೊಂಚು: ಅಟಲ್**

ಹಜಾರಿಬಾಗ್, ಸೆ. 12 (ಪಿಟಿಐ)- ಕಾರ್ಗಿಲ್ ಬಿಕ್ಕಟ್ಟು ಉದ್ಭವಿಸಲು ಕಾಂಗ್ರೆಸ್ ಪಕ್ಷವೇ ಕಾರಣವೆಂದು ಆಪಾದಿಸಿದ ಪ್ರಧಾನಿ ವಾಜಪೇಯಿ ಅವರು, ಗಡಿಯೊಳಗೆ ಅತಿಕ್ರಮಣ ಮಾಡಿದ ಪಾಕಿಸ್ತಾನವು ಭಾರತದ ನೆಲ ವಶಪಡಿಸಿಕೊಳ್ಳುವ ಹೊಂಚು ಹಾಕಿತ್ತು ಎಂದು ಹೇಳಿದರು.

ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

50 ವರ್ಷಗಳ ಹಿಂದೆ

ಶುಕ್ರವಾರ, 13-9-1974

- **ನಗರದಲ್ಲಿ ಆಸ್ತಿ ಗಣತಿ; ಮೌಲ್ಯ ಕಡಿಮೆ ತೋರಿದ ಪ್ರಕರಣಗಳ ಪತ್ತೆ ಕ್ರಮ**

ಬೆಂಗಳೂರು, ಸೆ. 12- ಉದ್ದೇಶಪೂರ್ವಕವಾಗಿ ಆಸ್ತಿಯ ಬೆಲೆಯನ್ನು ಕಡಿಮೆ ಅಂದಾಜು ಮಾಡಿ ತೆರಿಗೆ ತಪ್ಪಿಸಿಕೊಳ್ಳುವುದನ್ನು ಪತ್ತೆ ಹಚ್ಚಲು ರಾಷ್ಟ್ರದ ಮುಖ್ಯ ನಗರಗಳಲ್ಲಿ ಆಸ್ತಿ ಗಣತಿ ಕೈಗೊಳ್ಳಲಾಗಿದೆ. ಅದು ಬೆಂಗಳೂರು ನಗರದಲ್ಲಿ ಆರಂಭವಾಗಿದೆ.

ಈ ವಿಷಯವನ್ನು ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಕೇಂದ್ರದ ಅರ್ಥ ಶಾಖೆ ರಾಜ್ಯ ಸಚಿವ ಶ್ರೀ ಕೆ.ಆರ್. ಗಣೇಶ್‌ರವರು, ತೆರಿಗೆ ಕೊಡದೆ ಉಳಿಸಿಕೊಳ್ಳಲಾದ ಹಣವನ್ನು ಆಸ್ತಿಯ ಮೇಲೆ ವಿನಿಯೋಗಿಸಲಾಗಿದೆಯೆಂಬ ಸಂಶಯ ಉಂಟಾಗಿರುವುದರಿಂದ ಈ ಸೆನ್ಸಸ್ ಕೈಗೊಳ್ಳಲಾಗಿದೆಯೆಂದು ತಿಳಿಸಿದರು.

- **ಭಾರತಕ್ಕೆ 56 ಕೋಟಿ ಬ್ರಿಟಿಷ್ ಸಾಲ**

ನವದೆಹಲಿ, ಸೆ. 12- ಭಾರತಕ್ಕೆ 56.9 ಕೋಟಿ ರೂ. ಬ್ರಿಟಿಷ್ ಸಾಲ ನೀಡುವ ಒಪ್ಪಂದಕ್ಕೆ ಇಂದು ದೆಹಲಿಯಲ್ಲಿ ಸಹಿ ಹಾಕಲಾಯಿತು.

ಯೋಜನೇತರ ವಸ್ತುಗಳು- ಅಂದರೆ ಭಾರತದ ತೈಲ ಮತ್ತು ಕೈಗಾರಿಕಾ ಉತ್ಪಾದನೆಗೆ ಅಗತ್ಯವಾದ ಕಚ್ಚಾವಸ್ತುಗಳು, ಬಿಡಿಭಾಗಗಳು ಮತ್ತು ಯಂತ್ರೋಪಕರಣಗಳ ಆಮದಿಗೆ ಈ ಹಣವನ್ನು ಭಾರತ ಬಳಸಬಹುದಾಗಿದೆ.

ಇಂತಹ ನಿರ್ವಾತ ಸ್ಥಿತಿಗೆ ಬೇಕಾಗಿರುವುದು ಮರುಕವಲ್ಲ, ಪರಿಹಾರ

ರಾಜಕೀಯ ಚಿಂತನೆ: ಏಕೆ ನಿರ್ವಾತ?



ವಿಶ್ಲೇಷಣೆ

ಯೋಗೇಂದ್ರ ಯಾದವ್

ರಾಜಕೀಯ ಸಿದ್ಧಾಂತ ಎಂದರೇನು? ರಾಜಕೀಯ ಚಿಂತಕರೆಂದರೆ ಯಾರು? ರಾಜಕೀಯ ಚಿಂತನಾಕ್ರಮ ಸತ್ತುಹೋಗಿದೆ ಎಂದು ಯಾರೋ ಒಬ್ಬರು ಘೋಷಿಸುವುದು ಹೇಗೆ?... ‘ಹೋದರೆಲ್ಲಿ ನಮ್ಮ ರಾಜಕೀಯ ಚಿಂತಕರು?’ (ಪ್ರ.ವಾ., ಆ. 31) ಎಂಬ ಲೇಖನಕ್ಕೆ ಬಂದಂತಹ ಕುತೂಹಲಕಾರಿ ಪ್ರತಿಕ್ರಿಯೆಗಳಿವು. ಲೇಖನಗಳು, ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳು, ವೈಯಕ್ತಿಕ ಮಾತುಕತೆ... ಈ ಪ್ರಶ್ನೆಗಳನ್ನು ಕೇಳಿಕೊಳ್ಳಲೇಬೇಕಿತ್ತು ಎಂಬುದನ್ನು ಈ ರೀತಿಯ ಪ್ರತಿಕ್ರಿಯೆಗಳು ದೃಢಪಡಿಸಿವೆ.

‘ರಾಜಕೀಯ ಚಿಂತನೆ’ ಎಂಬುದು ಸೊರಗುತ್ತಿರುವುದರ ಬಗ್ಗೆ ನನ್ನಲ್ಲಿ ಆಳವಾದ ಸಂತಾಪವಿದೆ ಎಂಬುದನ್ನು ಮೊದಲು ಸ್ಪಷ್ಟಪಡಿಸಿಬಿಡುತ್ತೇನೆ. ಈಗ ಪ್ರತಿದಿನ ಸಂಭವಿಸುವ ರಾಜಕೀಯ ಚರ್ಚೆಗಳು, ಸೈದ್ಧಾಂತಿಕ ತರ್ಕಗಳು ಮತ್ತು ನೀತಿನಿರೂಪಣೆಗಳ ಬಹಳ ವಿಸ್ತಾರವಾದ ರಾಜಕೀಯ ಪ್ರತಿಬಿಂಬಗಳನ್ನು ಕುರಿತ ಮಾತು ಇದಾಗಿದೆ. ಈ ರೀತಿಯ ಯೋಚನಾ ಕ್ರಮಗಳು ಅಲ್ಲಿಇಲ್ಲಿ ಆರಂಭವಾಗುತ್ತವೆ ಮತ್ತು ರಾಜಕೀಯ ಚಿಂತನೆಗೆ ಸಂಬಂಧಿಸಿದ ಮೂರು ಬಹುದೊಡ್ಡ ಪ್ರಶ್ನೆಗಳು ಎದುರಾದಾಗ ಉತ್ತರಿಸದೇ ಹಿಂದಡಿ ಇಟ್ಟುಬಿಡುತ್ತೇವೆ.

ಮೊದಲನೆಯದಾಗಿ, ನಮ್ಮ ಗುರಿ ಏನು? ಯಾವ ಸ್ವರೂಪದ ರಾಜಕೀಯ ವ್ಯವಸ್ಥೆಯನ್ನು ರೂಪಿಸಲು ನಾವು ಬಯಸುತ್ತಿದ್ದೇವೆ? ರಾಜಕೀಯ ದೃಷ್ಟಿಕೋನವನ್ನು ಬೇಡುವ ಸಾಮಾನ್ಯ ಪ್ರಶ್ನೆ ಇದು. ಎರಡನೆಯದಾಗಿ, ನಾವು ನಮ್ಮ ಗುರಿಯ ಯಾವ ಹಂತದಲ್ಲಿದ್ದೇವೆ? ರಾಜಕೀಯ ವಿಶ್ಲೇಷಣೆ, ರಾಜಕಾರಣದಲ್ಲಿನ ಕಾರ್ಯಕಾರಣ ಸಂಬಂಧವನ್ನು ಅರ್ಥಮಾಡಿಕೊಳ್ಳುವಂತಹ ಶಕ್ತಿ ಬೇಡುವ ಅತ್ಯಂತ ಪ್ರಾಯೋಗಿಕ ಸ್ವರೂಪದ ಪ್ರಶ್ನೆ ಇದು. ಮೂರನೆಯದಾಗಿ, ನಾವು ಮುಂದೇನು ಮಾಡಬೇಕು? ಈಗ ಇರುವಲ್ಲಿಂದ ನಾವು ಹೋಗಲು ಬಯಸುತ್ತಿರುವುದು ಎಲ್ಲಿಗೆ ಮತ್ತು ಅಲ್ಲಿಗೆ ಹೋಗುವುದು ಹೇಗೆ? ರಾಜಕೀಯ ತಂತ್ರಗಾರಿಕೆಯನ್ನು ರೂಪಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಬೇಡುವ, ನಿರ್ದೇಶನ ಸ್ವರೂಪದ ಪ್ರಶ್ನೆ ಇದು.

ಈ ಎಲ್ಲ ಪ್ರಶ್ನೆಗಳಿಗೆ ತಮ್ಮದೇ ರೀತಿಯಲ್ಲಿ ಉತ್ತರಿಸಬಲ್ಲವರಾಗಿದ್ದ, ವೈವಿಧ್ಯಮಯ ಸಿದ್ಧಾಂತಗಳನ್ನು ಅನುಸರಿಸುವ ಅಪಾರ ಸಂಖ್ಯೆಯ ರಾಜಕೀಯ ಚಿಂತಕರು ನಮ್ಮ ನಡುವೆ ಇದ್ದರು. ನಮ್ಮ ಭೂತ, ವರ್ತಮಾನ ಮತ್ತು ಭವಿಷ್ಯವನ್ನು ಗ್ರಹಿಸುವಲ್ಲಿ ಅವರ ಚಿಂತನಾ ಕ್ರಮಗಳು ನೆರವಾಗಿದ್ದವು. ರಾಜಕೀಯ ಚಿಂತನೆ ಎಂಬುದು ಪಾಶ್ಚಾತ್ಯರಲ್ಲಿ ಒಂದು ‘ಅಕಡೆಮಿಕ್’ ಶಿಸ್ತು ಅಷ್ಟೆ. ಆದರೆ ನಮ್ಮ ಬಹುತೇಕ ರಾಜಕೀಯ ಚಿಂತಕರು ರಾಜಕಾರಣದಲ್ಲಿ ಸಕ್ರಿಯರಾಗಿದ್ದರು.

‘ಆಧುನಿಕ ಭಾರತೀಯ ರಾಜಕೀಯ ಚಿಂತನೆ’ಯು ಹಲವು ಸಿದ್ಧಾಂತಗಳ ಒಂದು ಗುಚ್ಛವಾಗಿತ್ತು. ವಸಾಹತು ವಿರೋಧಿ ಹೋರಾಟ, ಸಂವಿಧಾನ ಮತ್ತು ವಸಾಹತೋತ್ತರ ರಾಜಕಾರಣಕ್ಕೆ ಅದು ಭದ್ರಬುನಾದಿ ಹಾಕಿಕೊಟ್ಟಿತ್ತು. 1870ರಿಂದ 1960ರವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಇಂತಹ ಚಿಂತನಾ ಕ್ರಮವು ನಿಧಾನಗತಿಯಲ್ಲಿ ಅಂತ್ಯದತ್ತ ಸರಿಯಲಾರಂಭಿಸಿತ್ತು. ಭಾರತದಲ್ಲಿನ ಇಂದಿನ ರಾಜಕೀಯ ಕಲ್ಪನೆ, ಗ್ರಹಿಕೆ ಮತ್ತು ನಿರ್ಧಾರದಲ್ಲಿನ ದಾರಿದ್ರ್ಯವು ಈ ಸೊರಗುವಿಕೆಯ ಪ್ರತಿಫಲ. ಇದಕ್ಕೂ ಅಪವಾದವಿದೆ. ಇಂತಹ ಚಿಂತನೆಯು ಸ್ತ್ರೀವಾದ, ಸಾಮಾಜಿಕ ನ್ಯಾಯ ಮತ್ತು ‘ಅಭಿವೃದ್ಧಿ’ ಮಾದರಿಯ ಕಟುವಿಮರ್ಶೆ ಎಂಬ ಮೂರು ಧಾರೆಗಳಲ್ಲಿ ಈಗಲೂ ಜೀವಂತವಾಗಿದೆ ಎಂದು ಈ ಹಿಂದೆಯೇ ಹೇಳಿದ್ದೆ.

ಸಾಮಾಜಿಕ ನ್ಯಾಯವು ಇನ್ನೂ ಬಾಬಾಸಾಹೇಬ್ ಅಂಬೇಡ್ಕರ್ ಅವರ ನೆರಳಿನಿಂದ ಹೊರಬರಬೇಕಿದೆ ಎಂಬುದು ಈ ಹೊತ್ತಿನ ಚರ್ಚೆ. ಈ ಚರ್ಚೆಗಳು ಜಾತಿ ಮತ್ತು ಜನಾಂಗದ ಅಸ್ಮಿತೆಯನ್ನು ಸಮೀಕರಿಸಿ ನೋಡುವ, ಜಾತೀಯ ಆರ್ಥಿಕ ರಾಜಕಾರಣ, ಮಹಾದಲಿತರು ಮತ್ತು ಅತ್ಯಂತ ಹಿಂದುಳಿದ ಮುಸ್ಲಿಮರನ್ನೂ ಒಳಗೊಳ್ಳುವ ಮೂಲಕ ಸಾಮಾಜಿಕ ನ್ಯಾಯದ ಹೋರಾಟಕ್ಕೆ ಹೊಸ ದಿಕ್ಕುಗಳನ್ನು ತೋರಿಸುತ್ತಿವೆ. ‘ಅಭಿವೃದ್ಧಿ’ ಮಾದರಿಯ ಕಟುವಿಮರ್ಶಾ ಸಿದ್ಧಾಂತವು ಮಹಾತ್ಮ ಗಾಂಧಿ ಅವರ ಛಾಯೆಯಿಂದ ಈಗಾಗಲೇ ಹೊರಬಂದಿದೆ ಮತ್ತು ಹೊಸ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ರೂಪಿಸುವಲ್ಲಿ ನಮಗೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ. ಇವೆಲ್ಲವನ್ನು ಒಗ್ಗೂಡಿಸಿದರೂ ‘ಆಧುನಿಕ ಭಾರತೀಯ ರಾಜಕೀಯ ಚಿಂತನೆ’ಯ ನಿರ್ವಾತವನ್ನು ತುಂಬಲಾರವು.

ಈ ಕುರಿತಂತೆ ನಾನು ಮಂಡಿಸಿದ ವಾದಗಳನ್ನು ನನ್ನ ಲೇಖನಕ್ಕೆ ಪ್ರತಿಕ್ರಿಯಿಸಿದವರು ಒಪ್ಪುತ್ತಾರೆ. ಇದನ್ನು ಒಪ್ಪುತ್ತಲೇ ಇಂತಹ ಸ್ಥಿತಿ ಏಕೆ ಬಂದೊದಗಿತು ಎಂಬುದನ್ನು ವಿಶ್ಲೇಷಿಸುವ ಮತ್ತು ಜತೆಗೆ ಸಂವಾದಕ್ಕೆ ಕಿಡಿ ಹೊತ್ತಿಸುವ, ‘ಸ್ವತಂತ್ರ ಭಾರತವೇಕೆ ಮಹಾನ್ ರಾಜಕೀಯ ಚಿಂತಕರನ್ನು ರೂಪಿಸಲಿಲ್ಲ?’ ಎಂಬ ಲೇಖನವನ್ನು ನಿತಿನ್ ಪೈ ಬರೆದಿದ್ದಾರೆ. ರಾಜ್ಯಶಾಸ್ತ್ರದ ಬಗೆಗಿನ ನನ್ನ ನಿಲುವನ್ನು ಸರಿಪಡಿಸಿಕೊಳ್ಳಬೇಕು ಎಂದು ಹೇಳುತ್ತಲೇ ರಾಜಕೀಯ ದೃಷ್ಟಿಕೋನವನ್ನು ರೂಪಿಸುವ ಹೊರೆಯನ್ನು ರಾಜ್ಯಶಾಸ್ತ್ರದ ಮೇಲೆ ಹೊರಿಸಬಾರದು ಎಂದು ಪ್ರೊ. ಅಶುತೋಷ್ ವರ್ಷ್ನೆ ವಿವರಿಸಿದ್ದಾರೆ. ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಸೂಕ್ಷ್ಮವನ್ನು ರೂಪಿಸುವ ಕ್ರಿಯೆಗಳನ್ನು ರಾಜ್ಯಶಾಸ್ತ್ರ ಎಂದೂ ಮಾಡಲಾರದು ಎಂದು ಇದನ್ನು ನಾನು ಅರ್ಥೈಸುತ್ತೇನೆ. ‘ರಾಜಕೀಯ ಚಿಂತನೆ ಎಂಬುದು ಖಂಡಿತವಾಗಿಯೂ ಜೀವಂತವಾಗೇ ಇದೆ. ಆದರದು ಇಂದು ಎಲ್ಲಿ ಮತ್ತು ಹೇಗೆ ಇರಬೇಕಿತ್ತೋ ಹಾಗೆ ಇಲ್ಲ ಅಥವಾ ಅದೇ ಹಳೆಯ ಮಂದಿಯಿಂದಲೇ ತುಂಬಿದೆ’ ಎಂಬುದು ಪ್ರೊ. ಶ್ರುತಿ ಕಪಿಲಾ ಅವರ ಆಕ್ಷೇಪ.




ಲೇಖನಕ್ಕೆ ಬಂದ ಬಹುತೇಕ ಪ್ರತಿಕ್ರಿಯೆಗಳು, ನನ್ನ ಪ್ರತಿಪಾದನೆಯನ್ನು ಮುಂದಿಡಲು ನಾನು ಆಯ್ಕೆ ಮಾಡಿಕೊಂಡ ಹೆಸರುಗಳನ್ನೇ ಕೇಂದ್ರೀಕರಿಸಿವೆ. ಹಲವು ಪ್ರತಿಕ್ರಿಯೆಗಳು ನಾನಿರಿಸಿದ ಉದಾಹರಣೆಗಳ ಸಾಧ್ಯತೆಗಳನ್ನು ತಪ್ಪಾಗಿ ಅರ್ಥೈಸಿಕೊಂಡದ್ದರ ಪ್ರತಿಫಲವಾಗಿವೆ. 1947ರ ಹೊತ್ತಿಗೆ ಜೀವಂತವಾಗಿದ್ದವರನ್ನಷ್ಟೇ ನಾನು ಆಯ್ಕೆ ಮಾಡಿಕೊಂಡಿದ್ದೆ. ಹೀಗಾಗಿಯೇ ಜ್ಯೋತಿಬಾಯಿ ಫುಲೆ, ಗೋಪಾಲ ಕೃಷ್ಣ ಗೋಖಲೆ ಅವರನ್ನು ಸೇರಿಸಲಿಲ್ಲ. ನನ್ನ ತಲೆಮಾರಿನ ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತಿಗಳನ್ನು ನಾನು ಉದ್ದೇಶಪೂರ್ವಕವಾಗಿಯೇ ಕೈಬಿಟ್ಟಿದ್ದೆ. ನನ್ನ ಪಟ್ಟಿ ಯಾವುದೇ ಸೈದ್ಧಾಂತಿಕ ಪಕ್ಷಪಾತವಿಲ್ಲದ ಪಟ್ಟಿಯಾಗಿತ್ತು, ನಾನು ತುಸು ಅನುಕಂಪ ಹೊಂದಿರುವ ಹಿಂದುತ್ವ ಮತ್ತು ಇಸ್ಲಾಮಿಕ್ ಪ್ರತಿಪಾದಕರನ್ನೂ ಒಳಗೊಂಡಿತ್ತು.

ನಾನು ಕೂಡ ರಾಜಕೀಯ ಚಿಂತನೆ ಎಂಬುದಕ್ಕೆ ಒಂದು ನಿರ್ದಿಷ್ಟ ಗೆರೆ ಹಾಕಿಕೊಂಡೆ. ಹೀಗಾಗಿಯೇ ಆ್ಯಂಡ್ರೆ ಬೆಟೆಲ್ಲೆ, ಜೆ.ಪಿ.ಎಸ್.ಉಬೆರೋಯಿ, ಇಮ್ತಿಯಾಜ್ ಅಹಮದ್, ವೀಣಾ ದಾಸ್‌ರಂತಹ ಸಾಮಾಜಿಕ ಸಿದ್ಧಾಂತಿಗಳು, ತತ್ವಜ್ಞಾನದ ನೆಲೆಯ ದಯಾ ಕೃಷ್ಣ, ರಾಮಚಂದ್ರ ಗಾಂಧಿ, ನಿರ್ಮಲ್ ವರ್ಮಾ, ರಘುವೀರ್ ಸಹಾಯ್ ಅವರಂತಹವರನ್ನು ಒಳಗೊಳ್ಳಲಿಲ್ಲ. ಆದರೆ, ಕಮಲಾದೇವಿ ಚಟ್ಟೋಪಾಧ್ಯಾಯ, ಅರುಣಾ ಅಸಫ್ ಅಲಿ ಮತ್ತು ಸರೋಜಿನಿ ನಾಯ್ಡು ಅವರಂತಹ ಚಿಂತಕಿಯರನ್ನು ಕೈಬಿಟ್ಟದ್ದರ ಬಗ್ಗೆ ಪ್ರೊ. ನಂದಿನಿ ಸುಂದರ್ ಅವರು ಎತ್ತಿದ್ದ ಆಕ್ಷೇಪ ಸರಿಯಾದುದೇ ಆಗಿದೆ. ರಾಜಕೀಯ ಚಿಂತಕರ ನನ್ನ ಪಟ್ಟಿಯನ್ನು ಸರಿಪಡಿಸಲು ನೆರವಾಗಿದೆ.

ಸ್ವಾತಂತ್ರ್ಯೋತ್ತರ ಚಿಂತಕರಲ್ಲಿ ಇ.ಎಂ.ಎಸ್. ನಂಬೂದಿರಿಪಾಡ್ ಅವರನ್ನು, ಅವರ ಮುಂದಿನ ತಲೆಮಾರಿನ ಡಿ.ಆರ್.ನಾಗರಾಜ್ ಮತ್ತು ಕ್ಲಾಡ್ ಅಲ್ವಾರೆಸ್ ಅವರನ್ನು ಪಟ್ಟಿಗೆ ಸೇರಿಸಬೇಕಿತ್ತು. ನಾನು ರಾಜಕೀಯ ಚಿಂತನೆ ಎಂದು ಕರೆದುದರ ಜೀವಂತ ಸಾಕ್ಷಿಗಳಾಗಿ ಅರುಣಾ ರಾಯ್, ದಿಲೀಪ್ ಸೈಮನ್, ವಂದನಾ ಶಿವ, ದೇವನೂರ ಮಹಾದೇವ ಮತ್ತು ಆನಂದ ತೇಲ್ತುಂಬ್ಡೆ ಇದ್ದಾರೆ. ರಾಜ್ಯಶಾಸ್ತ್ರದ ಬಗ್ಗೆ ಮಾತನಾಡುವಾಗ ಆರಂಭಿಕ ತಲೆಮಾರಿನ ರಾಜ್ಯಶಾಸ್ತ್ರಜ್ಞರಾದ ರಣಧೀರ್ ಸಿಂಗ್, ರಶೀದುದ್ದೀನ್ ಖಾನ್, ರಾಮ್ ಬಾಪಟ್, ಶಾಂತಿ ಸ್ವರೂಪ್, ರಾಘವೇಂದ್ರ ರಾವ್ ಮತ್ತು ಮನೋರಂಜನ್ ಮೊಹಂತಿ ರಾಜ್ಯಶಾಸ್ತ್ರ ಮತ್ತು ರಾಜಕೀಯ ಪ್ರಜ್ಞೆಯ ನಡುವಣ ಕೊಂಡಿಯನ್ನು ಜೀವಂತವಾಗಿ ಇರಿಸಿದ್ದರು ಎಂಬುದನ್ನು ಹೇಳಬೇಕು.

ಹಲವು ಚಿಂತಕರನ್ನು, ಅದರಲ್ಲೂ ನನಗೆ ಓದಲು ಬಾರದೇ ಇರುವ ಭಾಷೆಯಲ್ಲಿ ಬರೆಯುವವರನ್ನು ನಾನು ಬಿಟ್ಟದ್ದೆ ಎಂಬುದರ ಅರಿವು ನನಗೆ ಇದ್ದೇ ಇದೆ. ಆದರೆ ಈ ಹೆಸರುಗಳನ್ನು ಬಿಟ್ಟದ್ದು ನನ್ನ ಮಿತಿಯೇ ವಿನಾ ನನ್ನ ಪ್ರತಿಪಾದನೆಯ ಮಿತಿಯಲ್ಲ. ರಾಜಕೀಯ ಚಿಂತನೆಯ ಸಾವನ್ನು ಗುರುತಿಸುವುದು ಮತ್ತು ಅದಕ್ಕಾಗಿ ಮರುಗುವುದು ಈ ಚರ್ಚೆ ಆರಂಭಿಸಿದುದರ ಉದ್ದೇಶವಾಗಿರಲಿಲ್ಲ. ಬದಲಿಗೆ ನಮ್ಮ ಇಂದಿನ ಸ್ಥಿತಿಗೆ ಕಾರಣಗಳನ್ನು ಹುಡುಕಲು ಮತ್ತು ನಮ್ಮ ಗಣರಾಜ್ಯವನ್ನು ಪುನಶ್ಚೇತನಗೊಳಿಸಲು ಏನು ಮಾಡಬೇಕು ಎಂಬುದನ್ನು ಸಾಮೂಹಿಕವಾಗಿ ವಿಶ್ಲೇಷಿಸಲು ನೀಡಿದ ಆಹ್ವಾನವಾಗಿತ್ತು. ಈಗಲಾದರೂ ಅತ್ತ ಗಮನ ಹರಿಸೋಣವೇ?

ಚುರುಮುರಿ



ಮನಿಟ್ರ್ಯಾಪ್!

• ಬಿ.ಎನ್.ಮಲ್ಲೇಶ್

‘ಲೇ ತೆಪರ, ಈ ಹನಿಟ್ರ್ಯಾಪ್ ಅಂದ್ರೆ ಏನ್ಲೆ?’ ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

‘ಅದಾ... ಸುಂದರ ಹುಡುಗೀರು ನಿಮ್ಮಂಥ ದುಬ್ಬರನ್ನ ಖೆಡ್ಡಾಕ್ಕೆ ಬೀಳಿಸ್ಕಾದು’.

‘ಮತ್ತೆ ಈ ಮನಿಟ್ರ್ಯಾಪ್ ಅಂದ್ರೆ?’

‘ಹನಿಟ್ರ್ಯಾಪ್ ಖೆಡ್ಡಾಕ್ಕೆ ಬೀಳಿಸ್ಕಂಡ ಮೇಲೆ ದುಡ್ಡು ಕಿತ್ಕಂತಾರಲ್ಲ, ಅದು ಮನಿಟ್ರ್ಯಾಪ್’.

‘ಓಕೆ... ಆಮೇಲೆ ಈ ಟಂಗ್ ಆಪರೇಷನ್ ಅಂದ್ರೇನು?’

‘ಅದು ಟಂಗ್ ಅಲ್ಲ, ಸ್ಟಿಂಗ್ ಆಪರೇಷನ್ನು. ಸೀಕ್ರೆಟ್ ಕ್ಯಾಮೆರಾ ಇಟ್ಟು ಭ್ರಷ್ಟ ರಾಜಕಾರಣಿಗಳನ್ನ ಖೆಡ್ಡಾಕ್ಕೆ ಕೆಡವೋದು. ಅಲ್ಲ, ಇದ್ನೆಲ್ಲ ಯಾಕ್ ಕೇಳ್ತಿದೀಯ?’

‘ತಿಳ್ಕಾಬೇಕು ಕಣಲೆ, ಜನರಲ್ ನಾಲೆಡ್ಜ್ ಇಂಪ್ರೂ ಮಾಡ್ಕಾಬೇಕು’.

‘ಓ... ಏನು ಐಎಎಸ್ ಪರೀಕ್ಷೆ ಕಟ್ತಿದೀಯ? ಅದ್ಯಾರೋ ಒಬ್ಳು ಹನಿಟ್ರ್ಯಾಪ್ ಮಾಡಿ ಹತ್ತು ಜನರನ್ನ ಮದುವೆ ಆಗಿದಾಳಂತೆ. ನೀನು ಹೂಂ ಅಂದ್ರೆ ಹನ್ನೊಂದನೇನು ಆಗಬೋದು ನೋಡು’ ತೆಪರೇಸಿ ನಕ್ಕ.

‘ಲೇಯ್ ದುಬ್ಬೀರನತ್ರ ಏನೈತಲೆ ಕಿತ್ಕಳಾಕೆ? ಎದ್ರೆ ಹೆಗಲ ಮೇಲೆ ಟವೆಲ್ಲು’ ಗುಡ್ಡೆ ಕಿಸಕ್ಕಂದ.

‘ಗುಡ್ಡೆ ಬ್ಯಾಡ ನೋಡು’ ಎಂದ ದುಬ್ಬೀರ, ‘ಆ ಗುಡ್ಡೇದು ಹಂಗಿರ್ಲಿ, ಈಗ ಈ ಹೈಪರ್‌ಲೂಪ್ ಅಂದ್ರೆ ಏನು? ನೀ ಹೇಳೋ ತೆಪರ’ ಕೇಳಿದ.

‘ಹೈಪರ್‌ಲೂಪ್ ಅಂದ್ರೆ ರಾಕೆಟ್ ಸ್ಪೀಡಲ್ಲಿ ಹೋಗೋದು. ಚಿಟಕಿ ಹೊಡೆಯೋದ್ರಲ್ಲಿ ಸುಂಯ್ ಟಪಕ್ ಅಂತ ಎಲ್ಲಿಗೆ ಬೇಕು ಅಲ್ಲಿಗೆ ಹೋಗಿಬಿಡಬೋದು. ಭಾರೀ ಸ್ಪೀಡು...’ ತೆಪರೇಸಿ ವಿವರಿಸಿದ.

‘ಅಲ್ಲೋ ದುಬ್ಬೀರ, ಇಷ್ಟೆಲ್ಲ ಕೇಳ್ತೀಯಲ್ಲ, ನಿಂಗೆ ‘ಡುಂ ಟಕ’ ಅಂದ್ರೇನು ಗೊತ್ತಾ? ಹೇಳಲೆ ನೋಡಾಣ’ ಗುಡ್ಡೆ ಕೇಳಿದ.

‘ಅದು ಮದುವೆ ಆಗುವಾಗ ಬಾರಿಸ್ತಾರಲ್ಲ ವಾದ್ಯ... ಅದೇ ತಾನೆ?’

‘ಕರೆಕ್ಟ್, ಮತ್ತೆ ‘ಟಕ ಡುಂ’ ಅಂದ್ರೆ?

‘ಅದು ಗೊತ್ತಿಲ್ಲಪ್ಪ’.

‘ಅದು ಮದುವೆ ಮುರ್ಕಂಡಾಗ ಬಾರ್ಸೋದು ಕಣಲೆ ದಡ್ಡ’ ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಇದೆ ‘ಪ್ರಭು’ವಿಗೂ ಒಂದು ದಿನ

ಪ್ರಜಾಪ್ರಭುತ್ವದ ಆಶಯಗಳ ಮೇಲಿನ ದಾಳಿಯ ಬಗ್ಗೆ ನಾವೆಲ್ಲಾ ಎಚ್ಚರದಿಂದ ಇರಬೇಕಾಗಿದೆ

• ಡಾ. ಎಚ್.ಸಿ.ಮಹದೇವಪ್ಪ



ಬುದ್ಧನ ಕಾಲದ ಸಂಘ ಮತ್ತು ಗಣ ಎಂಬ ವ್ಯವಸ್ಥೆಯ ಮೂಲಕ ಭಾರತಕ್ಕೆ ಪರಿಚಿತವಾದ ಪ್ರಜಾಪ್ರಭುತ್ವದ ಕಲ್ಪನೆಯು ಮತ್ತೊಮ್ಮೆ ಅಧಿಕೃತವಾಗಿ ಜಾರಿಯಾಗಬೇಕಾದರೆ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನವೇ ಬರಬೇಕಾಯಿತು.

ಸಾರ್ವಜನಿಕರ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದ ಮೂಲ ತತ್ವಗಳಲ್ಲಿ ಒಂದು. ಆದರೆ ದೇಶದಲ್ಲಿ ಜಾತಿಯ ಮೇಲರಿಮೆ, ಶಿಕ್ಷಣ, ಉದ್ಯೋಗದಂತಹ ಕ್ಷೇತ್ರಗಳಲ್ಲಿನ ಅವಕಾಶ ಕೊರತೆಯಂತಹ ಹಲವು ಕಾರಣಗಳಿಂದ ಇದು ಅಸಾಧ್ಯವಾದ ಸಂಗತಿಯಾಗಿತ್ತು. ಸಂವಿಧಾನದ ಮೂಲಕ ಸಾರ್ವಜನಿಕರ ಹಕ್ಕುಗಳನ್ನು ಖಾತರಿಪಡಿಸಿದ ನಂತರ ಎಲ್ಲರಿಗೂ ಸಮಾನವಾದ ಭಾಗವಹಿಸುವಿಕೆ ಸಾಧ್ಯವಾಯಿತು. ಇದನ್ನು ನಾವು ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೊರಳಿದ ಸಂದರ್ಭ ಎನ್ನಬಹುದು.

ಹಿಂದೊಮ್ಮೆ ಜೆ.ಎಚ್.ಪಟೇಲ್ ಅವರು ಬುದ್ಧಿವಂತಿಕೆಗೆ ಸಂಬಂಧಿಸಿದಂತೆ ಬಿ.ರಾಚಯ್ಯನವರ ಹೇಳಿಕೆಗೆ ಸದನದಲ್ಲಿ ಪ್ರತಿಕ್ರಿಯಿಸುತ್ತಾ, ‘ರೀ ರಾಚಯ್ಯನವರೇ, ಮೇಲ್ವರ್ಗಗಳಿಗೆ 2,000 ವರ್ಷಗಳ ಇತಿಹಾಸವಿದೆ. ಆದರೆ ನಿಮ್ಮ ಇತಿಹಾಸ ಶುರುವಾಗಿದ್ದೇ ಅಂಬೇಡ್ಕರ್ ಸಂವಿಧಾನ ಬಂದ ನಂತರ’ ಎಂದು ಹೇಳಿದ್ದರು. ಕೆಳವರ್ಗಗಳನ್ನು ಸಮಾಜ ಅಷ್ಟರಮಟ್ಟಿಗೆ ಹೊರಗಿಟ್ಟಿದ್ದುದನ್ನು ಪ್ರಸ್ತಾಪಿಸಿದ್ದರು. ಲೋಹಿಯಾ ಆದಿಯಾಗಿ ನೆಹರೂ ಅವರಂತಹ ಅನೇಕ ನಾಯಕರು ಪ್ರಜಾಪ್ರಭುತ್ವದ ಕನಸನ್ನು ಕಂಡಿದ್ದರು. ಅಧಿಕಾರದ ಅವಕಾಶ ಸಿಕ್ಕಾಗ ಅದನ್ನು ಕಾನೂನಾತ್ಮಕವಾಗಿ ಜಾರಿ ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡಿದರು.

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸಮರ್ಥ ನಾಯಕತ್ವ, ವ್ಯಕ್ತಿ ಗೌರವ, ಶಿಕ್ಷಣ ಮತ್ತು ಸಂವಿಧಾನಾತ್ಮಕ ನಡವಳಿಕೆಗಳು ಪ್ರಜಾಪ್ರಭುತ್ವದ ಮೂಲ ಸೂತ್ರಗಳಾಗಿವೆ. ಈ ಪೈಕಿ ಸಮಾನತೆಯು ಮೊದಲನೇ ಸೂತ್ರವಾಗಿದೆ. ರಾಷ್ಟ್ರವನ್ನು ಸಮಾನತೆ ಮತ್ತು ಘನತೆಯ ಆಧಾರದ ಮೇಲೆ ಕಟ್ಟಲು ಸಾಧ್ಯವೇ ವಿನಾ ಅಸಮತೆ ಮತ್ತು ದೌರ್ಜನ್ಯದ ಮೇಲಲ್ಲ ಎಂಬ ತತ್ವವನ್ನು ಅದು ಪ್ರಧಾನವಾಗಿ ಸಾರುತ್ತದೆ.

ಎರಡನೆಯ ಸೂತ್ರವಾಗಿ ಸ್ವಾತಂತ್ರ್ಯವನ್ನು ಗುರುತಿಸಲಾಗಿದೆ. ಸಾಮಾನ್ಯ ಪ್ರಜೆಗಳು ಸರ್ಕಾರದ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾದರೆ ಅದನ್ನು ಕ್ರಾಂತಿಯಿಂದಲೇ ಸಾಧಿಸಬೇಕೆಂಬ ಭಾವನೆ 18ನೇ ಶತಮಾನದಲ್ಲಿತ್ತು. ಆದರೆ 19ನೇ ಶತಮಾನದಲ್ಲಿ ಪ್ರಜೆಗಳು ಮತ ಚಲಾಯಿಸುವ ಅಧಿಕಾರ ಪಡೆದ ಮೇಲೆ ಅವರಿಗೆ ವಾಕ್ ಸ್ವಾತಂತ್ರ್ಯ, ಆಸ್ತಿ ಹೊಂದುವ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ, ವೈಯಕ್ತಿಕ ಸ್ವಾತಂತ್ರ್ಯ ದೊರೆಯಿತು. ವಿಷಾದದ ಸಂಗತಿಯೆಂದರೆ, ಈ ದಿನಗಳಲ್ಲಿ ಇಂತಹ ಸ್ವಾತಂತ್ರ್ಯದ ಕಲ್ಪನೆಗೆ ಸಂವಿಧಾನದ ಗಡಿ ಮೀರಿದ ಕಂಟಕಗಳು ಎದುರಾಗುತ್ತಿವೆ. ‘ನೀನು ಇಂತಹದ್ದನ್ನೇ ತಿನ್ನಬೇಕು, ಇಂತಹದ್ದನ್ನೇ ಧರಿಸಬೇಕು, ಇಂತಹದ್ದನ್ನೇ ಆಚರಿಸಬೇಕು, ಇಂತಹದ್ದನ್ನೇ ಬೆಂಬಲಿಸಬೇಕು’ ಎಂಬಂಥ ಹೇರಿಕೆಗಳು ಸ್ವಾತಂತ್ರ್ಯದ ತತ್ವಕ್ಕೆ ವಿರುದ್ಧವಾಗಿವೆ. ಮತ್ತೊಂದು ಅಂಶವಾದ ಭ್ರಾತೃತ್ವ ಕೂಡ ದೇಶದ ಏಕತೆಯ ಮೂಲ ಸೂತ್ರವಾಗಿದೆ. ಇಂದು ಇಂತಹ ಭ್ರಾತೃತ್ವದ ಕಲ್ಪನೆಯನ್ನು ಮೀರಿ ಧರ್ಮದ ಹೆಸರಿನಲ್ಲಿ ವಿಷಮಯ ವಾತಾವರಣ ಹಬ್ಬುತ್ತಿರುವುದರಿಂದ, ಭ್ರಾತೃತ್ವದ ಮೌಲ್ಯವನ್ನು ನಾವು ಮತ್ತೆ ಮತ್ತೆ ನೆನೆಯಬೇಕಾಗಿದೆ.

ಇನ್ನು ಸಾರ್ವಜನಿಕ ನಾಯಕತ್ವವು ಪ್ರಜಾಪ್ರಭುತ್ವದ ಪ್ರಮುಖ ಮತ್ತು ಅಗತ್ಯವಾದ ಸಂಗತಿಯಾಗಿದೆ. ಆದರೆ ಈಗಿನ ಸಂದರ್ಭದಲ್ಲಿ ನಾಯಕತ್ವದ ಸ್ಥಿತಿ ಬಹಳ ದುರ್ಬಲವಾಗಿದೆ. ಸಾರ್ವಜನಿಕ ಜೀವನದ ಮಹತ್ವ ಅರಿಯದವರು ರಾಜಕೀಯವನ್ನು ಪ್ರವೇಶಿಸುತ್ತಿದ್ದು, ಇವರು ಪ್ರಜಾಪ್ರಭುತ್ವಕ್ಕೆ ನಿಜಕ್ಕೂ ಮಾರಕವಾಗಿದ್ದಾರೆ. ಜನಪರ ದನಿಗಳನ್ನು ಅಡಗಿಸಲು ನಿರಂತರವಾದ ಪ್ರಯತ್ನಗಳು ನಡೆಯುತ್ತಿರುವುದು ಪ್ರಜಾಪ್ರಭುತ್ವದ ಆಶಯಗಳ ಮೇಲಿನ ನೇರವಾದ ದಾಳಿಯಾಗಿದೆ. ಈ ಬಗ್ಗೆ ನಾವೆಲ್ಲಾ ಸದಾ ಎಚ್ಚರದಿಂದ ಇರಬೇಕಾಗಿದೆ.

ಸಂವಿಧಾನದ ಇಂತಹ ಆಶಯಗಳನ್ನು 5 ಗ್ಯಾರಂಟಿಗಳ ರೂಪದಲ್ಲಿ ಜಾರಿ ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಾಡಿದೆ. ಇಂತಹ ಯೋಜನೆಗಳ ಬಗ್ಗೆ ಆರ್ಥಿಕತೆಯ ಕಾರಣಕ್ಕೆ ನಾವು ವಿಮರ್ಶೆಗಳನ್ನು ಸ್ವೀಕರಿಸಿ, ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬಹುದು. ಆದರೆ ಯೋಜನೆಗಳೇ ಬೇಡ ಎಂಬಂತಹ ಅಸಹನೆಯನ್ನು, ಜನಸಾಮಾನ್ಯರ ಬದುಕನ್ನು ಗಮನದಲ್ಲಿಟ್ಟು ತಿರಸ್ಕರಿಸಬೇಕಾಗಿದೆ. ಈ ಹಿಂದೆ ಇಂದಿರಾ ಗಾಂಧಿ ಮತ್ತು ದೇವರಾಜ ಅರಸು ಅವರು 20 ಅಂಶಗಳ ಕಾರ್ಯಕ್ರಮ ಹಾಗೂ ‘ಉಳುವವನೇ ಹೊಲದೊಡೆಯ’ ಎಂಬ ಯೋಜನೆಗಳ ಮೂಲಕ ಜನರ ಬದುಕಿಗೆ ನೆರವಾಗಿದ್ದನ್ನು ನಾವು ನೆನೆಯಬೇಕಾಗಿದೆ.



ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯಗಳ ಕುರಿತು ಮುಂದಿನ ಪೀಳಿಗೆಗೆ ಅರಿವು ಮೂಡಿಸಬೇಕಾದ ಬಹುದೊಡ್ಡ ಜವಾಬ್ದಾರಿ ಆಡಳಿತಾರೂಢ ಪಕ್ಷದ ಮೇಲಿರುತ್ತದೆ. ಈ ದಿಸೆಯಲ್ಲಿ, ಸಂವಿಧಾನದ ಪೀಠಿಕೆಯ ವಾಚನದ ಮೂಲಕ 2023ರಿಂದ ಆರಂಭಗೊಂಡ ಕರ್ನಾಟಕ ಸರ್ಕಾರದ ಪ್ರಯತ್ನಗಳು ಹಲವು ಬಗೆಯಲ್ಲಿ ಸಾಗಿವೆ. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಇದೇ 15ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಗುತ್ತಿದೆ. ಅಂದು ಬೀದರ್‌ನಿಂದ ಚಾಮರಾಜನಗರದವರೆಗೆ 25 ಲಕ್ಷಕ್ಕೂ ಹೆಚ್ಚು ಜನ ಮಾನವ ಸರಪಳಿ ನಿರ್ಮಿಸುವ ಮೂಲಕ ಸಮಾನತೆ ಮತ್ತು ಏಕತೆಯ ಸಂದೇಶವನ್ನು ದೇಶಕ್ಕೆ ಸಾರಲಿದ್ದಾರೆ.

ದೇಶದ ಪ್ರಜೆಗಳಾಗಿ ನಾವೆಲ್ಲರೂ ಅಂದು ಸಕ್ರಿಯವಾಗಿ ಭಾಗವಹಿಸೋಣ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನೆನಪಿಸಿಕೊಂಡು ಮುನ್ನಡೆಯೋಣ.

ಲೇಖಕ: ಸಮಾಜ ಕಲ್ಯಾಣ ಸಚಿವ

ವಾಚಕರ ವಾಣಿ

ಮಾಹಿತಿ ಆಯೋಗದ ವಿಳಂಬ ಧೋರಣೆ ನಿಲ್ಲಲಿ

ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ದಿಸೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡಬೇಕಾದ ಜವಾಬ್ದಾರಿ ಹೊತ್ತಿರುವ ಕರ್ನಾಟಕ ಮಾಹಿತಿ ಆಯೋಗವು ನಿಷ್ಕ್ರಿಯವಾಗಿದೆಯೇನೋ ಎಂಬ ಸಂಶಯ ಮೂಡುತ್ತಿದೆ. ಅಧಿಕಾರಿಗಳಿಂದ ಸರಿಯಾಗಿ ಮಾಹಿತಿ ಸಿಗದ ಕಾರಣಕ್ಕೆ ತನ್ನ ಬಳಿ ಬಂದವರನ್ನು ಮಾಹಿತಿ ಆಯೋಗ ಸಹ ವರ್ಷಗಟ್ಟಲೆ ಅಲೆದಾಡಿಸುತ್ತಿದೆ. ಮಾಹಿತಿಗಾಗಿ ಮೇಲ್ಮನವಿ, ಮಾಹಿತಿ ನೀಡದವರ ವಿರುದ್ಧ ದೂರು ಸಲ್ಲಿಸಿ ವರ್ಷಕ್ಕೂ ಹೆಚ್ಚು ಅವಧಿ ಕಳೆದರೂ ಆಯೋಗ ವಿಚಾರಣೆಗೆ ದಿನಾಂಕವನ್ನೇ ನೀಡಿಲ್ಲ. ಒಂದೂವರೆ ವರ್ಷವಾದರೂ ಮಾಹಿತಿ ಕೊಡದ ಅಧಿಕಾರಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸದ ಆಯೋಗದಿಂದ ತ್ವರಿತ ನ್ಯಾಯ ನಿರೀಕ್ಷೆ ಹೇಗೆ ಸಾಧ್ಯ?

ಶ್ರೀಸಾಮಾನ್ಯನ ಕೈಯಲ್ಲಿರುವ ಮಾಹಿತಿ ಹಕ್ಕು ಎಂಬ ಪ್ರಬಲ ಅಸ್ತ್ರವನ್ನು ಆಯೋಗವು ತನ್ನ ವಿಳಂಬ ನೀತಿಯಿಂದ ದುರ್ಬಲಗೊಳಿಸುತ್ತಿದೆ. ಇನ್ನಾದರೂ ಅದು ತನ್ನ ಸಂವಿಧಾನದತ್ತ ಕರ್ತವ್ಯದತ್ತ ಮುಖ ಮಾಡಲಿ, ಜನಸಾಮಾನ್ಯರಿಗೆ ಶಕ್ತಿ ತುಂಬಲಿ.

ಜಿ.ಜಗದೀಶ್, ದಾವಣಗೆರೆ

ಕೋಮು ಸಂಘರ್ಷ: ಬೇಕು ಕಟ್ಟುನಿಟ್ಟಿನ ಕ್ರಮ

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಸರ್ಜನೆಯ ವೇಳೆ ನಡೆದಿರುವ ಕಲ್ಲುತೂರಾಟವು ಸಮಾಜದ ಶಾಂತಿ, ನೆಮ್ಮದಿಗೆ ಧಕ್ಕೆ ತರುವ ಕಿಡಿಗೇಡಿಗಳ ದುಷ್ಕೃತ್ಯವೇ ಸರಿ. ಕೋಮು ಸೌಹಾರ್ದಕ್ಕೆ ಹೆಸರಾಗಿದ್ದ ಮಂಡ್ಯ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಆಗಿಂದಾಗ್ಗೆ ನಡೆಯುತ್ತಿರುವುದು ದುರದೃಷ್ಟಕರ. ಈ ರೀತಿಯ ಸಂಘರ್ಷದ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಎಚ್ಚರ ವಹಿಸಬೇಕು, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಮತ-ಧರ್ಮದ ಹೆಸರಿನಲ್ಲಿ ಸಮಾಜವನ್ನು ವಿಭಜಿಸಲು ಯತ್ನಿಸುವ ಮತಾಂಧರು ಯಾವುದೇ ಜಾತಿ, ಧರ್ಮದವರಾಗಿರಲಿ ಅಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಸ್ಥಳೀಯರು ಸಹ ದುರುಳರ ಪ್ರಚೋದನೆಗಳಿಗೆ ಒಳಗಾಗದೆ ಶಾಂತಿ, ಸಂಯಮ ಕಾಪಾಡಿಕೊಳ್ಳುವುದು ಅವಶ್ಯ. ಕೋಮು ದಳ್ಳುರಿಗೆ ಅವಕಾಶ ನೀಡಿದರೆ ಸಾರ್ವಜನಿಕ ಆಸ್ತಿಪಾಸ್ತಿಗೆ ಧಕ್ಕೆ, ಜನರ ಪ್ರಾಣಹಾನಿಗೂ ಕುತ್ತು ಎಂಬುದನ್ನು ಎಲ್ಲರೂ ಅರಿಯಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಇಂತಹ ಸೂಕ್ಷ್ಮ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳು ಹೊತ್ತಿ ಉರಿಯುತ್ತಿರುವ ಮನೆಯಲ್ಲಿ ಚಳಿ ಕಾಯಿಸಿಕೊಳ್ಳುವ ಪ್ರವೃತ್ತಿಯನ್ನು ಮೊದಲು ಬಿಡಬೇಕಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಗಾಂಧಿ ಅಪ್ರಸ್ತುತ ಆದರೇಕೆ?

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ನಿಮಿತ್ತ ‘ಬನ್ನಿ, ಪ್ರಜಾಪ್ರಭುತ್ವಕ್ಕಾಗಿ ಕೈ ಜೋಡಿಸೋಣ’ ಎನ್ನುವ ಘೋಷಣೆಯಿರುವ ಸರ್ಕಾರದ ಪೂರ್ಣಪುಟದ ಜಾಹೀರಾತು (ಪ್ರ.ವಾ., ಸೆ. 12) ನೋಡಿ ಅಭಿಮಾನದ ಜೊತೆಗೆ ಅಚ್ಚರಿಯೂ ಆಯಿತು. ಸದರಿ ಚಿತ್ರಪಟದ ಹೃದಯ ಭಾಗದಲ್ಲಿ ಅದೂ ಚಿಕ್ಕದಾಗಿ ಅಂಬೇಡ್ಕರ್ ಫೋಟೊವನ್ನು ಮಾತ್ರ ಅಳವಡಿಸಲಾಗಿದೆ. ಇಲ್ಲಿ ರಾಷ್ಟ್ರಪಿತನ ನೆನಪೇ ಆಗಲಿಲ್ಲವೆ? ಪ್ರಜಾಪ್ರಭುತ್ವ ಸ್ಥಾಪನೆಗಿಂತ ಮೊದಲು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿ ಇಲ್ಲಿ ಅಪ್ರಸ್ತುತರಾದರೆ? ಮರಕ್ಕೆ ಕಾರಣವಾದ ತಾಯಿ ಬೇರನ್ನು ನಾವು ಮರೆಯಬಾರದು ಅಲ್ಲವೆ?

ಈರಪ್ಪ ಎಂ. ಕಂಬಳಿ, ಬೆಂಗಳೂರು

ಸಿಜೆಐ ಮನೆಗೆ ಪ್ರಧಾನಿ: ಅನಪೇಕ್ಷಣೀಯ ನಡೆ

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ಮನೆಯಲ್ಲಿ ಬುಧವಾರ ನಡೆದ ಗಣೇಶ ಪೂಜೆಯಲ್ಲಿ ತಾವು ಭಾಗಿಯಾಗಿದ್ದನ್ನು ಪ್ರಧಾನಿ ನರೇಂದ್ರ ಮೋದಿ ತಮ್ಮ ಎಕ್ಸ್ ಖಾತೆಯಲ್ಲಿ ಫೋಟೊ ಸಮೇತ ಹಂಚಿಕೊಂಡಿದ್ದಾರೆ. ಭಾರತದಂಥ ಧರ್ಮನಿರಪೇಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗವು ಶಾಸಕಾಂಗ, ಕಾರ್ಯಾಂಗದಿಂದ ಅಂತರ ಕಾಯ್ದುಕೊಳ್ಳುವುದು ಅಪೇಕ್ಷಣೀಯ ಮತ್ತು ಪ್ರಜಾತಂತ್ರಕ್ಕೆ ಆರೋಗ್ಯಕರವೂ ಹೌದು. ಹೀಗಿರುವಾಗ, ಮುಖ್ಯ ನ್ಯಾಯಮೂರ್ತಿಯವರ ಮನೆಯಲ್ಲಿ ಪ್ರಧಾನಿ ಪೂಜೆ ಪುನಸ್ಕಾರದಂಥ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಎಷ್ಟು ಸರಿ? ಇದು ನ್ಯಾಯಾಂಗದ ಒಟ್ಟಾರೆ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವುದಿಲ್ಲವೇ?

ಒಕ್ಕೂಟ ಸರ್ಕಾರದ ನೀತಿ, ನಿಯಮಾವಳಿಗಳು ಜನವಿರೋಧಿಯಾದಾಗ ಅದನ್ನು ಪ್ರಶ್ನಿಸಿ, ನ್ಯಾಯ ಕೋರಿ ಹಲವು ಮೊಕದ್ದಮೆಗಳು ಸುಪ್ರೀಂ ಕೋರ್ಟ್ ಮೆಟ್ಟಿಲನ್ನು ಹತ್ತುತ್ತಿರುವ ಹೊತ್ತಿನಲ್ಲಿ ಈ ಪ್ರಕರಣ ದೇಶಕ್ಕೆ ಯಾವ ಸಂದೇಶವನ್ನು ನೀಡುತ್ತದೆ? ನ್ಯಾಯಾಂಗ ಮತ್ತು ಶಾಸಕಾಂಗದ ವಿಶ್ವಾಸಾರ್ಹತೆಗೆ ಸಂಬಂಧಿಸಿದಂತೆ ಪ್ರಶ್ನೆಗಳು ಏಳುವುದಿಲ್ಲವೇ? ಜನರಲ್ಲಿ ಏಳುವ ಇಂತಹ ಪ್ರಶ್ನೆಗಳಿಗೆ ಪ್ರಧಾನಿ ಮತ್ತು ಮುಖ್ಯ ನ್ಯಾಯಮೂರ್ತಿಯವರು ಉತ್ತರ ನೀಡಬೇಕು.

ಚಂದ್ರಪ್ರಭ ಕಠಾರಿ, ಬೆಂಗಳೂರು

ಗಡಿಯಲ್ಲೂ ಬಹುಭಾಷಾ ಸವಾಲು

ತರಗತಿಗಳಲ್ಲಿ ವಿವಿಧ ಭಾಷೆಗಳನ್ನು ಮಾತನಾಡುವ ಮಕ್ಕಳಿಗೆ ಕಲಿಸುವಲ್ಲಿ ಶಿಕ್ಷಕರು ಎದುರಿಸುತ್ತಿರುವ ಸವಾಲನ್ನು ಎಚ್.ಬಿ.ಚಂದ್ರಶೇಖರ್ ತಮ್ಮ ಲೇಖನದಲ್ಲಿ (ಸಂಗತ, ಸೆ. 12) ವಿವರಿಸಿದ್ದಾರೆ. ರಾಜ್ಯದ ಗಡಿ ಜಿಲ್ಲೆಗಳಲ್ಲಿ ಇಂತಹ ಬಹುಭಾಷಾ ಸನ್ನಿವೇಶವು ಶಾಲೆಗಳಿಗೆ ಮಾತ್ರವಲ್ಲ ಎಲ್ಲ ಕಾರ್ಯಕ್ರಮಗಳಿಗೂ ಅನ್ವಯಿಸುತ್ತದೆ. ಉದಾಹರಣೆಗೆ, ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಕೆಲವು ಗಡಿ ಭಾಗದ ಹಳ್ಳಿಗಳಲ್ಲಿ ಗ್ರಾಮಸಭೆ ಅಥವಾ ಜನಸಂಪರ್ಕ ಸಭೆ ನಡೆಸುವಾಗ, ಕನ್ನಡದಲ್ಲಿ ಪ್ರಾರಂಭ ಮಾಡಿದ ಸಭೆ ನಂತರ ತೆಲುಗಿನಲ್ಲಿ ಮುಂದುವರಿಯುತ್ತದೆ. ಹಿಂದಿನಿಂದಲೂ ಈ ಸಂಪ್ರದಾಯ ನಡೆದುಕೊಂಡು ಬಂದಿದೆ.

ಸಭೆಯ ಅಧ್ಯಕ್ಷತೆ ವಹಿಸುವ ಕ್ಷೇತ್ರದ ಶಾಸಕರು, ಇತರ ಜನಪ್ರತಿನಿಧಿಗಳು ಅಥವಾ ಅಧಿಕಾರಿಗಳಿಗೆ ಕನ್ನಡದ ಬಗ್ಗೆ ಖಂಡಿತ ಅಸಡ್ಡೆಯಿಲ್ಲ. ಆದರೆ ಸ್ಥಳೀಯರ ಕುಂದುಕೊರತೆಗಳನ್ನು ಅರಿಯಲು ಇದು ಅನಿವಾರ್ಯ. ಗಡಿಭಾಗದ ಜಿಲ್ಲೆಗಳಲ್ಲಿ ದ್ವಿಭಾಷಾ ಸನ್ನಿವೇಶ ಸಾಮಾನ್ಯ ಎಂಬುದನ್ನು ಒಪ್ಪಿಕೊಳ್ಳಬೇಕು. ಇಲ್ಲವಾದರೆ ಕುಂದುಕೊರತೆಗಳನ್ನು ಅರಿಯುವ ಜನಸಂಪರ್ಕ ಸಭೆಗಳ ಉದ್ದೇಶವೇ ವಿಫಲವಾಗುತ್ತದೆ.

ಟಿ.ಜಯರಾಂ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕಾಣಲಾಗದವರಿಗೂ, ಕೇಳಲಾಗದವರಿಗೂ

ಸಿನಿಮಾ ದಕ್ಕಿಸಿ ಕೊಡುವ ಈ ಬಗೆ...

ಸಿನಿಮಾ ನೋಡುವಾಗ ಅದರ ಸಂಗೀತ, ಸಂಭಾಷಣೆ, ಶಬ್ದಗಳು ಕೇಳದೇ ಇದ್ದರೆ ಹೇಗೆ? ಅದೇ ರೀತಿ ಶಬ್ದಗಳಷ್ಟೇ ಕೇಳುತ್ತಿದ್ದು, ದೃಶ್ಯ ಕಾಣದೇ ಇದ್ದರೆ ಹೇಗೆ? ಈ ಎರಡೂ ಸಂಭವಿಸದಿದ್ದರೆ ಸಿನಿಮಾವೊಂದನ್ನು ಪ್ರೇಕ್ಷಕ ಗರಿಷ್ಠಮಟ್ಟದಲ್ಲಿ ಅನುಭವಿಸಲು ಸಾಧ್ಯವಾಗುವುದೇ ಇಲ್ಲ. ಕಿವಿ ಕೇಳಿಸದವರು ಸಿನಿಮಾ ನೋಡಲು ಕೂತಾಗ ಮತ್ತು ಕಣ್ಣು ಕಾಣಿಸದವರು ಸಿನಿಮಾ ಕೇಳಲು ಕೂತಾಗ, ಅದನ್ನು ಅನುಭವಿಸುವಲ್ಲಿ ಅವರು ಎದುರಿಸುವ ದೊಡ್ಡ ತೊಡಕುಗಳು ಇವು. ಈ ತೊಡಕುಗಳನ್ನು ನಿವಾರಿಸುವ, ಸಿನಿಮಾವನ್ನು ಅನುಭವಿಸಲು ನೆರವಾಗುವ ಸವಲತ್ತುಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ ಹೇಳುತ್ತಿದೆ. ಇದೇ 15ರ ನಂತರ ಈ ವ್ಯವಸ್ಥೆ ಜಾರಿಯಾಗಬೇಕಿದೆ



• ಜಯಸಿಂಹ ಆರ್.

ಸಾಮಾನ್ಯರಿಗೆ ಇರುವಂತಹ ಎಲ್ಲ ಹಕ್ಕುಗಳೂ ಅಂಗವಿಕಲರಿಗೂ ಇವೆ ಎನ್ನುತ್ತದೆ ವಿಶ್ವಸಂಸ್ಥೆ. ಬೇರೆಲ್ಲಾ ಹಕ್ಕುಗಳ ಜತೆಗೆ ಮಾಹಿತಿ ಪಡೆಯುವ ಮತ್ತು ಮನೋರಂಜನೆಯ ಹಕ್ಕನ್ನೂ ಅಂಗವಿಕಲರು ಹೊಂದಿದ್ದಾರೆ ಎಂದೂ ಇದನ್ನು ಅರ್ಥೈಸಲಾಗುತ್ತದೆ. ಇದೇ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿದ್ದ ಭಾರತ ಸರ್ಕಾರವು 2015ರಲ್ಲೇ 'ಸುಗಮ್ಯ ಭಾರತ ಅಭಿಯಾನ'ವನ್ನು ಆರಂಭಿಸಿತ್ತು. ಎಲ್ಲ ಸಾರ್ವಜನಿಕ ಸ್ಥಳಗಳಲ್ಲೂ ಅಂಗವಿಕಲರಿಗೆ ಸುಗಮ ಪ್ರವೇಶ, ಸುಗಮ ವಿವರಣೆ ದೊರೆಯುವಂತೆ ಮಾಡುವ ಅಭಿಯಾನವದು. ಮುಂದುವರಿದು 2016ರಲ್ಲಿ ಅಂಗವಿಕಲರ ಹಕ್ಕುಗಳ ಕಾಯ್ದೆಯನ್ನೇ ಜಾರಿಗೆ ತರಲಾಯಿತು. ಇದರ ಭಾಗವಾಗಿ, ಕಿವಿ ಕೇಳಿಸದವರು ಮತ್ತು ಕಣ್ಣು ಕಾಣಿಸದವರು ಗರಿಷ್ಠ ಪ್ರಮಾಣದಲ್ಲಿ ಸಿನಿಮಾವನ್ನು ಅನುಭವಿಸಲು ಅನುಕೂಲ ಮಾಡಿಕೊಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಸಿನಿಮಾದ ಎಲ್ಲ ಶಬ್ದಗಳೂ ಕಿವಿ ಕೇಳಿಸದವರಿಗೆ ಅರ್ಥವಾಗುವಂತೆ ಮಾಡುವ ಮತ್ತು ಕಣ್ಣು ಕಾಣಿಸದವರಿಗೆ ಎಲ್ಲಾ ದೃಶ್ಯಗಳನ್ನು ವಿವರಿಸುವಂತಹ ವ್ಯವಸ್ಥೆಗಳನ್ನು ಸಿನಿಮಾಗಳಿಗೆ ಅಳವಡಿಸಬೇಕು ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಇದೇ ಮಾರ್ಚ್ 15ರಂದು ಆದೇಶಿಸಿತ್ತು. ಆ ಪ್ರಕಾರ ಸೆಪ್ಟೆಂಬರ್ 15ರಿಂದ ಇದು ಜಾರಿಯಾಗಲಿದೆ. ಜಾರಿಯ ದಿನ ಹತ್ತಿರವಾಗುತ್ತಿರುವಂತೆಯೇ ಸಿನಿಮಾ ಮಂದಿ, ಚಿತ್ರಮಂದಿರ ಮಾಲೀಕರ ಮಧ್ಯೆ ಈ ಬಗ್ಗೆ ಚರ್ಚೆಗಳು ಆರಂಭವಾಗಿವೆ. ಇದರ ಮಧ್ಯೆಯೇ ಸಿನಿಮಾವನ್ನು ಗರಿಷ್ಠ ಪ್ರಮಾಣದಲ್ಲಿ ಅನುಭವಿಸುವ ದಿನವನ್ನು ಕಿವಿ ಕೇಳದವರು ಮತ್ತು ಕಣ್ಣು ಕಾಣಿಸದವರು ಎದುರು ನೋಡುತ್ತಿದ್ದಾರೆ.

ಈ ಸವಲತ್ತುಗಳನ್ನು ಜಾರಿಗೆ ತರಬೇಕಾಗಿರುವುದು ಸಿನಿಮಾ ನಿರ್ಮಾಪಕರು ಮತ್ತು ಚಿತ್ರಮಂದಿರಗಳ ಮಾಲೀಕರು. ಸಿನಿಮಾ ನಿರ್ಮಾಣದ ಹಂತದಲ್ಲೇ 'ದೃಶ್ಯ ವಿವರಣೆ', 'ಕ್ಲೋಸ್ಡ್ ಅಥವಾ ಓಪನ್ ಕ್ಯಾಪ್ಷನಿಂಗ್' ಮತ್ತು ಸಂಜ್ಞಾ ಭಾಷಾ ವಿವರಣೆಯನ್ನು ಸೇರಿಸುವ ಕೆಲಸವನ್ನು ನಿರ್ದೇಶಕ ಮತ್ತು ನಿರ್ಮಾಪಕ ಮಾಡಬೇಕಾಗುತ್ತದೆ. ಇವುಗಳನ್ನು ಅಳವಡಿಸುವಲ್ಲಿ ಇರುವ ತಾಂತ್ರಿಕ ಅಡೆತಡೆಗಳು ಒಂದಾದರೆ, ಸಿನಿಮಾದ ಅಂದಕ್ಕೆ ಧಕ್ಕೆಯಾಗದಂತೆ ಇವನ್ನು ಅಳವಡಿಸುವ ಕಲಾತ್ಮಕತೆಯೂ ಬೇಕಾಗುತ್ತದೆ.


ಚಿತ್ರಮಂದಿರಗಳ ಮಾಲೀಕರೂ ಇದಕ್ಕಾಗಿ ಶ್ರಮ ಹಾಕಬೇಕಾಗುತ್ತದೆ. ಕಣ್ಣು ಕಾಣಿಸದವರು ಚಿತ್ರಮಂದಿರಗಳಲ್ಲಿ 'ಆಡಿಯೊ ಡಿಸ್ಕ್ರಿಪ್ಷನ್' ಕೇಳಿಸಿಕೊಳ್ಳಲು ಅನುಕೂಲ ಮಾಡಿಕೊಡುವ ಪ್ರತ್ಯೇಕ ಹೆಡ್‌ಫೋನ್‌ಗಳನ್ನು ಅಳವಡಿಸಬೇಕಾಗುತ್ತದೆ. ಕ್ಲೋಸ್ಡ್ ಕ್ಯಾಪ್ಷನಿಂಗ್ ಕಾಣುವ ಸ್ಮಾರ್ಟ್ ಕನ್ನಡಕಗಳನ್ನು ಅಥವಾ ಪ್ರತ್ಯೇಕ ಕಿರಿದಾದ ಹೆಚ್ಚುವರಿ ಪರದೆಗಳನ್ನು ಕಿವಿ ಕೇಳದವರಿಗೆ ಒದಗಿಸಬೇಕಾಗುತ್ತದೆ. ಈ ಸಂಬಂಧ ಚಿತ್ರಮಂದಿರಗಳ ಮಾಲೀಕರೇ ಒಂದು ಮಾರ್ಗಸೂಚಿಯನ್ನು ರೂಪಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರದ ಆದೇಶ ಹೇಳುತ್ತದೆ.

ಎಲ್ಲಿ, ಯಾವುದಕ್ಕೆ ಅನ್ವಯ...

- ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಬಿಡುಗಡೆಯಾಗುವ ಸಿನಿಮಾಗಳು, ನಿಯಮ ಜಾರಿಯಾದ ಆರು ತಿಂಗಳಲ್ಲಿ ಈ ಸವಲತ್ತುಗಳನ್ನು ಅಳವಡಿಸಿಕೊಳ್ಳಬೇಕು
- ಒಂದೇ ಭಾಷೆಯ ಸಿನಿಮಾಗಳು ಈ ಸವಲತ್ತುಗಳನ್ನು ಅಳವಡಿಸಿಕೊಳ್ಳಲು ಎರಡು ವರ್ಷಗಳ ಕಾಲಾವಕಾಶ
- 72 ನಿಮಿಷಕ್ಕಿಂತ ಹೆಚ್ಚು ಅವಧಿಯ ಎಲ್ಲ ಸಿನಿಮಾಗಳು
- 2025ರ ಜನವರಿ 1ರ ನಂತರ ನಡೆಯುವ ರಾಷ್ಟ್ರೀಯ ಸಿನಿಮಾ ಸ್ಪರ್ಧೆಗಳು ಮತ್ತು ಅಂತರರಾಷ್ಟ್ರೀಯ ಸಿನಿಮೋತ್ಸವಗಳಿಗೆ ಪ್ರವೇಶ ಬಯಸುವ ಎಲ್ಲ ಸಿನಿಮಾಗಳು ಈ ಸವಲತ್ತುಗಳನ್ನು ಕಡ್ಡಾಯವಾಗಿ ಹೊಂದಿರಲೇಬೇಕು



'ಅನುಕೂಲ ಎಂಬುದೇ ಮುಖ್ಯ'



ಈ ಸವಲತ್ತುಗಳನ್ನು ಅಳವಡಿಸಿಕೊಳ್ಳಲು ನಿರ್ಮಾಪಕರು ಮತ್ತು ಚಿತ್ರಮಂದಿರಗಳ ಮಾಲೀಕರು ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಸಾಮಾನ್ಯ ಪ್ರೇಕ್ಷಕರಿಂದ ಆರಂಭದಲ್ಲಿ ಆಕ್ಷೇಪ ಬರಬಹುದು. ಆದರೆ ದಿನಕಳೆದಂತೆ ಅದೂ ರೂಢಿಯಾಗಿಹೋಗುತ್ತದೆ. ಇದರ ಜಾರಿಯಲ್ಲಿ ಇಷ್ಟೆಲ್ಲಾ ಸವಾಲುಗಳು ಇದ್ದರೂ, ಸಿನಿಮಾವನ್ನು ಎಲ್ಲರೂ ಅನುಭವಿಸಲು ಇದು ಅನುಕೂಲ ಮಾಡಿಕೊಡುತ್ತದೆ ಎಂಬುದೇ ಮಹತ್ವ ನೀಡಬೇಕಾದ ವಿಷಯ

ಯಶವಂತ್ ಶೆಹನಾಯಿ, ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ ಬೆಂಗಳೂರು ಪ್ರಾದೇಶಿಕ ಅಧಿಕಾರಿ

ಹಲವು ಆಯ್ಕೆಗಳು

ಸಿನಿಮಾಗಳು ಇಲ್ಲಿ ವಿವರಿಸಲಾದ ಮೂರೂ ಸವಲತ್ತುಗಳನ್ನು ಹೊಂದಿರಬೇಕು ಎಂದೇನೂ ಇಲ್ಲ. ಕಣ್ಣು ಕಾಣಿಸದವರಿಗೆ ಅನುಕೂಲ ಮಾಡಿಕೊಡುವ ಆಡಿಯೊ ಡಿಸ್ಕ್ರಿಪ್ಷನ್ ಮತ್ತು ಕಿವಿ ಕೇಳಿಸದವರಿಗೆ ಅನುಕೂಲ ಮಾಡಿಕೊಡುವ ಒಂದು ಸವಲತ್ತು – ಇವೆರಡನ್ನು ಹೊಂದಿದ್ದರೆ ಸಾಕು

ದೃಶ್ಯ ವಿವರಣೆ

ಸಿನಿಮಾಟೊಗ್ರಫಿ ಪರಿಭಾಷೆಯಲ್ಲಿ ಇದನ್ನು 'ಆಡಿಯೊ ಡಿಸ್ಕ್ರಿಪ್ಷನ್' ಎಂದು ಕರೆಯಲಾಗುತ್ತದೆಯಾದರೂ, ಇದನ್ನು 'ಧ್ವನಿ ವಿವರಣೆ' ಎಂದು ಹೇಳಲಾಗದು. ಬದಲಿಗೆ ದೃಶ್ಯವನ್ನು ಧ್ವನಿ ಮೂಲಕ ವಿವರಿಸುವ ಬಗೆ ಇದು. ಹೀಗಾಗಿಯೇ ಇದನ್ನು ದೃಶ್ಯ ವಿವರಣೆ ಎನ್ನಬಹುದು.

ಚಲನಚಿತ್ರದಲ್ಲಿ ಕಲಾವಿದರ ಸಂಭಾಷಣೆಗಳು, ಹಿನ್ನೆಲೆ ಸಂಗೀತ ಮತ್ತು ಇತರ ಶಬ್ದಗಳು ಮಾತ್ರ ಕೇಳುತ್ತವೆ. ಕಣ್ಣು ಕಾಣಿಸದವರಿಗೆ ಇವು ಕೇಳುತ್ತವೆಯೇ ಹೊರತು, ಸಿನಿಮಾದ ಪ್ರತಿ ದೃಶ್ಯದಲ್ಲಿರುವ ಮೌನ, ಕಲಾವಿದರ ಚಲನವಲನಗಳು, ಕ್ರಿಯೆಗಳು ಗೊತ್ತಾಗುವುದಿಲ್ಲ.

ಉದಾಹರಣೆಗೆ: ಕಳ್ಳನ ಪಾತ್ರಧಾರಿಯೊಬ್ಬ ಕತ್ತಲಲ್ಲಿ, ಮನೆಯೊಂದರ ಬಾಗಿಲನ್ನು ಒಂದಿನಿತೂ ಸದ್ದಾಗದಂತೆ ತೆಗೆಯುತ್ತಾನೆ. ಸಾಮಾನ್ಯರು ಈ ದೃಶ್ಯವನ್ನು ನೋಡಿ, ಅನುಭವಿಸಲು ಸಾಧ್ಯವಾಗುತ್ತದೆ. ಆದರೆ, ಕಣ್ಣು ಕಾಣಿಸದವರು ಇದನ್ನು ಗ್ರಹಿಸಲು ಸಾಧ್ಯವಾಗುವುದಿಲ್ಲ. 'ಒಂದೊಮ್ಮೆ ಆಡಿಯೊ ಡಿಸ್ಕ್ರಿಪ್ಷನ್' ಸವಲತ್ತು ಇದ್ದರೆ, ಕಣ್ಣು ಕಾಣಿಸದವರೂ ಈ ದೃಶ್ಯವನ್ನು ಅನುಭವಿಸಲು ಸಾಧ್ಯವಾಗುತ್ತದೆ.

ಚಿತ್ರ ನಿರ್ಮಾಣದ ಸಂದರ್ಭದಲ್ಲೇ 'ದೃಶ್ಯ ವಿವರಣೆ'ಯನ್ನು ಸೇರಿಸಲು ಅವಕಾಶವಿದೆ. ಡಿಜಿಟಲ್ ಸ್ವರೂಪದಲ್ಲಿ ಬಿತ್ತರವಾಗುವ ಸಿನಿಮಾಗಳಲ್ಲಿ 'ದೃಶ್ಯವಿವರಣೆ'ಯನ್ನು ಅಳವಡಿಸಿದ್ದರೆ, ಆ್ಯಂಡ್ರಾಯ್ಡ್ ಮತ್ತು ಐಫೋನ್ ಅಪ್ಲಿಕೇಷನ್‌ಗಳ ಮೂಲಕ ಅದರ ಪ್ರಯೋಜನ ಪಡೆಯಬಹುದು.

ಕಣ್ಣು ಕಾಣಿಸದವರಿಗೆ ಸಿನಿಮಾದ ಗರಿಷ್ಠ ಅನುಭವವನ್ನು ದಕ್ಕಿಸಿಕೊಡಲು ಈಗ ಇರುವ ಪರಿಣಾಮಕಾರಿ ಸವಲತ್ತು ಇದು. ಸಿನಿಮಾ ಮಂದಿರಗಳಲ್ಲಿ ಇದಕ್ಕೆಂದೇ ಪ್ರತ್ಯೇಕ ಹೆಡ್‌ಫೋನ್ ಇರುವ ಕುರ್ಚಿಗಳನ್ನೂ ಅಳವಡಿಸಲು ಸಾಧ್ಯವಿದೆ. ಅದರಿಂದ ಸಾಮಾನ್ಯ ವೀಕ್ಷಕರಿಗೆ ಯಾವುದೇ ತೊಂದರೆಯಾಗುವುದಿಲ್ಲ.

ಸಂಜ್ಞಾ ವಿವರಣೆ

ಭಾರತೀಯ ಸಂಜ್ಞಾ ಭಾಷೆಯಲ್ಲಿ ಸಿನಿಮಾದ ಸಂಭಾಷಣೆ, ಹಿನ್ನೆಲೆ ಸಂಗೀತ ಮತ್ತು ಇತರ ಶಬ್ದಗಳನ್ನು ವಿವರಿಸುವ ಸವಲತ್ತನ್ನು ಸಿನಿಮಾಗೆ ಅಳವಡಿಸುವುದೇ ಸಂಜ್ಞಾ ವಿವರಣೆ. ಇಡೀ ಸಿನಿಮಾವನ್ನು ಸಂಜ್ಞಾಭಾಷೆಯಲ್ಲಿ ವಿವರಿಸುವ ಸಂಜ್ಞಾ ಭಾಷೆಯ ವಿಡಿಯೊವನ್ನು ಸಿನಿಮಾದ ವಿಡಿಯೊ ಜತೆಗೇ ಸೇರಿಸುವ ವ್ಯವಸ್ಥೆ ಇದು. ಪರದೆಯ ಮೇಲೆ ಸಿನಿಮಾ ಬರುವಾಗ, ಪರದೆಯ ಒಂದು ಮೂಲೆಯಲ್ಲಿ ಸಂಜ್ಞಾ ಭಾಷೆಯ ವಿಡಿಯೊವನ್ನೂ ತೋರಿಸಬೇಕಾಗುತ್ತದೆ.

ಇದು ವಿಶ್ವದ ಕೆಲವೆಡೆ ಚಾಲ್ತಿಯಲ್ಲಿದ್ದರೂ, ಕಿವಿ ಕೇಳಿಸದವರಿಗೂ ಸಿನಿಮಾವನ್ನು ಪರಿಣಾಮಕಾರಿಯಾಗಿ ತಲುಪಿಸುವ ವ್ಯವಸ್ಥೆಯಾಗಿದೆ. ಕೆಲವು ದೇಶಗಳ ಚಿತ್ರ ಮಂದಿರಗಳಲ್ಲಿ ಕಿವಿ ಕೇಳಿಸದವರಿಗೇ ಪ್ರತ್ಯೇಕ-ವಿಶೇಷ ಆಸನಗಳನ್ನು ಅಳವಡಿಸಿ, ಸಂಜ್ಞಾ ಭಾಷೆಯ ವಿಡಿಯೊ ತೋರಿಸುವ ಸಣ್ಣ ಪರದೆಗಳನ್ನು ಅಳವಡಿಸಲಾಗಿರುತ್ತದೆ.

ಮೇಲೆ ವಿವರಿಸಲಾದ ಎರಡು ಸವಲತ್ತುಗಳಲ್ಲಿ ಯಾವುದಾದರೂ ಒಂದು ವ್ಯವಸ್ಥೆ ಅಳವಡಿಸಿಕೊಂಡರೂ ಸಿನಿಮಾವನ್ನು ಕಿವಿ ಕೇಳದವರು ಗರಿಷ್ಠ ಮಟ್ಟದಲ್ಲಿ ಅನುಭವಿಸಲು ಸಾಧ್ಯವಾಗುತ್ತದೆ.

'ಕ್ಲೋಸ್ಡ್ ಕ್ಯಾಪ್ಷನಿಂಗ್' ಮತ್ತು 'ಓಪನ್ ಕ್ಯಾಪ್ಷನಿಂಗ್'

ಕಿವಿ ಕೇಳದವರಿಗೆ ಸಿನಿಮಾದ ಹಿನ್ನೆಲೆ ಸಂಗೀತ ಮತ್ತು ಎಲ್ಲ ಶಬ್ದಗಳು ಕೇಳುವಂತೆ ಮಾಡುವ ಸವಲತ್ತು ಇದು. ಈಗಿನ ಬಹುತೇಕ ಸಿನಿಮಾಗಳಲ್ಲಿ ಸಬ್‌ಟೈಟಲ್ ಇದ್ದೇ ಇರುತ್ತದೆ. ಆದರೆ ಸಾಮಾನ್ಯವಾಗಿ ಸಂಭಾಷಣೆಗಳನ್ನು ಮಾತ್ರ ಸಬ್‌ಟೈಟಲ್ ಒಳಗೊಂಡಿರುತ್ತದೆ. ಸಬ್‌ಟೈಟಲ್, ಹಿನ್ನೆಲೆ ಸಂಗೀತವನ್ನು ಒಳಗೊಂಡಿರುವುದಿಲ್ಲ. ಕಾರಿನ ಶಬ್ದ, ಹಕ್ಕಿಗಳ ಚಿಲಿಪಿಲಿ, ಸ್ಫೋಟ, ನೀರು ಧುಮ್ಮಿಕ್ಕುವ ರಭಸ, ಮಳೆಹನಿ ಮುಂತಾದ ಕ್ರಿಯೆಗಳ ಶಬ್ದಗಳನ್ನೂ ಸಬ್‌ಟೈಟಲ್ ಒಳಗೊಂಡಿರುವುದಿಲ್ಲ. ಈ ಕೊರತೆಗಳ ಕಾರಣದಿಂದಾಗಿ, ಸಿನಿಮಾವನ್ನು ಗರಿಷ್ಠ ಮಟ್ಟದಲ್ಲಿ ಅನುಭವಿಸಲು ಕಿವಿ ಕೇಳದವರಿಗೆ ಸಾಧ್ಯವಾಗುವುದಿಲ್ಲ.

ಈ ಎಲ್ಲಾ ವಿವರಗಳನ್ನು ಒಳಗೊಂಡ ಸಬ್‌ಟೈಟಲ್ ಇರುವ ವ್ಯವಸ್ಥೆಯನ್ನು 'ಕ್ಲೋಸ್ಡ್ ಕ್ಯಾಪ್ಷನಿಂಗ್' ಎಂದು ಕರೆಯಲಾಗುತ್ತದೆ. ಈ ವ್ಯವಸ್ಥೆ ಇದ್ದರೆ, ಸಂಬಂಧಿತ ಮೊಬೈಲ್ ಅಪ್ಲಿಕೇಷನ್ ಇದ್ದವರು ಕ್ಲೋಸ್ಡ್ ಕ್ಯಾಪ್ಷನಿಂಗ್ ಅನ್ನು ಕೇಳಬಹುದು. ಇದರಿಂದ ಸಾಮಾನ್ಯ ವೀಕ್ಷಕರಿಗೆ ಯಾವುದೇ ಅಡಚಣೆ ಆಗುವುದಿಲ್ಲ. ಹಾಲಿವುಡ್‌ನ ಹಲವು ಸಿನಿಮಾಗಳು ಈ ರೀತಿಯ 'ಕ್ಲೋಸ್ಡ್ ಕ್ಯಾಪ್ಷನಿಂಗ್' ಅನ್ನು ಬಳಸುತ್ತವೆ.

ಇದೇ ರೀತಿ ಎಲ್ಲಾ ಸಂಗೀತ ಮತ್ತು ಶಬ್ದಗಳನ್ನು ವಿವರಿಸುವ ಸಬ್‌ಟೈಟಲ್ ವ್ಯವಸ್ಥೆಯನ್ನು ಎಲ್ಲರಿಗೂ ಕಾಣುವಂತೆಯೇ ಹಾಕಿದರೆ, ಅದನ್ನು 'ಓಪನ್ ಕ್ಯಾಪ್ಷನಿಂಗ್' ಎಂದು ಕರೆಯಲಾಗುತ್ತದೆ. ಸಿನಿಮಾ ನೋಡುವ ಪ್ರತಿಯೊಬ್ಬರೂ, ಅಂದರೆ ಸಾಮಾನ್ಯ ಪ್ರೇಕ್ಷಕರು ಮತ್ತು ಕಿವಿ ಕೇಳದ ಪ್ರೇಕ್ಷಕರೂ ಈ ಸಬ್‌ಟೈಟಲ್ ಅನ್ನು ನೋಡಬಹುದಾಗಿರುತ್ತದೆ. ವಿಶ್ವದ ಹಲವು ದೇಶಗಳಲ್ಲಿ 'ಓಪನ್ ಕ್ಯಾಪ್ಷನಿಂಗ್' ಅಳವಡಿಸುವುದು ಕಡ್ಡಾಯವಾಗಿದೆ.

ಕಿವಿ ಕೇಳದವರೂ ಸಿನಿಮಾವನ್ನು ಗರಿಷ್ಠ ಮಟ್ಟದಲ್ಲಿ ಅನುಭವಿಸಲು 'ಓಪನ್ ಕ್ಯಾಪ್ಷನಿಂಗ್' ವ್ಯವಸ್ಥೆ ಅನುಕೂಲ ಮಾಡಿಕೊಡುತ್ತದೆ. ಆದರೆ ಪರದೆಯ ಹೆಚ್ಚಿನ ಭಾಗವನ್ನು ಈ ಸ್ವರೂಪದ ಸಬ್‌ಟೈಟಲ್ ಆವರಿಸಿಕೊಳ್ಳುವುದರಿಂದ, ಸಾಮಾನ್ಯ ಪ್ರೇಕ್ಷಕರಿಗೆ ಕಿರಿಕಿರಿಯಾಗುತ್ತದೆ ಎಂಬ ಆಕ್ಷೇಪವೂ ಇದೆ. ಆದರೆ ಬಹುಪಾಲು ಮಂದಿ ಈ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದು, ಎಲ್ಲರೂ ಸಿನಿಮಾವನ್ನು ಅನುಭವಿಸುವುದು ಸಾಧ್ಯವಾಗುತ್ತಿದೆ.

ಆಧಾರ: ಕಣ್ಣು ಕಾಣಿಸದವರು ಮತ್ತು ಕಿವಿ ಕೇಳಿಸದವರಿಗೆ ಸಿನಿಮಾ ವೀಕ್ಷಣೆಯಲ್ಲಿ ವಿಶೇಷ ಸವಲತ್ತು ಮಾರ್ಗಸೂಚಿಗಳು–2024, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಧಿಸೂಚನೆ

ಸಿನಿ ಬಿಟ್ಸ್

ಅ.31ಕ್ಕೆ 'ಬಘೀರ' ತೆರೆಗೆ



ಶ್ರೀಮುರಳಿ

ಶ್ರೀಮುರಳಿ ನಟನೆಯ ಬಹು ನಿರೀಕ್ಷಿತ ಚಿತ್ರ 'ಬಘೀರ' ಅ.31ಕ್ಕೆ ತೆರೆಗೆ ಬರಲಿದೆ. ಪ್ರಶಾಂತ್ ನೀಲ್ ಕಥೆ ಬರೆದು, ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡಿರುವ ಚಿತ್ರಕ್ಕೆ ಸೂರಿ ಆ್ಯಕ್ಷನ್ ಕಟ್ ಹೇಳಿದ್ದಾರೆ.


ಚಿತ್ರ ಸೆಟ್ಟೇರಿ ವರ್ಷಗಳೇ ಕಳೆದಿದ್ದವು. ಶೂಟಿಂಗ್ ವೇಳೆ ಶ್ರೀಮುರಳಿಗೆ ಗಾಯ ಮತ್ತಿತರ ಕಾರಣಗಳಿಂದ ಚಿತ್ರ ವಿಳಂಬವಾಗಿತ್ತು. ಇದೀಗ ಹೊಂಬಾಳೆ ಫಿಲ್ಮ್ಸ್ ಚಿತ್ರ ಬಿಡುಗಡೆ ದಿನಾಂಕವನ್ನು ಅಧಿಕೃತವಾಗಿ ಘೋಷಿಸಿದೆ. ಕನ್ನಡ ಮಾತ್ರವಲ್ಲದೆ ಬೇರೆ ಭಾಷೆಗಳಲ್ಲಿಯೂ ಚಿತ್ರ ತೆರೆಗೆ ಬರಲಿದೆ.

'ಉಗ್ರಂ' ಬಳಿಕ ಶ್ರೀಮುರಳಿ, ಪ್ರಶಾಂತ್ ನೀಲ್ ಕೈಜೋಡಿಸಿರುವ ಚಿತ್ರವಿದು. ಕಳೆದ ವರ್ಷ ಬಿಡುಗಡೆಗೊಂಡ ಚಿತ್ರದ ಟೀಸರ್‌ನಲ್ಲಿ 'ಉಗ್ರಂ', 'ಕೆಜಿಎಫ್'ನ ಛಾಯೆ ದಟ್ಟವಾಗಿತ್ತು. ನಾಯಕಿಯಾಗಿ ರುಕ್ಮಿಣಿ ವಸಂತ್ ಕಾಣಿಸಿಕೊಂಡಿದ್ದಾರೆ. ಪ್ರಕಾಶ್ ರಾಜ್, ಅಚ್ಯುತ್ ಕುಮಾರ್, ರಂಗಾಯಣ ರಘು, ಗರುಡ ರಾಮ್ ಮುಂತಾದವರಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ, ಎ.ಜೆ.ಶೆಟ್ಟಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

'ಕ್ಯೂ'ಗೆ ಕೈಹಾಕಿದ ನಾಗಶೇಖರ್

ಸದ್ಯ 'ಸಂಜು ವೆಡ್ಸ್ ಗೀತಾ–2' ಚಿತ್ರದಲ್ಲಿ ಮಗ್ನರಾಗಿರುವ ನಿರ್ದೇಶಕ ನಾಗಶೇಖರ್ ಮತ್ತೊಂದು ಚಿತ್ರ ಘೋಷಿಸಿದ್ದಾರೆ. ಉಪೇಂದ್ರ ಕುಟುಂಬದ ನಿರಂಜನ್ ಸುಧೀಂದ್ರ ಚಿತ್ರದ ನಾಯಕ. 'ಮೈನೆ ಪ್ಯಾರ್ ಕಿಯಾ' ಖ್ಯಾತಿಯ ಭಾಗ್ಯಶ್ರೀ ಅವರ ಪುತ್ರಿ ಅವಂತಿಕಾ ದಸ್ಸಾನಿ ಈ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಕಾಲಿಡುತ್ತಿದ್ದಾರೆ.

ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ 'ಕ್ಯೂ' ಎಂದು ಹೆಸರಿಡಲಾಗಿದೆ. ತಮ್ಮದೇ ಆದ ನಾಗಶೇಖರ್ ಮ್ಯಾಜಿಕ್ಸ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸುತ್ತಿರುವ ಅವರು ಕಥೆ, ಚಿತ್ರಕಥೆಯ ಜೊತೆಗೆ ಸಂಗೀತದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ.



ಅವಂತಿಕಾ ದಸ್ಸಾನಿ

'ಚಿತ್ರದ ಮಾತುಕತೆ ಈಗಷ್ಟೇ ಪೂರ್ಣಗೊಂಡು ಪೂರ್ವಸಿದ್ಧತೆ ಪ್ರಾರಂಭಗೊಂಡಿದೆ. ಮುಂದಿನ ತಿಂಗಳಿಂದ ಈ ಚಿತ್ರದ ಶೂಟಿಂಗ್ ಆರಂಭವಾಗಲಿದ್ದು, ಡಿ.ಜೆ. ಚಕ್ರವರ್ತಿ ಸಂಭಾಷಣೆಯಿದೆ. ಉಳಿದ ಮಾಹಿತಿಗಳನ್ನು ಶೀಘ್ರದಲ್ಲಿಯೇ ನೀಡುತ್ತೇನೆ' ಎಂದಿದ್ದಾರೆ ನಾಗಶೇಖರ್. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

✗ **ಹೆಲಿಕಾಪ್ಟರ್** ಒಂದು ಪತನವಾಗುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮಣಿಪುರದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಭಾರತದ ಯುದ್ಧ ಹೆಲಿಕಾಪ್ಟರ್ ಅನ್ನು ಹೊಡೆದುರುಳಿಸಿದ್ದಾರೆ ಎಂದು ಜಾಲತಾಣಿಗರೊಬ್ಬರು 'ಎಕ್ಸ್'ನಲ್ಲಿ ಸೆ.7ರಂದು ಪೋಸ್ಟ್ ಮಾಡಿದ್ದರು. ಆದರೆ, ಇದು ಸುಳ್ಳು.

✓ **ವಿಡಿಯೊವನ್ನು** ಇನ್‌ವಿಡ್ ಟೂಲ್ ಮೂಲಕ ಹುಡುಕಾಡಿದಾಗ, ಹೊಸ ಕೀಫ್ರೇಮ್‌ಗಳು ಕಂಡು ಬಂದವು. ಈ ಫ್ರೇಮ್‌ಗಳನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ ಹಲವರು ಈ ವಿಡಿಯೊವನ್ನು 'ಎಕ್ಸ್', ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿರುವುದು ತಿಳಿದು ಬಂತು. ಹರಿದಾಡಿದ ಈ ಪೋಸ್ಟ್‌ಗೆ ಬಂದ ಕಾಮೆಂಟ್ ಒಂದರಲ್ಲಿ, ಕಚಿನ್ ಸ್ವತಂತ್ರ ಸೇನೆಯು (ಕೆಐಎ) ಹಗುರ ವಿಮಾನ ನಿಗ್ರಹ ಕ್ಷಿಪಣಿ ಬಳಸಿ ಮ್ಯಾನ್ಮಾರ್‌ನ ಸೇನಾ ಹೆಲಿಕಾಪ್ಟರ್ ಅನ್ನು ಹೊಡೆದುರುಳಿಸಿದೆ ಎಂಬುದು ಕಂಡು ಬಂತು. ಅದರ ಆಧಾರದಲ್ಲಿ ಕೀ ವರ್ಡ್‌ಗಳನ್ನು ಹಾಕಿ ಹುಡುಕಿದಾಗ ಕಾನ್ಫ್ಲಿಕ್ಟ್ ಲೈವ್ ಎಂಬ ಚಾನೆಲ್ ಸೆ.6ರಂದು ಯುಟ್ಯೂಬ್‌ಗೆ ಅಪ್‌ಲೋಡ್ ಮಾಡಿದ ವಿಡಿಯೊ ಸಿಕ್ಕಿತು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊ ಮ್ಯಾನ್ಮಾರ್‌ನಲ್ಲಿ ನಡೆದಿರುವ ಘಟನೆಯದ್ದು ಎಂಬುದು ಖಚಿತವಾಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ಹೇಳಿದೆ.

ತಿದ್ದುಪಡಿ: ಆರೋಗ್ಯ ವಿಮೆ, ಜೀವ ವಿಮೆ, ಅಪಘಾತ ವಿಮೆ, ಯೂನಿಟ್ ಲಿಂಕ್ಡ್ ವಿಮೆ (ಯುಎಲ್‌ಐಪಿ) ಕಂತುಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದ್ದರೆ, ಸಾಂಪ್ರದಾಯಿಕ ಜೀವ ವಿಮೆಯಾದ ಎಂಡೋಮೆಂಟ್ ಪಾಲಿಸಿಗಳ ಮೊದಲ ವರ್ಷದ ಕಂತಿಗೆ ಶೇ 4.5 ರಷ್ಟು, ನಂತರದ ಕಂತುಗಳಿಗೆ ಶೇ 2.25ರಷ್ಟು ಜಿಎಸ್‌ಟಿ ನಿಗದಿಪಡಿಸಲಾಗಿದೆ. ಏಕ ಕಂತಿನ ವಿಮಾ ಕಂತುಗಳಿಗೆ ಶೇ 1.8ರಷ್ಟು ಜಿಎಸ್‌ಟಿ ಇದೆ. 'ಪ್ರಜಾವಾಣಿ' ಗುರುವಾರದ ಸಂಚಿಕೆಯ 'ವಿಮೆಗೆ ಜಿಎಸ್‌ಟಿ: ಇಳಿಯಲಿದೆಯೇ ಹೊರೆ?' ಎಂಬ ಲೇಖನದಲ್ಲಿ ಎಲ್ಲ ವಿಮೆಗಳ ಕಂತಿನ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ ಎಂದು ಮಾಹಿತಿ ತಪ್ಪಾಗಿತ್ತು.

ಗುಂಡಣ್ಣ



ಚೆಂದ ಬದುಕ ಬದುಕಬೇಕು!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ 22

ಇನ್ನೂ ವಸಂತ ಮಾಸ ಬಂದಿರದಿಲ್ಲ, ಆಗಲೇ ಕೋಗಿಲೆ ಹಾಡಾಕ ಶುರುಮಾಡತೈತಿ. ಇನ್ನೂ ಮಳೆಗಾಲ ಶುರುವಾಗಿಲ್ಲ, ಆಕಾಶದಲ್ಲಿ ಮೇಘಗಳ ಗರ್ಜನೆ ಕೇಳಿದರೆ ಸಾಕು ನವಿಲು ಕುಣಿಯಾಕ ಶುರುಮಾಡತೈತಿ. ಆದರ ಮನುಷ್ಯಗ? ಮಳಿ ಬಂದು, ಚಿಗುರು ಬಂದು, ಹೂವು ಬಿಟ್ಟು, ಹಣ್ಣು ಮನ್ಯಾಗ ಬಂದು ಬಿದ್ದಿತ್ತು. ಆದರೂ ಇವ ಅಳಕೋತ ಕುಂತಿದ್ದ. ದೇವರು ಬಂದು ಕೇಳಿದ 'ಯಾಕಪ ಅಳಾಕತ್ತಿ' ಅಂತ. 'ಇನ್ನೂ ರೇಟ್ ಸಿಗವಲ್ದು' ಅಂದ ಇವ. ಇವ ರೇಟಿನ ಮ್ಯಾಲೆ ಬದುಕಾಂವ.

ಚಲೋ ಮಾವಿನಹಣ್ಣು ರಫ್ತು ಮಾಡ್ತಾರ, ಕೆಟ್ಟದ್ದು ಮಕ್ಕಳಿಗೆ ತಿನ್ನಿಸ್ತಾರ, ಚಲೋ ಹಾಲು ಹೊಟೇಲ್‌ಗೆ ಕಳಿಸ್ತಾರ, ಮಕ್ಕಳಿಗೆ ಚಾ ಕುಡುಸ್ತಾರ. ದೇವರು ಇಷ್ಟು ಅದ್ಭುತ ಜಗತ್ತು ಕೊಟ್ಟಿದ್ದರೂ ನಮಗೆ ಅನುಭವಿಸಲು ಬರಲಿಲ್ಲ. ನಿಸರ್ಗ ಎಲ್ಲಾ ಕೊಟ್ಟಿದ್ದರೂ ಮನುಷ್ಯರದ್ದು ಅಳಲು ತಪ್ಪಲಿಲ್ಲ. ಟೆನ್ಷನ್, ಡಿಪ್ರೆಷನ್ ಎಲ್ಲಾ ಶಬ್ದಗಳೂ ಅದಾವ. ಚಿಂತೈತಿ ಅಂತಾರ. ಮೇಲೆ ಚಲೋ ಕಾಣತಿರ್ತಾನ, ಒಳಗ ಕೊತಕೊತ. ಬಾಳ ಚಿಂತೆ ಆಗ್ಯೆತಿ ಅಂತಾರ, ಜೀವನದ ತುಂಬಾ ಚಿಂತೆನೇ ತುಂಬೈತಿ, ಜೀವನ ಅಂದ್ರ ಒಟ್ಟ ಸುಖ ಇಲ್ಲ ನೋಡ್ರಿ ಅಂತ ಹಿಮಾಲಯದಿಂದ ಬಂದ ಸಂತನಂಗ ಒಂದೇ ಮಾತಲ್ಲಿ ಹೇಳ್ತಾರ. ಕಣ್ಣು ಮುಚ್ಚಿಬಿಡಬೇಕು ಅಂತಿರ್ತಾರ, ದೇವರು ಕರಕಂಡಬಿಡಬೇಕು ಅಂತನೂ ಹೇಳ್ತಾರ. ಅವ ಯಾಕ್ ಕರಕಂಡಬಿಡಬೇಕು? ಅಲ್ಲಿ ಹೋಗಿಯಾದ್ರೂ ಏನು ಮಾಡ್ತೀರಿ? ಅಲ್ಲೇನ್ ಟಿವಿ ಐತಾ, ಧಾರಾವಾಹಿ ಅದಾವ? ಮೇಲೆ ಹೋಗಿ ಏನ್ ಮಾಡಾವ ನೀನು?

ಅವ ಕರಕೊಂಡು ಹೋಗಾಕ ಇಲ್ಲಿ ಕಳಿಸಿಲ್ಲ ನಮ್ಮನ್ನ. ಚಂದ ಬದುಕು ಅಂತ ಕಳಿಸ್ಯಾನ. ಡಿಪ್ರೆಷನ್, ಟೆನ್ಷನ್ ಅಂತೀರಲ್ಲ ಅದು ಎಲ್ಲೈತಿ? ನಾವು ಸಂತೋಷ ಇಲ್ಲ ಅಂತೀವಿ. ಆದರೆ ಮುರುಕು ಗುಡಿಸಿಲಿನೊಳಗ ಹರುಕು ಸೀರಿ ಜೋಳಿಗೆ ಮಾಡಿ ಮಗೂನ ತೂಗುತಿರ್ತಾಳ ತಾಯಿ, ಆಗ ಮಗು ನಗುತಿರತೈತಿ. ಮತ್ತ ಅದಕ್ಕೂ ಒಂದೇ ಜಗತ್ತು, ನಮಗೂ ಒಂದೇ ಜಗತ್ತು. ಮಗು ಯಾಕ ನಗತೈತಿ, ನಿನಗೆ ಯಾಕೆ ದುಃಖ? ಸಂಸಾರದೊಳಗ ದುಃಖ ಐತಿ ಅಂದರ ನಿನಗೂ ದುಃಖ ಇರಬೇಕು, ಮಗೂಗೂ ದುಃಖ ಇರಬೇಕಾಗಿತ್ತಲ್ಲ. ಮಕ್ಕಳಿಗೆ ಯಾಕೆ ದುಃಖ ಆಗೋದಿಲ್ಲ ಅಂದರ ಅವರು ಗಟ್ಟಿ ಇರ್ತಾರ. ದೀಪಾವಳಿಯೊಳಗ ಮಕ್ಕಳು ಆಕಾಶಬುಟ್ಟಿ ಕಟ್ತಾರ, ಯಾರು ಜಗತ್ತನ್ನು ದೀಪದಿಂದ ಬೆಳಗುತ್ತಾನೋ ಅವನಿಗೆ ಬೆಳಕು ಕೊಡ್ತಾರ. ನನ್ನ ಬೆಳಕು ನೋಡು ಅಂತಾರ. ಅಷ್ಟು ಮುಗ್ಧ. ಹಾಂಗೆ ಇದ್ದುಬಿಡಿ.

ಒಂದು ಸಿನಿಮಾ ನೋಡ್ತಿರ್ತೀರಿ. ಪರದೆ ಮೇಲೆ ಎಲ್ಲಾ ಕಾಣತೈತಿ. ಹೀರೋ, ಹೀರೋಯಿನ್ ನಕ್ಕಾಗ ನಕ್ಕು, ಅತ್ತಾಗ ಅತ್ತು ಬರ್ತೀವಿ. ಮಧ್ಯದಲ್ಲಿ ಕರೆಂಟ್ ಹೋಯ್ತು ಅಂದರ ಸಿನಿಮಾ ಕಾಣವಲ್ಲು. ಪ್ರೊಜೆಕ್ಟರ್ ಬಂದ್ ಆಗ್ಯೆತಿ. ಅದಕ್ಕೆ ಸಿನಿಮಾ ಇರಲ್ಲ. ಅಂದರೆ ಪ್ರೊಜೆಕ್ಟರ್ ಬಂದ್ ಆದರೆ ಪರದೆಯೊಳಗೆ ಏನೂ ಇರಲ್ಲ. ಜಗತ್ತು ಅನ್ನೋದು ಒಂದು ಪರದೆ. ಉದ್ವೇಗ, ಖಿನ್ನತೆ ಯಾವುದೂ ಅಲ್ಲಿ ಇಲ್ಲ. ಎಲ್ಲಾ ಇರೋದು ನಿನ್ನ ಮನಸ್ಸಿನೊಳಗೆ. ಮನಸ್ಸು ಪ್ರೊಜೆಕ್ಟರ್. ಅದು ಸುಖ ದುಃಖ ಎಲ್ಲಾ ತೋರಸತೈತಿ. ಹಂಗಾರೆ ಯಾಕೆ ದುಃಖ ಪಡ್ತಿ? ಸಂತೋಷವಾಗಿ ಬದುಕು ಅಷ್ಟೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಸೆಪ್ಟೆಂಬರ್ 13, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದಶಮಿ ಗಂ. 22-31 ನಕ್ಷತ್ರ: ಪೂರ್ವಾಷಾಢ ಗಂ. 21-36 ಯೋಗ: ಸೌಭಾಗ್ಯ ಗಂ. 20-48 ಕರಣ: ತೈತಿಲ ಗಂ. 11-08, ಸಿಂಹ ಮಾಸದ 27 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 1.

ರಾಹುಕಾಲ: ಬೆಳಿಗ್ಗೆ 10-30 – 12-00

ಸೂರ್ಯೋದಯ : 06-23 ಸೂರ್ಯಾಸ್ತ : 06-29

ಮುಸ್ಲಿಂ ದಿನಾಂಕ : 09 ರಬಿ ಉಲ್ಲಾವಲ್

ಅದೃಷ್ಟ ಸಂಖ್ಯೆ : 4, 7

ಮೇಷ: ಮಾನಸಿಕ ಒತ್ತಡವು ಕಡಿಮೆಯಾಗದ ಹೊರತು ಇತರರೊಂದಿಗೆ ವಾಗ್ವಾದಕ್ಕೆ ಇಳಿಯಬೇಡಿ. ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ದಿನವಾಗುವುದು.

ವೃಷಭ: ಅನಿವಾರ್ಯ ಕಾರಣದಿಂದಾಗಿ ಕುಟುಂಬದವರೊಂದಿಗೆ ಕಳೆಯಬೇಕೆಂದುಕೊಂಡ ಸಮಯವನ್ನು ತಪ್ಪಿಸಿಕೊಳ್ಳುವಿರಿ. ವಾದ-ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ. ಹೆಂಡತಿಯ ಆರೋಗ್ಯದಲ್ಲಿ ಸುಧಾರಣೆ.

ಮಿಥುನ: ತೆಗೆದುಕೊಂಡ ದಿಟ್ಟ ಹೆಜ್ಜೆಗಳು ನಿಮ್ಮ ಯಶಸ್ಸಿನ ಕಡೆಗೆ ಕರೆದುಕೊಂಡು ಹೋಗುವುದು. ವ್ಯವಹಾರದಲ್ಲಿ ಗೆಳೆಯನ ಮಾತುಗಳನ್ನು ಕೇಳಿದರೆ ಲಾಭವಾಗುವುದು. ಧನಲಾಭವನ್ನು ತರಲಿದೆ.

ಕರ್ಕಾಟಕ: ರಚನಾತ್ಮಕ ಕಾರ್ಯಕ್ರಮಗಳ ಕುರಿತು ದೂರದರ್ಶನ ಮಾಧ್ಯಮದವರಿಂದ ಮೆಚ್ಚುಗೆಯ ಮಾತು ಕೇಳಲಿದ್ದೀರಿ. ಶಿಕ್ಷಕ ವರ್ಗದವರಿಗೆ ಹೆಚ್ಚಿನ ಜವಾಬ್ದಾರಿಯುತ ಕೆಲಸಗಳು ಬರಲಿವೆ. ಆದಾಯವಿರುವುದು.

ಸಿಂಹ: ಮನೆಗೆ ಸಂಬಂಧಿಸಿದ ಕೆಲಸಗಳನ್ನು ಮಾಡಿಸುವುದಕ್ಕಾಗಿ ಹಣ ಖರ್ಚು ಮಾಡಬೇಕಾಗಿ ಬರುವುದು. ಕೆಲಸಗಳಿಗೆ ಇಂದು ಪ್ರಭಾವಿ ವ್ಯಕ್ತಿಗಳ ಸಹಾಯವು ದೊರಕುವುದು.

ಕನ್ಯಾ: ಜೀವನದ ಎಲ್ಲ ರೀತಿಯ ಕ್ಷಣಗಳನ್ನು ಅನುಭವಿಸಿದ ನಿಮಗೆ ಇತರರಿಗೆ ಜೀವನವನ್ನು ಹೇಳಿಕೊಡುವುದು ಕಷ್ಟವಾಗುವುದಿಲ್ಲ. ವ್ಯವಹಾರದಲ್ಲಿ ಮಧ್ಯಮ ಮಟ್ಟದ ಲಾಭ ಹೊಂದುವಿರಿ.

ತುಲಾ: ಮುಂಜಾಗರೂಕತೆ ಇಲ್ಲದೇ ಮಾಡಿದ ಕೆಲಸಗಳು ಅಪಾಯವನ್ನು ತಂದೊಡ್ಡಬಹುದು. ಸ್ವಂತ ಮನೆಯ ಕನಸು ನನಸು ಮಾಡುವ ದಾರಿ ಕಾಣುವುದು. ಸಂಸಾರದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

ವೃಶ್ಚಿಕ: ಸ್ಥಿರ ಅಥವಾ ಚರ ಆಸ್ತಿಯನ್ನು ಮಾರಲು ಯೋಚನೆ ನಡೆಸಿದ್ದಲ್ಲಿ ಹಿರಿಯರಿಂದ ಸರಿಯಾದ ಮಾರ್ಗದರ್ಶನ ಕೇಳಿ ಪಡೆದುಕೊಳ್ಳಿ. ಎದುರು ನೋಡುತ್ತಿದ್ದ ಜೀವನವನ್ನು ಅನುಭವಿಸುವ ಸಮಯ ಹತ್ತಿರವಿದೆ.

ಧನು: ದೊರೆತಿರುವ ಖ್ಯಾತಿ ಉಳಿಸಿಕೊಳ್ಳುವತ್ತ ಗಮನ ಹರಿಸುವುದು ಉತ್ತಮ. ಹೊಸ ಕನಸು ಹಾಗೂ ಉತ್ಸಾಹದಿಂದ ಕೆಲಸವನ್ನು ಶುರು ಮಾಡುವಿರಿ. ಮನೆಯ ಹೆಣ್ಣುಮಗಳಿಗೆ ಮದುವೆಗೆ ಹುಡುಗ ಸಿಗುವ ಸಾಧ್ಯತೆ.

ಮಕರ: ಎಲ್ಲಾ ಆಲೋಚನೆಗಳಿಗೂ ಸಂಗಾತಿಯ ಸಂಪೂರ್ಣ ಬೆಂಬಲ ಇರುವುದು. ಆಹಾರದಿಂದ ಆರೋಗ್ಯ ಹದಗೆಡಲು ಕಾರಣವಾಗುತ್ತದೆ. ಧಾರ್ಮಿಕ ಕ್ಷೇತ್ರಕ್ಕೆ ಭೇಟಿ ನೀಡುವುದರಿಂದ ಶುಭವಾಗುವುದು.

ಕುಂಭ: ಅಧಿಕ ಒತ್ತಡದ ಕೆಲಸದ ನಡುವೆಯೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ. ಜವಳಿ ವ್ಯಾಪಾರದ ಅಭಿವೃದ್ಧಿಗೆ ಸಹಾಯವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಬಿಳಿ ಬಣ್ಣ ಶುಭವನ್ನು ಉಂಟುಮಾಡಲಿದೆ.

ಮೀನ: ತಾಯಿಯ ಆರೋಗ್ಯ ಹದಗೆಟ್ಟದ್ದಲ್ಲಿ ಹಂತ ಹಂತವಾಗಿ ಚೇತರಿಕೆ ಕಾಣುವುದು. ಪ್ರೀತಿಪಾತ್ರರ ಜೊತೆ ಸಂತಸದ ಸಮಯ ಕಳೆಯುವಿರಿ. ಸಾಲ ಕೊಡುವಂಥ ವ್ಯವಹಾರಗಳು ಬೇಡ. ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯ.

ಪದಬಂಧ 5801


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ದೇಶೀ ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಔಷಧ (4)
3. ಶಿರದ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ (4)
5. ಕಾವು ಇದ್ದಾಗಲೇ ಕಾಣಿಸಿದ ಹೊರಗಿನ ಅಂದ (3)
7. ಈತ ಕೆಲಸಕ್ಕೆ ಬಾರದವನು (4)
9. ಗುರಾಣಿ ಹಿಡಿದವನು ತೋಡಿದ ತಗ್ಗು (2)
10. ಒಂದನೊಂದು ಬಲವಾಗಿ ಅಪ್ಪಳಿಸುವಿಕೆ (2)
11. ತೆಳ್ಳನೆಯ ಉದರವುಳ್ಳವಳು (4)
14. ಹೇಡಿ ಹಿಡಿದಿರುವ ದೊಡ್ಡ ಬುಟ್ಟಿ (3)
16. ಹತ್ತು ಎನ್ನುವುದರೊಳಗೇ ಹೂಡಿದ ಸಂಚು! (4)
17. ಸೇನಾನಾಯಕನಿವನು (4)

ಮೇಲಿಂದ ಕೆಳಕ್ಕೆ

1. ನಾಡಿನಲ್ಲಿರುವ ಅಲ್ಪವ್ಯಕ್ತಿ (3)
2. ನೆನಪಿನಲ್ಲಿ ಉಳಿಯದಿರುವುದು (3)
3. ತಡವಾಗಿದ್ದಕ್ಕೇ ಆದ ತಬ್ಬಿಬ್ಬು (4)
4. ಆನೆಯ ಸೊಂಡಲಿನ ತುದಿ (3)
6. ವ್ಯಂಜನಕ್ಕೆ ಸ್ವರವನ್ನು ಸೇರಿಸಿ ಬರೆಯುವುದು (4)
7. ಈ ಪರಿ ತಪ್ಪಿಸಿಕೊಳ್ಳುವಿಕೆ! (3)
8. ಮಿಡಿ ಹಿಡಿದುಕೊಂಡು ತೋರಿದ ಸಿಟ್ಟು! (4)
12. ಕತ್ತು ಬಗ್ಗಿಸಿ ಹಾಕಿರುವ ಸಹಿ (4)
13. ಅತಿಶಯವಾದ ಮೋಹ (3)
14. ಅಧಿಕ್ಯವನ್ನು ಹೀಗೆನ್ನಿ (3)
15. ಗೆಳೆಯನ ಜೊತೆ ಬಂದಿರುವ ಸ್ನೇಹಿತೆ (3)



5800ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ವಾಗ್ದಾನ 4.ಪ್ಲುತ 6.ಸಮುದಾಯ 7.ಸಕಾಲಿಕ 10.ವರ್ಧಂತಿ 11.ಸಮೂಹಗಾನ 12.ಪ್ರಮಾದ 14.ಠಗಾಣಹ 17.ವರಮಾನ 18.ನೆತ್ತಿ 19.ಲಶುನ

ಮೇಲಿಂದ ಕೆಳಕ್ಕೆ: 1.ಶ್ವಾಸಕೋಶ 2.ವಾಯಿಸ 3.ನಕಲಿ 5.ತರಗತಿ 8.ಕಾಲಹರಣ 9.ಕವನ 11.ಸದರ 12.ಪ್ರಲೋಭನೆ 13.ನಸುನಗು 15.ಗಾವಿಲ 16.ಹವನ

ಸುಡೊಕು 6186

	2			6	7	4		
3		4					7	2
	7			4	8			3
	4			3			8	5
8		9		7				
	5		8		4		9	7
2				9		7		
		3					1	
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6185 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು 1439

81,523 ಹಿಂದಿನ ಅಂತ್ಯ — 82,962 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,918
ಇಂದಿನ ಅಂತ್ಯ	25,388
▲	470
ದಿನದ ಗರಿಷ್ಠ	25,433

ಎನ್‌.ಆರ್‌.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹226
ಆರ್‌ಎಸ್‌ಎಸ್‌-5	₹221
ಗುಡ್ ಲಾಟ್	₹206

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹545
12 ಕ್ಕೆ	₹75
ಮೈಸೂರು 100ಕ್ಕೆ	₹550

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹311-560
ದ್ವಿತಳಿ (ಬಿ.ವಿ)	₹335-690

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1550)
ಸೋಯಾ (ರಿಫೈನ್ಡ್)	₹1020 (1000)
ಸೂರ್ಯಕಾಂತಿ (ರಿಫೈನ್ಡ್)	₹1030 (1010)
ಪಾಮೋಲಿನ್	₹1025 (1000)

ಕರ್ನಾಟಕಕ್ಕೆ ವಾರ್ಷಿಕ ₹24 ಸಾವಿರ ಕೋಟಿ ವರಮಾನ ನಷ್ಟ: ಪರಿಹಾರ ನೀಡಿಕೆ ವ್ಯವಸ್ಥೆಯೂ ಇಲ್ಲ

ಕೇಂದ್ರದ ಜತೆ ಸಂಘರ್ಷಕ್ಕೆ ಜಿಎಸ್‌ಟಿ 'ಸರಕು'

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಯಿಂದಾಗಿ ಅತಿ ಹೆಚ್ಚು ನಷ್ಟ ಅನುಭವಿಸಿದ್ದು ಕರ್ನಾಟಕ. ರಾಜ್ಯಕ್ಕೆ ವಾರ್ಷಿಕ ₹24 ಸಾವಿರ ಕೋಟಿ ನಷ್ಟ ಉಂಟಾಗುತ್ತಿದೆ. ಜಿಎಸ್‌ಟಿ ವ್ಯವಸ್ಥೆಯ ಕಾರಣದಿಂದ ಆಗುವ ವರಮಾನ ನಷ್ಟಕ್ಕೆ ಪರಿಹಾರ ನೀಡುವ ವ್ಯವಸ್ಥೆಯನ್ನು ನಿಲ್ಲಿಸಿದ್ದರಿಂದ ರಾಜ್ಯವು ಎರಡು ವರ್ಷಗಳಲ್ಲಿ ₹45,142 ಕೋಟಿ ಕಳೆದುಕೊಂಡಿದೆ' ಎಂದು ಕರ್ನಾಟಕ ಸರ್ಕಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಜಿಎಸ್‌ಟಿ ಪಾಲು ಹಂಚಿಕೆ ಹಾಗೂ ಪರಿಹಾರದಲ್ಲಿ ಅನ್ಯಾಯವಾಗಿದೆ ಎಂದು ಆರೋಪಿಸಿ ಕೇಂದ್ರ ಸರ್ಕಾರದೊಂದಿಗೆ ಮತ್ತೊಂದು ಸುತ್ತಿನ ಸಂಘರ್ಷಕ್ಕೆ ಅಣಿಯಾಗಿದೆ.

ರಾಜ್ಯಗಳಿಗೆ ತೆರಿಗೆ ಪಾಲು ಮತ್ತು ಇತರೆ ಸಹಾಯಾನುದಾನಗಳ ಪ್ರಮಾಣ ನಿರ್ಧರಿಸುವ ಸಂಬಂಧ ರಾಜ್ಯಗಳ ಜತೆಗೆ ಸಮಾಲೋಚನಾ ಸಭೆ ಆರಂಭಿಸಿರುವ 16ನೇ ಹಣಕಾಸು ಆಯೋಗವು, ರಾಜ್ಯಕ್ಕೆ ಇತ್ತೀಚೆಗೆ ಭೇಟಿ ನೀಡಿತ್ತು.



ಜಿಎಸ್‌ಟಿಗೆ ಹೆಚ್ಚಿನ ಪಾಲು ನೀಡುತ್ತಿರುವ ರಾಜ್ಯಕ್ಕೆ ಸಿಗುತ್ತಿರುವುದು ಅತ್ಯಲ್ಪ. ಇದನ್ನು ಒಪ್ಪಲು ಸಾಧ್ಯವಿಲ್ಲ. ಅನ್ಯಾಯದ ಬಗ್ಗೆ ಹಣಕಾಸು ಸಚಿವರಿಗೆ ಮನವರಿಕೆ ಮಾಡಿಕೊಡಲಾಗಿದೆ

ಕೃಷ್ಣ ಬೈರೇಗೌಡ, ಕಂದಾಯ ಸಚಿವ

'ಜಿಎಸ್‌ಟಿಯಿಂದಾಗಿ ರಾಜ್ಯದ ವರಮಾನಕ್ಕೆ ಭಾರಿ ಹೊಡೆತ ಬಿದ್ದಿದೆ. ಈ ಘೋರ ಅನ್ಯಾಯವನ್ನು ಸರಿಪಡಿಸಬೇಕು. ಈ ವ್ಯವಸ್ಥೆಯು ರಾಜ್ಯದ ವಿತ್ತೀಯ ಸಾಮರ್ಥ್ಯದ ಮೇಲೆ ರಚನಾತ್ಮಕ ಪರಿಣಾಮ ಬೀರುವಂತಾಗಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಹಣಕಾಸು ಆಯೋಗ ಶಿಫಾರಸುಗಳನ್ನು ಮಾಡಬೇಕು' ಎಂದು ರಾಜ್ಯ ಸರ್ಕಾರ ಗಮನ ಸೆಳೆದಿತ್ತು.

ಆಗ ಆಯೋಗವು, 'ಜಿಎಸ್‌ಟಿ ಸಂಬಂಧಿಸಿದ ವಿಷಯವನ್ನು ಜಿಎಸ್‌ಟಿ ಮಂಡಳಿಯಲ್ಲೇ ಇತ್ಯರ್ಥ ಪಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿತ್ತು. ತೆರಿಗೆಯೇತರ ಆದಾಯವನ್ನು ರಾಜ್ಯಗಳ ತೆರಿಗೆ ಬಾಬ್ತಿನ ವ್ಯಾಪ್ತಿಗೆ ತರುವ ವಿಚಾರ ಕೇಂದ್ರ ಸರ್ಕಾರದ ವಿವೇಚನೆಗೆ ಬಿಟ್ಟದ್ದು ಎಂದು ಆಯೋಗ ಸ್ಪಷ್ಟಪಡಿಸಿತ್ತು.

ಇದರ ಬೆನ್ನಲ್ಲೇ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ. ಜಿಎಸ್‌ಟಿ ಮಂಡಳಿ ಸಭೆಯಲ್ಲೂ ಪ್ರಬಲವಾಗಿ ವಾದ ಮಂಡಿಸಿದ್ದಾರೆ.

ರಾಜ್ಯದ ವಾದವೇನು?



- ಜಿಎಸ್‌ಟಿ ಜಾರಿಗೆ ಬರುವ ಮೊದಲು ಐದು ವರ್ಷಗಳಲ್ಲಿ ರಾಜ್ಯದ ಆದಾಯವು ಸರಾಸರಿ ಶೇ 13.7ರಷ್ಟು ಬೆಳವಣಿಗೆ ಹೊಂದಿತ್ತು. ಜಿಎಸ್‌ಟಿಯಲ್ಲಿ ಎಲ್ಲ ರಾಜ್ಯಗಳಿಗೆ ಶೇ 14ರಷ್ಟು ಪಾಲು ನೀಡುವುದು ಹಾಗೂ ಕೊರತೆಗೆ ಪರಿಹಾರ ನೀಡುವುದು ಕೆಲವು ರಾಜ್ಯಗಳಿಗೆ ಬಹಳ ಉದಾರವಾಗಿರಬಹುದು. ಆದರೆ, ರಾಜ್ಯದ ವಿಚಾರದಲ್ಲಿ ಇದು ಉದಾರ ಕೊಡುಗೆ ಅಲ್ಲ. ರಾಜ್ಯದ ಆದಾಯದ ಬೆಳವಣಿಗೆಯನ್ನು ಶೇ 14ರಷ್ಟು ಎಂದು ಭಾವಿಸಿದರೆ, 2023-24ರಲ್ಲಿ ರಾಜ್ಯಕ್ಕೆ ₹95,211 ಕೋಟಿ ಬರಬೇಕಿತ್ತು. ಸಿಕ್ಕಿದ್ದು ₹71,261 ಕೋಟಿ ಮಾತ್ರ. ಇದರಿಂದ ರಾಜ್ಯಕ್ಕೆ ₹23,950 ಕೋಟಿ ನಷ್ಟವಾಗಿದೆ. ಇದು ರಾಜ್ಯದ ಲೋಪದಿಂದ ಆಗಿದ್ದಲ್ಲ. ರಾಜ್ಯದ ಆರ್ಥಿಕ ಬೆಳವಣಿಗೆ ಹಾಗೂ ತೆರಿಗೆ ಉತ್ತಮ ಆಡಳಿತದ ಹೊರತಾಗಿಯೂ ಭಾರಿ ಅನ್ಯಾಯವಾಗಿದೆ.
- ಕರ್ನಾಟಕದ ಆರ್ಥಿಕ ಬೆಳವಣಿಗೆ ದರ ಹಾಗೂ ತೆರಿಗೆ ಸಂಗ್ರಹ ಬೆಳವಣಿಗೆ ದರವು ರಾಷ್ಟ್ರೀಯ ಬೆಳವಣಿಗೆ ದರಕ್ಕಿಂತ ಜಾಸ್ತಿ ಇದೆ. ರಾಷ್ಟ್ರೀಯ ಜಿಎಸ್‌ಟಿ ಪೂಲ್‌ಗೆ ನಮ್ಮ ಕೊಡುಗೆ ಗಣನೀಯವಾಗಿ ಹೆಚ್ಚುತ್ತಿದೆ. ಆದರೆ, ಜಿಎಸ್‌ಟಿಯಿಂದಾಗಿ ನಾವು ಸಂಗ್ರಹಿಸುವ ತೆರಿಗೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.
- 2021–22ರಲ್ಲಿ ರಾಜ್ಯದ ಜಿಎಸ್‌ಡಿಪಿ ಬೆಳವಣಿಗೆ ದರ ಶೇ 9.8ರಷ್ಟು ಆಗಿತ್ತು. ಆಗ ರಾಷ್ಟ್ರೀಯ ಜಿಡಿಪಿ ಬೆಳವಣಿಗೆ ದರ ಶೇ 9.1ರಷ್ಟು ಇತ್ತು. ರಾಜ್ಯದ ಜಿಎಸ್‌ಟಿ ಸಂಗ್ರಹವು ಶೇ 27ರಷ್ಟು ಜಾಸ್ತಿ ಆಗಿದೆ. 2022–23ರಲ್ಲಿ ರಾಜ್ಯದ ಜಿಎಸ್‌ಡಿಪಿ ಶೇ 8.1ರಷ್ಟು ಬೆಳವಣಿಗೆ ದಾಖಲಿಸಿತು. ಅಖಿಲ ಭಾರತ ಜಿಡಿಪಿ ಶೇ 7.2ರಷ್ಟು ಇತ್ತು. ಅಖಿಲ ಭಾರತ ಜಿಎಸ್‌ಟಿ ಸಂಗ್ರಹದ ಶೇ 21ಕ್ಕೆ ಹೋಲಿಸಿದರೆ ರಾಜ್ಯದ ಸಂಗ್ರಹ ಶೇ 28ರಷ್ಟು ಹೆಚ್ಚಳವಾಗಿದೆ. 2023–24ರಲ್ಲಿ ರಾಜ್ಯದ ಜಿಎಸ್‌ಡಿಪಿ ಬೆಳವಣಿಗೆ ಶೇ 6.6. ಅಖಿಲ ಭಾರತ ಜಿಡಿಪಿ ಬೆಳವಣಿಗೆ ಶೇ 7.3. ರಾಜ್ಯದ ಜಿಎಸ್‌ಟಿ ಸಂಗ್ರಹ ಶೇ 18.3ರಷ್ಟು ಜಾಸ್ತಿಯಾಗಿದ್ದರೆ, ಅಖಿಲ ಭಾರತ ಮಟ್ಟದಲ್ಲಿ ಶೇ 15ರಷ್ಟು ಮಾತ್ರ ಹೆಚ್ಚಳ ಆಗಿದೆ. ಕರ್ನಾಟಕದ ಆರ್ಥಿಕತೆ ಮತ್ತು ಜಿಎಸ್‌ಟಿ ಕಾರ್ಯಕ್ಷಮತೆಯು ಈ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಕಾರ್ಯಕ್ಷಮತೆಗಿಂತ ಹೆಚ್ಚಾಗಿದೆ ಎಂಬುದು ಇಲ್ಲಿ ಸ್ಪಷ್ಟ.
- ಆರ್ಥಿಕತೆ ಹಾಗೂ ಜಿಎಸ್‌ಟಿ ಸಂಗ್ರಹದಲ್ಲಿ ರಾಷ್ಟ್ರೀಯ ಬೆಳವಣಿಗೆಗಿಂತ ಹೆಚ್ಚಿರುವ ಕಾರಣ, ಒಟ್ಟು ರಾಷ್ಟ್ರೀಯ ಸಂಗ್ರಹಕ್ಕೆ ರಾಜ್ಯದ ಕೊಡುಗೆಯು 2021–22ರಲ್ಲಿ ಶೇ 8.74 ಇದ್ದಿದ್ದು, 22–23ಕ್ಕೆ ಶೇ 9.27ಕ್ಕೆ ಏರಿಕೆಯಾಗಿದೆ. 2023–24ರಲ್ಲಿ ಶೇ 9.54ಕ್ಕೆ ಹಿಗ್ಗಿದೆ. ಸರಕು ಮತ್ತು ಸೇವಾ ತೆರಿಗೆ ಸಂಗ್ರಹದಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ. ಜತೆಗೆ, ನಮ್ಮ ಕೊಡುಗೆಯು ಇತರರಿಗಿಂತ ಹೆಚ್ಚುತ್ತಿದೆ. ಆದರೆ, ಐಜಿಎಸ್‌ಟಿ ಸೆಟ್ಲ್‌ಮೆಂಟ್ ಮೂಲಕ ರಾಜ್ಯಕ್ಕೆ ಸಿಗುತ್ತಿರುವ ಪಾಲು ಬಹಳ ಕಡಿಮೆ. ಇನ್ನೊಂದೆಡೆ, ರಾಷ್ಟ್ರೀಯ ಜಿಎಸ್‌ಟಿ ಸಂಗ್ರಹಕ್ಕೆ ರಾಜ್ಯವು ತನ್ನ ಜಿಎಸ್‌ಡಿಪಿಯ ಹೆಚ್ಚು ಹೆಚ್ಚು ಪಾಲು ನೀಡುತ್ತಿದೆ. ಇದು ಕಳವಳಕಾರಿ ಸಂಗತಿಯೂ ಹೌದು.

ಸಾಲಗಾರರಲ್ಲಿ ಗರಿಗೆದರಿದ ರೆಪೊ ದರ ಕಡಿತದ ನಿರೀಕ್ಷೆ • ಇಳಿಕೆಯಾಗದ ತರಕಾರಿ ಬೆಲೆ

ಹಣದುಬ್ಬರ: ಸತತ 2ನೇ ತಿಂಗಳು ಇಳಿಕೆ


ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಆಗಸ್ಟ್ ತಿಂಗಳಿನಲ್ಲಿ ಶೇ 3.65ರಷ್ಟು ದಾಖಲಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವುದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗುರಿಯಾಗಿದೆ. ಸತತ ಎರಡನೇ ತಿಂಗಳಿನಲ್ಲಿ ಈ ಮಿತಿಯಲ್ಲಿಯೇ ದಾಖಲಾಗಿದೆ. ಹಾಗಾಗಿ, ಆರ್‌ಬಿಐ ರೆಪೊ ದರ ಕಡಿತಗೊಳಿಸಲಿದೆ ಎಂಬ ನಿರೀಕ್ಷೆ ಗೃಹ ಹಾಗೂ ವಾಹನ ಸಾಲಗಾರರಲ್ಲಿ ಗರಿಗೆದರಿದೆ.

ಜುಲೈ ತಿಂಗಳಿನಲ್ಲಿ ಐದು ವರ್ಷದ ಕನಿಷ್ಠ ಮಟ್ಟವಾದ ಶೇ 3.6ರಷ್ಟು ದಾಖಲಾಗಿತ್ತು. ಇದಕ್ಕೆ ಹೋಲಿಸಿದರೆ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ. ತರಕಾರಿ ಮತ್ತು ಬೇಳೆಕಾಳು ಬೆಲೆ ಏರಿಕೆಯೇ ಇದಕ್ಕೆ ಕಾರಣವಾಗಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಶೇ 6.83ರಷ್ಟು ದಾಖಲಾಗಿತ್ತು.

'ಕಳೆದ ಐದು ವರ್ಷದಲ್ಲಿ ಸತತ ಎರಡನೇ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರವು ಕನಿಷ್ಠ ಮಟ್ಟದಲ್ಲಿ ದಾಖಲಾಗಿದೆ' ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯಿಂದ (ಎನ್‌ಎಸ್‌ಒ) ಗುರುವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.



ಆದರೆ, ಹಣದುಬ್ಬರ ಇಳಿಕೆಯಾದರೂ ಗ್ರಾಹಕರಿಗೆ ತರಕಾರಿ ಮತ್ತು ಬೇಳೆಕಾಳು ಬೆಲೆ ಏರಿಕೆಯ ಬಿಸಿ ಕಡಿಮೆಯಾಗಿಲ್ಲ. ತರಕಾರಿ ಬೆಲೆಯಲ್ಲಿ ಶೇ 10.71ರಷ್ಟು ಹಾಗೂ ಬೇಳೆಕಾಳು ದರದಲ್ಲಿ ಶೇ 13.6ರಷ್ಟು ಏರಿಕೆಯಾಗಿದೆ.

ಮಸಾಲೆ (ಶೇ –4.4ರಷ್ಟು), ತೈಲ ಮತ್ತು ಕೊಬ್ಬಿನ ಪದಾರ್ಥಗಳ ಬೆಲೆಯಲ್ಲಿ (ಶೇ –0.86ರಷ್ಟು) ಇಳಿಕೆಯಾಗಿದೆ.

ಜುಲೈನಲ್ಲಿ ಶೇ 5.42ರಷ್ಟಿದ್ದ ಆಹಾರ ಹಣದುಬ್ಬರವು, ಆಗಸ್ಟ್‌ನಲ್ಲಿ ಶೇ 5.66ರಷ್ಟು ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಟೊಮೆಟೊ ಬೆಲೆಯಲ್ಲಿ ಇಳಿಕೆಯಾಗಿದೆ (ಶೇ –47.91ರಷ್ಟು). ಇಂಧನ ಮತ್ತು ವಿದ್ಯುತ್ ವಿಭಾಗದಲ್ಲಿ ಬೆಲೆ ಗಮನಾರ್ಹವಾಗಿ ಕಡಿಮೆಯಾಗಿದೆ (ಶೇ –5.31ರಷ್ಟು).

ಗ್ರಾಮೀಣರಿಗೆ ಬೆಲೆ ಏರಿಕೆ ಬಿಸಿ

ನಗರ ವಾಸಿಗಳಿಗೆ ಹೋಲಿಸಿದರೆ ಗ್ರಾಮೀಣ ಜನರಿಗೆ ಆಹಾರ ಪದಾರ್ಥಗಳ ಬೆಲೆ ಏರಿಕೆಯ ಬಿಸಿ ತಟ್ಟಿದೆ. ನಗರ ಪ್ರದೇಶದಲ್ಲಿ ಹಣದುಬ್ಬರವು ಶೇ 3.14ರಷ್ಟು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶೇ 4.16ರಷ್ಟು ದಾಖಲಾಗಿದೆ.

ಬಿಹಾರದಲ್ಲಿ ಅತಿಹೆಚ್ಚು (ಶೇ 6.62ರಷ್ಟು) ಹಣದುಬ್ಬರ ದಾಖಲಾಗಿದ್ದರೆ, ತೆಲಂಗಾಣದಲ್ಲಿ ಅತಿ ಕಡಿಮೆ ದಾಖಲಾಗಿದೆ (ಶೇ 2.02ರಷ್ಟು).

'ಆಗಸ್ಟ್‌ನಲ್ಲಿ ಸರಕುಗಳ ಬೆಲೆ ಕಡಿಮೆಯಾದರೂ ಸೇವಾ ವಲಯದಲ್ಲಿ ಬೇಡಿಕೆ ಹೆಚ್ಚಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಹತ್ತಿ ಬಿತ್ತನೆ ಕಡಿಮೆಯಾಗಿದೆ. ಹಾಗಾಗಿ, ಚಿಲ್ಲರೆ ಹಣದುಬ್ಬರವು ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಲಿದೆಯೆಂದು ನಿರೀಕ್ಷಿಸಲಾಗಿತ್ತು' ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ತಿಳಿಸಿದ್ದಾರೆ.

ಕೈಗಾರಿಕಾ ಉತ್ಪಾದನೆ ಕುಸಿತ

ನವದೆಹಲಿ (ಪಿಟಿಐ): ಗಣಿ ಮತ್ತು ತಯಾರಿಕಾ ವಲಯದ ಚಟುವಟಿಕೆಗಳು ಕುಗ್ಗಿದ ಪರಿಣಾಮ ಜುಲೈ ತಿಂಗಳಿನಲ್ಲಿ ದೇಶದ ಕೈಗಾರಿಕಾ ಉತ್ಪಾದನೆಯು ಶೇ 4.8ರಷ್ಟು ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು ಕಳೆದ ವರ್ಷದ ಜುಲೈನಲ್ಲಿ ಶೇ 6.2ರಷ್ಟು ದಾಖಲಾಗಿತ್ತು ಎಂದು ಗುರುವಾರ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ ವರದಿ ತಿಳಿಸಿದೆ.

ಕಳೆದ ವರ್ಷದ ಜುಲೈನಲ್ಲಿ ಶೇ 5.3ರಷ್ಟಿದ್ದ ತಯಾರಿಕಾ ವಲಯದ ಬೆಳವಣಿಗೆಯು ಶೇ 4.6ಕ್ಕೆ ಇಳಿಕೆಯಾಗಿದೆ. ಗಣಿಗಾರಿಕೆ ಉತ್ಪಾದನೆಯು ಶೇ 7.9ರಿಂದ ಶೇ 3.7ಕ್ಕೆ ತಗ್ಗಿದೆ ಎಂದು ತಿಳಿಸಿದೆ.

ಕಳೆದ ವರ್ಷದ ಏಪ್ರಿಲ್–ಜುಲೈ ಅವಧಿಯಲ್ಲಿ ಶೇ 5.1ರಷ್ಟಿದ್ದ ಕೈಗಾರಿಕಾ ಉತ್ಪಾದನೆ ಸೂಚ್ಯಂಕವು, ಪ್ರಸಕ್ತ ವರ್ಷದ ಇದೇ ಅವಧಿಯಲ್ಲಿ ಶೇ 5.2ಕ್ಕೆ ಏರಿಕೆಯಾಗಿದೆ.

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹17100
ಎಸಿ	₹10665
ಆರ್‌ಪಿ	₹19000
ಆರ್‌ಸಿ	₹10190

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹11000-15000
ತಿಪಟೂರು	₹14500-14500
ತುರುವೇಕೆರೆ	₹14000-14200

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3000-3600
ಮಧ್ಯಮ	₹2000-3000
ಸಣ್ಣ	₹1000-2200

ಜಾಗತಿಕ ಮಾರುಕಟ್ಟೆ: ಕಚ್ಚಾ ತೈಲದ ದರ ಇಳಿಕೆ

ಪೆಟ್ರೋಲ್, ಡೀಸೆಲ್ ಬೆಲೆ ಕಡಿತ?

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯು ಇಳಿಕೆಯಾಗಿದೆ. ಇದೇ ಸ್ಥಿತಿ ಮುಂದುವರಿದರೆ ದೇಶೀಯ ಮಟ್ಟದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಕಡಿತವಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಜಾಗತಿಕ ಮಾರುಕಟ್ಟೆಯಲ್ಲಿ ಮಂಗಳವಾರ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 70 ಡಾಲರ್‌ಗೆ ಇಳಿಕೆಯಾಗಿತ್ತು. 2021ರ ಡಿಸೆಂಬರ್ ಬಳಿಕ ಮೊದಲ ಬಾರಿಗೆ ಇಷ್ಟು ಪ್ರಮಾಣದಲ್ಲಿ ದರ ಕುಸಿತವಾಗಿದೆ.

ಗುರುವಾರ ಬ್ರೆಂಟ್ ಕಚ್ಚಾ ತೈಲವು ಪ್ರತಿ ಬ್ಯಾರೆಲ್‌ಗೆ 71 ಡಾಲರ್ ಹಾಗೂ ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್ ಮೀಡಿಯೇಟ್ ಕಚ್ಚಾ ತೈಲವು ಪ್ರತಿ ಬ್ಯಾರೆಲ್‌ಗೆ 68 ಡಾಲರ್ ಆಗಿದೆ.

ಲೋಕಸಭಾ ಚುನಾವಣೆ ವೇಳೆ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ ತಲಾ ₹2 ಕಡಿತಗೊಳಿಸಿತ್ತು. ಕಚ್ಚಾ ತೈಲದ ಬೆಲೆಯು ಮತ್ತಷ್ಟು ಇಳಿಕೆಯಾದರೆ ಇಂಧನ ಬೆಲೆಯ ಪರಿಷ್ಕರಣೆಗೆ ಸರ್ಕಾರ ಮುಂದಾಗಲಿದೆ ಎಂದು ಮೂಲಗಳು ಹೇಳಿವೆ.



ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಕಾರ್ಯದರ್ಶಿ ಪಂಕಜ್ ಜೈನ್, 'ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯ ಆಧಾರದ ಮೇಲೆ ಇಂಧನ ಬೆಲೆ ಪರಿಷ್ಕರಣೆಗೆ ತೈಲ ಕಂಪನಿಗಳು ಅಗತ್ಯ ಕ್ರಮಕೈಗೊಳ್ಳಲಿವೆ' ಎಂದು ಹೇಳಿದ್ದಾರೆ.

'ದೀಪಾವಳಿ ಹಬ್ಬದ ವೇಳೆಗೆ ಅಥವಾ ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಘೋಷಣೆಗೂ ಮೊದಲು ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ ₹2 ಕಡಿತಗೊಳಿಸುವ ಸಾಧ್ಯತೆಯಿದೆ'ಎಂದು ಬ್ರೋಕರೇಜ್ ಸಂಸ್ಥೆ ಎಮ್ಕೆ ಗ್ಲೋಬಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಶಿಮ್ಲಾ ಬಂದ್: ಮಸೀದಿಯ ಭಾಗ ತೆರವು

ಶಿಮ್ಲಾ/ನವದೆಹಲಿ (ಪಿಟಿಐ): ಸಂಜೌಲಿಯಲ್ಲಿ ಮಸೀದಿಯೊಂದರ ಅನಧಿಕೃತ ಭಾಗವನ್ನು ನೆಲಸಮಗೊಳಿಸುವಂತೆ ಒತ್ತಾಯಿಸಿ ಪ್ರತಿಭಟಿಸುತ್ತಿದ್ದ ಪ್ರತಿಭಟನಕಾರರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ ಕ್ರಮವನ್ನು ವಿರೋಧಿಸಿ ಹಿಮಾಚಲ ಪ್ರದೇಶದ ರಾಜಧಾನಿಯಲ್ಲಿ ಗುರುವಾರ ಮೂರು ತಾಸು ಬಂದ್‌ಗೆ ಕರೆ ನೀಡಲಾಗಿತ್ತು. ಇದರಿಂದ ಅಂಗಡಿ ಮುಂಗಟ್ಟುಗಳು ಬಾಗಿಲುಮುಚ್ಚಿದ್ದವು.

ಶಿಮ್ಲಾದಲ್ಲಿ, ಬಿಜೆಪಿ ಜತೆ ಗುರುತಿಸಿಕೊಂಡಿರುವ ಶಿಮ್ಲಾ ಬೆಯೋಪರ್ ಮಂಡಲ್ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಬಂದ್‌ಗೆ ಕರೆ ನೀಡಿತ್ತು. ಪ್ರತಿಭಟನಕಾರರು ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ಮಾಡಿ, ಪ್ರತಿಭಟನೆಯನ್ನು ನಡೆಸಿದರು. ವರ್ತಕರ ಸಂಘಟನೆಯ ಅಧ್ಯಕ್ಷ ಸಂಜೀವ್ ಠಾಕೂರ್, ಬಂದ್ ಸಂಪೂರ್ಣ ಮತ್ತು ಶಾಂತಿಯುತವಾಗಿತ್ತು. ಶಿಮ್ಲಾ ನಗರದ ಹೊರವಲಯದಲ್ಲಿ ಅಂಗಡಿಗಳನ್ನು ಸಹ ಮುಚ್ಚಲಾಗಿತ್ತು ಎಂದು ಹೇಳಿದರು.

ಇದೇ ವೇಳೆ ಮಂಡಿ ಪಟ್ಟಣದ ಜೈಲ್ ರಸ್ತೆಯಲ್ಲಿರುವ ಮಸೀದಿಯ ಅನಧಿಕೃತ ಭಾಗವನ್ನು ಮುಸ್ಲಿಂ ಸಮುದಾಯದವರೇ ನೆಲಸಮಗೊಳಿಸಿದರು. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ರಾಜ್ಯದ ಹೊರಗಿನಿಂದ ಹಿಮಾಚಲ ಪ್ರದೇಶಕ್ಕೆ ಬರುವ ಜನರ ದಾಖಲಾತಿಗಳನ್ನು ಪರಿಶೀಲಿಸಬೇಕು ಎಂದು ಬಿಜೆಪಿಯ ಮಾಜಿ ಸಚಿವ ಸುರೇಶ್ ಭಾರದ್ವಾಜ್ ಒತ್ತಾಯಿಸಿದರು.

'ಮಸೀದಿಯ ಗೋಡೆಯು ಪಿಡಬ್ಲ್ಯುಡಿ ಜಾಗದಲ್ಲಿ ಇದೆ ಎಂದು ಆಕ್ಷೇಪಿಸಿ ಅಧಿಕಾರಿಗಳು ನೋಟಿಸ್ ನೀಡಿದ್ದರು. ಹಾಗಾಗಿ, ನಾವು ಅನಧಿಕೃತ ಗೋಡೆಯನ್ನು ನೆಲಸಮ ಗೊಳಿಸಲು ನಿರ್ಧರಿಸಿದೆವು. ನಿಯಮ ಪಾಲನೆಗೆ ನಾವು ಬದ್ಧವಾಗಿದ್ದು, ಎಲ್ಲರೊಂದಿಗೂ ಭ್ರಾತೃತ್ವ ಬಯಸುತ್ತೇವೆ' ಎಂದು ಮಸೀದಿ ಸಮಿತಿ ಸದಸ್ಯ ಇಕ್ಬಾಲ್ ಅಲಿ ಹೇಳಿದರು.

ಕಾಂಗ್ರೆಸ್ ವಿರುದ್ಧ ಬಿಜೆಪಿ ವಾಗ್ದಾಳಿ: ಅನಧಿಕೃತವಾಗಿ ನಿರ್ಮಾಣ ಮಾಡಿದ್ದ ಮಸೀದಿ ಧ್ವಂಸಕ್ಕೆ ಆಗ್ರಹಿಸಿ ಪ್ರತಿಭಟಿಸುತ್ತಿದ್ದವರ ಮೇಲೆ ಲಾಠಿಪ್ರಹಾರ ನಡೆಸಿದ್ದನ್ನು ಖಂಡಿಸಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಹರಿಹಾಯ್ದಿದೆ. ರಾಜಕೀಯ ಓಲೈಕೆಯನ್ನು ನಿಲ್ಲಿಸಿ ಎಂದು ಕಿಡಿಕಾರಿದೆ.

ಪಕ್ಷದ ಮುಖ್ಯ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಂಸದ ಸಂಬಿತ್ ಪಾತ್ರ, ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ನಡೆದ ಹಿಂಸಾಚಾರ ಘಟನೆಗೆ ಸಂಬಂಧಿಸಿದಂತೆಯೂ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು. ಪಕ್ಷದ ಸಮ್ಮತಿಯಿಂದಲೇ ಗಣೇಶನ ಪ್ರತಿಮೆ ಮೇಲೆ ಕಲ್ಲು ತೂರಿದ್ದಾರೆ ಮತ್ತು ಚಪ್ಪಲಿ ಎಸೆದಿದ್ದಾರೆ ಎಂದು ಆರೋಪಿಸಿದರು.

ಹಿಮಾಚಲ ಪ್ರದೇಶ ಮತ್ತು ಕರ್ನಾಟಕದಲ್ಲಿ ಕಾಂಗ್ರೆಸ್ ಓಲೈಕೆ ರಾಜಕಾರಣ ಮಾಡುತ್ತಿದೆ. ಹಿಮಾಚಲ ಪ್ರದೇಶದಲ್ಲಿ ರಾಹುಲ್ ಗಾಂಧಿ ಅವರ 'ಪ್ರೀತಿಯ ಅಂಗಡಿ'ಯು ಹಿಂದೂಗಳ ಮೇಲೆ ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗಿಸುತ್ತಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ವಿಮಾನ ಸಂಚಾರ ಪುನರಾರಂಭ ಚೀನಾ ನಿಯೋಗದ ಜತೆ ಚರ್ಚೆ

ನವದೆಹಲಿ (ಪಿಟಿಐ): ಉಭಯ ದೇಶಗಳ ನಡುವಿನ ನಾಗರಿಕ ವಿಮಾನಯಾನ ವಲಯದ ಬಲವರ್ಧನೆ ಹಾಗೂ ನೇರ ವಿಮಾನ ಸಂಚಾರದ ಪುನರಾರಂಭಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಚೀನಾ ಗುರುವಾರ ಮಾತುಕತೆ ನಡೆಸಿವೆ.

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್ ನಾಯ್ಡು, ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ವುಮ್ಲುನ್ಮಾಂಗ್ ವುಲ್ನಮ್ ಹಾಗೂ ಹಿರಿಯ ಅಧಿಕಾರಿಗಳು ಮತ್ತು ಚೀನಾದ ಪ್ರತಿನಿಧಿಗಳು ಈ ಕುರಿತ ಮಾತುಕತೆಯಲ್ಲಿ ಪಾಲ್ಗೊಂಡಿದ್ದರು.



'ಎರಡು ದೇಶಗಳ ನಡುವೆ ನೇರ ವಿಮಾನ ಸಂಚಾರ ಪುನರಾರಂಭಕ್ಕೆ ಸಂಬಂಧಿಸಿದಂತೆ ಸೋಂಗ್ ಝಿಯಾಂಗ್ ನೇತೃತ್ವದ ಚೀನಾ ನಿಯೋಗದ ಜೊತೆಗೆ ಚರ್ಚಿಸಲಾಗಿದೆ. ವಿದೇಶಾಂಗ ಸಚಿವರು ಮತ್ತು ಮಧ್ಯಸ್ಥಗಾರರೊಂದಿಗೆ ಚರ್ಚಿಸಿದ ಬಳಿಕ ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಸಚಿವ ರಾಮ್‌ಮೋಹನ್ ನಾಯ್ಡು ತಿಳಿಸಿದ್ದಾರೆ.

ಬೆಳ್ಳಿ ದರ ₹2 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಗ್ರಾಹಕರಿಂದ ಖರೀದಿ ಹೆಚ್ಚಳದಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದ್ದರೆ, ಚಿನ್ನದ ದರದಲ್ಲಿ ಇಳಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹2 ಸಾವಿರ ಏರಿಕೆಯಾಗಿದ್ದು, ₹87 ಸಾವಿರದಂತೆ ಮಾರಾಟವಾಗಿದೆ. ಇದು ಎರಡು ವಾರದ ಗರಿಷ್ಠ ಏರಿಕೆಯಾಗಿದೆ. ಕಳೆದ ಮೂರು ವಹಿವಾಟಿನ ದಿನದಲ್ಲಿ ಬೆಳ್ಳಿ ಧಾರಣೆಯು ಕೆ.ಜಿಗೆ ₹3,200 ಹೆಚ್ಚಳವಾಗಿದೆ.

ಚಿನ್ನದ ದರವು 10 ಗ್ರಾಂಗೆ ₹250 ಕಡಿಮೆಯಾಗಿ, ₹74,350ಕ್ಕೆ ಇಳಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,547 ಡಾಲರ್ (ಅಂದಾಜು ₹2.13 ಲಕ್ಷ) ಮತ್ತು 29 ಡಾಲರ್‌ನಂತೆ (ಅಂದಾಜು ₹2,447) ಮಾರಾಟವಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ವಿಧ	ದರ
ಬಂಟ್ವಾಳ	ಕೋಕ	18000-28500
	ಹೊಸತು	28500-40500
	ಹಳತು	40500-48000
ಚಿತ್ರದುರ್ಗ	ಅಪಿ	46619-47059
	ಬೆಟ್ಟೆ	32629-33099
	ಕೆಂಪುಗೋಟು	26609-27010
	ರಾಶಿ	46139-46569
ಕುಮಟ	ಚಿಪ್ಪು	20699-26099
	ಕೋಕ	5500-20000
	ಹಳೆಚಾಲಿ	36269-38499
	ಹೊಸಚಾಲಿ	33499-34899
ಪುತ್ತೂರು	ಕೋಕ	21000-27500
	ಹೊಸತು	32000-40500
ಸಾಗರ	ಬಿಳಿಗೋಟು	10899-24011
	ಚಾಲಿ	26121-33201
	ಕೋಕ	10099-22100
	ಕೆಂಪುಗೋಟು	20899-31099
	ರಾಶಿ	25299-48289
	ಸಿಪ್ಪೆಗೋಟು	7860-16459
ಶಿವಮೊಗ್ಗ	ಬೆಟ್ಟೆ	44420-54799
	ಗೊರಬಲು	23209-34509
	ರಾಶಿ	28009-48709
	ಸರಕು	43100-75510
ಸಿದ್ದಾಪುರ	ಬಿಳಿಗೋಟು	24500-28369
	ಚಾಲಿ	31509-34959
	ಕೋಕ	21019-25699
	ಕೆಂಪುಗೋಟು	20399-21599
	ರಾಶಿ	40869-45099
	ತಟ್ಟಿಬೆಟ್ಟೆ	42699-42699
ಶಿರಸಿ	ಬೆಟ್ಟೆ	23260-36100
	ಬಿಳಿಗೋಟು	23849-29509
	ಚಾಲಿ	31829-36311
	ರಾಶಿ	41800-45009
ಯಲ್ಲಾಪುರ	ಬಿಳಿಗೋಟು	24300-28115
	ಚಾಲಿ	29982-35701
	ಕೋಕ	4899-18109
	ಕೆಂಪುಗೋಟು	17206-23055
	ರಾಶಿ	41519-54299
	ತಟ್ಟಿಬೆಟ್ಟೆ	26090-35199

ಹೊಸ ಎತ್ತರಕ್ಕೆ ಜಿಗಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಒಳಹರಿವಿನ ಏರಿಕೆಯಿಂದಾಗಿ ಗುರುವಾರ ನಡೆದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಹೊಸ ಎತ್ತರಕ್ಕೆ ಜಿಗಿದಿವೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಬ್ಲೂಚಿಪ್ ಕಂಪನಿಗಳ ಷೇರು ಮಾರಾಟ ಹೆಚ್ಚಳ ಹಾಗೂ ಜಾಗತಿಕ ಷೇರುಪೇಟೆಗಳಲ್ಲಿ ನಡೆದ ಸಕಾರಾತ್ಮಕ ವಹಿವಾಟು ಕೂಡ ಇದಕ್ಕೆ ನೆರವಾಯಿತು.

ಹೂಡಿಕೆದಾರರ ಸಂಪತ್ತು ₹6.59 ಲಕ್ಷ ಕೋಟಿ ಏರಿಕೆಯಾಗಿದೆ.

ಸೆನ್ಸೆಕ್ಸ್ 1,439 ಅಂಶ ಏರಿಕೆ ಕಂಡು 82,962 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ಇಂಟ್ರಾಡೇ ವಹಿವಾಟಿನಲ್ಲಿ 1,593 ಅಂಶ ಏರಿಕೆಯಾಗಿ ಮೊದಲ ಬಾರಿಗೆ 83,116ಕ್ಕೆ ಮುಟ್ಟಿತ್ತು.

ನಿಫ್ಟಿ 470 ಅಂಶ ಹೆಚ್ಚಳ ಕಂಡು 25,388 ಅಂಶಗಳಲ್ಲಿ ಸ್ಥಿರಗೊಂಡಿತು.



ಭಾರ್ತಿ ಏರ್‌ಟೆಲ್, ಎನ್‌ಟಿಪಿಸಿ, ಜೆಎಸ್‌ಡಬ್ಲ್ಯು ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಅದಾನಿ ಪೋರ್ಟ್ಸ್, ಟೆಕ್ ಮಹೀಂದ್ರ, ಎಲ್ ಆ್ಯಂಡ್ ಟಿ, ಟಾಟಾ ಸ್ಟೀಲ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೋಟಕ್ ಮಹೀಂದ್ರ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ನೆಸ್ಲೆ ಇಂಡಿಯಾ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಸೋಲ್, ಟೋಕಿಯೊ, ಹಾಂಗ್‌ಕಾಂಗ್ ಮಾರುಕಟ್ಟೆ ಏರಿಕೆ ದಾಖಲಿಸಿವೆ.

ಆಗಸ್ಟ್‌ನಲ್ಲಿ ಅಮೆರಿಕದ ಚಿಲ್ಲರೆ ಹಣದುಬ್ಬರವು ಇಳಿಕೆಯಾಗಿದೆ. ಇದು ದೇಶೀಯ ಷೇರು ಮಾರುಕಟ್ಟೆಯಲ್ಲಿ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ವಿಶ್ವದ ಮೊದಲ ಖಾಸಗಿ 'ಬಾಹ್ಯಾಕಾಶ ನಡಿಗೆ' ಯಶಸ್ವಿ

ಕೇಪ್ ಕ್ಯಾನವೆರೆಲ್ (ಎ.ಪಿ): 'ಸ್ಪೇಸ್‌ಎಕ್ಸ್' ಸಂಸ್ಥೆಯ ಸಹಯೋಗದೊಂದಿಗೆ ಉದ್ಯಮಿ ಸೇರಿದಂತೆ ನಾಲ್ವರು ಗುರುವಾರ ಯಶಸ್ವಿಯಾಗಿ 'ಬಾಹ್ಯಾಕಾಶ ನಡಿಗೆ'ಯಲ್ಲಿ ಪಾಲ್ಗೊಂಡರು.

ಈ ಮೂಲಕ ಇದೇ ಮೊದಲ ಬಾರಿಗೆ ಖಾಸಗಿಯಾಗಿ ಆಯೋಜಿಸಲಾಗಿದ್ದ 'ವಿಶ್ವದ ಮೊದಲ ಬಾಹ್ಯಾಕಾಶ ನಡಿಗೆ'ಯು ಯಶಸ್ವಿಯಾದಂತಾಯಿತು. ಟೆಕ್ ಉದ್ಯಮಿ ಜರೆಡ್ ಐಸಾಕ್‌ಮನ್ ಹಾಗೂ ಇನ್ನೂ ಮೂವರು ಈ 'ಬಾಹ್ಯಾಕಾಶ ನಡಿಗೆ'ಯ ಕ್ಷಣಗಳನ್ನು ಅನುಭವಿಸಿದರು.

ಸಾಮಾನ್ಯವಾಗಿ ತರಬೇತಿ ಹೊಂದಿದ ಗಗನಯಾತ್ರಿಕರನ್ನು ಮಾತ್ರವೇ ಬಾಹ್ಯಾಕಾಶಕ್ಕೆ ಕಳುಹಿಸಲಾಗುತ್ತದೆ. ಆದರೆ ಅವರ ಹೊರತಾಗಿ ಸಾಮಾನ್ಯರೂ ಬಾಹ್ಯಾಕಾಶಕ್ಕೆ ಹೋಗಿ ಅಪರೂಪದ ಸಾಧನೆ ಮಾಡಿದ್ದಾರೆ. ಇದನ್ನು 'ಬಾಹ್ಯಾಕಾಶ ಪ್ರವಾಸ' ಎಂದು ಬಣ್ಣಿಸಬಹುದು.

ಸ್ಪೇಸ್‌ಎಕ್ಸ್ ಆಯೋಜಿಸಿದ್ದ ಈ 'ಬಾಹ್ಯಾಕಾಶ ನಡಿಗೆ' ಯೋಜನೆಯಲ್ಲಿ ಅದರ ಸಿಬ್ಬಂದಿ ಸೇರಿ ನಾಲ್ವರು ಗಗನನೌಕೆಯಲ್ಲಿ ಬಾಹ್ಯಾಕಾಶ ತಲುಪಿದರು. ಭೂಮಿಯಿಂದ ಸುಮಾರು 740 ಕಿ.ಮೀ. ದೂರದ ಕಕ್ಷೆಯಲ್ಲಿ 'ಬಾಹ್ಯಾಕಾಶ ನಡಿಗೆ' ಯಶಸ್ವಿಯಾಗಿ ನಡೆಯಿತು.



ಬಾಹ್ಯಾಕಾಶ ನಡಿಗೆಯ ಚಿತ್ರ ಬಿಡುಗಡೆ ಮಾಡಿರುವ 'ಸ್ಪೇಸ್‌ಎಕ್ಸ್'

'ಬಾಹ್ಯಾಕಾಶ ನಡಿಗೆ'ಗೆಂದು ಗುರುತಿಸಲಾಗಿದ್ದ ಅನುಕೂಲಕರ ಸ್ಥಳದಲ್ಲಿ ನೌಕೆಯು ನಿಂತ ಬಳಿಕ, ಅದರಿಂದ ಹೊರಬಂದ ಐಸಾಕ್‌ಮನ್ 'ಬಾಹ್ಯಾಕಾಶ ನಡಿಗೆ'ಯನ್ನು ಸಂಭ್ರಮಿಸಿದರು.

ನಲವತ್ತೊಂದು ವರ್ಷದ ಐಸಾಕ್‌ಮನ್ ಅವರು 'ಶಿಫ್ಟ್4' ಎಂಬ ಕ್ರೆಡಿಟ್ ಕಾರ್ಡ್ ಪ್ರೊಸೆಸಿಂಗ್ ಸಂಸ್ಥೆಯ ಸಂಸ್ಥಾಪಕರು ಹಾಗೂ ಸಿಇಒ. ಭೂಮಿಗೆ ಬಂದ ಬಳಿಕ ತಮ್ಮ ಅನುಭವ ಹಂಚಿಕೊಂಡ ಅವರು 'ಮನೆಗೆ ಬಂದೆವು. ನಮಗೆಲ್ಲ ಮಾಡಲು ಸಾಕಷ್ಟು ಕೆಲಸವಿದೆ. ಬಾಹ್ಯಾಕಾಶದಿಂದ ಜಗತ್ತು ಪರಿಪೂರ್ಣವೆಂಬಂತೆ ಕಂಡಿತು' ಎಂದರು.

ಬಾಹ್ಯಾಕಾಶ ನಡಿಗೆ ಎಂದರೆ ಗಾಳಿಯಲ್ಲಿ ತೇಲುತ್ತಲೇ ನಡೆಯುವುದು ಎಂದು ಅರ್ಥವಲ್ಲ. ಬಾಹ್ಯಾಕಾಶದ ನಿರ್ದಿಷ್ಟ ಸ್ಥಳದಲ್ಲಿ, ಗಗನನೌಕೆಯಲ್ಲಿ ನಿಂತು ಬಾಹ್ಯಾಕಾಶದ ಸುತ್ತಲಿನ ವಾತಾವರಣವನ್ನು ಅನುಭವಿಸುವುದಾಗಿದೆ.

ಈವರೆಗೆ 12 ದೇಶಗಳ 263 ಜನರು 'ಬಾಹ್ಯಾಕಾಶ ನಡಿಗೆ'ಯಲ್ಲಿ ಪಾಲ್ಗೊಂಡಿದ್ದಾರೆ. 1965ರಲ್ಲಿ ರಷ್ಯಾದ ಅಲೆಕ್ಸಿ ಲಿಯೋನೊವ್ ಅವರು ಮೊದಲ ಬಾರಿಗೆ 'ಬಾಹ್ಯಾಕಾಶ ನಡಿಗೆ'ಯನ್ನು ಕೈಗೊಂಡಿದ್ದರು.

'ಚೀನಾದ ಸೇನೆ ನಿಯೋಜನೆಯೇ ಸಮಸ್ಯೆ'

ಜಿನೀವಾ (ಪಿಟಿಐ): ಚೀನಾದೊಟ್ಟಿಗೆ ಇರುವ ಶೇ 75ರಷ್ಟು ಸಮಸ್ಯೆಗಳು ಇತ್ಯರ್ಥವಾಗಿವೆ. ಆದರೆ ಗಡಿಯಲ್ಲಿ ಹೆಚ್ಚು ಸೈನಿಕರನ್ನು ನಿಯೋಜಿಸುತ್ತಿರುವುದೇ ದೊಡ್ಡ ಸಮಸ್ಯೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದರು.

ಸ್ವಿಸ್ ನಗರದಲ್ಲಿ ಚಿಂತಕರ ಚಾವಡಿ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, 'ಜೂನ್ 2020ರಲ್ಲಿ ನಡೆದ ಗಾಲ್ವಾನ್ ಕಣಿವೆ ಸಂಘರ್ಷವು ಭಾರತ–ಚೀನಾ ಸಂಬಂಧದ ಮೇಲೆ ದುಷ್ಪರಿಣಾಮ ಬೀರಿದೆ. ಬಿಕ್ಕಟ್ಟು ಶಮನಕ್ಕೆ ಉಭಯ ದೇಶಗಳ ಮಾತುಕತೆ ಚಾಲ್ತಿಯಲ್ಲಿದೆ' ಎಂದರು.

'ವಾಸ್ತವ ನಿಯಂತ್ರಣ ರೇಖೆಯಲ್ಲಿ ಚೀನಾ ಭಾರಿ ಸಂಖ್ಯೆಯಲ್ಲಿ ಸೈನಿಕರನ್ನು ನಿಯೋಜಿಸಿದೆ. ಇದಕ್ಕೆ ಪ್ರತಿಯಾಗಿ ನಾವೂ ನಿಯೋಜಿಸುತ್ತಿದ್ದೇವೆ. ಅತ್ಯಂತ ಎತ್ತರ, ತೀವ್ರ ಚಳಿ ಇರುವ ಪ್ರದೇಶದಲ್ಲಿ ಹೆಚ್ಚು ಸೈನಿಕರ ನಿಯೋಜನೆ ಅತ್ಯಂತ ಅಪಾಯಕಾರಿ ಬೆಳವಣಿಗೆ. 2020ರಲ್ಲಿ ಆಗಿದ್ದೂ ಇದೇ' ಎಂದರು.

ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿ: ವಿದ್ವತ್ ಕಾವೇರಪ್ಪಗೆ ಎರಡು ವಿಕೆಟ್

ಶತಕದ ಸನಿಹ ಶಮ್ಸ್ ಮುಲಾನಿ

ಅನಂತಪುರ (ಪಿಟಿಐ): ಬೌಲಿಂಗ್ ಆಲ್‌ರೌಂಡರ್ ಶಮ್ಸ್ ಮುಲಾನಿ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಶತಕ ದಾಖಲಿಸುವತ್ತ ಚಿತ್ತ ನೆಟ್ಟಿದ್ದಾರೆ. ಅಲ್ಲದೇ ಚೆಂದದ ಬ್ಯಾಟಿಂಗ್ ಮಾಡಿದ ಅವರು ಭಾರತ ಎ ತಂಡವು ಅಲ್ಪಮೊತ್ತಕ್ಕೆ ಕುಸಿಯದಂತೆ ನೋಡಿಕೊಂಡರು.

ಗುರುವಾರ ಇಲ್ಲಿ ಆರಂಭವಾದ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಭಾರತ ಡಿ ತಂಡದ ವಿರುದ್ಧ ಮಯಂಕ್ ಅಗರವಾಲ್ ನಾಯಕತ್ವದ ಎ ತಂಡವು 93 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ಹಂತದಲ್ಲಿ ಮುಲಾನಿ (ಬ್ಯಾಟಿಂಗ್ 88; 174ಎಸೆತ) ಅವರು ತನುಷ್ ಕೋಟ್ಯಾನ್ (53; 80ಎ) ಅವರೊಂದಿಗಿನ 7ನೇ ವಿಕೆಟ್ ಜೊತೆಯಾಟದಲ್ಲಿ 91 ರನ್ ಗಳಿಸಿದರು. ಇದರಿಂದಾಗಿ ತಂಡವು ದಿನದಾಟದ ಕೊನೆಗೆ 82 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 288 ರನ್ ಗಳಿಸಿತು.

ಮುಲಾನಿ ತಾಳ್ಮೆಯಿಂದ ಆಡಿದರೆ, ತನುಷ್ ಅವರು ತುಸು ವೇಗವಾಗಿ ರನ್ ಕಲೆ ಹಾಕಿದರು. ಮುಂಬೈನ ಈ ಇಬ್ಬರೂ ಬ್ಯಾಟರ್‌ಗಳ ಉತ್ತಮ ಹೊಂದಾಣಿಕೆಯ ಆಟದಿಂದಾಗಿ ಬೌಲರ್‌ಗಳ ಮೇಲೆ ಒತ್ತಡ ಹೆಚ್ಚಾಯಿತು.

ಟಾಸ್ ಗೆದ್ದ ಭಾರತ ಡಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಹಂತದಲ್ಲಿ ಬೌಲರ್‌ಗಳು ಮಿಂಚಿದರು. ಈ ತಂಡದಲ್ಲಿರುವ ಕನ್ನಡಿಗ ವಿದ್ವತ್ ಕಾವೇರಪ್ಪ, ಹರ್ಷಿತ್ ರಾಣಾ ಮತ್ತು ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರು ತಲಾ ಎರಡು ವಿಕೆಟ್ ಗಳಿಸಿದರು. ಸಾರಾಂಶ್ ಜೈನ್ ಮತ್ತು ಸೌರಭ್ ಕುಮಾರ್ ಅವರೂ ತಲಾ ಒಂದು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಭಾರತ ಎ: 82 ಓವರ್‌ಗಳಲ್ಲಿ 8ಕ್ಕೆ 288 (ರಿಯಾನ್ ಪರಾಗ್ 37, ಕುಮಾರ್ ಕುಶಾಗ್ರ 28, ಶಮ್ಸ್ ಮುಲಾನಿ ಬ್ಯಾಟಿಂಗ್ 88, ಹರ್ಷಿತ್ ರಾಣಾ 49ಕ್ಕೆ2, ವಿದ್ವತ್ ಕಾವೇರಪ್ಪ 30ಕ್ಕೆ2, ಅರ್ಷದೀಪ್ ಸಿಂಗ್ 73ಕ್ಕೆ2) ವಿರುದ್ಧ ಭಾರತ ಡಿ.



ಶಮ್ಸ್ ಮುಲಾನಿ ಬ್ಯಾಟಿಂಗ್ ವೈಖರಿ



ಇಶಾನ್ ಕಿಶನ್

ಇಶಾನ್ ಶತಕದ ಭರಾಟೆ

ದೀರ್ಘ ಸಮಯದ ನಂತರ ದೇಶಿ ಕ್ರಿಕೆಟ್‌ಗೆ ಮರಳಿರುವ ಇಶಾನ್ ಕಿಶನ್ ಶತಕ ದಾಖಲಿಸಿದರು. ದುಲೀಪ್ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಇಶಾನ್ (111; 126ಎಸೆತ) ಚೆಂದದ ಬ್ಯಾಟಿಂಗ್ ಬಲದಿಂದ ಭಾರತ ಸಿ ತಂಡವು ಬಿ ತಂಡದ ವಿರುದ್ಧ 79 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 357 ರನ್ ಗಳಿಸಿತು.

ಆರಂಭಿಕ ಬ್ಯಾಟರ್ ಮತ್ತು ನಾಯಕ ಋತುರಾಜ್ ಗಾಯಕವಾಡ್ (ಬ್ಯಾಟಿಂಗ್ 46; 50ಎ) ಮತ್ತು ಮಾನವ್ ಸುತಾರ್ (ಬ್ಯಾಟಿಂಗ್ 8) ಅವರು ಕ್ರೀಸ್‌ನಲ್ಲಿದ್ದಾರೆ.

ಎಡಗೈ ಬ್ಯಾಟರ್ ಇಶಾನ್ ಅವರು ಈಚೆಗೆ ತಮಿಳನಾಡಿನಲ್ಲಿ ನಡೆದ ಬುಚಿಬಾಬು ಆಹ್ವಾನಿತ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಶತಕ ಬಾರಿಸಿದ್ದರು. ಇದರಿಂದಾಗಿ ಜಾರ್ಖಂಡ್ ತಂಡ ಜಯಿಸಿತ್ತು. 2023ರ ಜುಲೈ ನಂತರ ಇಶಾನ್ ಆಡಿದ ಮೊದಲ ದೀರ್ಘ ಮಾದರಿ ಪಂದ್ಯ ಅದಾಗಿತ್ತು.

ದುಲೀಪ್ ಟ್ರೋಫಿ ಟೂರ್ನಿಯ ಮೊದಲ ಪಂದ್ಯದಲ್ಲಿ ಅವರು ಆಡಿರಲಿಲ್ಲ. ಎರಡನೇ ಹಣಾಹಣಿಯಲ್ಲಿ ಇಶಾನ್ ಮತ್ತು ಬಾಬಾ ಇಂದ್ರಜೀತ್ (78; 136ಎ) ಮೂರನೇ ವಿಕೆಟ್ ಜೊತೆಯಾಟದಲ್ಲಿ 189 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ ಸಿ: 79 ಓವರ್‌ಗಳಲ್ಲಿ 5ಕ್ಕೆ357 (ಋತುರಾಜ್ ಗಾಯಕವಾಡ 46, ಸಾಯಿ ಸುದರ್ಶನ್ 43, ರಜತ್ ಪಾಟೀದಾರ್ 40, ಇಶಾನ್ ಕಿಶನ್ 111, ಬಾಬಾ ಇಂದ್ರಜೀತ್ 78, ಮುಕೇಶ್ ಕುಮಾರ್ 76ಕ್ಕೆ3) ವಿರುದ್ಧ ಭಾರತ ಬಿ.



ಹಾಸ್ಯದ ಹೊನಲು... ಪ್ರಧಾನಿ ನರೇಂದ್ರ ಮೋದಿ ಅವರು ಪ್ಯಾರಾಲಿಂಪಿಕ್ಸ್ ಪದಕ ವಿಜೇತರ ಜೊತೆ ಸಂವಾದ ನಡೆಸುತ್ತಿದ್ದ ವೇಳೆ ನಗುವಿನ ಅಲೆಯೆದ್ದಿದ್ದು ಹೀಗೆ... ಪಿಟಿಐ ಚಿತ್ರ

ತಪ್ಪಿದ ಒಲಿಂಪಿಕ್ಸ್: ಆತ್ಮಹತ್ಯೆಗೆ ಯೋಚಿಸಿದ್ದ ಬೇನ್ಸ್



ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಲು ವಿಫಲವಾದ ನಿರಾಸೆಯಲ್ಲಿ ಅಥ್ಲೀಟ್ ಹರ್ಮಿಲನ್ ಬೇನ್ಸ್ ಆತ್ಮಹತ್ಯೆ ಮಾಡಿ ಕೊಳ್ಳುವ ಯೋಚನೆ ಮಾಡಿದ್ದರಂತೆ!

ಇದೀಗ ಖಿನ್ನತೆಯಿಂದ ಹೊರ ಬಂದಿರುವ 26 ವರ್ಷದ ಹರ್ಮಿಲನ್ ಅವರು ರೂಪದರ್ಶಿಯಾಗುವತ್ತ ಚಿತ್ತ ನೆಟ್ಟಿದ್ದಾರೆ. ಪಂಜಾಬಿನ ಹರ್ಮಿಲನ್ ಅವರು ಎರಡು ವರ್ಷಗಳ ಹಿಂದೆ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಮಹಿಳೆಯರ 800 ಮೀ ಮತ್ತು 1500 ಮೀ ಓಟದ ಸ್ಪರ್ಧೆಗಳಲ್ಲಿ ಎರಡು ಪದಕಗಳನ್ನು ಜಯಿಸಿದ್ದರು.

ಕಳೆದ ಋತುವಿನಲ್ಲಿ ಗಾಯದಿಂದಾಗಿ ಕ್ರೀಡೆಯಿಂದ ಹೊರಗುಳಿದಿದ್ದರು. ಅದರಿಂದಾಗಿ ಅವರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅವಕಾಶ ತಪ್ಪಿಸಿಕೊಂಡಿದ್ದರು.

‘ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಗುರಿಯಿತ್ತು. ಗಾಯ ಗೊಂಡಿದ್ದರಿಂದ ನನ್ನ ಸಾಮರ್ಥ್ಯವು ಕುಂಠಿತವಾಯಿತು. ಒಲಿಂಪಿಕ್ಸ್ ಅವಕಾಶ ಕೈತಪ್ಪಿದ್ದರಿಂದ ಅಪಾರ ಬೇಸರವಾಗಿತ್ತು. ಅದರಿಂದಾಗಿ ಖಿನ್ನತೆಗೊಳಗಾಗಿದ್ದೆ. ಯಾವುದೇ ವಿಚಾರ ಮಾಡುವಷ್ಟೂ ಚೈತನ್ಯ ಉಳಿದಿರಲಿಲ್ಲ. ಆತ್ಮಹತ್ಯೆ ಮಾಡಿಕೊಳ್ಳಲೂ ಯೋಚಿಸಿದ್ದೆ. ಕ್ರೀಡೆಯನ್ನೂ ತೊರೆಯಲೂ ಮುಂದಾಗಿದ್ದೆ’ ಎಂದು ಸಾಮಾಜಿಕ ಜಾಲತಾಣದಲ್ಲಿ ‘ದ ಕ್ವೀನ್’ ಎಂದೇ ಪರಿಚಿತರಾಗಿರುವ ಹರ್ಮಿಲನ್ ಹೇಳಿದ್ದಾರೆ. ಅವರು ಅಸ್ಥಿರಜ್ಜುವಿನ ಸೆಳೆತದಿಂದ (ಗ್ರೇಡ್ 2ಬಿ) ಬಳಲುತ್ತಿದ್ದಾರೆ. ಅವರಿಗೆ ಶಸ್ತ್ರಚಿಕಿತ್ಸೆ ಮಾಡುವ ಸಾಧ್ಯತೆ ಇದೆ. ಇದರಿಂದಾಗಿ ಅವರು ಟ್ರ್ಯಾಕ್‌ಗೆ ಮರಳುವುದು ಖಚಿತವಿಲ್ಲ.

‘ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅದಮ್ಯವಾದ ಆಸೆ ಇತ್ತು. ಅದಕ್ಕಾಗಿ ಗಾಯದ ನೋವಿನಲ್ಲಿಯೂ ಇಂಗ್ಲೆಂಡ್‌ನ ಕೂಟವೊಂದರಲ್ಲಿ ಭಾಗವಹಿಸಿದೆ. ಆದರೆ, ಆಗ ಗ್ರೇಡ್ 1 ಹಂತದಲ್ಲಿದ್ದ ಗಾಯ ಉಲ್ಬಣಿಸಿ ಗ್ರೇಡ್ 2ಬಿ ಆಯಿತು. ಇನ್ನೊಂದು ಸ್ಕ್ಯಾನ್ ಆದ ನಂತರ ಶಸ್ತ್ರಚಿಕಿತ್ಸೆ ಕುರಿತು ನಿರ್ಧಾರ ಕೈಗೊಳ್ಳುವೆ. ಸದ್ಯಕ್ಕೆ ಇನ್ನೂ ಒಂಬತ್ತು ತಿಂಗಳು ಓಡಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ಪ್ಯಾರಾಲಿಂಪಿಕ್ಸ್ ಪದಕ ವಿಜೇತರ ಭೇಟಿಯಾದ ಮೋದಿ

ನವದೆಹಲಿ (ಪಿಟಿಐ): ಇತ್ತೀಚಿನ ಪ್ಯಾರಾಲಿಂಪಿಕ್ಸ್‌ನಲ್ಲಿ ಅಭೂತಪೂರ್ವ ಪ್ರದರ್ಶನ ನೀಡಿದ ಭಾರತದ ಪದಕ ವಿಜೇತರನ್ನು ಪ್ರಧಾನಿ ನರೇಂದ್ರ ಮೋದಿ ಗುರುವಾರ ತಮ್ಮ ನಿವಾಸದಲ್ಲಿ ಭೇಟಿಯಾದರು. ಪ್ಯಾರಿಸ್ ಕೂಟದಲ್ಲಿ ಭಾರತ ತಂಡದ ಸ್ಪರ್ಧಿಗಳು 29 ಪದಕಗಳನ್ನು ಗೆದ್ದುಕೊಂಡಿದ್ದರು.

ಕ್ರೀಡಾ ಸಚಿವಾಲಯ ಈ ಸಂಬಂಧ 43 ಸೆಕೆಂಡುಗಳ ವಿಡಿಯೊ ಹಂಚಿಕೊಂಡಿದ್ದು, ಇದರಲ್ಲಿ ಮೋದಿ ಅವರು ಪದಕ ವಿಜೇತರನ್ನು ಅಭಿನಂದಿಸಿ, ಸಂವಾದ ನಡೆಸುತ್ತಿರುವ ದೃಶ್ಯಾವಳಿಗಳು ಇವೆ. ಸಂವಾದದ ವೇಳೆ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಮತ್ತು ಭಾರತ ಪ್ಯಾರಾಲಿಂಪಿಕ್ಸ್ ಸಮಿತಿ ಅಧ್ಯಕ್ಷ ದೇವೇಂದ್ರ ಜಝಾರಿಯಾ ಕೂಡ ಹಾಜರಿದ್ದರು.

ವೀಲ್‌ಚೇರ್ ಶೂಟರ್ ಅವನಿ ಲೇಖರಾ ಮತ್ತು ದೃಷ್ಟಿದೋಷ ಹೊಂದಿರುವ ಜುಡೊಪಟು ಕಪಿಲ್ ಪರಮಾರ್ ಪ್ರಧಾನಿ ಜೊತೆ ಮಾತನಾಡುವ ದೃಶ್ಯಗಳು ವಿಡಿಯೊದಲ್ಲಿವೆ. ಪರಮಾರ್ ಅವರು ಪದಕದ ಮೇಲೆ ಮೋದಿ ಅವರ ಸಹಿ ಹಾಕಿಸಿಕೊಂಡಿರುವುದೂ ವಿಡಿಯೊದಲ್ಲಿ ಕಾಣುತ್ತಿದೆ.

ಟಿಪಿಎಲ್‌ನತ್ತ ರೋಹನ್ ಬೋಪಣ್ಣ



ಮುಂಬೈ (ಪಿಟಿಐ): ಅನುಭವಿ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಅವರು ಡಿಸೆಂಬರ್‌ನಲ್ಲಿ ನಡೆಯಲಿರುವ ಟೆನಿಸ್ ಪ್ರೀಮಿಯರ್ ಲೀಗ್‌ನ (ಟಿಪಿಎಲ್) ಆರನೇ ಆವೃತ್ತಿಯ ಟೂರ್ನಿಗೆ ಪದಾರ್ಪಣೆ ಮಾಡಲಿದ್ದಾರೆ.

44 ವರ್ಷ ವಯಸ್ಸಿನ ಬೋಪಣ್ಣ ಪುರುಷರ ಡಬಲ್ಸ್‌ನಲ್ಲಿ ವಿಶ್ವದಲ್ಲಿ ಆರನೇ ಕ್ರಮಾಂಕ ಹೊಂದಿದ್ದಾರೆ. ಋತುವಿನ ಆರಂಭದಲ್ಲಿ ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರೊಂದಿಗೆ ಆಸ್ಟ್ರೇಲಿಯಾ ಓಪನ್ ಡಬಲ್ಸ್ ಪ್ರಶಸ್ತಿ ಗೆದ್ದಿದ್ದರು.

ಡಾಜ್‌ಬಾಲ್: 15ರಂದು ಟ್ರಯಲ್ಸ್

ಬೆಂಗಳೂರು: ಪಾಂಡಿಚೇರಿಯಲ್ಲಿ ಇದೇ 27ರಿಂದ 29ರವರೆಗೆ ನಡೆಯುವ ಸಬ್ ಜೂನಿಯರ್ ರಾಷ್ಟ್ರೀಯ ಡಾಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕ ತಂಡದ ಆಯ್ಕೆಗಾಗಿ ಇದೇ 15ರಂದು ಬೆಳಿಗ್ಗೆ 9ರಿಂದ ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಟ್ರಯಲ್ಸ್ ಆಯೋಜಿಸಲಾಗಿದೆ. ಮಾಹಿತಿಗೆ ರಮೇಶ್ ಎನ್.ಆರ್. (9845626244), ವಿಜೇತ್ ಕುಮಾರ್ (9900581178) ಸಂಪರ್ಕಿಸಬಹುದು.

ಐಎಸ್‌ಎಲ್ ಟೂರ್ನಿ ಇಂದಿನಿಂದ

ಕೋಲ್ಕತ್ತ (ಪಿಟಿಐ): ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ ಶುಕ್ರವಾರ ಆರಂಭವಾಗಲಿದೆ.

ಹೋದ ಬಾರಿಯ ಫೈನಲ್ ತಲುಪಿದ್ದ ಮುಂಬೈ ಸಿಟಿ ಎಫ್‌ಸಿ ಮತ್ತು ಮೋಹನ್ ಬಾಗನ್ ತಂಡಗಳು ಉದ್ಘಾಟನಾ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಮೋಹನ್ ಬಾಗನ್ ತಂಡದಲ್ಲಿ ಮತ್ತು ಮುಂಬೈ ಸಿಟಿ ತಂಡದಲ್ಲಿ ಈ ಬಾರಿ ಖ್ಯಾತನಾಮ ಆಟಗಾರರು ಇದ್ದಾರೆ. ತುರುಸಿನ ಪೈಪೋಟಿ ನಿರೀಕ್ಷೆ ಇದೆ.

ಶನಿವಾರ ಬೆಂಗಳೂರು ಫುಟ್‌ಬಾಲ್ ಕ್ಲಬ್ ಅಭಿಯಾನ ಆರಂಭಿಸಲಿದೆ. ಮೊದಲ ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ವಿರುದ್ಧ ಸೆಣಸಲಿದೆ.

ಪಂದ್ಯ ಆರಂಭ: ರಾತ್ರಿ 7.30

ಡ್ರಾ ಪಂದ್ಯದಲ್ಲಿ ಕೆಎಸ್‌ಸಿಎ ಕೋಲ್ಟ್ಸ

ಪ್ರಜಾವಾಣಿ ವಾರ್ತೆ

ಮೈಸೂರು: ಸಂಘಟಿತ ಹೋರಾಟದ ನಡುವೆಯೂ ಇನಿಂಗ್ಸ್ ಹಿನ್ನಡೆ ಅನುಭವಿಸಿದ ಕೆಎಸ್‌ಸಿಎ ಕೋಲ್ಟ್ಸ್ ತಂಡವು ಗುರುವಾರ ಇಲ್ಲಿನ ಎಸ್‌ಜೆಸಿಇ ಮೈದಾನದಲ್ಲಿ ಮುಕ್ತಾಯಗೊಂಡ ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ ಎದುರಿನ ಪಂದ್ಯವನ್ನು ಡ್ರಾ ಮಾಡಿಕೊಂಡು ಎದುರಾಳಿ ತಂಡಕ್ಕೆ 3 ಅಂಕ ಬಿಟ್ಟುಕೊಟ್ಟಿತು.

ಕೆ.ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ ಪಂದ್ಯದ ಕೊನೆಯ ದಿನವಾದ ಗುರುವಾರ ಇನಿಂಗ್ಸ್ ಮುನ್ನಡೆಯ ಗುರಿಯೊಂದಿಗೆ ಕಣಕ್ಕೆ ಇಳಿದಿದ್ದ ಕೋಲ್ಟ್ಸ್ ತಂಡವು 408 ರನ್‌ಗಳಿಗೆ ಆಲೌಟ್ ಆಯಿತು. ಧೀರಜ್ ಗೌಡ (88; 111 ಎ, 4X13) ಹೋರಾಟ ಪ್ರದರ್ಶಿಸಿದರಾದರೂ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಸಿಗಲಿಲ್ಲ. ಡಿ.ವೈ. ಪಾಟೀಲ ಅಕಾಡೆಮಿಯ ಪಾರ್ಥ್ ಸಹಾನಿ 44 ರನ್‌ಗಳಿಗೆ 4 ವಿಕೆಟ್ ಉರುಳಿಸಿದರು. ಎರಡನೇ ಇನಿಂಗ್ಸ್ ಆರಂಭಿಸಿದ ಡಿ.ವೈ. ಪಾಟೀಲ ಅಕಾಡೆಮಿ 22 ಓವರ್ ಗಳಲ್ಲಿ 110 ರನ್ ಕಲೆಹಾಕಿದ್ದ ವೇಳೆ ಪಂದ್ಯ ಡ್ರಾ ಆಯಿತು.

ಒಡಿಶಾಗೆ ಮೂರು ಅಂಕ: ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆದ ಒಡಿಶಾ ಕ್ರಿಕೆಟ್ ಸಂಸ್ಥೆ ಹಾಗೂ ಬರೋಡಾ ಕ್ರಿಕೆಟ್ ಸಂಸ್ಥೆ ನಡುವಿನ ಪಂದ್ಯವು ಡ್ರಾ ಆಗಿದ್ದು, ಒಡಿಶಾ ಇನಿಂಗ್ಸ್ ಮುನ್ನಡೆಯೊಂದಿಗೆ 3 ಅಂಕ ಸಂಪಾದಿಸಿತು. ಬರೋಡಾ ಪರ ಸುಕೃತ್ ಪಾಂಡೆ (184; 155 ಎ, 4X8) ವಿರೋಚಿತ ಪ್ರದರ್ಶನ ನೀಡಿದರು.



ಕೆಎಸ್‌ಸಿಎ ಕೋಲ್ಟ್ಸ್ ಆಟಗಾರ ಧೀರಜ್ ಗೌಡ ಬ್ಯಾಟಿಂಗ್ ವೈಖರಿ. ಪ್ರಜಾವಾಣಿ ಚಿತ್ರ/ಅನೂಪ್ ರಾಘು ಟಿ.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ: ಮೊದಲ ಇನಿಂಗ್ಸ್: ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ: 106.3 ಓವರ್‌ಗಳಲ್ಲಿ 452; ಕೆಎಸ್‌ಸಿಎ ಕೋಲ್ಟ್ಸ್: 115.1 ಓವರ್‌ಗಳಲ್ಲಿ 408 (ಧೀರಜ್ ಗೌಡ 88, ಪಿ. ಧ್ರುವ್ 34. ಪಾರ್ಥ್ ಸಹಾನಿ 44ಕ್ಕೆ 4) ಎರಡನೇ ಇನಿಂಗ್ಸ್: ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ: 22 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 110 (ಪಾರ್ಥ್ ಸಹಾನಿ ಔಟಾಗದೆ 36, ಹರ್ಷಲ್ ಜಾಧವ್ ಔಟಾಗದೆ 58. ಧನುಷ್ ಗೌಡ 12ಕ್ಕೆ 2)

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಮೊದಲ ಇನಿಂಗ್ಸ್: ಒಡಿಶಾ ಕ್ರಿಕೆಟ್ ಸಂಸ್ಥೆ: 129 ಓವರ್‌ಗಳಲ್ಲಿ 468; ಬರೋಡಾ ಕ್ರಿಕೆಟ್ ಸಂಸ್ಥೆ: 149.4 ಓವರ್‌ಗಳಲ್ಲಿ 404 (ಸುಕೃತ್ ಪಾಂಡೆ 184, ಅತೀತ್ ಶೇಠ್ 63. ಸುಮಿತ್ ಶರ್ಮಾ 115ಕ್ಕೆ 4)

ಕೆಎಸ್‌ಸಿಎ ಕಾರ್ಯದರ್ಶಿ ತಂಡಕ್ಕೆ ಜಯ

ಬೆಂಗಳೂರು: ಶಿಖರ್ ಶೆಟ್ಟಿ (41ಕ್ಕೆ5) ಅವರ ಬೌಲಿಂಗ್ ಬಲದಿಂದ ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ತಂಡವು ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಗುರುವಾರ ಮುಗಿದ ಪಂದ್ಯದಲ್ಲಿ ಆಂಧ್ರ ಕ್ರಿಕೆಟ್ ತಂಡದ ಎದುರು 9 ರನ್‌ಗಳಿಂದ ಜಯಿಸಿತು.

ಆಲೂರು ಕ್ರೀಡಾಂಗಣ(3): ಮೊದಲ ಇನಿಂಗ್ಸ್: ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 63.1 ಓವರ್‌ಗಳಲ್ಲಿ 181. ಆಂಧ್ರ: 51 ಓವರ್‌ಗಳಲ್ಲಿ 188. ಎರಡನೇ ಇನಿಂಗ್ಸ್: ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 76.1 ಓವರ್‌ಗಳಲ್ಲಿ 296. ಆಂಧ್ರ: 78.5 ಓವರ್‌ಗಳಲ್ಲಿ 280 (ಅಶ್ವಿನ್ ಹೆಬ್ಬಾರ್ 85, ಶಿಖರ್ ಶೆಟ್ಟಿ 41ಕ್ಕೆ5, ಶ್ರೇಯಸ್ ಗೋಪಾಲ್ 94ಕ್ಕೆ2, ಅಧೋಕ್ಷ ಹೆಗಡೆ 45ಕ್ಕೆ2) ಫಲಿತಾಂಶ: ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್‌ಗೆ 9 ರನ್‌ಗಳಿಂದ ಜಯ

ಐಒಎ ಖಜಾಂಚಿಗೆ ಉಷಾ ನೋಟಿಸ್



ಪಿ.ಟಿ. ಉಷಾ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಖಜಾಂಚಿ ಸಹದೇವ್ ಯಾದವ್ ಅವರಿಗೆ ಸಂಸ್ಥೆಯ ಅಧ್ಯಕ್ಷೆ ಪಿ.ಟಿ. ಉಷಾ ಅವರು ಷೋಕಾಸ್ ನೋಟಿಸ್ ಜಾರಿಮಾಡಿದ್ದಾರೆ. ಸಹದೇವ್ ಅವರ ಆಯ್ಕೆಯು ರಾಷ್ಟ್ರೀಯ ಕ್ರೀಡಾ ಸಂಹಿತೆ ಉಲ್ಲಂಘಿಸಿದೆ ಎಂಬ ದೂರುಗಳನ್ನು ಅನುಸರಿಸಿ ಅವರು ಈ ಕ್ರಮ ಕೈಗೊಂಡಿದ್ದಾರೆ.

ಸೆ. 10ರಂದು ನೋಟಿಸ್ ಜಾರಿಗೊಳಿಸಿದ್ದು, ಇದೇ 24ರ ಒಳಗೆ ಉತ್ತರ ನೀಡುವಂತೆ ಸೂಚಿಸಿದ್ದಾರೆ. ‘ಕಳೆದ ಚುನಾವಣೆಯಲ್ಲಿ ಖಜಾಂಚಿ ಹುದ್ದೆಗೆ ನಿಮಗಿರುವ ಅರ್ಹತೆಯನ್ನು ಪ್ರಶ್ನಿಸಿ ಒಲಿಂಪಿಕ್ ಸಂಸ್ಥೆಗೆ ಇತ್ತೀಚೆಗೆ ಅಧಿಕೃತವಾಗಿ ದೂರು ಸಲ್ಲಿಸಿರುವುದನ್ನು ಗಮನಕ್ಕೆ ತರಲು ಈ ಪತ್ರ ನೀಡಲಾಗಿದೆ’ ಎಂದು ಉಷಾ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

‘ದೂರುದಾರರು, ಮಧ್ಯಪ್ರದೇಶ ಹೈಕೋರ್ಟ್‌ನ ಆದೇಶವನ್ನು ಪ್ರಸ್ತಾಪಿಸಿದ್ದು, ಅದು ಖಜಾಂಚಿ ಹುದ್ದೆಗೆ ಸ್ಪರ್ಧಿಸಲು ನಿಮಗಿರುವ ಅರ್ಹತೆಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸುತ್ತದೆ’ ಎಂದು ಪತ್ರದಲ್ಲಿ ಉಷಾ ವಿವರಿಸಿದ್ದಾರೆ.

ಇದರ ಪ್ರತಿಯನ್ನು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಎನ್‌ಒಸಿ (ರಾಷ್ಟ್ರೀಯ ಒಲಿಂಪಿಕ್ ಸಮಿತಿ) ಸಂಬಂಧಗಳ ವಿಭಾಗದ ಅಸೋಸಿಯೇಟ್ ನಿರ್ದೇಶಕ ಜೆರೋಮ್ ಪೊಯಿವೆ ಅವರಿಗೂ ಕಳುಹಿಸಿದ್ದಾರೆ.

ಕ್ರೀಡಾಸಂಹಿತೆ ನಿಗದಿಪಡಿಸಿರುವ ವಯಸ್ಸು ಮತ್ತು ಅವಧಿಯನ್ನು ಮೀರಿ ಯಾದವ್ ಮತ್ತು ಕೆಲವು ಅಧಿಕಾರಿಗಳು ಹುದ್ದೆಯಲ್ಲಿ ಮುಂದುವರಿಯುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಸತತ 12 ವರ್ಷಗಳ ಅಧಿಕಾರದ ನಂತರ ಪದಾಧಿಕಾರಿಯು ಆ ಹುದ್ದೆಯಿಂದ ಕೆಳಗಿಳಿಯುವುದು ಕಡ್ಡಾಯ ಎಂದು ಸಂಹಿತೆ ಹೇಳುತ್ತದೆ.

ಯಾದವ್, ಭಾರತ ವೇಟ್‌ಲಿಫ್ಟಿಂಗ್ ಫೆಡರೇಷನ್‌ನ ಮಾಜಿ ಕಾರ್ಯದರ್ಶಿಯಾಗಿದ್ದು, ಅದರ ಆಡಳಿ ಮಂಡಳಿಯಲ್ಲಿ 15 ವರ್ಷ ಕೆಲಸ ಮಾಡಿದ್ದರು.

ರಾಷ್ಟ್ರೀಯ ಸೀನಿಯರ್ ಈಜು: ಸ್ಪ್ರಿಂಟ್‌ನಲ್ಲಿ ಬೆಳಗಿದ ಮಹಾರಾಷ್ಟ್ರದ ಮಿಹಿರ್, ಬಿಹಾರದ ಮಹಿ

ಅನೀಶ್ ಮಿಂಚು; ಹಾಶಿಕಾ 'ಹ್ಯಾಟ್ರಿಕ್'

• ವಿಕ್ರಂ ಕಾಂತಿಕೆರೆ

ಮಂಗಳೂರು: ಸಂಜೆ ಮೋಡದ ವಾತಾವರಣದಲ್ಲಿ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿದ ಅನೀಶ್ ಗೌಡ ಚಿನ್ನ ಗೆದ್ದು ಸಂಭ್ರಮಿಸಿದರೆ, ತುಂತುರು ಮಳೆಯ ನಡುವೆ ಹೊನಲು ಬೆಳಕಿನಡಿ ವೇಗದ ಸ್ಟ್ರೋಕ್‌ಗಳಿಂದ ಮಿಂಚಿದ ಆಕಾಶ್ ಮಣಿ ಮೊದಲಿಗರಾಗಿ ನಗೆ ಸೂಸಿದರು.

ಭಾರತ ಈಜು ಫೆಡರೇಷನ್ ಇಲ್ಲಿನ ಎಮ್ಮೆಕೆರೆ ಈಜುಕೊಳದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಗುರುವಾರ ಪುರುಷರ 1500 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಅನೀಶ್ ಗೌಡ ಮತ್ತು 50 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ಆಕಾಶ್ ಮಣಿ ಕರ್ನಾಟಕಕ್ಕೆ ಚಿನ್ನ ಗೆದ್ದುಕೊಟ್ಟರು. ಮಹಿಳೆಯರ 200 ಮೀ ಬಟರ್‌ಫ್ಲೈಯಲ್ಲಿ ಮಿಂಚಿದ ಹಾಶಿಕಾ ರಾಮಚಂದ್ರ ಚಿನ್ನದ 'ಹ್ಯಾಟ್ರಿಕ್' ಪೂರೈಸಿದರು.

ಆತಿಥೇಯರು ಒಟ್ಟಾರೆ 25 (12 ಚಿನ್ನ, 11 ಬೆಳ್ಳಿ, 2 ಕಂಚು) ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಕಾಪಾಡಿಕೊಂಡಿದ್ದಾರೆ.

ಪುರುಷರ ಮತ್ತು ಮಹಿಳೆಯರ 50 ಮೀ ಫ್ರೀಸ್ಟೈಲ್ ಕುತೂಹಲಕಾರಿ ರೇಸ್‌ಗೆ ಸಾಕ್ಷಿಯಾಯಿತು. ಅರ್ಹತಾ ಸುತ್ತಿನಲ್ಲಿ ಮೊದಲಿಗರಾಗಿದ್ದ ಮಹಾರಾಷ್ಟ್ರದ ಮಿಹಿರ್ ಆಮ್ರೆ ನಿರೀಕ್ಷೆಯಂತೆ ಚಿನ್ನ ತಮ್ಮದಾಗಿಸಿಕೊಂಡರು. ಕರ್ನಾಟಕದ ಶ್ರೀಹರಿ ನಟರಾಜ್ ಅವರಿಂದ ಭಾರಿ ಪೈಪೋಟಿ ಎದುರಿಸಿದರೂ ಮೈಕ್ರೊ ಸೆಕೆಂಡುಗಳ ಅಂತರದಲ್ಲಿ ಅವರು ಮೊದಲಿಗರಾದರು



ಪುರುಷರ 200 ಮೀ ಬಟರ್‌ಫ್ಲೈಯಲ್ಲಿ ಮುನ್ನುಗ್ಗಿದ ಕರ್ನಾಟಕದ ಅನೀಶ್ ಗೌಡ
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ತಮಿಳುನಾಡಿಗೆ ಮತ್ತೆ ದಾಖಲೆ

ಬುಧವಾರ 4x100 ಮೀ ಮಿಶ್ರ ರಿಲೆಯಲ್ಲಿ ದಾಖಲೆ ಬರೆದ ತಮಿಳುನಾಡು, ಗುರುವಾರ ಪುರುಷರ 4x100 ಮೀ ರಿಲೆಯಲ್ಲೂ ದಾಖಲೆ ಮಾಡಿತು. 3ನಿ 45.66 ಸೆಕೆಂಡುಗಳ ಸಾಧನೆ ಮಾಡಿ 2022ರಿಂದ ಸರ್ವಿಸಸ್ ಹೆಸರಿನಲ್ಲಿದ್ದ ದಾಖಲೆ (3ನಿ 47.22) ಮುರಿಯಿತು. ಕರ್ನಾಟಕದ ಆಕಾಶ್ ಮಣಿ, ವಿದಿತ್ ಶಂಕರ್, ಕಾರ್ತಿಕೇಯನ್ ನಾಯರ್ ಮತ್ತು ಶ್ರೀಹರಿ ನಟರಾಜ್ ಅವರಿದ್ದ ತಂಡ 3ನಿ 46.9ಸೆಕೆಂಡುಗಳ ಸಾಧನೆಯೊಂದಿಗೆ ಸರ್ವಿಸಸ್‌ನ ದಾಖಲೆಯನ್ನು ಹಿಂದಿಕ್ಕಿ ಬೆಳ್ಳಿ ಪದಕ ಗಳಿಸಿತು.

ಮಹಿಳೆಯರ 50 ಮೀ ಫ್ರೀಸ್ಟೈಲ್‌ನಲ್ಲಿ ರೈಲ್ವೆಯ ಅವಂತಿಕಾ ಮತ್ತು ಶಿವಾಂಗಿ ಅವರ ಸವಾಲು ಮೀರಿದ ಮಹಿ ಶ್ವೇತರಾಜ್ ಅವರು ಬಿಹಾರಕ್ಕೆ ಚಿನ್ನ ಗೆದ್ದುಕೊಟ್ಟರು. ಪ್ರೇಕ್ಷಕರು ಉಸಿರು ಬಿಗಿಹಿಡಿದು ನೋಡುತ್ತಿದ್ದಂತೆ ಅಂತಿಮ 10 ಮೀಟರ್‌ಗಳಲ್ಲಿ ಮಹಿ ಮಿಂಚಿನ ವೇಗ ಪ್ರದರ್ಶಿಸಿದರು. ಪುರುಷರ 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆ, ಆಕಾಶ್ ಮಣಿ ಮತ್ತು ಮಹಾರಾಷ್ಟ್ರದ ರಿಷಭ್ ನಡುವಿನ ತೀವ್ರ ಹೋರಾಟದಿಂದಾಗಿ ಕುತೂಹಲ ಕೆರಳಿಸಿತ್ತು. 'ಆಕಾಶ್.. ಆಕಾಶ್' ಎಂದು ಕೂಗಿದ ಕರ್ನಾಟಕದ ಬೆಂಬಲಿಗರು ಕೊನೆಗೆ ಚಿನ್ನದ ಸಂಭ್ರಮದಲ್ಲಿ ತೇಲಿದರು.

> **ಏಷ್ಯನ್ ಗೇಮ್ಸ್‌ಗೆ ಅರ್ಹತೆ ಗಳಿಸುವುದು ನನ್ನ ಗುರಿ. ನಾನೀಗ ಅರ್ಹತಾ ಮಾನದಂಡಕ್ಕಿಂತ ಆರು ಸೆಕೆಂಡು ಹಿಂದೆ ಇದ್ದೇನೆ. ಅದನ್ನು ಸರಿದೂಗಿಸಲು ಸಾಕಷ್ಟು ಸಮಯ ಇದೆ.**
> **ಹಾಶಿಕಾ ರಾಮಚಂದ್ರ**
> ಕರ್ನಾಟಕದ ಈಜುಪಟು

ವೃತ್ತಿ, ಆಸ್ತಾ ಪೈಪೋಟಿ ಗೆದ್ದ ಹಾಶಿಕಾ: ಎರಡು ದಿನಗಳಲ್ಲಿ ಎರಡು ಚಿನ್ನ ಮತ್ತು ಒಂದು ಬೆಳ್ಳಿ ಗೆದ್ದಿದ್ದ ಹಾಶಿಕಾ ರಾಮಚಂದ್ರ ಗುರುವಾರ 200 ಮೀ ಬಟರ್‌ಫ್ಲೈನಲ್ಲಿ ಚಿನ್ನ ತಮ್ಮದಾಗಿಸಿ ಕೊಂಡರು. ವೃತ್ತಿ ಅಗರವಾಲ್ ಮತ್ತು ಆಸ್ತಾ ಅವರನ್ನು ತುರುಸಿನ ಸ್ಪರ್ಧೆಯಲ್ಲಿ ಹಾಶಿಕಾ ಹಿಂದಿಕ್ಕಿದರು. ಮಹಿಳೆಯರ 800 ಮೀ ಫ್ರೀಸ್ಟೈಲ್‌ನಲ್ಲಿ ತೆಲಂಗಾಣದ ವೃತ್ತಿ ಅಗರವಾಲ್ ಏಕಾಂಗಿಯಾಗಿ ಮುನ್ನುಗ್ಗಿದರು. ಬೆಳ್ಳಿ ಮತ್ತು ಕಂಚಿಗಾಗಿ ಕರ್ನಾಟಕದ ಶಿರೀನ್ ಮತ್ತು ಶ್ರೀ ಚರಣಿ ತುಮು ನಡುವೆ ಆರಂಭದಲ್ಲಿ ಪೈಪೋಟಿ ಕಂಡುಬಂತು. ಆದರೆ ಕೊನೆಯಲ್ಲಿ ಬೆಳ್ಳಿ ನವದೆಹಲಿಯ ಭವ್ಯಾ ಸಚ್‌ದೇವ್ ಪಾಲಾಯಿತು. ಶ್ರೀ ಚರಣಿ ಕಂಚು ಗಳಿಸಿದರು.

ಮೂರನೇ ದಿನದ ಫಲಿತಾಂಶಗಳು

ಪುರುಷರ ವಿಭಾಗ: 50 ಮೀ ಫ್ರೀ ಸ್ಟೈಲ್: ಮಿಹಿರ್ ಆಮ್ರೆ (ಮಹಾರಾಷ್ಟ್ರ)–1, ಶ್ರೀಹರಿ ನಟರಾಜ್ (ಕರ್ನಾಟಕ)–2, ಪವನ್ ಗುಪ್ತಾ (ರೈಲ್ವೆ)–3. ಕಾಲ: 22.66ಸೆ; 50ಮೀ ಬ್ಯಾಕ್ ಸ್ಟ್ರೋಕ್: ಆಕಾಶ್ ಮಣಿ (ಕರ್ನಾಟಕ)–1, ರಿಷಭ್ ದಾಸ್ (ಮಹಾರಾಷ್ಟ್ರ)–2, ವಿನಾಯಕ್ ವಿಜಯ್ (ಸರ್ವಿಸಸ್)–3. ಕಾಲ: 26.24 ಸೆ; 200 ಮೀ ಬಟರ್ ಫ್ಲೈ: ಬಿಕ್ರಂ ಚಾಂಗ್ಮೈ (ರೈಲ್ವೆ)–1, ಹರ್ಷ ಸರೋಹ (ಹರಿಯಾಣ)–2, ಆರ್ಯನ್ ಪ್ರೇಯಸ್ ಪಂಚ (ಗುಜರಾತ್)–3. ಕಾಲ: 2 ನಿ 2.76ಸೆ; 1500 ಮೀ ಫ್ರೀಸ್ಟೈಲ್: ಅನೀಶ್ ಗೌಡ (ಕರ್ನಾಟಕ)–1, ದರ್ಶನ್ ಎಸ್ (ಕರ್ನಾಟಕ)–2, ಸಂಪತ್ ಕುಮಾರ್ (ಆಂಧ್ರಪ್ರದೇಶ)–3. ಕಾಲ: 16:06.11; 4x100 ಮೆಡ್ಲೆ: ತಮಿಳುನಾಡು–1, ಕರ್ನಾಟಕ (ಆಕಾಶ್ ಮಣಿ, ವಿದಿತ್ ಶಂಕರ್, ಕಾರ್ತಿಕೇಯನ್ ನಾಯರ್, ಶ್ರೀಹರಿ ನಟರಾಜ್)–2, ಮಹಾರಾಷ್ಟ್ರ–3. ಕಾಲ: 3ನಿ 45.66ಸೆ (ಕೂಟ ದಾಖಲೆ; ಹಿಂದಿನ ದಾಖಲೆ: ಸರ್ವಿಸಸ್: ಕಾಲ: 3ನಿ 47.22ಸೆ).

ಮಹಿಳೆಯರ ವಿಭಾಗ: 50 ಮೀ ಫ್ರೀ ಸ್ಟೈಲ್: ಮಹಿ ಶ್ವೇತರಾಜ್ (ಬಿಹಾರ)–1, ಅವಂತಿಕಾ ಚವಾಣ್ (ರೈಲ್ವೆ)–2, ಶಿವಾಂಗಿ ಶರ್ಮಾ (ರೈಲ್ವೆ)–3. ಕಾಲ: 26.85ಸೆ; 50ಮೀ ಬ್ಯಾಕ್ ಸ್ಟ್ರೋಕ್: ಸೌಬ್ರತಿ ಮೊಂಡಲ್ (ಬಂಗಾಳ)–1, ವಿಹಿತಾ ಲೋಕನಾಥನ್ (ಕರ್ನಾಟಕ)–2, ರುಜುತಾ ಪ್ರಸಾದ್ (ಮಹಾರಾಷ್ಟ್ರ)–3. ಕಾಲ: 30.14ಸೆ; 200 ಮೀ ಬಟರ್ ಫ್ಲೈ: ಹಾಶಿಕಾ ರಾಮಚಂದ್ರ (ಕರ್ನಾಟಕ)–1, ವೃತ್ತಿ ಅಗರವಾಲ್ (ತೆಲಂಗಾಣ)–2, ಆಸ್ತಾ ಚೌಧರಿ (ರೈಲ್ವೆ)–3. ಕಾಲ: 2ನಿ 21.16ಸೆ; 800 ಮೀ ಫ್ರೀಸ್ಟೈಲ್: ವೃತ್ತಿ ಅಗರವಾಲ್ (ತೆಲಂಗಾಣ)–1, ಭವ್ಯಾ ಸಚ್‌ದೇವ್ (ನವದೆಹಲಿ)–2, ಶ್ರೀ ಚರಣಿ ತುಮು (ಕರ್ನಾಟಕ)–3. ಕಾಲ: 9ನಿ 16.14ಸೆ; 4x100 ಮೀ ಮೆಡ್ಲೆ: ಒಡಿಶಾ–1, ಮಹಾರಾಷ್ಟ್ರ–2, ರೈಲ್ವೆ–3. ಕಾಲ: 4ನಿ 27.90ಸೆ.

ಸ್ಯಾಫ್: ಉನ್ನತಿ ಕೂಟ ದಾಖಲೆ

ಬೆಂಗಳೂರು: ಚೆನ್ನೈನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನಾಲ್ಕನೇ ಸ್ಯಾಫ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಪಾರಮ್ಯ ಮುಂದುವರಿದಿದೆ. ಎರಡನೇ ದಿನವಾದ ಗುರುವಾರ ಆತಿಥೇಯರು 9 ಚಿನ್ನ ಸೇರಿದಂತೆ 19 ಪದಕಗಳನ್ನು ಗೆದ್ದುಕೊಂಡರು.

ಕರ್ನಾಟಕದ ಉನ್ನತಿ ಅಯ್ಯಪ್ಪ ಮಹಿಳೆಯರ 100 ಮೀಟರ್ ಹರ್ಡಲ್ಸ್‌ನಲ್ಲಿ 13.93 ಸೆಕೆಂಡ್ ಗುರಿ ತಲುಪಿ, ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಮಹಿಳೆಯರ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಭಾರತದ ಅನಿಶಾ (49.91 ಮೀಟರ್) ಕೂಟ ದಾಖಲೆಯೊಂದಿಗೆ ಗೆದ್ದರು.



ಉನ್ನತಿ ಅಯ್ಯಪ್ಪ

ಜೂನಿಯರ್ ಅಥ್ಲೆಟಿಕ್ಸ್ ನಾಳೆಯಿಂದ

ಮೈಸೂರು: ಕರ್ನಾಟಕ ರಾಜ್ಯ ಅಂತರ ಜಿಲ್ಲಾ ಜೂನಿಯರ್ ಹಾಗೂ 23 ವರ್ಷದ ಒಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಸೆ. 14 ರಿಂದ 17 ರವರೆಗೆ ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿದೆ.

ಮೈಸೂರು ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯು ಆಯೋಜಿಸಿರುವ ಕ್ರೀಡಾಕೂಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ 2 ಸಾವಿರ ಸ್ಪರ್ಧಿಗಳು ಭಾಗಿಯಾಗುವರು. 5 ವಿಭಾಗಗಳಲ್ಲಿ 136 ಸ್ಪರ್ಧೆಗಳು ನಡೆಯಲಿವೆ. ಇದೇ ವೇಳೆ, ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಹಾಗೂ ರಾಷ್ಟ್ರೀಯ ಯುವ ಕ್ರೀಡಾಕೂಟಕ್ಕೆ (23 ವರ್ಷದ ಒಳಗಿನವರು) ಕರ್ನಾಟಕ ತಂಡದ ಆಯ್ಕೆ ಪ್ರಕ್ರಿಯೆಯು ನಡೆಯಲಿದೆ.

ಗೆಲುವಿನಲ್ಲಿ ಮಿಂಚಿದ ಹರ್ಮನ್‌ಪ್ರೀತ್


ಚಾಂಪಿಯನ್ಸ್ ಟ್ರೋಫಿ: ಭಾರತಕ್ಕೆ ಮಣಿದ ಕೊರಿಯಾ

ಹುಲುನ್‌ಬುಯಿರ್ (ಚೀನಾ), (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ತಂಡ, ಹೀರೊ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ ಪಂದ್ಯದಲ್ಲಿ ಗುರುವಾರ 3–1 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿ ಅಜೇಯ ಓಟ ಮುಂದುವರಿಸಿತು. ಇದು ಈ ಟೂರ್ನಿಯಲ್ಲಿ ಭಾರತಕ್ಕೆ ಸತತ ನಾಲ್ಕನೇ ಜಯ.

ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ ತಂಡವು, ಈ ಹಿಂದಿನ ಪಂದ್ಯಗಳಲ್ಲಿ ಚೀನಾ, ಜಪಾನ್ ಮತ್ತು ಕಳೆದ ವರ್ಷದ ರನ್ನರ್ ಅಪ್ ಮಲೇಷ್ಯಾ ತಂಡಗಳನ್ನು ಸೋಲಿಸಿತ್ತು. ಆರು ತಂಡಗಳ ಟೂರ್ನಿಯಲ್ಲಿ ಸೆಮಿಫೈನಲ್ ಸ್ಥಾನವನ್ನೂ ಖಚಿತಪಡಿಸಿಕೊಂಡಿತ್ತು.

ಲೀಗ್ ಪಂದ್ಯಗಳ ನಂತರ ಮೊದಲ ನಾಲ್ಕು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ. ಸೋಮವಾರ ಸೆಮಿಫೈನಲ್ ಪಂದ್ಯಗಳು ನಿಗದಿಯಾಗಿದ್ದು, ಮಂಗಳವಾರ ಫೈನಲ್ ನಡೆಯಲಿದೆ.

ಉತ್ತಮ ಲಯದಲ್ಲಿರುವ ಭಾರತ ತಂಡ ಅದನ್ನು ಮುಂದುವರಿಸುವಂತೆ ಆಡಿ, ಮೊದಲ ಕ್ವಾರ್ಟರ್ ಕೊನೆಗೆ 2–1 ಮುನ್ನಡೆ ಸಾಧಿಸಿತ್ತು. ಮಲೇಷ್ಯಾ ವಿರುದ್ಧ ಬುಧವಾರ ನಡೆದ ಪಂದ್ಯದಲ್ಲಿ ಎರಡು ಗೋಲುಗಳನ್ನು ಗಳಿಸಿದ್ದ ಅರಿಜಿತ್ ಸಿಂಗ್ ಹುಂಡಲ್ ಎಂಟನೇ ನಿಮಿಷ ಭಾರತಕ್ಕೆ ಮುನ್ನಡೆ ಒದಗಿಸಿದರು.



ಭಾರತ ಮತ್ತು ದಕ್ಷಿಣ ಕೊರಿಯಾ ಆಟಗಾರರ ನಡುವೆ ಪೈಪೋಟಿ –ಹಾಕಿ ಇಂಡಿಯಾ ಎಕ್ಸ್ ಚಿತ್ರ

ಹರ್ಮನ್‌ಪ್ರೀತ್ 9 ಮತ್ತು 43ನೇ ನಿಮಿಷ ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿ ಪರಿವರ್ತಿಸಿದರು.

ಕೊರಿಯಾ ತಂಡದ ಏಕೈಕ ಗೋಲನ್ನು ಜಿಹುನ್ ಯಾಂಗ್ ಅವರು 30ನೇ ನಿಮಿಷ ಪೆನಾಲ್ಟಿ ಕಾರ್ನರ್ ಮೂಲಕ ಗಳಿಸಿದರು.

ಹಾಕಿ: ಗೋಲು ಮಳೆಗರೆದ ಶ್ಲೋಕ್

ಬೆಂಗಳೂರು: ಗೋಲುಗಳ ಸುರಿಮಳೆಗರೆದ ಶ್ಲೋಕ್ ಹಾಕಿ ಕ್ಲಬ್ ತಂಡವು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಡಿ.ಎಸ್. ಮೂರ್ತಿ ಸ್ಮಾರಕ ಹಾಕಿ ಟೂರ್ನಿಯ ಪಂದ್ಯದಲ್ಲಿ ಜಯಗಳಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಶ್ಲೋಕ್ ಹಾಕಿ ತಂಡವು 10–2ರಿಂದ ಬಾಂಬರ್ಸ್ ಹಾಕಿ ಕ್ಲಬ್ ವಿರುದ್ಧ ಜಯಿಸಿತು.

ಶ್ಲೋಕ್ ತಂಡದ ಮೊಹಮ್ಮದ್ ಹರಹಾದ್ (13ನಿ, 17ನಿ), ಕೆ.ಎಮ್. ವಿಶ್ವನಾಥ್ (18ನಿ, 33ನಿ, 35ನಿ, 54ನಿ), ಎ.ಪಿ. ವಿನೋದ್ ಕುಮಾರ್ (23ನಿ), ಪಿಚಾ ತರುಣಕುಮಾರ್ (41ನೇ ನಿ), ಎಸ್. ಸಂದೀಪ್ (44ನಿ) ಹಾಗೂ ರಾಜು (49ನಿ) ಗೋಲು ಗಳಿಸಿದರು. ಬಾಂಬರ್ಸ್ ತಂಡದ ಕೆ. ವಿಘ್ನೇಷ್ (25ನಿ) ಮತ್ತು ಬಿ. ಭರತ್ ರಾಜ್ (32ನಿ) ಗೋಲು ತಂದಿತ್ತರು.

ಎರಡನೇ ಪಂದ್ಯದಲ್ಲಿ ರೈಸಿಂಗ್ ಸ್ಟಾರ್ ಹಾಕಿ ಕ್ಲಬ್ ತಂಡವು 4–1ರಿಂದ ಡೆಲ್ಲಿ ಪಬ್ಲಿಕ್ ಶಾಲೆ ವಿರುದ್ಧ ಗೆದ್ದಿತು.

ಡೈಮಂಡ್ ಲೀಗ್ ಫೈನಲ್ಸ್ ಇಂದಿನಿಂದ

ಬ್ರಸೆಲ್ಸ್ (ಪಿಟಿಐ): ಅಥ್ಲೆಟಿಕ್ಸ್‌ನ ವಿಶ್ವ ಶ್ರೇಷ್ಠ ತಾರೆಗಳು ಭಾಗವಹಿಸುತ್ತಿರುವ ಡೈಮಂಡ್ ಲೀಗ್ ಫೈನಲ್ಸ್ ಶುಕ್ರವಾರ ಮತ್ತು ಶನಿವಾರ ನಡೆಯಲಿದ್ದು, ಜಾವೆಲಿನ್ ಥ್ರೊ ದಿಗ್ಗಜ ನೀರಜ್ ಚೋಪ್ರಾ ಮತ್ತು ಸ್ಟೀಪಲ್ ಚೇಸರ್ ಅವಿನಾಶ ಸಾಬ್ಳೆ ಅವರು ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಮೊದಲ ಬಾರಿ ಈ ಕೂಟ ಎರಡು ದಿನ ನಡೆಯುತ್ತಿದೆ. ಒಲಿಂಪಿಕ್ ಪದಕಗಳನ್ನು ಗೆದ್ದ ಅಥ್ಲೀಟುಗಳು ಅಭೂತಪೂರ್ವ ಸಂಖ್ಯೆಯಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಕಿಂಗ್ ಬೋದುವಾ ಕ್ರೀಡಾಂಗಣದಲ್ಲಿ ಒಟ್ಟು 32 ವಿಭಾಗಗಳಲ್ಲಿ ಸ್ಪರ್ಧೆ ನಡೆಯುತ್ತಿದೆ.

ಪೋಲ್ ವಾಲ್ಟ್ ವಿಶ್ವದಾಖಲೆ ವೀರ ಅರ್ಮಾಂಡ್ ಡುಪ್ಲಾಂಟಿಸ್, ಅಮೆರಿಕದ ವೇಗದ ರಾಣಿ ಶಾ'ಕೇರಿ ರಿಚರ್ಡ್‌ಸನ್ ಮತ್ತು ಸ್ಟಾರ್ ಹರ್ಡಲ್ಸ್ ಓಟಗಾರ ಸಿಡ್ನಿ ಮೆಕ್‌ಲಾಫ್ಲಿನ್ ಲೆವ್ರೋನ್ ಇಲ್ಲಿ ಕಣದಲ್ಲಿರುವ ಪ್ರಮುಖರಲ್ಲಿ ಒಳಗೊಂಡಿದ್ದಾರೆ.

ಮೊದಲ ಬಾರಿ ಭಾರತದ ಇಬ್ಬರು ಸ್ಪರ್ಧಿಗಳು ಡೈಮಂಡ್ ಲೀಗ್ ಕಣದಲ್ಲಿದ್ದಾರೆ. 3000 ಮೀ. ಸ್ಟೀಪಲ್‌ಚೇಸ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಸಾಬ್ಳೆ ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅನುಭವಿಸಿರುವ ನಿರಾಶೆಯನ್ನು ಮರೆಸಲು ಈ ಕೂಟ ಅವಕಾಶ ನೀಡಿದೆ. ಅಲ್ಲಿ ಅವರು 11ನೇ ಸ್ಥಾನ ಗಳಿಸಿದ್ದರು. ಅವರಿಗೆ ಇದು ಮೊದಲ ಡೈಮಂಡ್ ಲೀಗ್ ಫೈನಲ್. ಅವರ ಸ್ಪರ್ಧೆ ಶುಕ್ರವಾರ ಇದೆ. ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿರುವ, 26 ವರ್ಷ ವಯಸ್ಸಿನ ನೀರಜ್ ಚೋಪ್ರಾ ಅವರು ಉತ್ತಮ ಸಾಧನೆಯೊಡನೆ ವರ್ಷವನ್ನು ಕೊನೆಗೊಳಿಸುವ ಗುರಿ ಹೊಂದಿದ್ದಾರೆ.



ನೀರಜ್ ಚೋಪ್ರಾ